ಶನಿವಾರ, ಆಗಸ್ಟ್ 6, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಕ್ಷಣೆಗೆ ಮೊರೆ

ನವದೆಹಲಿಯಲ್ಲಿ ಭದ್ರತಾ ಸಿಬ್ಬಂದಿಯೊಬ್ಬರು ಶುಕ್ರವಾರ ಮಳೆಯಿಂದ ರಕ್ಷಣೆ ಪಡೆದ ಪರಿ ಇದು



ಶನಿವಾರ, ಆಗಸ್ಟ್ 6, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 217 | ಪುಟ 28

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಸಹೋದರನ ಮುಂಗೈಗೆ ಕಟ್ಟುತ್ತಿದ್ದ ಹಳದಿ ಮಿಶ್ರಿತ ಕೆಂಪು ಕಂಕಣದ ದಾರವೀಗ ಬಗೆ ಬಗೆಯ ವಿನ್ಯಾಸದಲ್ಲಿ ಹೊಸತನವನ್ನು ಕಂಡುಕೊಳ್ಳುತ್ತಿದೆ.



ಚರ್ಚೆ

ಕರ್ನಾಟಕಕ್ಕೆ 'ಯೋಗಿ ಮಾದರಿ'ಯ ಅಗತ್ಯ ಇದೆಯೇ?

ಉಪರಾಷ್ಟ್ರಪತಿ ಚುನಾವಣೆ ಇಂದು 9

ಸಂಸದರಿಗೆ ಬಂಧನದಿಂದ ರಕ್ಷಣೆ ಇಲ್ಲ: ನಾಯ್ಡು 9

ಸೆನ್ಸೆಕ್ಸ್	ನಿಫ್ಟಿ	₹/$
58,387 ▲	17,397 ▲	79.24 ▲

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆರ್‌ಬಿಐನಿಂದ ಶೇ 0.50ರಷ್ಟು ರೆಪೊ ದರ ಹೆಚ್ಚಳ

ಸಾಲ ಇನ್ನಷ್ಟು ತುಟ್ಟಿ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಮುಂಬೈ: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಶುಕ್ರವಾರ ಶೇಕಡ 0.50ರಷ್ಟು ಹೆಚ್ಚಿಸಿದೆ. ಇದರಿಂದ ಗೃಹ, ವಾಹನ ಮತ್ತು ಇತರ ಸಾಲಗಳ ಮೇಲಿನ ಇಎಂಐ ಮೊತ್ತ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ.


ಹಣದುಬ್ಬರವನ್ನು ನಿಯಂತ್ರಿಸಲು ಆರ್‌ಬಿಐ ರೆಪೊ ದರ ಹೆಚ್ಚಳ ಮಾಡುತ್ತಿದೆ. ಮೇ ತಿಂಗಳಿನಿಂದ ಈವರೆಗೆ ಬಡ್ಡಿದರವನ್ನು ಒಟ್ಟು ಶೇ 1.40ರಷ್ಟು ಏರಿಕೆ ಮಾಡಿದೆ.

ರೆಪೊ ಹೆಚ್ಚಳ ನಿರ್ಧಾರವು ಕೈಗೆಟಕುವ ಮತ್ತು ಮಧ್ಯಮ ದರದ ಮನೆಗಳ ಮಾರಾಟದ ಮೇಲೆ ಅಲ್ಪಾವಧಿಯಲ್ಲಿ ಪರಿಣಾಮ ಬೀರಲಿದೆ ಎಂದು ರಿಯಲ್ ಎಸ್ಟೇಟ್ ಉದ್ಯಮದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಬಡ್ಡಿದರ ಹೆಚ್ಚಾಗುವುದರಿಂದ ಕಡಿಮೆ ಹಾಗೂ ಮಧ್ಯಮ ಬೆಲೆಯ ಮನೆಗಳ ಬೇಡಿಕೆ ಮೇಲೆ ತೀವ್ರ ಪರಿಣಾಮ ಉಂಟಾಗಲಿದೆ. ಆದರೆ, ಹೆಚ್ಚಿನ ಮೊತ್ತದ ಮತ್ತು ಐಷಾರಾಮಿ ಮನೆಗಳ ಬೇಡಿಕೆ ಮೇಲೆ ಜಾಸ್ತಿ ಪರಿಣಾಮ ಆಗುವುದಿಲ್ಲ' ಎಂದು ಕೋಲಿಯರ್ಸ್ ಇಂಡಿಯಾದ ಸಿಇಒ ರಮೇಶ್ ನಾಯರ್ ಹೇಳಿದ್ದಾರೆ.

'ಈವರೆಗಿನ ರೆಪೊ ದರ ಹೆಚ್ಚಳವನ್ನು ಬ್ಯಾಂಕ್‌ಗಳು ಗ್ರಾಹಕರಿಗೆ ಪೂರ್ತಿಯಾಗಿ ವರ್ಗಾಯಿಸಿವೆ ಎಂದು ಭಾವಿಸುವುದಾದರೆ, ಜನರ ಮನೆ ಖರೀದಿ ಸಾಮರ್ಥ್ಯವು ಶೇ 11ರಷ್ಟು ಇಳಿಕೆ ಆಗಿದೆ. ಅಂದರೆ ಈ ಮೊದಲು ₹ 1 ಕೋಟಿ ಮೌಲ್ಯದ ಮನೆ ಖರೀದಿಸುವ ಸಾಮರ್ಥ್ಯ ಇತ್ತು. ಬಡ್ಡಿದರ ಏರಿಕೆಯಿಂದಾಗಿ ಆ ಸಾಮರ್ಥ್ಯವು ಈಗ ₹ 89 ಲಕ್ಷಕ್ಕೆ ಇಳಿಕೆ ಆಗಿದೆ' ಎಂದು ನೈಟ್ ಫ್ರ್ಯಾಂಕ್ ಇಂಡಿಯಾದ ಸಿಎಂಡಿ ಶಿಶಿರ್ ಬೈಜಲ್ ತಿಳಿಸಿದ್ದಾರೆ.

ಜಿಡಿಪಿ ಬೆಳವಣಿಗೆ ಅಂದಾಜು (2022-23)



ಎಂಸಿಎಲ್‌ಆರ್ ದರ ಶೇಕಡ 0.40ರಷ್ಟು ಹೆಚ್ಚಳ



ಮೇ 4ರ ನಂತರ, ಆಗಸ್ಟ್ 5ಕ್ಕೆ ಮೊದಲು, ಆರ್‌ಬಿಐ ರೆಪೊ ದರವನ್ನು ಶೇ 0.90ರಷ್ಟು ಹೆಚ್ಚಿಸಿದೆ. ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಎಸ್‌ಬಿಐ ಎಂಸಿಎಲ್‌ಆರ್ ಆಧಾರಿತ ಒಂದು ವರ್ಷದ ಅವಧಿಯ ಸಾಲದ ದರವನ್ನು ಶೇ 0.40ರಷ್ಟು ಹೆಚ್ಚಿಸಿದೆ

(ಮಾಹಿತಿ: ಎಸ್‌ಬಿಐ ಜಾಲತಾಣ)

'ರೆಪೊ ದರ ಹೆಚ್ಚಳವನ್ನು ಸಾಲದ ಬಡ್ಡಿದರಕ್ಕೆ ವರ್ಗಾಯಿಸಲು ಸಮಯ ಹಿಡಿಯಲಿದೆ. ಹೀಗಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್ಥಿಕ ಬೆಳವಣಿಗೆಯ ಮೇಲಿನ ಪರಿಣಾಮವು ಸೀಮಿತವಾಗಿರಲಿದೆ' ಎಂದು ಪಿಡಬ್ಲ್ಯುಸಿ ಇಂಡಿಯಾದ ಆರ್ಥಿಕ ಸಲಹಾ ಸೇವೆಗಳ ಮುಖ್ಯಸ್ಥ ರೆನಿನ್ ಬ್ಯಾನರ್ಜಿ ಹೇಳಿದ್ದಾರೆ.

ಆರ್‌ಬಿಐ ಹೇಳಿದ್ದು

- ಹಾಲಿ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ದರ ಶೇ 6.7ರಷ್ಟು ಇರುವ ಅಂದಾಜು
- 2022ರ ಆಗಸ್ಟ್ 4ರವರೆಗೆ ರೂಪಾಯಿ ಮೌಲ್ಯ ಶೇ 4.7ರಷ್ಟು ಇಳಿಕೆ
- ಪ್ರಸಕ್ತ ಹಣಕಾಸು ವರ್ಷಕ್ಕೆ ಜಿಡಿಪಿ ಬೆಳವಣಿಗೆ ಅಂದಾಜು ಶೇ 7.2ರಷ್ಟು
- ಹಣಕಾಸು ವಲಯದಲ್ಲಿ ಸಾಕಷ್ಟು ಬಂಡವಾಳ ಲಭ್ಯ ಎಂದ ಗವರ್ನರ್ ದಾಸ್

10ನೇ ಪುಟ ನೋಡಿ

ಕುಸ್ತಿ ಕಣದಲ್ಲಿ ಭಾರತದ ಸ್ವರ್ಣ ಸಂಭ್ರಮ

ಬರ್ಮಿಂಗ್‌ಹ್ಯಾಮ್: ಭಾರತದ ಕುಸ್ತಿಪಟುಗಳು ಶುಕ್ರವಾರ ಕಾಮನ್‌ವೆಲ್ತ್ ಕೂಟದಲ್ಲಿ ಮಿಂಚಿನ ಸಂಚಲನ ಮೂಡಿಸಿದರು. ಬಜರಂಗ್ ಪೂನಿಯಾ, ದೀಪಕ್ ಪೂನಿಯಾ ಮತ್ತು ಸಾಕ್ಷಿ ಮಲಿಕ್ ಚಿನ್ನ ಗೆದ್ದರು. ಅನ್ಶು ಮಲಿಕ್ ಬೆಳ್ಳಿ ಗಳಿಸಿದರು.



ಬಜರಂಗ್ ಪೂನಿಯಾ
ವಿಭಾಗ: ಪುರುಷರ ಫ್ರೀಸ್ಟೈಲ್ 65 ಕೆಜಿ
ಫೈನಲ್‌ನಲ್ಲಿ: ಬಜರಂಗ್ 9-2ರಿಂದ ಕೆನಡಾದ ಲಾಕ್ಲೆನ್ ವಿರುದ್ಧ ಜಯಿಸಿದರು

ದೀಪಕ್ ಪೂನಿಯಾ
ವಿಭಾಗ: ಪುರುಷರ ಫ್ರೀಸ್ಟೈಲ್ 86 ಕೆಜಿ
ಫೈನಲ್‌ನಲ್ಲಿ ಪಾಕಿಸ್ತಾನದ ಮುಹಮ್ಮದ್ ಇನಾಮ್ ಎದುರು 3-0 ಗೆಲುವು

ಸಾಕ್ಷಿ ಮಲಿಕ್
ವಿಭಾಗ: ಮಹಿಳೆಯರ ಫ್ರೀಸ್ಟೈಲ್ 62 ಕೆಜಿ
ಫೈನಲ್‌ನಲ್ಲಿ: ಕೆನಡಾದ ಅನಾ ಪೌಲಾ ವಿರುದ್ಧ ಸಾಕ್ಷಿಗೆ ಜಯ.

ಸಾವಿರಾರು ಎಕರೆ ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಗುರುವಾರ ರಾತ್ರಿ ಮತ್ತು ಶುಕ್ರವಾರ ಮಳೆ ಅಬ್ಬರಿಸಿದೆ.

ಹಾಸನ ಜಿಲ್ಲೆಯಲ್ಲಿ ಮನೆ ಗೋಡೆ ಕುಸಿದು ಬಾಲಕ ಮೃತಪಟ್ಟಿದ್ದರೆ, ತುಮಕೂರು ಜಿಲ್ಲೆಯಲ್ಲಿ ಬುಧವಾರ ರಾತ್ರಿ ನೀರಿನಲ್ಲಿ ಕೊಚ್ಚಿಹೋದ ಇಬ್ಬರ ಶೋಧ ಕಾರ್ಯ ಮುಂದುವರಿದಿದೆ.

ಸಾವಿರಾರು ಎಕರೆ ಜಮೀನು ಜಲಾವೃತಗೊಂಡಿದ್ದು, ಅಪಾರ ಪ್ರಮಾಣದ ಬೆಳೆ ನಾಶವಾಗಿದೆ. ಹಲವೆಡೆ ಮನೆಗಳ ಗೋಡೆ ಕುಸಿದು ಬಿದ್ದಿವೆ.

3Dನೇ ಪುಟ ನೋಡಿ

ಬೆಲೆ ಏರಿಕೆ ಖಂಡಿಸಿ ಬೀದಿಗಿಳಿದ ಕಾಂಗ್ರೆಸ್

65 ಸಂಸದರು 6 ಗಂಟೆ ದೆಹಲಿ ಪೊಲೀಸ್ ವಶದಲ್ಲಿ

ನವದೆಹಲಿ (ಪಿಟಿಐ): ಬೆಲೆ ಏರಿಕೆಯನ್ನು ಖಂಡಿಸಿ ರಾಷ್ಟ್ರಪತಿ ಭವನದತ್ತ ಶುಕ್ರವಾರ ಪ್ರತಿಭಟನಾ ಮೆರವಣಿಗೆ ಹೊರಟಿದ್ದ ಕಾಂಗ್ರೆಸ್ ಸಂಸದರು ಮತ್ತು ಕಾರ್ಯಕರ್ತರನ್ನು ವಶಕ್ಕೆ ಪಡೆದ ದೆಹಲಿ ಪೊಲೀಸರು, ಅವರನ್ನು 6 ಗಂಟೆಗೂ ಹೆಚ್ಚು ಕಾಲ ಠಾಣೆಯಲ್ಲಿ ಇರಿಸಿದ್ದರು. ಸಂಜೆಯ ನಂತರ ಬಿಡುಗಡೆ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ನಿವಾಸಕ್ಕೆ ಮುತ್ತಿಗೆ ಹಾಕುವ ಕಾಂಗ್ರೆಸ್ ಯೋಜನೆಯನ್ನೂ ಪೊಲೀಸರು ಈ ಮೂಲಕ ತಡೆದರು. ದೆಹಲಿ ಪೊಲೀಸರ ಈ ಕ್ರಮವನ್ನು ಖಂಡಿಸಿರುವ ಕಾಂಗ್ರೆಸ್, ಪ್ರಜಾಸತ್ತಾತ್ಮಕವಾಗಿ ಪ್ರತಿಭಟನೆ ನಡೆಸುವ ಹಕ್ಕನ್ನೂ ಬಿಜೆಪಿ ಸರ್ಕಾರ ಕಿತ್ತುಕೊಳ್ಳುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ. ಕಾಂಗ್ರೆಸ್ ಪ್ರಧಾನ ಕಚೇರಿ ಎದುರು ಪ್ರತಿಭಟನೆ ನಡೆಸಿದ ಪಕ್ಷದ ಕಾರ್ಯಕರ್ತರನ್ನೂ ಪೊಲೀಸರು ವಶಕ್ಕೆ ಪಡೆದಿದ್ದರು.

'ದೆಹಲಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿತ್ತು. ಹೀಗಿದ್ದೂ ಪ್ರತಿಭಟನೆಗೆ ಮುಂದಾದ ಕಾಂಗ್ರೆಸ್ ಕಾರ್ಯಕರ್ತರನ್ನು ವಶಕ್ಕೆ ಪಡೆಯಲಾಯಿತು. 65 ಸಂಸದರೂ ಸೇರಿ, 335 ಜನರನ್ನು ಪೊಲೀಸ್ ಠಾಣೆಯಲ್ಲಿ ಇರಿಸಲಾಗಿತ್ತು. ರಾಜಧಾನಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಯಿತು' ಎಂದು ದೆಹಲಿ ಪೊಲೀಸರ ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಬೆಲೆಯೇರಿಕೆ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ದೇಶದಾದ್ಯಂತ ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ ನಡೆಸಿದ್ದಾರೆ.

'ಶ್ರೀ ರಾಮನಿಗೆ ಅವಮಾನ': ಕಪ್ಪು ಬಟ್ಟೆ ಧರಿಸುವ ಮೂಲಕ ಕಾಂಗ್ರೆಸ್ ನಾಯಕರು ಶ್ರೀ ರಾಮನಿಗೆ ಅವಮಾನ ಮಾಡಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ಇದೇ ದಿನ ರಾಮ ಮಂದಿರ ನಿರ್ಮಾಣಕ್ಕೆ ಚಾಲನೆ ನೀಡಿದ್ದರು. ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ ನಡೆಸಲು ಕಾಂಗ್ರೆಸ್ ಅದೇ ದಿನವನ್ನು ಆಯ್ಕೆ ಮಾಡಿಕೊಂಡಿದೆ. ಆ ಮೂಲಕ ಒಂದು ಧರ್ಮದವರನ್ನು ಓಲೈಸುತ್ತಿದೆ. ಇದರಿಂದ ಶ್ರೀ ರಾಮನಿಗೆ ಅವಮಾನವಾಗಿದೆ' ಎಂದು ಶಾ ಆರೋಪಿಸಿದ್ದಾರೆ.



ನವದೆಹಲಿಯ ಕಾಂಗ್ರೆಸ್ ಪ್ರಧಾನ ಕಚೇರಿ ಎದುರಿನ ರಸ್ತೆಯಲ್ಲಿ ಕುಳಿತು ಪ್ರತಿಭಟನೆ ನಡೆಸುತ್ತಿದ್ದ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರನ್ನು ಸ್ಥಳದಿಂದ ತೆರಳುವಂತೆ ಪೊಲೀಸರು ಮನವೊಲಿಸಿದರು. ಆಗ ಅವರು ಪ್ರತಿರೋಧ ತೋರಿದ ಚಿತ್ರವನ್ನು ಕಾಂಗ್ರೆಸ್ ಪಕ್ಷವು ಟ್ವೀಟ್ ಮಾಡಿದೆ

ಇನ್ನಷ್ಟು ಸುದ್ದಿಗಳು 9

ಕಾಬೂಲ್‌ನಲ್ಲಿ ಬಾಂಬ್ ಸ್ಫೋಟ: 8 ಸಾವು

ಕಾಬೂಲ್ (ರಾಯಿಟರ್ಸ್): ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿ ಶಿಯಾ ಸಮುದಾಯದವರು ಹೆಚ್ಚಿರುವ ಪ್ರದೇಶದಲ್ಲಿ ಶುಕ್ರವಾರ ನಡೆದ ಭೀಕರ ಬಾಂಬ್ ಸ್ಫೋಟದಲ್ಲಿ ಕನಿಷ್ಠ 8 ಮಂದಿ ಮೃತಪಟ್ಟು, 18 ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಐಎಸ್ ಉಗ್ರ ಸಂಘಟನೆ ದಾಳಿಯ ಹೊಣೆ ಹೊತ್ತಿದೆ.

ಲಾಲ್‌ಬಾಗ್‌ನಲ್ಲಿ ಗಮನ ಸೆಳೆದ ಬೇಡರ ಕಣ್ಣಪ್ಪ ಮಾದರಿ: 212ನೇ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ

ರಾಜ್‌ಕುಮಾರ್, ಪುನೀತ್ ನೆನಪಿನ ಘಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನ ಗಾಜಿನ ಮನೆ ಪ್ರವೇಶಿಸುತ್ತಿದ್ದಂತೆ 'ಗೊಂಬೆ ಹೇಳುತೈತೆ ನೀನೇ ರಾಜ್‌ಕುಮಾರ..' ಹಾಡು. ಲಕ್ಷಾಂತರ ಪುಷ್ಪಗಳಲ್ಲಿ ಮೈದಳೆದ ಗಾಜನೂರಿನ ಮನೆ ಮುಂದೆ ಮಯೂರ ಚಿತ್ರದ ಡಾ.ರಾಜ್, ಪುನೀತ್ ರಾಜ್‌ಕುಮಾರ್ ಅವರ ನಗು ಮುಖದ ಪ್ರತಿಮೆಗಳು. ಪುನೀತ್ ಅಗಲಿಕೆಯ ನೋವಿನ ತಂತಿಯನ್ನು ಇವು ಮೀಟುತ್ತವೆ. ನೋಡುಗರು ಸಹಜವಾಗಿಯೇ ಭಾವುಕರಾಗುತ್ತಾರೆ.

ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನಕಲಾ ಸಂಘವು ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಹಮ್ಮಿಕೊಂಡಿರುವ 212ನೇ ಫಲಪುಷ್ಪ ಪ್ರದರ್ಶನಕ್ಕೆ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಚಾಲನೆ ನೀಡಿದರು.

ಡಾ.ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನ ಇದಾಗಿದೆ.

ಮನಸೂರೆಗೊಳ್ಳುವ ಪ್ರತಿಮಾ ಲೋಕದ ಅನಾವರಣ: 'ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಎತ್ತ ನೋಡಿದರತ್ತ ಡಾ.ರಾಜ್, ಪುನೀತ್‌ರಾಜ್‌ಕುಮಾರ್ ಬಿಂಬಗಳೇ. ಅವರು ನಟಿಸಿದ ಪಾತ್ರಗಳ ಪ್ರತಿಮೆಗಳು ಜೀವನದ ಸಂದೇಶಗಳನ್ನು ಸಾರುತ್ತಿವೆ. ಗಾಜನೂರು ಮನೆಯ ಹಿಂಭಾಗದಲ್ಲಿ ಡಾ.ರಾಜ್ ಆಲದ ಮರದ ಕೆಳಗೆ ಕುಳಿತು ಧ್ಯಾನ ಮಾಡುವಂತಿರುವ ಪ್ರತಿಮೆಗೆ ಹೂವಿನ ಮೂಲಕ ಜೀವಕಳೆ ತರಲಾಗಿದೆ. ಅದರ ಎಡಭಾಗದಲ್ಲಿ ರಾಜ್ ಅವರ ಆರಾಧ್ಯ ದೈವ ರಾಘವೇಂದ್ರಸ್ವಾಮಿ ಪಾತ್ರದ ಪ್ರತಿಕೃತಿ ನೋಡುಗರನ್ನು ಮೋಡಿ ಮಾಡುವಂತಿದೆ. ರಾಜ ಗಾಂಭೀರ್ಯದಲ್ಲಿ ಸಿಂಹಾಸನಾರೂಢ ರಣಧೀರ ಕಂಠೀರವ ಪ್ರತಿಮೆಯ ಮುಂದೆ ಸಾರ್ವಜನಿಕರು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಗಾಜಿನ ಮನೆಯ ಹಿಂಭಾಗದ ಹೂ ರಾಶಿಯಲ್ಲಿ ಡಾ.ರಾಜ್ ಹಾಗೂ ಬಾಲನಟನಾಗಿ ಪುನೀತ್ ಅಭಿನಯಿಸಿದ್ದ 'ಭಕ್ತ ಪ್ರಹ್ಲಾದ' ದೃಶ್ಯವನ್ನು ಚಿಕ್ಕಮಕ್ಕಳು ಕುತೂಹಲದಿಂದ ವೀಕ್ಷಿಸುತ್ತಿದ್ದರು. ಅದರ ಮುಂಭಾಗದಲ್ಲಿ ಡಾ.ರಾಜ್, ಪಾರ್ವತಮ್ಮ ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಪ್ರತಿಮೆಗಳ ಮುಂದೆ ಹಿರಿಯರು–ಕಿರಿಯರು ಎನ್ನದೇ ಎಲ್ಲರೂ ಮೊಬೈಲ್ ಫೋಟೊ ಕ್ಲಿಕ್ಕಿಸಿಕೊಳ್ಳುತ್ತಿದ್ದರು.

'ಬೇಡರ ಕಣ್ಣಪ್ಪ' ಚಿತ್ರದಲ್ಲಿ ಅಣ್ಣಾವ್ರು ಶಿವನಿಗೆ ಕಣ್ಣು ನೀಡುತ್ತಿರುವ ದೃಶ್ಯವನ್ನೇ 'ವರ್ಟಿಕಲ್ ಗಾರ್ಡನ್'ನಲ್ಲಿ ಮರು ಸೃಷ್ಟಿಸಿ, ನೇತ್ರದಾನದ ಮಹತ್ವ ಸಾರಲು ಬಳಲಾಗಿರುವುದು ಆಸಕ್ತಿಕರ.

ಅನಾಥ ಮಕ್ಕಳ ಬಾಳಿಗೆ ಬೆಳಕಾದ ಮೈಸೂರಿನ 'ಶಕ್ತಿಧಾಮ'ದ ಪ್ರತಿಕೃತಿಯನ್ನು 1.6 ಲಕ್ಷ ಗುಲಾಬಿ, ಸೇವಂತಿಗೆ ಮೊದಲಾದ 40 ಸಾವಿರ ಹೂವುಗಳಿಂದ ಮೂಡಿಸಲಾಗಿದೆ.

> **ಡಾ.ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಅವರ ಜೀವನದ ಸಮಗ್ರ ಚಿತ್ರಣ ಹೆಚ್ಚು ಆಕರ್ಷಣೀಯವಾಗಿದೆ. ರಾಜ್ಯದ ಎಲ್ಲ ಜನರು ಈ ಫಲ ಪುಷ್ಪ ಪ್ರದರ್ಶನವನ್ನು ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು.**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಪ್ರತಿಮೆಗೆ ಜೀವಕಳೆ

ವಿವಿಧ ತಳಿಯ ಸಾವಿರಾರು ಹೂಗಳಲ್ಲಿ ಅರಳಿದ ಶಾಲೆಯ ಮಧ್ಯಭಾಗದಲ್ಲಿ ಪುನೀತ್ ರಾಜ್‌ಕುಮಾರ್ ಅವರ ಪ್ರತಿಮೆಗೆ ಜೀವಕಳೆ ತುಂಬಿರುವುದನ್ನೂ ಶಾಲಾ ಮಕ್ಕಳು ಕಣ್ತುಂಬಿಕೊಳ್ಳುತ್ತಿದ್ದರು.



ಡಾ.ರಾಜ್ ಮತ್ತು ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನವನ್ನು ಡಾ.ರಾಜ್ ಕುಟುಂಬದವರು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

'ಅಪ್ಪು ವರ್ಣಿಸಲು ಪದಗಳಿಲ್ಲ'

ಅಪ್ಪ–ಅಮ್ಮ ಮತ್ತು ಅಪ್ಪು ನೆನಪು ಹೂವಿನಂತೆ ಸದಾ ತಾಜಾ. ಅಪ್ಪ ಮತ್ತು ಪುನೀತ್ ಅವರ ಜೀವನದ ಮಹತ್ವದ ಕ್ಷಣಗಳು ಹೂವಿನ ರೂಪದಲ್ಲಿ ಅದ್ಭುತವಾಗಿ ಮೂಡಿಬಂದಿವೆ. ತುಂಬಾ ನೋವಿನಿಂದ ಮಾತನಾಡುವ ಪರಿಸ್ಥಿತಿ ಎದುರಾಗಿದೆ ಎಂದು ಶಿವರಾಜ್ ಕುಮಾರ್ ಭಾವುಕರಾದರು.

ಅಪ್ಪು, ಅಪ್ಪನ ಜೀವನದೊಳಗೆ ಹೋಗಿ ಬಂದಂತೆ ಭಾಸವಾಯಿತು ಎಂದು ರಾಘವೇಂದ್ರ ರಾಜ್‌ಕುಮಾರ್ ಹೇಳಿದರು. ಈ ಸಂದರ್ಭದಲ್ಲಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಗೀತಾ ಶಿವರಾಜ್ ಕುಮಾರ್ ಇದ್ದರು.

> **ಲಾಲ್‌ಬಾಗ್ ಗಾಜಿನ ಮನೆಯೊಳಗೆ ಬಂದರೆ ಅಪ್ಪು ಈಗಲೂ ನಮ್ಮೊಂದಿಗಿಯೇ ಇದ್ದಾರೆ ಎನ್ನುವ ಭಾವನೆ ಮೂಡುತ್ತದೆ.**
> **ಬೈರತಿ ಸುನೀಲ್,** ವೀಕ್ಷಕರು

> **ಡಾ.ರಾಜ್, ಪುನೀತ್ ಅವರ ಜೀವನದ ಪ್ರಮುಖ ಘಟನೆಗಳನ್ನು ಕಾಣುವ ಅವಕಾಶ ಸಿಕ್ಕಿದ್ದು ಖುಷಿ ನೀಡಿದೆ.**
> **ಕಾವ್ಯಾ ಗೌಡ,** ವೀಕ್ಷಕರು

ಮೊದಲ ದಿನ ಬಂದವರು...

4,000 ವಯಸ್ಕರು

500 ಮಕ್ಕಳು

₹2.95 ಲಕ್ಷ ಸಂಗ್ರಹವಾದ ಹಣ

'ದೋಷಪೂರಿತ ರಾಷ್ಟ್ರಧ್ವಜ ಹಿಂದಿರುಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೋಷಪೂರಿತ ರಾಷ್ಟ್ರ–ಧ್ವಜಗಳನ್ನು ಮಾರಾಟ ಮಾಡಬಾರದು ಎಂದು ಬಿಬಿಎಂಪಿ ಸಿಬ್ಬಂದಿಗೆ ಆಡಳಿತ ವಿಭಾಗದ ವಿಶೇಷ ಆಯುಕ್ತ ರಂಗಪ್ಪ ಸೂಚನೆ ನೀಡಿದ್ದಾರೆ.

ಸರಿಯಾದ ರೀತಿಯಲ್ಲಿರದ ರಾಷ್ಟ್ರಧ್ವಜಗಳನ್ನು ನಾಗರಿಕರು ಪಡೆದಿದ್ದರೆ ಅವುಗಳನ್ನು ಬಿಬಿಎಂಪಿಯ ಯಾವುದೇ ಕಚೇರಿಗಳಲ್ಲಿ ಹಿಂದಿರುಗಿಸಿ, ಸರಿಯಾದ ರಾಷ್ಟ್ರಧ್ವಜಗಳನ್ನು ಪಡೆಯಬಹುದು ಎಂದು ತಿಳಿಸಿದ್ದಾರೆ.

ಇನ್ನು ಮುಂದೆ ರಾಷ್ಟ್ರ–ಧ್ವಜಗಳನ್ನು ಪಡೆಯುವಾಗ ಸರಿಯಾದ ರೀತಿಯಲ್ಲಿ ಇರುವುದನ್ನು ಖಾತರಿಪಡಿಸಿಕೊಂಡು ಪಡೆಯಲು ನಾಗರಿಕರಲ್ಲಿ ಅವರು ವಿನಂತಿ ಮಾಡಿದ್ದಾರೆ.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆಗಸ್ಟ್ 13ರಿಂದ 15ರವರೆಗೆ ನಡೆಯಲಿರುವ 'ಪ್ರತಿ ಮನೆಯಲ್ಲಿ ರಾಷ್ಟ್ರ ಧ್ವಜ' ಅಭಿಯಾನಕ್ಕಾಗಿ ಬಿಬಿಎಂಪಿ 10 ಲಕ್ಷ ರಾಷ್ಟ್ರಧ್ವಜಗಳನ್ನು ನಾಗರಿಕರಿಗೆ ವಿತರಿಸುತ್ತಿದೆ. ವಲಯದ ಜಂಟಿ ಆಯುಕ್ತರ ಕಚೇರಿ, ವಾರ್ಡ್ ಕಚೇರಿಗಳು, ಪ್ರಮುಖ ಜನನಿಬಿಡ ಪ್ರದೇಶಗಳು, ಮಾಲ್‌ಗಳಲ್ಲಿ ರಾಷ್ಟ್ರಧ್ವಜ–ಗಳನ್ನು ವಿತರಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.



ಪೀಠೋಪಕರಣ ಮಾರಾಟ ಮೇಳ

ಬೆಂಗಳೂರು: ಗೃಹ ಬಳಕೆಯ ಹಾಗೂ ವಾಣಿಜ್ಯ ಬಳಕೆಯ ಪೀಠೋಪಕರಣಗಳ ಬೃಹತ್ ಮಾರಾಟ ಮೇಳವು ನಗರದ ವೈಟ್‌ಫೀಲ್ಡ್‌ನ ಕರ್ನಾಟಕ ಟ್ರೇಡ್ ಪ್ರಮೋಷನ್ ಆರ್ಗನೈಸೇಷನ್‌ನಲ್ಲಿ ಸೋಮವಾರದವರೆಗೆ ನಡೆಯಲಿದೆ.

ಒಳಾಂಗಣ ಮತ್ತು ಹೊರಾಂಗಣ ಅಗತ್ಯಗಳಿಗೆ ಸೂಕ್ತವಾಗಿರುವ ಪೀಠೋಪಕರಣಗಳು ಇಲ್ಲಿ ಲಭ್ಯವಾಗಲಿವೆ ಎಂದು ಪ್ರಕಟಣೆ ತಿಳಿಸಿದೆ. ಶೇಕಡ 75ರವರೆಗೆ ರಿಯಾಯಿತಿ ಕೂಡ ಇರಲಿದೆ. ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 8.30ರವರೆಗೆ ಮಾರಾಟ ಮೇಳ ತೆರೆದಿರಲಿದೆ.

ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಇದೇ 6 ಮತ್ತು 7ರಂದು ವಿದ್ಯುತ್ ವ್ಯತ್ಯಯವಾಗಲಿದೆ.

ಆ.6: ಸರ್ಜಾಪುರ, ಸೆಸ್ನಾನಾ ಗಾರ್ಡನ್, ಹೊರ ವರ್ತುಲ ರಸ್ತೆ, ಸೆಂಟ್ರಲ್ ಮಾಲ್, ಎಕ್ಸೋರಾ ಬ್ಯುಸಿನೆಸ್ ಪಾರ್ಕ್, ಶೋಭಾ ಅಪಾರ್ಟ್‌ಮೆಂಟ್, ಸಲಾರ್‌ಪುರಿಯಾ ಸಾಫ್ಟ್ ಝೋನ್, ತಕ್ಷಶಿಲಾ ಹೆಲ್ತ್ ಕೇರ್ ಸುತ್ತಮುತ್ತಲಿನ ಪ್ರದೇಶಗಳು.

ಆ.7: ಹೊಸೂರು ಮುಖ್ಯರಸ್ತೆ, ಬಂಡೆಪಾಳ್ಯ, ಸಿಂಗಸಂದ್ರ, ಜಿ.ಬಿ. ಪಾಳ್ಯ, ಕೂಡ್ಲುಗೇಟ್, ಎಇಸಿಎಸ್ ಲೇಔಟ್ 'ಎ' ಬ್ಲಾಕ್ ಮತ್ತು 'ಬಿ' ಬ್ಲಾಕ್, ಹೊಂಗಸಂದ್ರ, ಓಂಶಕ್ತಿ ಲೇಔಟ್, ಬೊಮ್ಮನಹಳ್ಳಿ(ಬೇಗೂರು ಮುಖ್ಯರಸ್ತೆ), ಬೊಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಸಿಕ್ಕ ಬೇಗೂರು ಗೇಟ್, ಬಿಟಿಆರ್ ಉದ್ಯಾನ, ಕಾನ್‌ಕಾರ್ಡ್ ಲೇಔಟ್, ಮುನೇಶ್ವರ ಲೇಔಟ್, ಹರಳುಕುಂಟೆ, ಹೊಸಪಾಳ್ಯ, ಯೆಲ್ಲುಕುಂಟೆ, ಓಝೋನ್ ಟೆಕ್ ಪಾರ್ಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ದೇವಾಲಯಗಳಲ್ಲಿ ವಿಶೇಷ ಪೂಜೆ ಕಣ್ತುಂಬಿಕೊಂಡ ಭಕ್ತಾದಿಗಳು

ಸಂಭ್ರಮ ಹೆಚ್ಚಿಸಿದ ವರಮಹಾಲಕ್ಷ್ಮಿ

ಪ್ರಜಾವಾಣಿ ವಾರ್ತೆ



ಕೆಂಗೇರಿ ಉಪನಗರದ ಅಂಜಿನಪ್ಪ ಎಂಬುವರ ಮನೆಯಲ್ಲಿ ಕುಟುಂಬ ಸದಸ್ಯರು ವರಮಹಾಲಕ್ಷ್ಮಿ ಪೂಜೆ ನೆರವೇರಿಸಿದರು –ಪ್ರಜಾವಾಣಿ ಚಿತ್ರ/ ರಂಜು ಪಿ

ಬೆಂಗಳೂರು: ಶ್ರಾವಣ ಮಾಸದ ಮೊದಲ ಹಬ್ಬವಾದ ವರಮಹಾಲಕ್ಷ್ಮಿ ವ್ರತವನ್ನು ನಗರದಾದ್ಯಂತ ಶುಕ್ರವಾರ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ನಗರದ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು.

ಮಹಿಳೆಯರು ಮನೆಗಳ ಮುಂದೆ ಬಣ್ಣ ಬಣ್ಣದ ರಂಗೋಲಿ ಬಿಡಿಸಿ, ಅಂಗಳವನ್ನು ಚಿತ್ತಾಕರ್ಷಕಗೊಳಿಸಿದ್ದರು. ಬಾಗಿಲಿಗೆ ತಳಿರು ತೋರಣ ಕಟ್ಟಿ ಸಿಂಗರಿಸಿದ್ದರು. ಹಲವು ಮಂದಿ ಕಳಸವಿಟ್ಟು ಪೂಜಿಸಿದರೆ, ಮತ್ತೆ ಕೆಲವರು ಕಳಸಕ್ಕೆ ಸೀರೆಯುಡಿಸಿ, ಆಭರಣಗಳನ್ನು ಹಾಕಿ ಭಕ್ತಿಭಾವ ಮೆರೆದರು. ಕೆಲವೆಡೆ ಲಕ್ಷ್ಮಿಯ ಮೊಗವಾಡ ಇರಿಸಿ ಪೂಜಿಸಿದರು.

ಮನೆಯಲ್ಲಿನ ದೇವರ ಕೋಣೆಯನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಲಕ್ಷ್ಮಿದೇವಿ ಫೋಟೊ ಎದುರು ಹಣ, ಒಡವೆ, ಸಿಹಿ ತಿಂಡಿ ಹಾಗೂ ವಿವಿಧ ಬಗೆಯ ಹಣ್ಣು–ಹೂವು ಇಟ್ಟು ಪೂಜೆ ಸಲ್ಲಿಸಿದರು. ಕೆಲ ಮನೆಗಳಲ್ಲಿ ಲಕ್ಷ್ಮಿ ಕಳಶ ಪ್ರತಿಷ್ಠಾಪಿಸಿ, ಸೀರೆ ಹಾಗೂ ಹೂವುಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು.

ಆರ್ಥಿಕವಾಗಿ ಸ್ಥಿತಿವಂತರಾದವರ ಮನೆಗಳಲ್ಲಿ ಚಿನ್ನಾಭರಣ ಹಾಗೂ ಹಣ ಇಟ್ಟು ಪೂಜೆ ಮಾಡಿದರೆ, ಬಡ ಹಾಗೂ ಮಧ್ಯಮ ವರ್ಗದ ಜನರು ಹೂವು, ಹಣ್ಣುಗಳಿಂದ ಸಂಪತ್ತಿನ ಅಧಿದೇವತೆಯನ್ನು ಆರಾಧಿಸಿದರು. ಅಕ್ಕಪಕ್ಕದ ಮನೆಗಳ ಮಹಿಳೆಯರನ್ನು ಮನೆಗೆ ಕರೆದು ಅರಿಶಿಣ, ಕುಂಕುಮ, ಬಳೆ, ಹೂವು ಹಾಗೂ ತಾಂಬೂಲ ಕೊಟ್ಟು ಸತ್ಕರಿಸಿದರು.

ಶ್ಯಾವಿಗೆ ಪಾಯಸ, ಅಕ್ಕಿ ಪಾಯಸ, ಒಬ್ಬಟ್ಟು, ಕೋಸಂಬರಿ, ಹಪ್ಪಳ, ತರಕಾರಿಯ ಪಲ್ಯ ಮತ್ತಿತರ ಖಾದ್ಯಗಳನ್ನು ತಯಾರಿಸಿ ದೇವಿಗೆ ನೈವೇದ್ಯ ಮಾಡಿದರು. ಬೆಲೆ ಏರಿಕೆ ಹಾಗೂ ಮಳೆ ಹಬ್ಬದ ಸಡಗರವನ್ನು ಕಡಿಮೆ ಮಾಡಲಿಲ್ಲ. ವಾಣಿಜ್ಯ ಮಳಿಗೆಗಳು, ಅಂಗಡಿ ಮುಂಗಟ್ಟುಗಳಲ್ಲಿ ವರಮಹಾಲಕ್ಷ್ಮಿ ಪೂಜೆ ಜೋರಾಗಿತ್ತು. ಬ್ಯಾಂಕುಗಳ ಕಚೇರಿಯಲ್ಲಿಯೂ ಹಬ್ಬದ ಸಂಭ್ರಮ ಮನೆ ಮಾಡಿತ್ತು.

ದರ್ಶನ ಪಡೆದ ಭಕ್ತರು: ಹಬ್ಬದ ಪ್ರಯುಕ್ತ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಮಹಿಳೆಯರು ಹಾಗೂ ಮಕ್ಕಳು ಮುಂಜಾನೆಯಿಂದಲೇ ದೇವಸ್ಥಾನಗಳಿಗೆ ತೆರಳಿ, ದೇವರ ದರ್ಶನ ಪಡೆದರು. ಬನಶಂಕರಿ ದೇವಸ್ಥಾನದಲ್ಲಿ ಭಕ್ತರ ದಂಡು ಸೇರಿತ್ತು.

ಮಹಾಲಕ್ಷ್ಮೀ ಬಡಾವಣೆಯ ಪ್ರಸನ್ನ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಹಬ್ಬದ ಪ್ರಯುಕ್ತ ವಿಶೇಷ ಅಭಿಷೇಕ ಹಾಗೂ ಪೂಜೆ ಪುನಸ್ಕಾರ ನೆರವೇರಿಸಲಾಯಿತು. ಶೇಷಾದ್ರಿಪುರ ಹಾಗೂ ಗುಟ್ಟಹಳ್ಳಿಯ ಮಹಾಲಕ್ಷ್ಮೀ ದೇವಾಲಯ, ಮಲ್ಲೇಶ್ವರದ ಮಹಾಲಕ್ಷ್ಮೀ ದೇವಾಲಯ, ಕೋಟೆ ಶಿವ ದೇವಾಲಯ, ಶೃಂಗೇರಿ ಶಂಕರಮಠ ಶಾರದಾಂಬೆ ದೇವಸ್ಥಾನ ಹಾಗೂ ಕೋಟೆ ವೆಂಕಟರಮಣ ದೇವಸ್ಥಾನಗಳಲ್ಲಿ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.



ಶೇಷಾದ್ರಿಪುರದ ಮಹಾಲಕ್ಷ್ಮಿ ದೇವಾಲಯದಲ್ಲಿ ಭಕ್ತಾದಿಗಳು ದೇವಿಯ ದರ್ಶನ ಪಡೆದುಕೊಂಡರು ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ನಗರದಲ್ಲಿ ಇಂದು

ಮನೆ-ಮನಗಳಲ್ಲಿ ಶಿವಪೂಜೆ ಶಿವಾನುಭವ ಹಾಗೂ ಸಿದ್ಧಾಂತ ಶಿಖಾಮಣಿ–ವಚನ ಪ್ರವಚನ ಕಾರ್ಯಕ್ರಮ: ಸಂಜೆ: ಅನಿತಾ, ನಾಗರಾಜ ವಾಲಿ, ಎಚ್.ಎ.ಎಲ್. ಬಳಗ, ಸ್ಥಳ: ವಿದ್ಯಾಗಣಪತಿ ದೇವಸ್ಥಾನ, ಎಚ್.ಎ.ಎಲ್ ಪೂರ್ವ ಬಡಾವಣೆ, ಮಾರತ್ತಹಳ್ಳಿ

ಹೇರ್ ಕೇರ್, ಸಲೂನ್ ಆ್ಯಂಡ್ ಸ್ಪಾ ಎಕ್ಸ್‌ಪೋ: ಸಾನ್ನಿಧ್ಯ: ಸವಿತಾನಂದ ನಾಥ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಕೋಟ ಶ್ರೀನಿವಾಸ ಪೂಜಾರಿ, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಸ್ಥಳ: ಮ್ಯಾನ್ಫೊ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10

ರಾಷ್ಟ್ರೀಯ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಶನ್‌ನ ರಾಜ್ಯ ಮಟ್ಟದ ಸಮಾವೇಶ: ಬೆಳಿಗ್ಗೆ: 10, ಸಾನ್ನಿಧ್ಯ: ಡಾ. ವಿಶ್ವಸಂತೋಷ ಭಾರತಿ ಸ್ವಾಮೀಜಿ, ಉದ್ಘಾಟನೆ: ರಿಜ್ವಾನ್ ಅರ್ಷದ್, ಅಧ್ಯಕ್ಷತೆ: ಡಾ. ರಾಜಶೇಖರ್ ಭೂಸನೂರಮಠ, ಸಂಜೆ ಕಾರ್ಯಕ್ರಮ: ವೈದ್ಯ ರತ್ನ ಪ್ರಶಸ್ತಿ ಪ್ರದಾನ: ಥಾವರ್‌ಚಂದ್ ಗೆಹಲೋತ್, ಅತಿಥಿಗಳು: ಶೋಭಾ ಕರಂದ್ಲಾಜೆ, ಸಿದ್ದರಾಮಯ್ಯ, ಡಾ.ಕೆ. ಸುಧಾಕರ್, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣ (ಕೊಂಡಜ್ಜಿ ಬಸಪ್ಪ ಆಡಿಟೋರಿಯಂ), ಮಹಾರಾಣಿ ಕಾಲೇಜು ಹತ್ತಿರ, ಸಂಜೆ 4

ರೋಬೋ ಲ್ಯಾಬ್ ಉದ್ಘಾಟನೆ: ಅತಿಥಿಗಳು: ಆರ್.ಎಂ. ವಾಸಗಮ್, ಅಧ್ಯಕ್ಷತೆ: ವೂಡೇ.ಪಿ. ಕೃಷ್ಣ, ಎಲ್.ವಿ. ಮುರಳಿಕೃಷ್ಣ ರೆಡ್ಡಿ, ಕೆ. ಗೋಪಾಲಕೃಷ್ಣನ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಪಬ್ಲಿಕ್ ಸ್ಕೂಲ್, ಯಲಹಂಕ ನ್ಯೂ ಟೌನ್, ಬೆಳಿಗ್ಗೆ 10.30

ಜಿ.ಎನ್. ರಂಗನಾಥ ರಾವ್ ಅವರ 'ಆ ಪತ್ರಿಕೋದ್ಯಮ' ಪುಸ್ತಕ ಬಿಡುಗಡೆ: ಬಿಡುಗಡೆ: ಸಿ.ಎನ್. ರಾಮಚಂದ್ರನ್, ಅತಿಥಿಗಳು: ಆರತಿ ಎಚ್.ಎನ್., ಜಿ.ಎನ್. ಮೋಹನ್, ಅಧ್ಯಕ್ಷತೆ: ಶಿವನಂದ ತಗಡೂರು, ಆಯೋಜನೆ ಮತ್ತು ಸ್ಥಳ: ಬಹುರೂಪಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಕೆಯುಡಬ್ಲ್ಯುಜೆ ಸಭಾಂಗಣ 3ನೇ ಮಹಡಿ, ಕಂದಾಯ ಭವನ ಕೆಂಪೇಗೌಡ ರಸ್ತೆ, ಬೆಳಿಗ್ಗೆ 11

ಸಾಧಕರಿಗೆ ಸನ್ಮಾನ, ಪ್ರಶಸ್ತಿ ಪ್ರದಾನ ಹಾಗೂ ರಂಗೋತ್ಸವ: ಉದ್ಘಾಟನೆ: ಸಿ.ಕೆ. ರಾಮೇಗೌಡ, ಅಧ್ಯಕ್ಷತೆ: ಶ್ರೀನಿವಾಸ್. ಜಿ. ಕಪ್ಪಣ್ಣ, ಅತಿಥಿಗಳು: ಟಿ.ಎಸ್. ನಾಗಾಭರಣ, ಆಯೋಜನೆ: ಉದ್ಭವ ಕಲಾವಿದರು, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ವೇದಿಕೆ ಕಾರ್ಯಕ್ರಮ: ಸಂಜೆ 5

ಕಲೋತ್ಸವ-2022, ಯಕ್ಷಗಾನ 'ಭಾಮ ಕಲಾಪ' : ಅತಿಥಿಗಳು: ರಾಘವೇಂದ್ರ ಕಾಮತ್, ಪದ್ಮನಾಭ ಭರಣಿ, ಮಂಜುನಾಥ.ಸಿ.ಎಂ., ದೇವರಾಜ್ ಕರಬ, ಆಯೋಜನೆ: ಕರಬ ಪ್ರತಿಷ್ಠಾನ, ಸ್ಥಳ: ಕಲಾಗುಡಿ, ವಿಶ್ವೇಶ್ವರಯ್ಯ ಲೇಔಟ್, ಸಂಜೆ 5.30
ಸಂವಾದ ಹಾಗೂ 'ದೇವಭಾಷಾ ಗೇಮ್' ಬಿಡುಗಡೆ: ಪಾಲ್ಗೊಳ್ಳುವವರು: ಶ್ರೀಧರ್ ವೆಂಬು, ಸಾಯಿ ದೀಪಕ್, ಅತಿಥಿಗಳು: ರುಟ್ಗರ್ ಕೊರ್ಟನ್‌ಹಾರ್ಸ್ಟ್, ಆಯೋಜನೆ: ಮೇಕಿಂಗ್ ಕಲ್ಚರ್ ಕೂಲ್, ಸ್ಥಳ: ಭಾರತೀಯ ವಿದ್ಯಾಭವನ, ಸಂಜೆ 5.45

ಡಾ.ಸುಮನ್ ವೆಂಕಟೇಶ್ ಅವರ 'ವಿಕ್ಟರ್ ಹ್ಯೂಗೋ ಮತ್ತು ಹಿಂದೂ ಫಿಲಾಸಫಿ' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಅತಿಥಿಗಳು: ಅರವಿಂದ ಜತ್ತಿ, ಸ್ಥಳ: ಸೆಮಿನಾರ್ ಹಾಲ್, ಜ್ಞಾನಜ್ಯೋತಿ ಆಡಿಟೋರಿಯಂ, ಸಂಜೆ 4.30

ಜನಪದ ಸಂಗೀತ ಶ್ರಾವಣ: ಅಧ್ಯಕ್ಷತೆ: ಅಪ್ಪಗೆರೆ ತಿಮ್ಮರಾಜು, ಅತಿಥಿಗಳು: ಮುನಿಯಪ್ಪ, ಪರಮಶಿವಯ್ಯ, ಸರಸ್ವತಿ.ಎಸ್. ಹೆಗಡೆ, ಆಯೋಜನೆ: ಗಾನಮಧುರ್ಯ ಸಾಂಸ್ಕೃತಿಕ ಕಲಾ ಸಂಘ, ಓಂ ಯೋಗ ಕೇಂದ್ರ, ಸ್ಥಳ: ಓಂ ಯೋಗ ಕೇಂದ್ರ, ಜಿಯಾಲಜಿ ಬಡಾವಣೆ, ನಾಗರಬಾವಿ 2ನೇ ಹಂತ, ಸಂಜೆ 6

ಗುರು ಸಾರ್ವಭೌಮರ ಆರಾಧನಾ ಮಹೋತ್ಸವ: ಸಂಗೀತ ಕಾರ್ಯಕ್ರಮ: ಎಂ.ಎಸ್. ಶೀಲಾ ಮತ್ತು ಸಂಗಡಿಗರು, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರ ನಗರ, ಮಲ್ಲೇಶ್ವರ, ಸಂಜೆ 6.30

'ವಚನಗಳಲ್ಲಿ ಹಸ್ತ, ಹೃದಯ ಹಾಗೂ ಶೂನ್ಯ ಸಂಪಾದನೆಯ ಪಥಗಳು' ಶೀರ್ಷಿಕೆಯ ಉಪನ್ಯಾಸ ಸರಣಿ: ಉಪನ್ಯಾಸ: ಎಚ್. ಎಸ್. ಶಿವಪ್ರಕಾಶ್, ವಿಷಯ: ಭಕ್ತಿ ಚಳವಳಿ ಮತ್ತು ವಚನ ಚಳವಳಿ ನಡುವಿನ ಹೋಲಿಕೆ ಹಾಗೂ ಭಿನ್ನತೆ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ಸಂಜೆ 6.30



ಎಚ್.ಎಸ್. ಶಿವಪ್ರಕಾಶ್

'ನರಿಗಳಿಗೇಕೆ ಕೋಡಿಲ್ಲ' ನಾಟಕ ಪ್ರದರ್ಶನ: ಸಂಗೀತ: ಗಜಾನನ. ಟಿ. ನಾಯ್ಕ, ರಂಗ ವಿನ್ಯಾಸ: ಶಶಿಧರ ಅಡಪ, ನಿರ್ದೇಶನ: ಮಂಗಳಾ.ಎನ್., ಆಯೋಜನೆ: ಸಂಚಾರಿ ಥಿಯೇಟರ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಂಗೀತ ಕಾರ್ಯಕ್ರಮ: ಘಟ: ಎಸ್. ಹರಿಹರ ಸುಬ್ರಹ್ಮಣ್ಯನ್, ಗಾಯನ ಮತ್ತು ಮೃದಂಗ: ಕಲ್ಲೂರಿ ಶ್ರೀನಿವಾಸ, ವಯೋಲಿನ್: ಪರೂರ.ಎಂ. ಕೃಷ್ಣಸ್ವಾಮಿ, ಆಯೋಜನೆ: ಶ್ರೀ ಶಾರದ ಸಾಂಸ್ಕೃತಿಕ ಸಂಘ, ಕೆ.ಪಿ. ಭಟ್ಟ ಅಕಾಡೆಮಿ ಆಫ್ ಮ್ಯೂಸಿಕ್ (ಆನ್‌ಲೈನ್ ಕಾರ್ಯಕ್ರಮ)

‘ಓ ಮೈ ಲವ್’ ನಿರ್ದೇಶಕನ ವಿರುದ್ಧ ಎಫ್‌ಐಆರ್

ಬೆಂಗಳೂರು: ಅನುಮತಿ ಪಡೆಯದೇ ‘ಓ ಮೈ ಲವ್’ ಸಿನಿಮಾ ಜಾಹೀರಾತು ಹಾಕಿದ್ದ ಆರೋಪದಡಿ ನಿರ್ದೇಶಕ ಸ್ಮೈಲ್ ಸೀನು ಹಾಗೂ ಇತರರ ವಿರುದ್ಧ ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಬಿಬಿಎಂಪಿ ಲಗ್ಗೆರೆ ಉಪವಿಭಾಗದ ಕಂದಾಯ ನಿರೀಕ್ಷಕ ಆರ್. ಅನಿಲ್‌ಕುಮಾರ್ ಅವರು ದೂರು ನೀಡಿದ್ದಾರೆ. ಆರೋಪಿ ಸ್ಮೈಲ್ ಸೀನು ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಚಿತ್ರದ ಪ್ರಚಾರಕ್ಕೆಂದು ನಗರದ ಹಲವೆಡೆ ಪೋಸ್ಟರ್ ಹಾಗೂ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ. ಇದಕ್ಕೆ ಬಿಬಿಎಂಪಿ ಕಡೆಯಿಂದ ಅನುಮತಿ ಪಡೆದಿಲ್ಲ. ನಾಗರಬಾವಿ ಮುಖ್ಯರಸ್ತೆಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ ಬಿಬಿಎಂಪಿ ಅಧಿಕಾರಿಗಳು, ಪೋಸ್ಟರ್, ಫ್ಲೆಕ್ಸ್ ತೆರವುಗೊಳಿಸಿ ಠಾಣೆಗೆ ದೂರು ನೀಡಿದ್ದಾರೆ’ ಎಂದೂ ತಿಳಿಸಿವೆ. ಬಿಬಿಎಂಪಿ ಅಧಿಕಾರಿಯೊಬ್ಬರು, ‘ಹೈಕೋರ್ಟ್ ನಿರ್ದೇಶನದನ್ವಯ ನಗರದಲ್ಲಿ ಬ್ಯಾನರ್, ಫ್ಲೆಕ್ಸ್ ಹಾಗೂ ಇತರೆ ಜಾಹೀರಾತು ಮಾದರಿಗಳನ್ನು ನಿಷೇಧಿಸಲಾಗಿದೆ. ಇಷ್ಟಾದರೂ ಕೆಲವರು, ಜಾಹೀರಾತು ಪ್ರಕಟಿಸಿ ನಗರದ ಸೌಂದರ್ಯ ಹಾಳು ಮಾಡುತ್ತಿದ್ದಾರೆ. ಅಂಥವರ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ’ ಎಂದರು.

‘ನಗರಾಭಿವೃದ್ಧಿ ಕಚೇರಿಯಲ್ಲ ಆರ್‌ಎಸ್‌ಎಸ್– ಬಿಜೆಪಿ ಕಚೇರಿ’: ಫಲಕ ಹಚ್ಚಿದ ಕೈ ಪಡೆ

ವಿಕಾಸಸೌಧದಲ್ಲಿ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಚುನಾವಣಾ ಮೀಸಲಾತಿ ಪಟ್ಟಿಯನ್ನು ವಿರೋಧಿಸಿ ಕಾಂಗ್ರೆಸ್ ನಾಯಕರು ಶುಕ್ರವಾರ ವಿಕಾಸಸೌಧದಲ್ಲಿರುವ ನಗರಾಭಿವೃದ್ಧಿ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಬಿಬಿಎಂಪಿ ಚುನಾವಣೆ ಸಂಬಂಧ ಮೀಸಲಾತಿ ಪಟ್ಟಿ ಹೊರಡಿಸುವಂತೆ ಸುಪ್ರೀಂಕೋರ್ಟ್ ಗಡುವು ನೀಡಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮೀಸಲಾತಿ ಪಟ್ಟಿಯನ್ನು ಪ್ರಕಟಿಸಿದೆ. ಇದು ಅವೈಜ್ಞಾನಿಕ ಎಂದು ದೂರಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ನಾಯಕರು, ನಗರಾಭಿವೃದ್ಧಿ ಇಲಾಖೆ ಕಚೇರಿಯ ಫಲಕಕ್ಕೆ ‘ಆರ್‌ಎಸ್‌ಎಸ್–ಬಿಜೆಪಿ ಕಚೇರಿ’ಎಂದು ನಾಮಫಲಕ ಅಂಟಿಸಿ ಆಕ್ರೋಶ ವ್ಯಕ್ತಪಡಿಸಿದರು.

‘ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಮೀಸಲಾತಿ ಪಟ್ಟಿಯು ಮಾರ್ಗಸೂಚಿಯ ಪ್ರಕಾರ ಇಲ್ಲ. ವಾರ್ಡ್‌ಗಳ ಮರು ವಿಂಗಡಣೆಯನ್ನು ಬಿಜೆಪಿ ಶಾಸಕರು ಮತ್ತು ಸಂಸದರ ಅನುಕೂಲಕ್ಕೆ ತಕ್ಕಂತೆ ರೂಪಿಸಲಾಗಿದೆ. ಕಂದಾಯ ಇಲಾಖೆಯ ಅಧಿಕಾರಿಗಳು ಮಾಡಬೇಕಾದ ಕೆಲಸವನ್ನು ಸಮಿತಿ ಮುಖ್ಯಸ್ಥರಾದ ಆಯುಕ್ತರು ಒಂದೇಒಂದು ಸಭೆ ಮಾಡದೇ, ಆರ್‌ಎಸ್‌ಎಸ್‌ನ ಅಣತಿಯಂತೆ ಕೇಶವಕೃಪಾದಲ್ಲಿ ಸಿದ್ಧಪಡಿಸಿದ್ದಾರೆ’ ಎಂದು ಕಾಂಗ್ರೆಸ್ ಶಾಸಕ ರಾಮಲಿಂಗಾರೆಡ್ಡಿ ದೂರಿದರು.

‘ಈ ಮೀಸಲಾತಿ ಪಟ್ಟಿ ಸಂಚಿನಿಂದ ಕೂಡಿದೆ. ಕಾಂಗ್ರೆಸ್‌ನವರು ಗೆಲ್ಲದಂತೆ ನೋಡಿಕೊಳ್ಳುವುದರ ಜತೆಗೆ, ಬಿಜೆಪಿಯ ಸಂಸದರು, ಶಾಸಕರಿಗೆ ಪಕ್ಷದಲ್ಲೇ ಪ್ರತಿಸ್ಪರ್ಧಿಗಳು ಸೃಷ್ಟಿಯಾಗದಂತೆಯೂ ತಂತ್ರ ರೂಪಿಸಿದ್ದಾರೆ’ ಎಂದರು.

> ಬಿಜೆಪಿ ಸರ್ಕಾರ ಮೀಸಲಾತಿ ನೀಡುವ ವಿಷಯದಲ್ಲಿ **ಪರಿಶಿಷ್ಟರು, ಹಿಂದುಳಿದವರು ಹಾಗೂ ಮಹಿಳೆಯರಿಗೆ ಮೋಸ ಮಾಡಿದೆ. ಮೋಸಕ್ಕೆ ಮತ್ತೊಂದು ಹೆಸರೇ ಬಿಜೆಪಿ**
> **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

‘ಚಾಮರಾಜಪೇಟೆ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು 350 ರಿಂದ 400 ಜನ ಇರಬಹುದು. ಅವರಿಗೆ ಎಸ್‌ಟಿ ಮೀಸಲಾತಿ ನೀಡಿದ್ದಾರೆ. ಚಾಮರಾಜಪೇಟೆಯನ್ನು ಜಾಲಿ ಮೊಹಲ್ಲಾಗೆ ಸೇರಿಸಿದ್ದಾರೆ. ಕಾಂಗ್ರೆಸ್ ಒಂದು ಸ್ಥಾನವೂ ಗೆಲ್ಲಬಾರದು ಎಂಬ ಕಾರಣಕ್ಕೆ ಈ ರೀತಿ ಕುತಂತ್ರ ಮಾಡಿದ್ದಾರೆ’ ಎಂದು ಶಾಸಕ ಜಮೀರ್ ಅಹಮದ್ ಖಾನ್ ಕಿಡಿಕಾರಿದರು.

ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಮಾತನಾಡಿ, ‘ಬಿಬಿಎಂಪಿ ಚುನಾವಣಾ ಪ್ರಕ್ರಿಯೆ ನಗರದ ಹಿತದೃಷ್ಟಿಯಿಂದ ಮಾಡಿಲ್ಲ. ಬಿಜೆಪಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಬೇಕಾಬಿಟ್ಟಿ ಮೀಸಲಾತಿ ನಿಗದಿ ಮಾಡಿದ್ದಾರೆ. ಬಿಜೆಪಿ ಶಾಸಕರ ಕ್ಷೇತ್ರ ಮತ್ತು ಕಾಂಗ್ರೆಸ್ ಶಾಸಕರ ಕ್ಷೇತ್ರ ಹೋಲಿಕೆ ಮಾಡಿದರೆ, 19 ಸಾವಿರ ಮತವಿರುವ ಒಂದು ವಾರ್ಡ್ ಸೃಷ್ಟಿಸಿದರೆ, ಅದರ ಪಕ್ಕದಲ್ಲಿ 45 ಸಾವಿರ ಮತವಿರುವ ವಾರ್ಡ್ ಮಾಡಲಾಗಿದೆ’ ಎಂದರು.

ಪ್ರತಿಭಟನೆಯಲ್ಲಿ ವಿಧಾನಪರಿಷತ್ ವಿರೋಧಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಸಂಸದ ಡಿ.ಕೆ.ಸುರೇಶ್, ಶಾಸಕರಾದ ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ ಇತರರು ಇದ್ದರು.



ವಿಕಾಸಸೌಧದಲ್ಲಿರುವ ನಗರಾಭಿವೃದ್ಧಿ ಇಲಾಖೆ ಕಚೇರಿ ಮುಂದೆ ಕಾಂಗ್ರೆಸ್ ಶಾಸಕರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರೌಡಿಸಂ ಕಾಂಗ್ರೆಸ್ ಸಂಸ್ಕೃತಿ: ಬೊಮ್ಮಾಯಿ ಕಿಡಿ

ಬೆಂಗಳೂರು: ‘ಬಿಬಿಎಂಪಿ ಮೀಸಲಾತಿ ಪಟ್ಟಿಯ ಬಗ್ಗೆ ಕಾಂಗ್ರೆಸ್‌ಗೆ ವಿರೋಧವಿದ್ದರೆ ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶವಿದೆ. ಅದನ್ನು ಬಿಟ್ಟು ರೌಡಿಸಂ ಮಾಡಿ ವಿಕಾಸಸೌಧಕ್ಕೆ ನುಗ್ಗಿರುವುದು ಎಷ್ಟು ಸರಿ. ಇದು ಕಾಂಗ್ರೆಸ್ ಸಂಸ್ಕೃತಿಯನ್ನು ತೋರಿಸುತ್ತದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಬಿಬಿಎಂಪಿ ಮೀಸಲಾತಿಯನ್ನು 2015 ರ ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ನಿಯಮಗಳನ್ನು ಅನುಸರಿಸಿ ಮಾಡಲಾಗಿದೆ. ಕಾಂಗ್ರೆಸ್ ಸಹ ಹಿಂದೆ ಮಾಡಿದ್ದಾಗ ಏನಾಗಿತ್ತು ಎನ್ನುವುದನ್ನು ಆತ್ಮಾವಲೋಕನ ಮಾಡಿಕೊಳ್ಳಲಿ. ಎಲ್ಲಾ ಶಾಸಕರ ಕ್ಷೇತ್ರಗಳಲ್ಲಿ ಏನಾಗಿತ್ತು ಎನ್ನುವುದು ಗೊತ್ತಿದೆ ಎಂದು ಹೇಳಿದರು.

ಸಾಮಾಜಿಕ ನ್ಯಾಯ ಪಾಲನೆ: ‘ನ್ಯಾಯಾಲಯದ ನಿರ್ದೇಶನದಂತೆ ವಾರ್ಡ್ ಪುನರ್ ವಿಂಗಡಣೆ ಮತ್ತು ಮೀಸಲಾತಿ ಪ್ರಕಟಿಸಲಾಗಿದೆ. ಇದರಲ್ಲಿ ಸಾಮಾಜಿಕ ನ್ಯಾಯ ಕಾಪಾಡಲಾಗಿದೆ. ಮೀಸಲಾತಿ ಸಿದ್ಧಪಡಿಸುವ ಸಂದರ್ಭದಲ್ಲಿ ಯಾವುದೇ ಪಕ್ಷ ಅಥವಾ ವ್ಯಕ್ತಿಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ನುರಿತ ಅಧಿಕಾರಿಗಳ ತಂಡ ಈ ಮೀಸಲಾತಿಯನ್ನು ಸಿದ್ಧಪಡಿಸಿವೆ. ಇದರಲ್ಲಿ ಪಕ್ಷದ ಹಸ್ತಕ್ಷೇಪವಿಲ್ಲ’ ಎಂದು ಬಿಜೆಪಿ ಶಾಸಕರೂ ಆಗಿರುವ ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಸಮರ್ಥಿಸಿಕೊಂಡಿದ್ದಾರೆ.



ಯಲಹಂಕದ ಮದರ್ ಡೇರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಭೇಟಿ ನೀಡಿ ಕಾರ್ಯ ಚಟುವಟಿಕೆ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ನಂದಿನಿ ಉತ್ಪನ್ನಗಳ ಬಗ್ಗೆ ಕೆಎಂಎಫ್ ಅಧಿಕಾರಿಗಳು ಶಾ ಅವರಿಗೆ ವಿವರಿಸಿದರು. ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್, ಯಲಹಂಕ ಕ್ಷೇತ್ರದ ಶಾಸಕ ಎಸ್‌.ಆರ್‌.ವಿಶ್ವನಾಥ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ಇದ್ದರು

ಹೊಸ ಮನೆ ಕೊಡಿಸುವ ನೆಪದಲ್ಲಿ ಹಣ ಪಡೆದಿದ್ದವ ವಶಕ್ಕೆ

ಅಮೆರಿಕದ ವೃದ್ಧೆಗೆ ₹ 2.68 ಕೋಟಿ ವಂಚನೆ

ಬೆಂಗಳೂರು: ಅಮೆರಿಕದಲ್ಲಿದ್ದ ವೃದ್ಧೆ ಮಣಿ ತಿರುಮಲೈ (75) ಅವರಿಗೆ ₹ 2.68 ಕೋಟಿ ವಂಚನೆ ಮಾಡಲಾಗಿದ್ದು, ಈ ಸಂಬಂಧ ಆರೋಪಿ ಕನ್ನಯ್ಯ ಕುಮಾರ್ ಯಾದವ್ ಎಂಬುವರನ್ನು ಹುಳಿಮಾವು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

‘ಭಾರತದ ಮಣಿ, ಹಲವು ವರ್ಷಗಳ ಹಿಂದೆಯೇ ಅಮೆರಿಕಕ್ಕೆ ಹೋಗಿ ನೆಲೆಸಿದ್ದಾರೆ. ಅಲ್ಲಿಯ ಪೌರತ್ವವನ್ನೂ ಪಡೆದಿದ್ದಾರೆ. ಅಮೆರಿಕ ತೊರೆದು ಬೆಂಗಳೂರಿನಲ್ಲಿ ನೆಲೆಸಲು ಅವರು ಇಚ್ಛಿಸಿದ್ದರು. ಹೊಸ ಮನೆ ಕೊಡಿಸುವ ನೆಪದಲ್ಲಿ ಆರೋಪಿ ಕನ್ನಯ್ಯ ಕುಮಾರ್ ಹಣ ಪಡೆದು ವಂಚಿಸಿರುವುದು ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವೃದ್ಧೆ ಮಣಿ ಅವರ ಸಹೋದರಿ ಬೆಂಗಳೂರಿನ ಜೆ.ಪಿ.ನಗರದಲ್ಲಿ ನೆಲೆಸಿದ್ದಾರೆ. ಅವರನ್ನು ಮಾತನಾಡಿಸಲು ಮಣಿ ಆಗಾಗ ಬೆಂಗಳೂರಿಗೆ ಬಂದು ಹೋಗುತ್ತಿದ್ದರು. ಆರೋಪಿ ಕನ್ನಯ್ಯ ಕುಮಾರ್, ಹುಳಿಮಾವು ಬಳಿ ಸರ್ವೀಸ್ ಅಪಾರ್ಟ್‌ಮೆಂಟ್ ನಿರ್ವಹಣೆ ಮಾಡುತ್ತಿದ್ದ. ಈತನ ಅಪಾರ್ಟ್‌ಮೆಂಟ್ ಫ್ಲ್ಯಾಟ್‌ನಲ್ಲಿ ವೃದ್ಧೆ ಉಳಿದುಕೊಳ್ಳುತ್ತಿದ್ದರು. ಅದೇ ವೇಳೆಯೇ ಇಬ್ಬರಿಗೂ ಪರಿಚಯವಾಗಿತ್ತು.’

‘ಕೋವಿಡ್ ಸಂದರ್ಭದಲ್ಲಿ ಪತಿಯನ್ನು ಕಳೆದುಕೊಂಡಿದ್ದ ಮಣಿ, ಬೆಂಗಳೂರಿಗೆ ಬಂದು ವಾಸವಿರಲು ತೀರ್ಮಾನಿಸಿದ್ದರು. ಇದಕ್ಕಾಗಿ ಮನೆ ಹುಡುಕುತ್ತಿದ್ದರು. ಪರಿಚಯಸ್ಥರೊಬ್ಬರ ಮನೆ ಇರುವುದಾಗಿ ಹೇಳಿದ್ದ ಆರೋಪಿ ಕನ್ನಯ್ಯ ಕುಮಾರ್, ₹ 2.68 ಕೋಟಿಗೆ ವ್ಯವಹಾರ ಆಗುವುದಾಗಿ ತಿಳಿಸಿದ್ದ’ ಎಂದು ತಿಳಿಸಿವೆ.

‘ವೈದ್ಯಕೀಯ ಚಿಕಿತ್ಸೆಗಾಗಿ ಮಹಿಳೆ ತುರ್ತಾಗಿ ಅಮೆರಿಕಕ್ಕೆ ಹೋಗಿದ್ದರು. ಅವರಿಗೆ ಕರೆ ಮಾಡಿದ್ದ ಆರೋಪಿ, ‘ಮನೆ ಮಾಲೀಕರಿಗೆ ಹಣದ ಅವಶ್ಯಕತೆ ಇದೆ. ಹಣ ನೀಡಿದರೆ, ಮನೆ ಮಾರಾಟ ಮಾಡುತ್ತಾರೆ’ ಎಂದಿದ್ದ. ಅಮೆರಿಕದಿಂದ ಬರಲು ಸಮಯ ಬೇಕೆಂದು ವೃದ್ಧೆ ಕೇಳಿದ್ದರು. ಆರೋಪಿಯು ‘ಹಣ ಕಳುಹಿಸಿ. ನನ್ನ ಹೆಸರಿಗೆ ನೋಂದಣಿ ಮಾಡಿಸುತ್ತೇನೆ. ಬೆಂಗಳೂರಿಗೆ ನೀವು ಬಂದ ನಂತರ ವರ್ಗಾವಣೆ ಮಾಡುತ್ತೇನೆ’ ಎಂದಿದ್ದ. ಅದನ್ನು ನಂಬಿದ್ದ ವೃದ್ಧೆ, ಹಣ ಹಾಕಿದ್ದರು’ ಎಂದು ಹೇಳಿವೆ. ‘ಇತ್ತೀಚೆಗೆ ವೃದ್ಧೆ, ಬೆಂಗಳೂರಿಗೆ ಬಂದಿದ್ದರು. ಅವರನ್ನು ದೂರವಿಡಲು ಯತ್ನಿಸಿದ್ದ ಆರೋಪಿ, ತಮ್ಮೂರು ಬಿಹಾರಕ್ಕೆ ಪರಾರಿಯಾಗಲು ಸಜ್ಜಾಗಿದ್ದ. ವೃದ್ಧೆ ನೀಡಿದ್ದ ಮಾಹಿತಿ ಆಧರಿಸಿ ರೈಲ್ವೆ ನಿಲ್ದಾಣದಲ್ಲೇ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆ ನಡೆಸಲಾಗುತ್ತಿದೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಅ.31ರವರೆಗೆ ಸರ್ಕಾರಿ ಶಾಲೆ ಆಸ್ತಿ ಸಂರಕ್ಷಣಾ ಅಭಿಯಾನ

ಬೆಂಗಳೂರು: ರಾಜ್ಯ ಸರ್ಕಾರ ಆಗಸ್ಟ್ 1ರಿಂದ ಅಕ್ಟೋಬರ್ 31ರವರೆಗೆ ಸರ್ಕಾರಿ ಶಾಲೆ ಮತ್ತು ಕಾಲೇಜುಗಳ ಆಸ್ತಿ ಸಂರಕ್ಷಣಾ ಅಭಿಯಾನ ಹಮ್ಮಿಕೊಂಡಿದೆ.

ಸರ್ಕಾರ ಹಾಗೂ ದಾನಿಗಳು ನೀಡಿದ ಜಾಗದಲ್ಲಿ ಸರ್ಕಾರಿ ಶಾಲಾ, ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಹಲವೆಡೆ ಭೂ ದಾಖಲೆಗಳು ಶಾಲೆಯ ಹೆಸರಿನಲ್ಲಿ ಇಲ್ಲ. ಆಯಾ ಭೂಮಿಯನ್ನು ಶಾಲೆಗಳ ಹೆಸರಿಗೆ ಖಾತೆ ಮಾಡಿಸಲು, ನಿರುಪಯುಕ್ತ ಕಟ್ಟಡಗಳನ್ನು ಶೈಕ್ಷಣಿಕ ಚಟುವಟಿಕೆಗಳಿಗೆ ಬಳಸಿಕೊಳ್ಳಲು, ಅಪಾಯದ ಸ್ಥಿತಿಯಲ್ಲಿರುವ ಕಟ್ಟಡಗಳನ್ನು ತೆರವುಗೊಳಿಸಿ, ಹೊಸ ಕಟ್ಟಡ ನಿರ್ಮಿಸಲು ಅಗತ್ಯ ದಾಖಲೆಗಳನ್ನು ಕ್ರೋಡೀಕರಿಸುವುದು ಸೇರಿದಂತೆ ಒಟ್ಟಾರೆ ಆಸ್ತಿಯ ಸಂರಕ್ಷಣೆ ಈ ಅಭಿಯಾನದ ಉದ್ದೇಶ ಎಂದು ಶಿಕ್ಷಣ ಇಲಾಖೆ ಆಯುಕ್ತರು ಮಾಹಿತಿ ನೀಡಿದ್ದಾರೆ.

ನಿಗದಿತ ಅವಧಿಯ ಒಳಗೆ ಅಭಿಯಾನ ಪೂರ್ಣಗೊಳಿಸಲು ಆಯಾ ಶಾಲೆಯ ಮುಖ್ಯಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರು ಕ್ರಮ ವಹಿಸಬೇಕು. ಅಭಿಯಾನದ ನಂತರ ಸಂಪೂರ್ಣ ವರದಿಯನ್ನು ಆಯಾ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಕಾರ್ಮಿಕರಿಗೆ ಟೆಲಿ ಆರೋಗ್ಯ ಸೇವೆ



ಬೆಂಗಳೂರು: ಶ್ರಮಿಕ ವರ್ಗ ತುರ್ತು ಸಂದರ್ಭದಲ್ಲಿ ವೈದ್ಯರನ್ನು ತಲುಪಲಾಗದೆ ಪರದಾಡುವುದನ್ನು ತಪ್ಪಿಸಲು ಕಾರ್ಮಿಕ ಇಲಾಖೆ ‘ಡಿಜಿಟಲ್ ಟೆಲಿ ಹೆಲ್ತ್ ಮತ್ತು ಟೆಲಿ ಮೆಡಿಸನ್’ ಸೇವೆ ಆರಂಭಿಸಲು ಮುಂದಾಗಿದೆ.

ಪ್ರಾಯೋಗಿಕವಾಗಿ ಈ ಸೇವೆ ಜಾರಿಗೊಳಿಸುವ ಸಂಬಂಧ ರೈಲ್‌ಟೆಲ್ ಕಾರ್ಪೊರೇಷನ್ ಆಫ್ ಇಂಡಿಯಾ ಜತೆ ಒಡಂಬಡಿಕೆ ಮಾಡಿಕೊಂಡಿದೆ. ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಅವರು ಒಡಂಬಡಿಕೆ ಮಾಡಿಕೊಂಡರು.

2020ರ ಸ್ವಾತಂತ್ರ್ಯೋತ್ಸವದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ‘ಡಿಜಿಟಲ್ ಹೆಲ್ತ್’ ಯೋಜನೆ ಅನುಷ್ಠಾನದ ಬಗ್ಗೆ ಮಾತನಾಡಿದ್ದರು. ಅವರ ಆಶಯದಂತೆ ರಾಜ್ಯದಲ್ಲಿ ಈ ಯೋಜನೆ ಜಾರಿಗೆ ತರಲಾಗುತ್ತಿದೆ ಎಂದರು.

ಪ್ರಾಯೋಗಿಕವಾಗಿ ಇಂದಿರಾನಗರದ ಇಎಸ್‌ಐ ಆಸ್ಪತ್ರೆ ವ್ಯಾಪ್ತಿಯಲ್ಲಿನ 8 ಚಿಕಿತ್ಸಾಲಯ ಮತ್ತು ಹುಬ್ಬಳ್ಳಿಯ ಇಎಸ್‌ಐ ಆಸ್ಪತ್ರೆ ವ್ಯಾಪ್ತಿಯ 5 ಚಿಕಿತ್ಸಾಲಯಗಳಲ್ಲಿ ಡಿಜಿಟಲ್ ಹೆಲ್ತ್ ಸೇವೆ ಆರಂಭಿಸಲಾಗುವುದು. ಆರೋಗ್ಯದ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಮಯ ಮತ್ತು ಪ್ರಯಾಣದ ಬವಣೆ ತಪ್ಪಿಸಲು ಇದು ಅನುಕೂಲ ಆಗಲಿದೆ. ಅಲ್ಲದೇ ರೋಗಿಗಳಿಗೆ ತ್ವರಿತ ಚಿಕಿತ್ಸೆ ಲಭ್ಯವಾಗಲಿದ್ದು, ಜನಸ್ನೇಹಿ ಸೇವೆ ಆಗಲಿದೆ ಎಂದರು.

ಮಹಿಳೆ ಸರಗಳವು; ಪ್ರಕರಣ ದಾಖಲು

ಬೆಂಗಳೂರು: ಕಸ ಎಸೆಯಲೆಂದು ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಮಹಿಳೆಯನ್ನು ಹಿಂಬಾಲಿಸಿ ಚಿನ್ನದ ಮಾಂಗಲ್ಯ ಸರ ಕಿತ್ತೊಯ್ಯಲಾಗಿದ್ದು, ಈ ಸಂಬಂಧ ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸಿದ್ಧೇಶ್ವರ ಬಡಾವಣೆ ನಿವಾಸಿ ಭವ್ಯಾ ಅವರು ಸರಗಳವು ಬಗ್ಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪತಿ ಜೊತೆ ವಾಸವಿರುವ ಭವ್ಯಾ, ಆಗಸ್ಟ್ 3ರಂದು ರಾತ್ರಿ 10.30ರ ಸುಮಾರಿಗೆ ಕಸ ಎಸೆಯಲೆಂದು ಮನೆಯಿಂದ ಹೊರಬಂದಾಗ ಅದೇ ರಸ್ತೆಯಲ್ಲಿ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು, 25 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ’ ಎಂದು ತಿಳಿಸಿವೆ.

ನಕಲಿ ನೇಮಕಾತಿ ಆದೇಶ: ಬಂಧನ

ಬೆಂಗಳೂರು: ಪಶುಸಂಗೋಪನಾ ಸಚಿವ ಪ್ರಭು ಬಿ. ಚವ್ಹಾಣ್ ಹೆಸರಿನಲ್ಲಿ ನಕಲಿ ನೇಮಕಾತಿ ಆದೇಶ ಹೊರಡಿಸಿ ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿ ಹಣ ಪಡೆದು ವಂಚಿಸಿದ್ದ ಶಿಕ್ಷಕ ಜ್ಞಾನದೇವ್ ಜಾಧವ ಅವರನ್ನು ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

‘ಬಾಗಲಕೋಟೆಯ ಜ್ಞಾನೇಂದ್ರ, 2020ರಲ್ಲಿ ಚವ್ಹಾಣ್ ಅವರಿಗೆ ಕನ್ನಡ ಕಲಿಸುವ ಕೆಲಸ ಮಾಡಿದ್ದರು. ವೈಯಕ್ತಿಕ ಕಾರಣಕ್ಕಾಗಿ ಕೆಲಸ ತೊರೆದು ತಮ್ಮೂರಿಗೆ ಹೋಗಿದ್ದರು. ಪಶುಸಂಗೋಪನಾ ಇಲಾಖೆಯಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿ ಅಭ್ಯರ್ಥಿಗಳಿಂದ ಹಣ ಪಡೆದು ವಂಚಿಸಿದ್ದ ಬಗ್ಗೆ ಇವರ ವಿರುದ್ಧ ಪ್ರಕರಣ ದಾಖಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಚಿವ ಚವ್ಹಾಣ್ ಆಪ್ತರೆಂದು ಹೇಳುತ್ತಿದ್ದ ಆರೋಪಿ, ‘ಪಶುಸಂಗೋಪನಾ ಇಲಾಖೆಯಲ್ಲಿ ಎಫ್‌ಡಿಎ ಹಾಗೂ ಎಸ್‌ಡಿಎ ಹುದ್ದೆಗಳು ಖಾಲಿ ಇವೆ. ಹಣ ಕೊಟ್ಟರೆ, ಕೆಲಸ ಕೊಡಿಸುತ್ತೇನೆ’ ಎಂದಿದ್ದ. ಇದಕ್ಕೆ ಸಂಬಂಧಪಟ್ಟಂತೆ ನಕಲಿ ನೇಮಕಾತಿ ಆದೇಶವನ್ನೂ ಸಿದ್ಧಪಡಿಸಿದ್ದ ಆರೋಪಿ, ಅಭ್ಯರ್ಥಿಗಳಿಗೆ ಕಳುಹಿಸಿ ಕೊಟ್ಟಿದ್ದ.’

‘ಆರೋಪಿ ಮಾತು ನಂಬಿದ್ದ 10ಕ್ಕೂ ಹೆಚ್ಚು ಅಭ್ಯರ್ಥಿಗಳು, ತಲಾ ₹ 2 ಲಕ್ಷದಿಂದ ₹5 ಲಕ್ಷ ನೀಡಿದ್ದರು. ಸಚಿವ ಹಾಗೂ ಮುಖ್ಯ ಕಾರ್ಯದರ್ಶಿ ಹೆಸರಿನಲ್ಲಿ ಹೊರಡಿದ್ದ ಆದೇಶದ ಬಗ್ಗೆ ಅಭ್ಯರ್ಥಿಯೊಬ್ಬರಿಗೆ ಅನುಮಾನ ಬಂದಿತ್ತು. ಈ ಬಗ್ಗೆ ವಿಚಾರಿಸಿದಾಗ, ಆರೋಪಿ ಕೃತ್ಯ ಗೊತ್ತಾಗಿತ್ತು. ಕೆಲ ಅಭ್ಯರ್ಥಿಗಳು ವಿಧಾನಸೌಧ ಠಾಣೆಗೂ ದೂರು ನೀಡಿದ್ದರು’ ಎಂದೂ ತಿಳಿಸಿವೆ.

ಬಹು ಕೋಟಿ ಮೌಲ್ಯದ ಹೆರಾಯಿನ್ ಜಪ್ತಿ

ಬೆಂಗಳೂರು: ರೈಲಿನಲ್ಲಿ ದೆಹಲಿಗೆ ಸಾಗಿಸುತ್ತಿದ್ದ ನೂರಾರು ಕೋಟಿ ಮೌಲ್ಯದ ಹೆರಾಯಿನ್ ಜಪ್ತಿ ಮಾಡಲಾಗಿದ್ದು, ಈ ಸಂಬಂಧ ವಿದೇಶಿ ಪ್ರಜೆಯೊಬ್ಬರನ್ನು ಕೇಂದ್ರ ತನಿಖಾ ತಂಡಗಳು ವಶಕ್ಕೆ ಪಡೆದಿವೆ.

‘ರೈಲಿನಲ್ಲಿ ಡ್ರಗ್ಸ್ ಸಾಗಣೆ ಬಗ್ಗೆ ಕಂದಾಯ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದರು. ಬೆಂಗಳೂರಿನ ನಿಲ್ದಾಣದಲ್ಲಿ ಎಲ್ಲ ರೈಲಿನಲ್ಲಿ ತಪಾಸಣೆ ನಡೆಸಲಾಯಿತು. ದೆಹಲಿಗೆ ಹೊರಟಿದ್ದ ರೈಲಿನಲ್ಲಿ ಹೆರಾಯಿನ್ ಪತ್ತೆಯಾಯಿತು’ ಎಂದು ರೈಲ್ವೆ ಪೊಲೀಸ್ ಮೂಲಗಳು ತಿಳಿಸಿವೆ. ‘ಟ್ರಾಲಿ ಬ್ಯಾಗ್‌ನಲ್ಲಿ ಸುಮಾರು 16 ಕೆ.ಜಿ. ಹೆರಾಯಿನ್ ಬಚ್ಚಿಟ್ಟು ಸಾಗಿಸಲಾಗುತ್ತಿತ್ತು. ಬ್ಯಾಗ್ ಜೊತೆಯೇ ಆರೋಪಿ ಇದ್ದ. ಆತನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ’ ಎಂದೂ ಹೇಳಿವೆ.

ಡಿವೈಎಸ್ಪಿ, ಎಸಿಪಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 18 ಡಿವೈಎಸ್ಪಿ, ಎಸಿಪಿಗಳನ್ನು ವರ್ಗಾವಣೆ ಪೊಲೀಸ್ ಸಿಬ್ಬಂದಿ ಮಂಡಳಿ ಶುಕ್ರವಾರ ಆದೇಶ ಹೊರಡಿಸಿದೆ.

ವರ್ಗಾವಣೆಯಾದವರು: ಎ.ವಿ. ಲಕ್ಷ್ಮಿನಾರಾಯಣ; ಆನೇಕಲ್ ಉಪವಿಭಾಗ, ಆರ್. ಮಂಜುನಾಥ್; ಯಲಹಂಕ ಉಪವಿಭಾಗ, ಎನ್. ರೀನಾ ಸುವರ್ಣ; ಬೆಂಗಳೂರು ಸಿಸಿಬಿ, ಎಂ.ಇ. ಮನೋಜ್‌ಕುಮಾರ್; ಸಿಐಡಿ, ಎನ್. ಪ್ರತಾಪ್ ರೆಡ್ಡಿ; ಮೈಕೊ ಲೇಔಟ್ ಉಪವಿಭಾಗ, ಕೆ.ಸಿ. ಲಕ್ಷ್ಮಿನಾರಾಯಣ; ಮಡಿವಾಳ ಉಪವಿಭಾಗ, ಎಚ್.ಎನ್. ಧರ್ಮೇಂದ್ರ; ಸಿಐಡಿ.

ಕಾರುಗಳ ಗಾಜು ಒಡೆದು ಕಳ್ಳತನ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಇತರೆಡೆ ನಿಲ್ಲಿಸುತ್ತಿದ್ದ ಕಾರುಗಳ ಗಾಜು ಒಡೆದು ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಡೇಪಾಳ್ಯ ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡಿನ ನಟರಾಜ್ ಹಾಗೂ ಗೋಕುಲ್ ಬಂಧಿತರು. ತಮಿಳುನಾಡಿನ ರಾಮ್‌ಜೀ ಗ್ಯಾಂಗ್ ಸದಸ್ಯರಾದ ಇವರಿಬ್ಬರು, ಆಗಾಗ ನಗರಕ್ಕೆ ಬಂದು ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಂಡೇಪಾಳ್ಯದಲ್ಲಿ ನಿಲ್ಲಿಸಿದ್ದ ಕಾರೊಂದರ ಗಾಜು ಒಡೆದಿದ್ದ ಆರೋಪಿಗಳು, ನಗದು ಹಾಗೂ ಬೆಲೆ ಬಾಳುವ ವಸ್ತುಗಳನ್ನು ಕಳ್ಳತನ ಮಾಡಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಇವರಿಂದ ₹ 1.10 ಲಕ್ಷ ನಗದು, 8 ಲ್ಯಾಪ್‌ಟಾಪ್, ಮೊಬೈಲ್ ಹಾಗೂ ಕ್ಯಾಮೆರಾ ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿವೆ.

ಪಾದಚಾರಿ ಮಾರ್ಗ ಒತ್ತುವರಿ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಪಶ್ಚಿಮ ವಲಯ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ಕೂಡಲೇ ತೆರವು ಮಾಡುವಂತೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಎಲ್ಲ ಅಧಿಕಾರಿಗಳು ಆಯಾ ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ಶನಿವಾರ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಳ್ಳಬೇಕು ಎಂದು ಆದೇಶಿಸಿದರು.

ಪಶ್ಚಿಮ ವಲಯ ವ್ಯಾಪ್ತಿಯಲ್ಲಿ 'ಮುಖ್ಯ ಆಯುಕ್ತರ ನಡೆ ವಲಯದ ಕಡೆ'ಯಲ್ಲಿ ಮಾತನಾಡಿದ ಅವರು, ಜಂಟಿ ಆಯುಕ್ತರ ಕಚೇರಿ ಬಳಿ ನಡೆಯುತ್ತಿರುವ ರಾಜಕಾಲುವೆಯ ಬ್ರಿಡ್ಜ್ ಕಾಮಗಾರಿಯನ್ನು ಇನ್ನು 15 ದಿನಗಳಲ್ಲಿ ಪೂರ್ಣಗೊಳಿಸಬೇಕು. ಮಳೆ ನೀರು ನಿಲ್ಲದಂತೆ ಮಾಡಬೇಕು. ಪಾದಚಾರಿಗಳು ರಸ್ತೆ ದಾಟಲು ಅನುಕೂಲವಾಗುವ ನಿಟ್ಟಿನಲ್ಲಿ ಜೀಬ್ರಾ ಕ್ರಾಸಿಂಗ್ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಳೆಗಾಲದ ವೇಳೆ ರಸ್ತೆಗಳ ಮೇಲೆ ನೀರು ನಿಂತು ಜಲಾವೃತವಾಗುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ರಸ್ತೆ ಬದಿಯ ಸೈಡ್ ಡ್ರೈನ್‌ಗಳನ್ನು ಸ್ವಚ್ಛಗೊಳಿಸಿ ರಾಜಕಾಲುವೆಗೆ ಮಳೆ ನೀರು ಹರಿದು ಹೋಗುವಂತೆ ಮಾಡಬೇಕು. ಫ್ಲೆಕ್ಸ್ ತೆರವುಗೊಳಿಸಿ ಸಂಬಂಧಪಟ್ಟವರಿಗೆ ದಂಡ ವಿಧಿಸಿ, ಎಫ್‌ಐಆರ್ ದಾಖಲಿಸಬೇಕು ಎಂದು ಸೂಚಿಸಿದರು.

ಮರದ ಕೊಂಬೆಗಳ ಕಟಾವು, ರಸ್ತೆ ಗುಂಡಿ, ರಸ್ತೆ ಬದಿ ಬ್ಲಾಕ್ ಸ್ಪಾಟ್, ರಸ್ತೆ ಮೇಲೆ ನೀರು ನಿಲ್ಲುವುದು, ಸೈಡ್ ಡ್ರೈನ್‌ಗಳಲ್ಲಿ ಹೂಳು, ಬೀದಿ ನಾಯಿಗಳ ಹಾವಳಿ ಸೇರಿ ಇನ್ನಿತರೆ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಂದ ಅಹವಾಲುಗಳು ಬಂದಿವೆ. ಸಮಸ್ಯೆಗಳಿಗೆ ಕೂಡಲೇ ಪರಿಹಾರ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ವಲಯ ಆಯುಕ್ತ ಡಾ. ದೀಪಕ್, ವಲಯ ಜಂಟಿ ಆಯುಕ್ತ ಶ್ರೀನಿವಾಸ್, ವಲಯ ಮುಖ್ಯ ಎಂಜಿನಿಯರ್ ದೊಡ್ಡಯ್ಯ ಇದ್ದರು.

ತಿಪ್ಪಗೊಂಡನಹಳ್ಳಿ ಜಲಾಶಯ ಭರ್ತಿ • ಹೆಸರಘಟ್ಟದಲ್ಲೂ ನೀರಿನ ಹರಿವು ಹೆಚ್ಚಳ

ಮಳೆ: ದಶಕದ ನಂತರ ದಾಖಲೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಕ್ಕೆ ಕುಡಿಯುವ ನೀರು ಒದಗಿಸುತ್ತಿದ್ದ ತಿಪ್ಪಗೊಂಡನಹಳ್ಳಿ ಹಾಗೂ ಹೆಸರಘಟ್ಟ ಜಲಾಶಯಗಳಲ್ಲಿ ದಶಕದ ನಂತರ ದಾಖಲೆ ಮಟ್ಟಕ್ಕೆ ನೀರು ತುಂಬಿದೆ.

ಜುಲೈ ಹಾಗೂ ಆಗಸ್ಟ್ ಮೊದಲ ವಾರದಲ್ಲಿ ಸುರಿದ ಮಳೆಯಿಂದಾಗಿ ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಆ.5ರ ಅವಧಿಯಲ್ಲಿ 46.5 ಅಡಿ ನೀರು ಸಂಗ್ರಹ ವಾಗಿದೆ. ಇದರ ಗರಿಷ್ಠ ಮಟ್ಟ 69 ಅಡಿ. ಹೆಸರಘಟ್ಟ ಜಲಾಶಯದಲ್ಲಿ 19 ಅಡಿ (ಗರಿಷ್ಠ ಮಟ್ಟ 50 ಅಡಿ) ನೀರಿದೆ.



ತಿಪ್ಪಗೊಂಡನಹಳ್ಳಿ ಜಲಾಶಯ



ಹೆಸರಘಟ್ಟ ಜಲಾಶಯ

ತಿಪ್ಪಗೊಂಡನಹಳ್ಳಿಗೆ ಆ.5ರ ಶುಕ್ರವಾರ ಒಂದೇ ದಿನ 4.5 ಅಡಿ ನೀರು ಬಂದಿದೆ. ಮಳೆ ಮುಂದುವರಿದಿದ್ದು, ಜಲಾಶಯಕ್ಕೆ ನೀರು ಬರುತ್ತಲೇ ಇದೆ. ಆಗಸ್ಟ್ ಮೊದಲನೇ ವಾರದಲ್ಲಿ ಇಷ್ಟು ನೀರು ತುಂಬಿರುವುದು ಸುಮಾರು 12 ವರ್ಷಗಳಿಂದೀಚೆಗೆ ಇದೇ ಮೊದಲು. ಸೆಪ್ಟೆಂಬರ್–ಅಕ್ಟೋಬರ್ ವೇಳೆಯಲ್ಲಿ ಸುಮಾರು 50 ಅಡಿಯಷ್ಟು ಗರಿಷ್ಠ ಸಂಗ್ರಹವನ್ನು ಕಾಣುತ್ತಿತ್ತು. ಆದರೆ, ಈ ಬಾರಿ ಆಗಸ್ಟ್ ಆರಂಭದಲ್ಲೇ ಹೆಚ್ಚು ನೀರು ಸಂಗ್ರಹವಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ತುಮಕೂರು ಹಾಗೂ ಶಿವಗಂಗೆ ಭಾಗದಲ್ಲಿ ಮಳೆಯಾದರೆ, ಅರ್ಕಾವತಿ ನದಿಯ ಉಪ ನದಿಯಾದ ಕುಮುದ್ವತಿ ಮೂಲಕ ತಿಪ್ಪಗೊಂಡನಹಳ್ಳಿಗೆ ನೀರು ಹರಿಯುತ್ತದೆ. ಆ ಭಾಗದಲ್ಲಿ ಇದೀಗ ಮಳೆ ಹೆಚ್ಚಾಗುತ್ತಿರುವುದರಿಂದ ನೀರಿನ ಹರಿವು ಈ ಬಾರಿ ಅಧಿಕವಾಗಿದೆ.

15 ವರ್ಷ: 'ಕಾಕೋಳು ಕೆರೆ ಕೋಡಿ ಬಿದ್ದಿದೆ. ಬ್ಯಾತಾ ಕೆರೆ ತುಂಬುವ ಹಂತದಲ್ಲಿದೆ. ಕಳೆದ ಮೂರು ದಿನಗಳಿಂದ ಮಳೆ ಕಡಿಮೆಯಾಗಿದೆ. ಹೀಗಾಗಿ ಹರಿವು ಕಡಿಮೆಯಾಗಿದೆ. ಆಗಸ್ಟ್ ಮೊದಲ ವಾರದಲ್ಲೇ ಈ ಮಟ್ಟದಲ್ಲಿ ಹೆಸರಘಟ್ಟ ಕೆರೆಗೆ ನೀರು ತುಂಬಿರುವುದು 15 ವರ್ಷಗಳಲ್ಲೇ ಇದೇ ಮೊದಲು' ಎಂದು ಸ್ಥಳೀಯರಾದ ಮನು ಹೇಳಿದರು.

ದೊಡ್ಡಬಳ್ಳಾಪುರ ಭಾಗದಲ್ಲಿ ಅತಿಹೆಚ್ಚು ಮಳೆಯಾದರೆ ಹೆಸರಘಟ್ಟಕ್ಕೆ ನೀರು ಬರುತ್ತದೆ. ಈ ಹಿಂದೆ ಅಕ್ಟೋಬರ್, ನವೆಂಬರ್‌ನಲ್ಲಿ ಸುಮಾರು 10ರಿಂದ 12 ಅಡಿ ನೀರು ಬಂದರೆ ಅದೇ ಹೆಚ್ಚಾಗಿರುತ್ತಿತ್ತು. ಆದರೆ, ಈ ಬಾರಿ ಆಗಸ್ಟ್ ಮೊದಲ ವಾರದಲ್ಲೇ 19 ಅಡಿ ನೀರು ಬಂದಿದೆ. ಹೀಗಾಗಿ ಹಿಂಗಾರು ಮಳೆ ಮುಗಿಯುವ ವೇಳೆಗೆ ದಾಖಲೆಯ ಸಂಗ್ರಹವಾಗುವ ನಿರೀಕ್ಷೆ ಇದೆ ಎಂದರು.

ಅಳತೆಗೋಲು (ಸಮುದ್ರ ಮಟ್ಟದಿಂದ) ಪ್ರಕಾರ, ಹೆಸರಘಟ್ಟದ ಗರಿಷ್ಠ ಮಟ್ಟ 72 ಅಡಿ. ಅದರಂತೆ ಈಗ 56 ಅಡಿ ನೀರಿದೆ. ಆದರೆ ಭೌತಿಕವಾಗಿ 19 ಅಡಿ ನೀರು ಜಲಾಶಯದಲ್ಲಿದೆ. ಇದು 50 ಅಡಿ ಮೀರಿದರೆ ಕೋಡಿಯಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

₹34,432 ಕೋಟಿ ಹೂಡಿಕೆ ಪ್ರಸ್ತಾವ: ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ₹ 34,432 ಕೋಟಿ ಮೊತ್ತದ 18 ಹೂಡಿಕೆ ಪ್ರಸ್ತಾವನೆಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯ ರಾಜ್ಯ ಉನ್ನತ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ (ಎಸ್‌ಎಚ್‌ಎಲ್‌ಸಿಸಿ) ಶುಕ್ರವಾರ ಅನುಮೋದನೆ ನೀಡಿದೆ.

ಟೊಯೊಟಾ ಮೋಟಾರ್ಸ್ ಸೇರಿ ಎಂಟು ಹೊಸ ಕೈಗಾರಿಕೆ ಸ್ಥಾಪನೆಯ ಪ್ರಸ್ತಾವಗಳು ಮತ್ತು 10 ಹೆಚ್ಚುವರಿ ಹೂಡಿಕೆ ಪ್ರಸ್ತಾವಗಳಿಗೆ ಎಸ್‌ಎಚ್‌ಎಲ್‌ಸಿಸಿ ಒಪ್ಪಿಗೆ ನೀಡಿದೆ. ಈ ಯೋಜನೆಗಳಿಂದ ರಾಜ್ಯದಲ್ಲಿ 48,850 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ ಇದೆ.

ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, 'ಎಥೆನಾಲ್, ಏರೋಸ್ಪೇಸ್, ಸೆಮಿಕಂಡಕ್ಟರ್ ತಯಾರಿಕಾ ಯಂತ್ರಗಳು, ಉಕ್ಕು ತಯಾರಿಕೆ, ಆಟೊಮೊಬೈಲ್ ಉದ್ಯಮಗಳು ರಾಜ್ಯದಲ್ಲಿ ಹೂಡಿಕೆಗೆ ಆಸಕ್ತಿ ತೋರಿವೆ' ಎಂದರು.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಇದ್ದರು.

ಪ್ರಮುಖ ಯೋಜನೆಗಳು:

- ಟೊಯೊಟಾ ಕಿರ್ಲೋಸ್ಕರ್ ಮೋಟಾರ್ ಪ್ರೈವೇಟ್ ಲಿಮಿಟೆಡ್- ₹ 3,661.5 ಕೋಟಿ
- ಟ್ರಯಲ್ಸ್ ಬಯೋಎನರ್ಜಿ ಲಿಮಿಟೆಡ್, ಎಥೆನಾಲ್ ಘಟಕ -₹ 1,856.47 ಕೋಟಿ
- ಅಪ್ಲೈಡ್ ಮೆಟೀರಿಯಲ್ಸ್ ಇಂಡಿಯಾ ಸಂಸ್ಥೆ (ಸೆಮಿಕಂಡಕ್ಟರ್ ವಲಯ- ಹೆಚ್ಚುವರಿ) - ₹ 1573 ಕೋಟಿ.
- ಸ್ಪೆಕ್ಟಕಲ್ ಲೆನ್ಸ್, ಸ್ಪೆಕ್ಟಕಲ್ ಬ್ಲಾಂಕ್ಸ್/ಸೆಮಿ ಫಿನಿಶ್ಡ್ ಲೆನ್ಸ್ ಮತ್ತು ಇಂಡಸ್ಟ್ರಿಯಲ್ ಕ್ವಾಲಿಟಿ ಸಲ್ಯೂಷನ್ ಮಷಿನ್, ವೈದ್ಯಕೀಯ ಸಲಕರಣೆಯನ್ನು ಉತ್ಪಾದಿಸುವ ಕಾರ್ಲ್ ಝೈಸ್ ಇಂಡಿಯಾ ಪ್ರೈ. ಲಿಮಿಟೆಡ್, (ಹೆಚ್ಚುವರಿ)- ₹ 977 ಕೋಟಿ.
- ಪ್ರಕಾಶ್ ಸ್ಪಾಂಜ್ ಐರನ್ ಎಂಡ್ ಪ್ರೈವೇಟ್ ಲಿಮಿಟೆಡ್ (ಹೆಚ್ಚುವರಿ)- ₹ 2,500.09 ಕೋಟಿ.
- ಸೌರ ಕೋಶಗಳನ್ನು ಉತ್ಪಾದಿಸುವ ಎಎವಿ ಫೋಟೊವೋಲ್ಟಾಯಿಕ್ ಪವರ್ ಪ್ರೈವೇಟ್ ಲಿಮಿಟೆಡ್ (ಹೆಚ್ಚುವರಿ) - ₹ 232.15 ಕೋಟಿ.
- ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಎಥೆನಾಲ್ ಘಟಕ(ಹೆಚ್ಚುವರಿ)- ₹ 775.35 ಕೋಟಿ ರೂ.
- ಚಿದಾನಂದ ಬಸವಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಎಥೆನಾಲ್ ಘಟಕ (ಹೆಚ್ಚುವರಿ)- ₹ 270.36 ಕೋಟಿ.

ಪ್ರವೀಣ್ ಹತ್ಯೆ: ಎನ್‌ಐಎಗೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಬೆಳ್ಳಾರೆಯ ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವಹಿಸಿ ಕೇಂದ್ರ ಗೃಹ ಸಚಿವಾಲಯ ಆದೇಶಿಸಿದೆ.

ಈ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸುವಂತೆ ರಾಜ್ಯ ಸರ್ಕಾರ ಶಿಫಾರಸು ಮಾಡಿತ್ತು. ಕೇಂದ್ರ ಗೃಹ ಸಚಿವಾಲಯ ಆ.3ರಂದು ಈ ಬಗ್ಗೆ ಎನ್‌ಐಎ ಮಹಾನಿರ್ದೇಶಕರಿಗೆ ಆದೇಶ ನೀಡಿದೆ. ಪ್ರಕರಣ ಎನ್‌ಐಎ ಕಾಯ್ದೆ 2008ರ ಅಡಿಯಲ್ಲಿ ಬರುವ ಅಪರಾಧ ಎಂಬ ಅಭಿಪ್ರಾಯಕ್ಕೆ ಕೇಂದ್ರ ಬಂದಿದೆ. ಇದರ ಗಂಭೀರತೆ, ಮತ್ತದರ ಅಂತರ ರಾಜ್ಯ ಪರಿಣಾಮಗಳನ್ನು ಪರಿಗಣಿಸಿ, ಆದೇಶಿಸಲಾಗಿದೆ ಎಂದು ತಿಳಿಸಲಾಗಿದೆ.

ನರ ದೌರ್ಬಲ್ಯವಿದ್ದರೆ ಮಕ್ಕಳು ಆಗೋದು ವಿಳಂಬ: ರಮೇಶ್ ಕುಮಾರ್ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ ಜಿಲ್ಲೆ): 'ನರಗಳ ದೌರ್ಬಲ್ಯ ಇದ್ದಾಗ ಮಕ್ಕಳು ಆಗುವುದು ವಿಳಂಬವಾಗುತ್ತದೆ' ಎಂದು ಶಾಸಕ ಕೆ.ಆರ್. ರಮೇಶ್ ಕುಮಾರ್, ತಾಲ್ಲೂಕಿನ ಯರಗೋಳ್ ಜಲಾಶಯ ಉದ್ಘಾಟನೆ ವಿಳಂಬದ ಬಗ್ಗೆ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದರು.



ರಮೇಶ್ ಕುಮಾರ್

ಜಲಾಶಯ ಭರ್ತಿಯಾಗಿರುವುದರಿಂದ ಶುಕ್ರವಾರ ಜಿಲ್ಲೆಯ ಕಾಂಗ್ರೆಸ್ ಶಾಸಕರು, ಮುಖಂಡರ ಜೊತೆಗೂಡಿ ಬಾಗಿನ ಅರ್ಪಿಸಿ ಅವರು ಮಾತನಾಡಿದರು.

ಸಾರ್ವಜನಿಕರ ಬಳಕೆಗೆ ಕುಡಿಯುವ ನೀರು ಇನ್ನೂ ಸಿಗದ ಬಗ್ಗೆ ಮಾತನಾಡಿದ ಅವರು, 'ಇವತ್ತು ಮಾತುಕತೆ, ನಾಳೆ ನಿಶ್ಚಿತಾರ್ಥ, ನಾಡಿದ್ದು ಮದುವೆ... ನಂತರ ಸಕ್ರಿಯವಾಗಿ ಕೆಲಸ ಮಾಡಿದರೆ 9 ತಿಂಗಳಲ್ಲಿ ಮಗುವಾಗುತ್ತದೆ. ಒಮ್ಮೊಮ್ಮೆ ನರ ದೌರ್ಬಲ್ಯವಿದ್ದಾಗ ಮಕ್ಕಳಾಗುವುದು ವಿಳಂಬವಾಗುತ್ತದೆ' ಎಂದರು.

ಜಲಾಶಯ ತಮ್ಮ ಯೋಜನೆ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ಕುರಿತು ಸುದ್ದಿಗಾರರು ಗಮನ ಸೆಳೆದಾಗ, 'ಕೆಆರ್‌ಎಸ್, ಎತ್ತಿನಹೊಳೆ, ಯರಗೋಳ್, ಎಚ್.ಎನ್. ವ್ಯಾಲಿ, ಎಚ್‌ಎಂಟಿ, ಎಚ್‌ಎಎಲ್ ಎಲ್ಲವೂ ಕುಮಾರಸ್ವಾಮಿ ಅವರದ್ದೇ. ನಾವು ಅವರ ಕೃಪೆಯಿಂದ ಬದುಕುತ್ತಿದ್ದೇವೆ' ಎಂದು ವ್ಯಂಗ್ಯವಾಡಿದರು.

'ನನ್ನನ್ನು ಕೆಲವರು ಭಗೀರಥ, ಮಹಾನ್ ನಾಯಕ ಎನ್ನುತ್ತಾರೆ. ಇನ್ನು ಕೆಲವರು ನರಿ, ಶಕುನಿ, ದುರ್ಯೋಧನ ಎನ್ನುತ್ತಾರೆ. ನೀವು ಮಾಧ್ಯಮದವರು ಏನಾದರೂ ಹೊಸ ಹೆಸರು ಇದ್ದರೆ ಕೊಡಿ' ಎಂದು ಹೇಳಿದರು.

'ಯೋಜನೆ ವಿಳಂಬವಾಗಿರುವುದು ನಿಜ. ಅದಕ್ಕೆ ಕಾರಣ ಬಹಳಷ್ಟಿವೆ. 2016ರಲ್ಲಿ ನಾನು ಮಂತ್ರಿಯಾಗಿದ್ದಾಗ ಸ್ಥಳ ವೀಕ್ಷಣೆಗೆ ಬಂದಿದ್ದೆ. ಆಗ ಜಲಾಶಯದ ಕಾಮಗಾರಿ ಮುಗಿದಿರಲಿಲ್ಲ. ಕೆಲಸ ಮಾಡಿದ ಖುಷಿ ಇದೆ. ಸರ್ಕಾರಕ್ಕೆ ಯಾವಾಗ ಮನಸ್ಸು ಬರುತ್ತದೆಯೋ ಆಗ ಉದ್ಘಾಟಿಸಲಿ. ನಾವೀಗ ಆಡಳಿತದಲ್ಲಿ ಇಲ್ಲ. ಆದರೆ ಒತ್ತಡ ಹಾಕುತ್ತೇವೆ' ಎಂದು ತಿಳಿಸಿದರು.

'ಈ ಯೋಜನೆಯ ಶ್ರೇಯವನ್ನು ಯಾವುದೇ ಪಕ್ಷ ಪಡೆದುಕೊಳ್ಳಲಿ, ಅದಕ್ಕೆ ಸ್ವಾಗತ. ತಮಿಳು ಭಾಷೆಯಲ್ಲಿ 'ನಾವು ಮಾಡಿದ್ದೇವೆ' ಎಂದರೆ 'ಹೌದು ನೀವೇ ಮಾಡಿದ್ದು' ಎನ್ನುತ್ತೇವೆ' ಎಂದರು.

ಜಲಾಶಯಕ್ಕೆ ಕೆಲವರು ಶಿವಾಜಿ, ಇನ್ನು ಕೆಲವರು ಅಂಬೇಡ್ಕರ್ ಹೆಸರಿಡಬೇಕೆಂಬ ಆಗ್ರಹ ಕುರಿತು, 'ಅಂಬೇಡ್ಕರ್ ಅವರ ಆಲೋಚನೆಗಳು ಹರಿದಂತೆ ನೀರು ಕೂಡ ಹರಿಯಬೇಕು ಅಷ್ಟೆ. ಯಾರ ಹೆಸರನ್ನಾದರೂ ಇಡಲಿ. ಶಿವಾಜಿ, ಹೆಡಗೇವಾರ್, ಗೋಲ್ವಾಲ್ಕರ್ ಹೆಸರು ಇಡಲಿ ನಮ್ಮ ಅಭ್ಯಂತರ ಇಲ್ಲ' ಎಂದು ತಿಳಿಸಿದರು.

ನಿಧನ ವಾರ್ತೆ

ಎಚ್‌.ಸಿ. ತುಷಾರ್



ದಾವಣಗೆರೆ: ಕೆಎಸ್‌ಆರ್‌ಟಿಸಿ ಬೆಂಗಳೂರು ಕೇಂದ್ರ ಘಟಕ ವ್ಯವಸ್ಥಾಪಕ ಎಚ್. ಸಿ. ತುಷಾರ್ (33) ಶುಕ್ರವಾರ ಇಲ್ಲಿನ ಬಸ್ ನಿಲ್ದಾಣದಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಸಂಸ್ಥೆಯ ಸಿಬ್ಬಂದಿಯ ಹಳೆ ಪ್ರಕರಣವೊಂದರ ವಿಚಾರಣೆ ಸಂಬಂಧ ಶಿರಸಿಗೆ ಬಂದಿದ್ದ ಅವರು, ಬೆಂಗಳೂರಿಗೆ ವಾಪಸಾಗುವಾಗ ಮಾರ್ಗ ಮಧ್ಯೆ ದಾವಣಗೆರೆಯ ಬಸ್ ನಿಲ್ದಾಣದಲ್ಲಿ ನಿಧನರಾಗಿದ್ದಾರೆ. ತಲೆ ಸುತ್ತು ಕಾಣಿಸಿಕೊಂಡು ಆಯಾಸಗೊಂಡಿದ್ದ ಅವರನ್ನು ಬಸ್‌ನ ನಿರ್ವಾಹಕರು ಆಸ್ಪತ್ರೆಗೆ ಕರೆದೊಯ್ಯಲು ಅಣಿಯಾಗುತ್ತಿದ್ದಂತೆಯೇ, ಕುಸಿದು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅವರಿಗೆ ಪತ್ನಿ ಹಾಗೂ 4 ತಿಂಗಳ ಮಗು ಇದೆ. ಮೃತದೇಹವನ್ನು ಬೆಂಗಳೂರಿಗೆ ಕಳುಹಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಮೂಲಗಳು ತಿಳಿಸಿವೆ.

ಸಾವಿರಾರು ಎಕರೆ ಜಲಾವೃತ

ಒಂದನೇ ಪುಟದಿಂದ...

ಹಾಸನ ಜಿಲ್ಲೆಯ ನುಗ್ಗೇಹಳ್ಳಿ ಹೋಬಳಿಯ ಭೂವನಹಳ್ಳಿಯ ಅಜ್ಜಿಯ ಮನೆಯಲ್ಲಿ ಮಲಗಿದ್ದ ಬಾಲಕ ಪ್ರಜ್ವಲ್ (13) ಶುಕ್ರವಾರ ಬೆಳಗಿನ ಜಾವ ಗೋಡೆ ಕುಸಿದು ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ದೊಡ್ಡ ಹರವೇ ಒಂದನೇ ಕ್ಯಾಂಪಿನಲ್ಲಿ ಮನೆಯ ಚಾವಣಿ ಕುಸಿದು ಮೂರು ಹಸುಗಳು ಮೃತಪಟ್ಟಿವೆ.

ವಿಜಯಪುರದಲ್ಲಿ ಡೋಣಿ ನದಿ ಉಕ್ಕಿ ಹಕ್ಕಿ ಹರಿದು, ಸಾವಿರಾರು ಎಕರೆ ಜಮೀನು ಮುಳುಗಡೆಯಾಗಿದೆ.

ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯದಿಂದ 80 ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡಿರುವುದರಿಂದ ಕಾವೇರಿ ನದಿ ತೀರದಲ್ಲಿ ಪ್ರವಾಹ ಭೀತಿ ಎದುರಾಗಿದ್ದು ಮುಂಜಾಗೃತಾ ಕ್ರಮವಾಗಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಕಾವೇರಿ ನದಿ ಉಕ್ಕಿ ಹರಿಯುತ್ತಿದ್ದು, ಭಾಗಮಂಡಲ– ನಾಪೋಕ್ಲು ಸಂಪರ್ಕ ಕಡಿತಗೊಂಡಿದೆ.

ಹಾರಂಗಿ ಜಲಾಶಯದಿಂದ 14 ಸಾವಿರ ಕ್ಯುಸೆಕ್ ನೀರನ್ನು ಹರಿಸುತ್ತಿರುವುದರಿಂದ ನದಿಯಂಚಿನ ಗ್ರಾಮಗಳಲ್ಲಿ ಪ್ರವಾಹ ಭೀತಿ ಎದುರಾಗಿದೆ.

ಕಾವೇರಿ ನದಿ ಉಕ್ಕಿ ಹರಿಯುತ್ತಿರುವ ಪರಿಣಾಮ, ಹೊಗೆನಕಲ್ ಜಲಪಾತದ ಇಡೀ ಪ್ರದೇಶ ಮುಳುಗಡೆಯಾಗಿದ್ದು, ಪ್ರವಾಸಿಗರನ್ನು ನಿರ್ಬಂಧಿಸಲಾಗಿದೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಶುಕ್ರವಾರ ಇಡೀ ದಿನ ಧಾರಾಕಾರ ಮಳೆ ಸುರಿಯಿತು. ಸುಳ್ಯ, ಕಡಬ ತಾಲ್ಲೂಕುಗಳಲ್ಲಿ 58 ಜನರನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ಸುಬ್ರಹ್ಮಣ್ಯದಲ್ಲಿ ನಿರಂತರ ಮಳೆಯಾಗುತ್ತಿದ್ದು, ಕುಕ್ಕೆ ಕ್ಷೇತ್ರದಲ್ಲಿ ಕುಮಾರಧಾರ ಸ್ನಾನಘಟ್ಟ ಸಂಪೂರ್ಣ ಮುಳುಗಿದೆ. ಹಲವೆಡೆ ತೋಟಗಳು ನದಿ ನೀರಿನಿಂದ ಮುಳುಗಡೆಯಾಗಿವೆ.

ಸಾರಿಗೆ ನೌಕರರ ಭವಿಷ್ಯ ನಿಧಿ ಬಾಕಿಗೆ ಅನುದಾನ ಬಿಡುಗಡೆ

ಬೆಂಗಳೂರು: ನಾಲ್ಕು ಸಾರಿಗೆ ಸಂಸ್ಥೆಗಳ ನೌಕರರ ಭವಿಷ್ಯ ನಿಧಿ ಬಾಕಿ ಪಾವತಿ ಮತ್ತು ಇಂಧನ ವೆಚ್ಚಕ್ಕೆ ರಾಜ್ಯ ಸರ್ಕಾರ ₹1,059 ಕೋಟಿ ಬಿಡುಗಡೆ ಮಾಡಿದೆ.

'2021ರ ಜನವರಿಯಿಂದ ಬಾಕಿ ಇರುವ ಭವಿಷ್ಯ ನಿಧಿಯನ್ನು ನಿಗದಿತ ಅವಧಿಯಲ್ಲಿ ಪಾವತಿಸದಿದ್ದರೆ ಗಂಭೀರ ಆಕ್ಷೇಪಗಳು ಎದುರಾಗಬಹುದು, ನಿಗಮಗಳ ಮೇಲೆ ಕಾನೂನಾತ್ಮಕ ಕ್ರಮಗಳು ಜರುಗಿಸಲು ಭವಿಷ್ಯ ನಿಧಿ ಕಾಯ್ದೆಯಲ್ಲಿ ಅವಕಾಶ ಇದೆ. ಆದ್ದರಿಂದ ಬಾಕಿ ಮೊತ್ತಕ್ಕೆ ₹800 ಕೋಟಿ ಪಾವತಿಸಬೇಕು' ಎಂದು ನಾಲ್ಕು ಸಂಸ್ಥೆಗಳ ಪರವಾಗಿ ಸರ್ಕಾರಕ್ಕೆ ಕೆಎಸ್‌ಆರ್‌ಟಿಸಿ ಪ್ರಸ್ತಾವನೆ ಸಲ್ಲಿಸಿತ್ತು. ಅಲ್ಲದೇ, ಎರಡು ತಿಂಗಳ ಇಂಧನ ವೆಚ್ಚಕ್ಕೆ ₹400 ಸೇರಿಸಿ ಒಟ್ಟಾರೆ ₹1,200 ಕೋಟಿ ಬಿಡುಗಡೆ ಮಾಡುವಂತೆ ಕೋರಿತ್ತು.

ಆದರೆ, ₹1059.27 ಕೋಟಿ ಬಿಡುಗಡೆ ಮಾಡಿರುವ ಸರ್ಕಾರ, ಬಾಕಿ ₹140.72 ಕೋಟಿಯನ್ನು ಪೂರಕ ಅಂದಾಜಿನ ಮೂಲಕ ಬಿಎಂಟಿಸಿಗೆ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಉಜ್ಜೀವನ್ ಬ್ಯಾಂಕ್‌ಗೆ ₹203 ಕೋಟಿ ಲಾಭ

ಬೊಮ್ಮನಹಳ್ಳಿ: ಜೂನ್ ತ್ರೈಮಾಸಿಕ ಅಂತ್ಯಕ್ಕೆ ₹203 ಕೋಟಿ ನಿವ್ವಳ ಲಾಭ ಗಳಿಸಿರುವುದಾಗಿ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಪ್ರಕಟಿಸಿದೆ.

'ಕಳೆದ ಜನವರಿ ವೇಳೆಗೆ ₹127 ಕೋಟಿ ಲಾಭ ಗಳಿಸಿದ್ದ ಬ್ಯಾಂಕ್ ಇದೀಗ ತನ್ನ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಲಾಭ ಗಳಿಕೆಯನ್ನೂ ಹೆಚ್ಚಿಸಿಕೊಂಡಿದೆ. 2021ರ ಅವಧಿಯಲ್ಲಿ ₹1,311 ಕೋಟಿ ವಹಿವಾಟು ನಡೆಸಿದ್ದ ಬ್ಯಾಂಕ್, 2022 ಜೂನ್ ಅಂತ್ಯಕ್ಕೆ 4,326 ಕೋಟಿ ರೂಪಾಯಿ ವಹಿವಾಟಿನೊಂದಿಗೆ ಶೇ 230ರಷ್ಟು ಜಿಗಿತ ಕಂಡಿದೆ ಎಂದು ಉಜ್ಜೀವನ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಇಟ್ಟಿರಾ ಡೇವಿಸ್ ತಿಳಿಸಿದರು.

ಜಲಮಂಡಳಿ ಫೋನ್ ಇನ್ ಇಂದು

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಇದೇ 6ರಂದು ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ. ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅವರು ಅಹವಾಲು ಆಲಿಸಲಿದ್ದಾರೆ.

ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆಗಳಿಂದ ತ್ಯಾಜ್ಯ ನೀರು, ಜಲಮಾಪನ ಹಾಗೂ ನೀರಿನ ಬಿಲ್ ಸಮಸ್ಯೆಯ ಬಗ್ಗೆ ಮಾತನಾಡಿ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ದೂರವಾಣಿ ಸಂಖ್ಯೆ: 080-22945119.

ದೀರ್ಘಕಾಲದ ಕೈದಿಗಳ ಬಿಡುಗಡೆಗೆ 'ಸುಪ್ರೀಂ' ಸಲಹೆ

ನವದೆಹಲಿ: ಕಳೆದ 10 ವರ್ಷಗಳಿಂದ ಜೈಲಿನಲ್ಲಿರುವ ಕೈದಿಗಳನ್ನು ಬಿಡುಗಡೆ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತುರ್ತಾಗಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ. ಈ ಬಗ್ಗೆ ವಿಚಾರಣೆ ನಡೆಸಿದ ಎಸ್.ಕೆ.ಕೌಲ್ ಮತ್ತು ಎಂ.ಎಂ.ಸುಂದರೇಶ್ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠ, 'ಹತ್ತು ವರ್ಷಗಳ ಕಾಲ ಜೈಲಿನಲ್ಲಿದ್ದು ನಿತ್ರಾಣಗೊಂಡಿರುವ ಕೈದಿಗಳನ್ನು ಜಾಮೀನು ಆಧಾರದಲ್ಲಿ ಬಿಡುಗಡೆ ಮಾಡಬೇಕು. 14 ವರ್ಷಗಳ ಕಾಲ ಜೈಲಿನಲ್ಲಿರುವ ಕೈದಿಗಳ ಶಿಕ್ಷೆಯ ಅವಧಿಯನ್ನು ಕಡಿತಗೊಳಿಸಬೇಕು' ಎಂದು ತಿಳಿಸಿದೆ. ಸಾಧ್ಯವಾದರೆ ಶಿಕ್ಷೆ ಕಡಿತಕ್ಕೆ ಏಕರೂಪ ನೀತಿಯನ್ನು ಜಾರಿ ಮಾಡಬಹುದು ಎಂದು ಸಲಹೆ ನೀಡಿದೆ.

₹ 1.33 ಕೋಟಿ ಮೊತ್ತದ 2,264 ನಕಲಿ ಛಾಪಾ ಕಾಗದ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಷೇಧಿತ ಛಾಪಾ ಕಾಗದ ಮುದ್ರಿಸಿ ಮಾರುತ್ತಿದ್ದ ಪ್ರಕರಣದಲ್ಲಿ ಮತ್ತೆ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಈ ಮೂಲಕ ಬಂಧಿತರ ಸಂಖ್ಯೆ 11ಕ್ಕೆ ಏರಿದೆ.

'ಕೆಂಪೇಗೌಡ ರಸ್ತೆಯಲ್ಲಿರುವ ಕಂದಾಯ ಭವನ ಬಳಿಯ ಮಳಿಗೆಗಳಲ್ಲಿ ನಕಲಿ ಛಾಪಾ ಕಾಗದ ಮಾರಲಾಗುತ್ತಿತ್ತು. ಗ್ರಾಹಕರ ಸೋಗಿನಲ್ಲಿ ಕಾರ್ಯಾಚರಣೆ ನಡೆಸಿ ಜಾಲ ಭೇದಿಸಲಾಗಿತ್ತು' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಶ್ರೀನಗರ ಎಸ್‌ಬಿಎಂ ಕಾಲೊನಿ ನಿವಾಸಿ ವಿಶ್ವನಾಥ್ (57), ಕಾರ್ತಿಕ್ (29), ವೆಂಕಟೇಶ್ (54) ಹಾಗೂ ಶಾಮರಾಜ್ (48) ಸೇರಿ 11 ಮಂದಿಯನ್ನು ಇದುವರೆಗೂ ಬಂಧಿಸಲಾಗಿದೆ. ಇವರಿಂದ ₹ 1.33 ಕೋಟಿ ಮೊತ್ತದ 2,264 ನಕಲಿ ಛಾಪಾ ಕಾಗದ ಜಪ್ತಿ ಮಾಡಲಾಗಿದೆ' ಎಂದರು.

'ಟೈಪಿಂಗ್ ಕೆಲಸ ಹಾಗೂ ಅರ್ಜಿ ನಮೂನೆಗಳ ಮಾರಾಟಕ್ಕೆಂದು ಮಳಿಗೆ ಪಡೆದಿದ್ದ ಆರೋಪಿಗಳು, ನಿಷೇಧಿತ ಛಾಪಾ ಕಾಗದಗಳನ್ನು ಅಕ್ರಮವಾಗಿ ಮುದ್ರಿಸಿ ಮಾರುತ್ತಿದ್ದರು. ಸರ್ಕಾರದ ಕಂದಾಯ ಇಲಾಖೆ ದಾಖಲೆಗಳನ್ನು ತಿದ್ದುಪಡಿ ಮಾಡಿಸಲು, ಸಾರ್ವಜನಿಕರ ಆಸ್ತಿ ಕಬಳಿಸಲು, ಸುಳ್ಳು ದಾವೆ ಹೂಡಲು ಈ ಛಾಪಾ ಕಾಗದಗಳು ಬಳಕೆಯಾಗುತ್ತಿದ್ದ ಮಾಹಿತಿ ಇದೆ' ಎಂದೂ ಹೇಳಿದರು.

'1990, 1995, 2002 ಹಾಗೂ 2009ನೇ ವರ್ಷದ ನಿವೇಶನಗಳ ನಕಲಿ ಜಿಪಿಎ ಪತ್ರಗಳು ಆರೋಪಿಗಳ ಬಳಿ ಸಿಕ್ಕಿವೆ. ಕಂಪ್ಯೂಟರ್, ಸರ್ಕಾರದ ವಿವಿಧ ಇಲಾಖೆ ಮುದ್ರೆಗಳು, 119 ನಕಲಿ ಸೀಲ್‌ಗಳು, ಹಾರ್ಡ್‌ಡಿಸ್ಕ್ ಸಹ ಜಪ್ತಿ ಮಾಡಲಾಗಿದೆ. ಆರೋಪಿಗಳ ಬಳಿ ಕಾಗದ ಖರೀದಿಸಿದ್ದ ಗ್ರಾಹಕರು, ಆಸ್ತಿ ಕಬಳಿಕೆ ಮಾಡಿರುವ ಮಾಹಿತಿ ಇದೆ. ಈ ಬಗ್ಗೆ ತನಿಖೆ ಮುಂದುವರಿದಿದೆ' ಎಂದೂ ತಿಳಿಸಿದರು.

'ಬಾಹ್ಯಾಕಾಶ ಕ್ಷೇತ್ರಕ್ಕೆ ಬೇಕಿದೆ ಪ್ರತಿಭಾವಂತರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಜನರು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಬಾಹ್ಯಾಕಾಶ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಸಲಹೆಗಾರ ಡಾ.ಕೆ.ಕಸ್ತೂರಿ ರಂಗನ್ ಹೇಳಿದರು.

ಬೆಂಗಳೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಘ ಶುಕ್ರವಾರ ಹಮ್ಮಿಕೊಂಡಿದ್ದ ಸಂಘದ 45ನೇ ವಾರ್ಷಿಕ ಸಾಮಾನ್ಯ ಸಭೆಗೆ ಚಾಲನೆ ನೀಡಿದ ಅವರು, 'ವಿಕ್ರಂ ಸಾರಾಭಾಯ್, ಯು.ಆರ್.ರಾವ್ ಸೇರಿ ಹಲವರು ಬಾಹ್ಯಾಕಾಶ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಅಂದು ಸಾಧನೆ ಮಾಡಿದ ವಿಜ್ಞಾನಿಗಳು ನನ್ನ ಬದುಕಿಗೂ ಸ್ಫೂರ್ತಿಯಾಗಿದ್ದರು. ಪ್ರತಿಭಾವಂತರು ಹೆಚ್ಚಿನ ಸಂಖ್ಯೆಯಲ್ಲಿ ಕ್ಷೇತ್ರ ಆಯ್ದುಕೊಂಡರೆ ಭಾರತವನ್ನು ಇನ್ನಷ್ಟು ಬಲಿಷ್ಠಗೊಳಿಸಬಹುದು. ವಿಶ್ವದಲ್ಲೇ ಪ್ರಬಲ ರಾಷ್ಟ್ರವಾಗಿಸಬಹುದು' ಎಂದು ಕಿವಿಮಾತು ಹೇಳಿದರು.



ಬೆಂಗಳೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಘ ಶುಕ್ರವಾರ ಆಯೋಜಿಸಿದ್ದ ಸಂಘದ 45ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಇಸ್ರೊ ಸಲಹೆಗಾರ ಡಾ.ಕೆ.ಕಸ್ತೂರಿರಂಗನ್ ಅವರನ್ನು ಗೌರವಿಸಲಾಯಿತು. (ಎಡದಿಂದ) ಸ್ಮಾರ್ಟ್ ಪವರ್ ಡಿವಿಷನ್ ವ್ಯಾಪಾರ ಮುಖ್ಯಸ್ಥ ಜಯಕೀರ್ತಿ ಆನಂದ್, ಬಿಸಿಐಸಿ ಹಿರಿಯ ಉಪಾಧ್ಯಕ್ಷ ಎಲ್‌.ರವೀಂದ್ರನ್, ಅಧ್ಯಕ್ಷ ಕೆ.ಆರ್ ಶೇಖರ್, ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್ ಜಯರಾಮ್ ಇದ್ದರು – ಪ್ರಜಾವಾಣಿ ಚಿತ್ರ.

ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್.ಜಯರಾಮ್ ಮಾತನಾಡಿ, 'ಕೈಗಾರಿಕಾ ಕ್ಷೇತ್ರದಲ್ಲಿ ಯಶಸ್ಸುಗಳಿಸಲು ನಿರಂತರ ಪರಿಶ್ರಮ ಅಗತ್ಯ. ಪ್ರತಿಭೆ, ಪರಿಶ್ರಮ ಇದ್ದರೆ ಉದ್ಯಮ ಕಾಮಧೇನುವಾಗುತ್ತದೆ' ಎಂದು ಪ್ರತಿಪಾದಿಸಿದರು.

ಉದ್ಯಮ ಕ್ಷೇತ್ರ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಸೂಕ್ತ ಜ್ಞಾನದ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ದೇವರ ಬಳಿಯ ದಾಸರಂತೆ ಏಕತಾನತೆಯಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು. ಬಿಸಿಐಸಿ ಮಾಜಿ ಅಧ್ಯಕ್ಷ ಸಿ.ರಾಜಗೋಪಾಲನ್ ಉಪಸ್ಥಿತರಿದ್ದರು.

ಸ್ವಾತಂತ್ರ್ಯ ಹೋರಾಟಗಾರರ ಮನೆಯಲ್ಲೇ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ನಗರದ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರ ಮನೆಗಳಿಗೆ ಭೇಟಿ ನೀಡಿ ಅವರನ್ನು ಸನ್ಮಾನಿಸಲಿದ್ದಾರೆ.

ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಸಂಸ್ಮರಣಾ ದಿನವಾದ ಆಗಸ್ಟ್ 9 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಮಲ್ಲೇಶ್ವರ ಬಡಾವಣೆಯಲ್ಲಿರುವ ವಿ.ನಾಗಭೂಷಣ ರಾವ್ ಅವರ ಮನೆಗೆ ತೆರಳಿ ಗೌರವಿಸಲಿದ್ದು, ಅದೇ ದಿನ ಬೆಳಿಗ್ಗೆ 11 ಗಂಟೆಗೆ ಹಲಸೂರು ಬಡಾವಣೆಯಲ್ಲಿರುವ ಆರ್.ನಾರಾಯಣಪ್ಪ ಅವರ ಮನೆಗೆ ತೆರಳಿ ಸನ್ಮಾನಿಸಲಿದ್ದಾರೆ.

ಸ್ವಾತಂತ್ರ್ಯಕ್ಕೆ ಶ್ರಮಿಸಿದ ಇನ್ನುಳಿದ ಸ್ವಾತಂತ್ರ್ಯ ಹೋರಾಟಗಾರರನ್ನು ಅವರ ಮನೆಗಳಿಗೇ ತೆರಳಿ ಜಿಲ್ಲಾಡಳಿತದ ಮೂಲಕ ಅವರ ಮನೆಗಳಲ್ಲೇ ಸನ್ಮಾನಿಸಲು ಕ್ರಮ ವಹಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ರಾಜ್ಯಪಾಲರು ಸೂಚಿಸಿದ್ದಾರೆ ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್ ಅವರು ತಿಳಿಸಿದ್ದಾರೆ.

ಮಾರ್ಗ ಬದಲಾವಣೆಗೆ 'ಸಿಟಿಜನ್ ಫಾರ್ ಸಿಟಿಜನ್' ಒತ್ತಾಯ

'ವಿಮಾನ ನಿಲ್ದಾಣಕ್ಕೆ ರೈಲು: ಯಶವಂತಪುರ ನಿರ್ಲಕ್ಷ್ಯ ಏಕೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಏಳು ಹೊಸ ಮೆಮು ರೈಲುಗಳನ್ನು ನೈರುತ್ಯ ರೈಲ್ವೆ ಪರಿಚಯಿಸಿದೆ. ಆದರೆ, ಯಶವಂತಪುರದಿಂದ ಒಂದೇ ಒಂದು ರೈಲು ಸಂಚರಿಸುತ್ತಿರುವುದು ಪ್ರಯಾಣಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಕೋಲಾರಕ್ಕೆ ಹೋಗುವ ಡೆಮು ಎಕ್ಸ್‌ಪ್ರೆಸ್ ರೈಲು ಹೊರತಾಗಿ ಉಳಿದೆಲ್ಲಾ ರೈಲುಗಳು ಕಂಟೋನ್ಮೆಂಟ್, ಬೈಯಪ್ಪನಹಳ್ಳಿ, ದೊಡ್ಡಜಾಲ, ಯಲಹಂಕ ಮಾರ್ಗದಲ್ಲಿ ಸಂಚರಿಸಲಿವೆ.

ಕಂಟೋನ್ಮೆಂಟ್ ರೈಲು ನಿಲ್ದಾಣದಿಂದ ಎರಡು ರೈಲುಗಳು ಹೊರಡಲಿದ್ದು, ಅವುಗಳು ಬೈಯಪ್ಪನಹಳ್ಳಿ ಮಾರ್ಗದಲ್ಲೇ ಸಂಚರಿಸುತ್ತವೆ. ಕೆಎಸ್‌ಆರ್ ರೈಲು ನಿಲ್ದಾಣದಿಂದ ಹೊರಡುವ ಇನ್ನೆರಡು ರೈಲುಗಳೂ ಕಂಟೋನ್ಮೆಂಟ್–ಬೈಯಪ್ಪನಹಳ್ಳಿ ಮಾರ್ಗದಲ್ಲೇ ಸಂಚರಿಸಲಿವೆ.

ಯಲಹಂಕದಿಂದ ಎರಡು ರೈಲು ನೇರವಾಗಿ ವಿಮಾನ ನಿಲ್ದಾಣಕ್ಕೆ ಹೋಗಲಿವೆ. ಏಳು ರೈಲುಗಳಲ್ಲಿ ಆರು ರೈಲುಗಳು ಯಶವಂತಪುರ ರೈಲು ನಿಲ್ದಾಣಕ್ಕೆ ಬಾರದೆ ಸಂಚರಿಸುತ್ತವೆ. ಹೊಸದಾಗಿ ರೈಲುಗಳ ಸಂಚಾರ ಆರಂಭಿಸಿರುವುದು ಸಂತಸದ ವಿಷಯ. ಆದರೆ, ಅವುಗಳು ಪ್ರಯಾಣಿಕರಿಗೆ ಇನ್ನಷ್ಟು ಹತ್ತಿರ ಆಗಬೇಕೆಂದರೆ ಯಶವಂತಪುರ ಮಾರ್ಗದಲ್ಲಿ ತೆರಳುವುದು ಸೂಕ್ತ ಎಂಬುದು ರೈಲ್ವೆ ಹೋರಾಟಗಾರರ ಸಲಹೆ.

ಈ ಸಂಬಂಧ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ವ್ಯವಸ್ಥಾಪಕರಿಗೆ 'ಸಿಟಿಜನ್ ಫಾರ್ ಸಿಟಿಜನ್' ಸಂಘಟನೆ ಮನವಿ ಸಲ್ಲಿಸಿದೆ. ಕೆಎಸ್‌ಆರ್ ರೈಲು ನಿಲ್ದಾಣದಿಂದ ಬೆಳಿಗ್ಗೆ 4.55ಕ್ಕೆ ಹೊರಡುವ ರೈಲು 6.10ಕ್ಕೆ ವಿಮಾನ ನಿಲ್ದಾಣ ತಲುಪಲಿದೆ. ಈ ರೈಲು ಕನಿಷ್ಠ 30 ನಿಮಿಷ ಮುಂಚಿತವಾಗಿ ಹೊರಟರೆ ವಿಮಾನ ನಿಲ್ದಾಣದಲ್ಲಿ ಪಾಳಿ ಆಧಾರದಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ಅನುಕೂಲ ಆಗಲಿದೆ ಎಂದು ಮನವಿಯಲ್ಲಿ ಸಂಘಟನೆಯ ಸಂಚಾಲಕ ರಾಜ್‌ಕುಮಾರ್ ದುಗಾರ್ ತಿಳಿಸಿದ್ದಾರೆ.

ಯಲಹಂಕದಿಂದ ಸಂಚಾರ ಆರಂಭಿಸಲು ಉದ್ದೇಶಿಸಿರುವ ಎರಡು ರೈಲುಗಳ ಸಂಚಾರವನ್ನು ಕೆಎಸ್‌ಆರ್ ರೈಲು ನಿಲ್ದಾಣದಿಂದ ಆರಂಭವಾಗುವಂತೆ ನೋಡಿಕೊಳ್ಳಬೇಕು. ಅಲ್ಲದೇ ಅವುಗಳು ಯಶವಂತಪುರ ಮಾರ್ಗದಲ್ಲಿ ಕಾರ್ಯಾಚರಣೆ ಮಾಡಬೇಕು. ಇದರಿಂದ ಆ ಭಾಗದ ಪ್ರಯಾಣಿಕರಿಗೆ ಅನುಕೂಲ ಆಗಲಿದೆ. ಕೆಎಸ್‌ಆರ್ ನಿಲ್ದಾಣದಿಂದ ಪ್ರಯಾಣ ಆರಂಭಿಸುವ ಬೆಂಗಳೂರು–ಕೋಲಾರ ಡೆಮು ಎಕ್ಸ್‌ಪ್ರೆಸ್ ರೈಲು ಸೇರಿ ಎಲ್ಲಾ ರೈಲುಗಳೂ ವಿಮಾನ ನಿಲ್ದಾಣದ ಬಳಿ ಇರುವ ರೈಲು ನಿಲ್ದಾಣದಲ್ಲಿ ನಿಲುಗಡೆಗೆ ಅವಕಾಶ ನೀಡಬೇಕು' ಎಂದು ಸಲಹೆ ನೀಡಿದ್ದಾರೆ.

'ತುಮಕೂರು, ಮೈಸೂರು, ಹೊಸೂರು, ಬಂಗಾರಪೇಟೆ ಸೇರಿ ಸುತ್ತಮುತ್ತಲ ನಗರಗಳಿಂದ ವಿಮಾನ ನಿಲ್ದಾಣ ತಲುಪಲು ಅನುಕೂಲ ಆಗುವಂತೆ ರೈಲಿನ ವ್ಯವಸ್ಥೆ ಮಾಡಬೇಕು. ಯಲಹಂಕ–ದೇವನಹಳ್ಳಿ ನಡುವೆ ಜೋಡಿ ಮಾರ್ಗವನ್ನು ಕೂಡಲೇ ಮಾಡಬೇಕು' ಎಂದು ಮನವಿ ಮಾಡಿದ್ದಾರೆ.

'ಯಲಹಂಕದಿಂದ ಕಾರ್ಯಾಚರಣೆ ಅಗತ್ಯವಿಲ್ಲ'

'ಸಂಚಾರ ದಟ್ಟಣೆ ನಡುವೆ ಬಸ್ ಅಥವಾ ಇತರೆ ವಾಹನಗಳಲ್ಲಿ ಯಲಹಂಕ ತಲುಪುವುದೇ ಕಷ್ಟ. ಯಲಹಂಕ–ವಿಮಾನ ನಿಲ್ದಾಣಕ್ಕೆ ರೈಲು ಸಂಚರಿಸಿದರೆ ಯಾರಿಗೂ ಅನುಕೂಲ ಇಲ್ಲ' ಎಂದು ರೈಲ್ವೆ ಹೋರಾಟಗಾರ ಕೃಷ್ಣಪ್ರಸಾದ್ ಹೇಳಿದರು.

'ಯಶವಂತಪುರಕ್ಕೆ ಮೆಟ್ರೊ ರೈಲಿನ ಸಂಪರ್ಕ ಇದೆ. ಅಲ್ಲಿಂದ ವಿಮಾನ ನಿಲ್ದಾಣಕ್ಕೆ ಹೆಚ್ಚಿನ ರೈಲುಗಳು ಸಂಚರಿಸಿದರೆ ಪ್ರಯಾಣಿಕರಿಗೆ ಅನುಕೂಲ ಆಗಿದೆ. ಅದನ್ನು ಬಿಟ್ಟು ಯಲಹಂಕದಿಂದ ಪ್ರಯಾಣ ಆರಂಭಿಸಿದರೆ ಏನು ಲಾಭ' ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಜನ್ಮದಿನೋತ್ಸವದ ಭರ್ಜರಿ ಯಶಸ್ಸು: ಎಚ್ಚೆತ್ತ ಕಮಲ ಪಾಳೆಯ

ಬೃಹತ್ ಸಮಾವೇಶಕ್ಕೆ ಬಿಜೆಪಿ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜನ್ಮದಿನೋತ್ಸವದ ಭರ್ಜರಿ ಯಶಸ್ಸು ಬಿಜೆಪಿಯನ್ನು ಬಡಿದೆಬ್ಬಿಸಿದ್ದು, ಅದೇ ರೀತಿಯಲ್ಲಿ ಬೃಹತ್ ಸಮಾವೇಶವೊಂದನ್ನು ಹಮ್ಮಿಕೊಳ್ಳುವ ಬಗ್ಗೆ ಕಮಲ ಪಾಳೆಯ ಚಿಂತನೆ ನಡೆಸಿದೆ.

ಇದೇ ತಿಂಗಳ ಕೊನೆಯಲ್ಲಿ ಸಮಾವೇಶ ನಡೆಸಲು ಉದ್ದೇಶಿಸಿದ್ದು, ಸ್ಥಳ ಮತ್ತು ದಿನಾಂಕ ನಿಗದಿಯಾಗಬೇಕಾಗಿದೆ. ಮುನಿಸಿಕೊಂಡಿರುವ ಪಕ್ಷದ ಕಾರ್ಯಕರ್ತರನ್ನು ಸಮಾಧಾನಪಡಿಸಲು ಮತ್ತು ಅವರ ವಿಶ್ವಾಸ ಗೆಲ್ಲಲು ತಕ್ಷಣದಲ್ಲಿ ಇಂತಹದ್ದೊಂದು ಸಮಾವೇಶದ ಅಗತ್ಯವಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರಕ್ಕೆ ಒಂದು ವರ್ಷ ತುಂಬಿದ ಹಿನ್ನೆಲೆಯಲ್ಲಿ ದೊಡ್ಡಬಳ್ಳಾಪುರದಲ್ಲಿ ಜನೋತ್ಸವ ಹಮ್ಮಿಕೊಳ್ಳಲಾಗಿತ್ತು. ಆದರೆ, ಸುಳ್ಯ ಸಮೀಪದ ಬೆಳ್ಳಾರೆಯಲ್ಲಿ ಪಕ್ಷದ ಯುವ ಮೋರ್ಚಾ ನಾಯಕ ಪ್ರವೀಣ್ ಹತ್ಯೆಯ ಹಿನ್ನೆಲೆಯಲ್ಲಿ ಕಾರ್ಯಕರ್ತರ ಆಕ್ರೋಶ ಭುಗಿಲೆದ್ದ ಪರಿಣಾಮ ಕಾರ್ಯಕ್ರಮ ರದ್ದುಪಡಿಸಲಾಗಿತ್ತು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಕ್ಕೆ ಬಂದ ದಿನವೇ ಸಿದ್ದರಾಮಯ್ಯ ಜನ್ಮದಿನೋತ್ಸವವೂ ನಡೆದಿತ್ತು. ಅದರಲ್ಲಿ ಕಾಂಗ್ರೆಸ್ ನಾಯಕರು ನಿರೀಕ್ಷಿಸಿದ್ದಕ್ಕಿಂತಲೂ ಭಾರಿ ಸಂಖ್ಯೆಯಲ್ಲಿ ಜನ ಭಾಗಹಿಸಿದ್ದು ಮತ್ತು ಕಾಂಗ್ರೆಸ್ ನಾಯಕರು ಒಗ್ಗಟ್ಟು ಪ್ರದರ್ಶಿಸಿದ್ದನ್ನು ಬಿಜೆಪಿ ಗಂಭೀರವಾಗಿ ಪರಿಗಣಿಸಿದೆ. ಇದೇ ವಿಷಯವನ್ನು ಯಡಿಯೂರಪ್ಪ ಅವರು ಶಾ ಗಮನಕ್ಕೂ ತಂದಿದ್ದಾರೆ. 'ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್‌ನಲ್ಲಿ ಇಷ್ಟೆಲ್ಲಾ ಸಿದ್ಧತೆ ನಡೆಯುತ್ತಿದ್ದರೂ, ನಮ್ಮ ಪಕ್ಷದಲ್ಲಿ ಸಿದ್ಧತೆಯ ಕೊರತೆ ಇದೆ. ಸಮಾವೇಶಗಳು ನಡೆಯುತ್ತಿಲ್ಲ. ಕಾಂಗ್ರೆಸ್ ಪಕ್ಷ ಇದೇ ವೇಗದಲ್ಲಿ ಮುನ್ನಡೆದರೆ, ಕೊನೇ ಕ್ಷಣದಲ್ಲಿ ಏನೂ ಮಾಡಲು ಸಾಧ್ಯವಿಲ್ಲ. ಅಧ್ಯಕ್ಷರಾಗಲಿ, ಬೇರೇ ಯಾರೇ ಆಗಲಿ ಆ ಬಗ್ಗೆ ಗಮನಹರಿಸುತ್ತಿಲ್ಲ. ನಾನೇ ರಾಜ್ಯ ಪ್ರವಾಸ ಮಾಡಿ ಸಂಘಟನೆ ಮಾಡುತ್ತೇನೆ ಎಂದು ಹೇಳಿದರೂ ಅನುಮತಿ ನೀಡುತ್ತಿಲ್ಲ. ಅನುಮತಿ ನೀಡಿದರೆ ರಾಜ್ಯಾದ್ಯಂತ ಸುತ್ತಾಡುತ್ತೇನೆ' ಎಂದು ಶಾ ಅವರಿಗೆ ಯಡಿಯೂರಪ್ಪ ಹೇಳಿದ್ದಾರೆ ಎಂದು ಮೂಲಗಳು ಹೇಳಿವೆ.

ಸಿದ್ದರಾಮಯ್ಯ ಅವರ ಜನ್ಮದಿನದ ಕಾರ್ಯಕ್ರಮವನ್ನು ಯಡಿಯೂರಪ್ಪ ಅವರು ಟಿ.ವಿ ಮೂಲಕ ಸಂಪೂರ್ಣ ವೀಕ್ಷಣೆ ಮಾಡಿದರು. ಆ ಬಳಿಕ ಅವರು 'ಈ ಕಾರ್ಯಕ್ರಮ ಬಿಜೆಪಿಗೆ ಎಚ್ಚರಿಕೆಯ ಗಂಟೆ' ಎಂಬ ತೀರ್ಮಾನಕ್ಕೆ ಬಂದಿದ್ದೂ ಮಾತ್ರವಲ್ಲದೇ, 'ಸುಮ್ಮನೆ ಕೈಕಟ್ಟಿ ಕುಳಿತರೆ, ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆ ಆಗಬಹುದು. ಬಿಜೆಪಿಗೆ ಇತರ ಪಕ್ಷಗಳಿಂದ ನಾಯಕರು ವಲಸೆ ಬರುವ ಮಾತು ಹಾಗಿರಲಿ, ಆ ಪಕ್ಷದತ್ತಲೇ ವಲಸೆ ಹೋದರೂ ಅಚ್ಚರಿ ಇಲ್ಲ' ಎಂಬ ಆತಂಕವನ್ನು ತಮ್ಮ ಆಪ್ತರ ಬಳಿ ತೋಡಿಕೊಂಡಿದ್ದಾರೆ ಎಂದು ತಿಳಿಸಿವೆ.

'ಭೇಟಿ ವೇಳೆ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಬಗ್ಗೆಯೂ ಶಾ ಅವರು ಮುಖಂಡರಿಂದ ಮಾಹಿತಿ ಕಲೆ ಹಾಕಿದ್ದಾರೆ. ಅಲ್ಲದೆ, ಸಂಪುಟ ವಿಸ್ತರಣೆ ಬಗ್ಗೆ ದೆಹಲಿಗೆ ಬರಬೇಡಿ. ಸಂದರ್ಭ ಬಂದಾಗ ನಾನೇ ಬರಲು ಹೇಳುತ್ತೇನೆ. ಈಗ ಪಕ್ಷದ ಸಂಘಟನೆ ಬಗ್ಗೆ ಗಮನಹರಿಸಿ' ಎಂದೂ ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.

ಮಗನ ಮೇಲೆ ಚಿರತೆ ದಾಳಿ: ಹೃದಯಾಘಾತದಿಂದ ತಾಯಿ ಸಾವು

ಬೆಳಗಾವಿ: ಇಲ್ಲಿನ ಜಾಧವನಗರ ಜನವಸತಿ ಪ್ರದೇಶದಲ್ಲೇ ಶುಕ್ರವಾರ ಮಧ್ಯಾಹ್ನ ಕಟ್ಟಡ ಕಾರ್ಮಿಕರೊಬ್ಬರ ಮೇಲೆ ಚಿರತೆ ದಾಳಿ ನಡೆಸಿದೆ. ಕಾರ್ಮಿಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ, ವಿಷಯ ಕೇಳಿದ ಅವರ ತಾಯಿ ಹೃದಯಾಘಾತದಿಂದ ಮೃತರಾದರು.

ತಾಲ್ಲೂಕಿನ ಖನಗಾವ ಗ್ರಾಮದ ಸಿದರಾಯಿ ಲಕ್ಷ್ಮಣ ನಿಲಜಕರ್ (38) ಅವರಿಗೆ ಚಿರತೆ ದಾಳಿಯಿಂದ ಗಾಯವಾಗಿದೆ. ದಾಳಿ ಸುದ್ದಿ ಕೇಳಿ ಅವರ ತಾಯಿ ಶಾಂತಾ ನಿಲಜಕರ್ (65) ಮನೆಯಲ್ಲಿ ಕುಸಿದುಬಿದ್ದು ಮೃತಪಟ್ಟರು.

ನಗರಕ್ಕೇ ನುಗ್ಗಿದ ಚಿರತೆ: ಜಾಧವ ನಗರದಲ್ಲಿ ಕಟ್ಟಡ ಕಾರ್ಮಿಕರ ಮೇಲೆ ಚಿರತೆ ದಾಳಿ ಮಾಡಿದೆ. ಚಿರತೆ ಸೆರೆಗೆ ಗದಗನಿಂದ ಪರಿಣತರ ತಂಡ ಕರೆಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಬೊಮ್ಮಾಯಿ ಇಂದು ದೆಹಲಿಗೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಮಧ್ಯಾಹ್ನ ದೆಹಲಿಗೆ ತೆರಳಲಿದ್ದು, ಸಂಜೆ ನಡೆಯುವ ಆಜಾದಿ ಕಾ ಅಮೃತ್ ಮಹೋತ್ಸವದ ರಾಷ್ಟ್ರೀಯ ಸಮಿತಿಯ 3 ನೇ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಪ್ರಧಾನಿ ನರೇಂದ್ರಮೋದಿ ಅಧ್ಯಕ್ಷತೆಯಲ್ಲಿ ಭಾನುವಾರ ನಡೆಯುವ ನೀತಿ ಆಯೋಗದ 7 ನೇ ಸಭೆಯಲ್ಲೂ ಬೊಮ್ಮಾಯಿ ಪಾಲ್ಗೊಳ್ಳಲಿದ್ದಾರೆ. ಅಂದು ರಾತ್ರಿಯೇ ಅವರು ಬೆಂಗಳೂರಿಗೆ ವಾಪಸಾಗಲಿದ್ದಾರೆ.

ನವೀಕರಣಕ್ಕೆ ಮತ್ತೆ ಶುಲ್ಕ; ಆಕ್ಷೇಪ

ಬೆಂಗಳೂರು: ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಮಾನ್ಯತೆ ನವೀಕರಣಕ್ಕೆ ಸಲ್ಲಿಸಿದ ಅರ್ಜಿಗಳು ತಾಂತ್ರಿಕ ಕಾರಣಕ್ಕೆ ತಿರಸ್ಕೃತವಾದರೂ, ಮತ್ತೆ ₹ 10 ಸಾವಿರ ಶುಲ್ಕ ಕಟ್ಟಲು ಸರ್ಕಾರ ಆದೇಶ ಹೊರಡಿಸಿರುವುದಕ್ಕೆ ಕರ್ನಾಟಕ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಆಡಳಿತ ಮಂಡಳಿ ಒಕ್ಕೂಟ ಆಕ್ಷೇಪ ವ್ಯಕ್ತಪಡಿಸಿದೆ.

ಹೊಸದಾಗಿ ಪರಿಷ್ಕರಣಾ ಶುಲ್ಕ ಕಟ್ಟಿಸಿಕೊಳ್ಳಬಾರದು ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಕೋರಿದ್ದಾರೆ.

ಭ್ರಾತೃತ್ವ ಭಾವವನ್ನು ಗಟ್ಟಿಗೊಳಿಸುವ 'ರಕ್ಷಾಬಂಧನ' ಸಂಭ್ರಮದಲ್ಲಿ ರಾಖಿಗೆ ವಿಶಿಷ್ಟ ಮನ್ನಣೆ. ಸಹೋದರನ ಮುಂಗೈಗೆ ಕಟ್ಟುತ್ತಿದ್ದ ಹಳದಿ ಮಿಶ್ರಿತ ಕೆಂಪು ಕಂಕಣದ ದಾರವೀಗ ಬಗೆ ಬಗೆಯ ವಿನ್ಯಾಸದಲ್ಲಿ ಹೊಸತನವನ್ನು ಕಂಡುಕೊಳ್ಳುತ್ತಿದೆ.



ಮೆಟಲ್ ರಾಖಿ



ಬಿಳಿ ಹರಳಿನ ರಾಖಿ



ಮೆಟಲ್ ರಾಖಿ

ಚಿತ್ರಗಳು: ಕ್ರಾಫ್ಟ್ ಖಜಾನಾ

ರಾಖಿ ಜತೆ ಗ್ರೀಟಿಂಗ್ ಕಾರ್ಡ್



'ಮೂರು ವರ್ಷಗಳಿಂದ ನಾನೇ ಖುದ್ದು ರಾಖಿಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದೇನೆ. ರುದ್ರಾಕ್ಷಿ ಇರುವ ರಾಖಿಗೆ ಹೆಚ್ಚಿನ ಬೇಡಿಕೆ ಬಂದಿದೆ. ಈ ವರ್ಷ ಹೊಸದಾಗಿ ರಾಖಿಯ ಜತೆಗೆ ಅಣ್ಣ ತಂಗಿಯರ ಬಾಂಧವ್ಯವನ್ನು ನಿರೂಪಿಸುವ ಪೌರಾಣಿಕ ಕತೆಗಳ ಗ್ರೀಟಿಂಗ್ ಕಾರ್ಡ್‌ಗಳನ್ನು ರೂಪಿಸಲಾಗಿದೆ. ರಾಖಿ ಜತೆ ಗ್ರೀಟಿಂಗ್ ಕಾರ್ಡ್ ಇರುವುದರಿಂದ ಬಹುತೇಕರು ಇದನ್ನು ಇಷ್ಟಪಡುತ್ತಿದ್ದಾರೆ. ಶ್ರೀಕೃಷ್ಣ- ದ್ರೌಪದಿ, ಗಣೇಶ-ಸಂತೋಷಿಮಾ, ಯಮ-ಯಾಮಿ ನಡುವಿನ ಭ್ರಾತೃತ್ವದ ಕತೆಯನ್ನು ಗ್ರೀಟಿಂಗ್ ಕಾರ್ಡ್‌ನಲ್ಲಿ ಹೇಳಲಾಗಿದೆ. ಜತೆಗೆ ಮುಂಬೈನಲ್ಲಿ 'ಫ್ಯಾಮಿಲಿ ರಾಕಿ ಸೆಟ್'ಗೆ ಬೇಡಿಕೆ ಇದೆ. ಅತ್ತಿಗೆಗೂ ರಾಕಿ ಕಟ್ಟಲಾಗುತ್ತದೆ. ಹಾಗಾಗಿ ಅಣ್ಣ, ಅತ್ತಿಗೆ ಮತ್ತು ಮಕ್ಕಳಿಗೆಂದು ರಾಕಿ ಸೆಟ್ ತೆಗೆದುಕೊಳ್ಳುತ್ತಾರೆ.

–**ಸೌಪರ್ಣಿಕ ಹೊಳ್ಳ**, ಕ್ರಾಫ್ಟ್ ಖಜಾನಾ ಸಂಸ್ಥಾಪಕಿ

ಬಹುರೂಪಿ ರಾಖಿ



ರಾಖಿ

ತಪಶ್ಚರಣ

ಫ್ಯಾಷನ್

ಸಹೋದರಿಗೆ ಸುರಕ್ಷೆಯ ಅಭಯವನ್ನು ನೀಡುವ, ಸಹೋದರನ ನೆತ್ತಿ ಕಾಯುವಂತೆ ಹಾರೈಸುವ ಈ ಸಂಭ್ರಮಕ್ಕೆ ದೊಡ್ಡ ಇತಿಹಾಸವೇ ಇದೆ. ಆದರೆ, ಕೈಗೆ ಕಟ್ಟುವ ರಾಖಿ ಮಾತ್ರ ಬಗೆ ಬಗೆಯ ವಿನ್ಯಾಸ ಪಡೆದಿದ್ದು ಈಚಿನ ವರ್ಷಗಳಲ್ಲಿ. ಸಾಮಾನ್ಯ ಬಣ್ಣದ ದಾರಕ್ಕೆ ಸೃಜನಶೀಲ ಪೆಂಡೆಂಟ್‌ಗಳು ಸೇರಿ ರಾಖಿಯನ್ನು ಕಳೆಗಟ್ಟಿಸುತ್ತಿವೆ. ಸದ್ಯಕ್ಕೆ ಮಾರುಕಟ್ಟೆಯಲ್ಲಿ ಬೇಡಿಕೆ ಕುದುರಿಸಿಕೊಂಡಿರುವ ರಾಖಿಯ ಪಟ್ಟಿ ದೊಡ್ಡದಿದೆ.

ಸಿಲ್ವರ್ ರಾಖಿ: ಇದು ಸದ್ಯಕ್ಕೆ ಹೆಚ್ಚು ಚಾಲ್ತಿಯಲ್ಲಿರುವ ರಾಖಿ. ಶುದ್ಧ ಬೆಳ್ಳಿ ಬಳಸಿ ಮಾಡಿದ ಈ ರಾಖಿ ದೀರ್ಘಕಾಲ ಬಾಳಿಕೆ ಬರುವಂತದ್ದು. ಸೂಕ್ಷ್ಮ ಕುಸುರಿ ಇರುವ ದೇವರ ಪೆಂಡೆಂಟ್‌ಗಳಿಗೆ ಕೆಂಪು, ಹಳದಿ, ಕೇಸರಿ, ಹಸಿರು ಮಿಶ್ರಿತ ದಾರವನ್ನು ಕಟ್ಟಲಾಗಿರುತ್ತದೆ. ರಾಮ, ಕೃಷ್ಣ, ಗಣೇಶ ದೇವರ ಬೆಳ್ಳಿ ಪೆಂಡೆಂಟ್‌ಗಳಿಗೆ ಕಟ್ಟಿರುವ ದಾರಕ್ಕೆ ಹೆಚ್ಚಿನ ಬೇಡಿಕೆ ಇದೆ. ದುಬಾರಿ ಅಲ್ಲದೇ ಇರುವುದರಿಂದ ಸಿಲ್ವರ್ ರಾಖಿಗೆ ಹೆಚ್ಚು ಬೇಡಿಕೆ ಇದೆ.

ಇವಿಲ್ ಐ ರಾಖಿ: ಸಿಲ್ವರ್ ರಾಖಿ ನಂತರ ಇವಿಲ್ ಐ ರಾಖಿಗಳ ಮಾರಾಟವೂ ಹೆಚ್ಚಾಗಿದೆ. ಗಾಢ ನೀಲಿಗೆ ಆಕಾಶ ಬಣ್ಣದ ವಿನ್ಯಾಸವಿರುವ ಹರಳು ಬಳಸಿ ಮಾಡಿರುವ ರಾಖಿ ಇದು. ಕಣ್ಣಿನ ಪಾಪೆಯನ್ನು ಹೋಲುವ ಹಲವು ಬಗೆಯ ಮಣಿ ಹಾಗೂ ಹರಳುಗಳನ್ನು ಬಳಸಲಾಗುತ್ತದೆ. ಇಲ್ಲಿ ಬಳಕೆಯಾಗುವ ಮಣಿ ಹಾಗೂ ಹರಳು ನೀಲಿ ಬಣ್ಣದ್ದೇ ಆಗಿರುತ್ತದೆ. ನೀಲಿ ಬಿಟ್ಟರೆ ಕಪ್ಪು ಬಣ್ಣದಲ್ಲಿರುವ ಮಣಿಗಳನ್ನು ಬಳಕೆ ಮಾಡಲಾಗುತ್ತದೆ. ಇದರ ದಾರವು ಗಾಢ ನೀಲಿ ಮತ್ತು ತಿಳಿ ನೀಲಿ ಬಣ್ಣದ ಮಿಶ್ರಣವನ್ನು ಹೊಂದಿರುತ್ತದೆ. ಮಕ್ಕಳಿಗೆ ಈ ರಾಖಿ ಅಚ್ಚುಮೆಚ್ಚು.

ರುದ್ರಾಕ್ಷಿ ರಾಖಿ: ಧಾರ್ಮಿಕ ಶ್ರದ್ಧೆಯನ್ನು ಹೊಂದಿರುವವರು ಈ ರುದ್ರಾಕ್ಷಿ ರಾಖಿಯನ್ನು ಹೆಚ್ಚು ಇಷ್ಟಡು ತ್ತಾರೆ. ಮೂರು ಅಥವಾ ಒಂದು ರುದ್ರಾಕ್ಷಿ ಇರುವ ಪದಕದ ಜತೆ ಬಗೆ ಬಗೆಯ ಮರದ ಮಣಿಗಳನ್ನು ಬಳಸಿ ಈ ರಾಖಿ ಮಾಡಲಾಗುತ್ತದೆ. ಇದನ್ನು ಧರಿಸಿದರೆ ಧನಾತ್ಮಕ ಭಾವ ಹೆಚ್ಚುತ್ತದೆ ಎಂಬ ನಂಬಿಕೆ ಇದೆ.


ಮೆಟಲ್ ರಾಖಿ: ಮೆಟಲ್‌ಗಳಲ್ಲಿ ಹೂವು, ನವಿಲು, ಹಂಸ ಹೀಗೆ ನಾನಾ ಚಿತ್ತಾರವನ್ನು ಮೂಡಿಸಿ ಮಾಡಿದ ಪೆಂಡೆಂಟ್ ಇರುವ ರಾಖಿ ಇದು. ಇಷ್ಟದ ವ್ಯಕ್ತಿಯ ಹೆಸರನ್ನು ಈ ಮೆಟಲ್ ಪೆಂಡೆಂಟ್‌ನಲ್ಲಿ ಕೆತ್ತಲಾಗುತ್ತದೆ. ಸಾಮಾನ್ಯಾಗಿ ಓಂಕಾರದ ಮೆಟಲ್ ಪೆಂಡೆಂಟ್ ಇರುವ ರಾಖಿಗಳು ಅಗ್ರ ಸ್ಥಾನ ಪಡೆದಿವೆ.

ಮುತ್ತಿನ ರಾಖಿ ಮತ್ತು ಕುಂದನ್ ರಾಖಿ: ಸಾಂಪ್ರದಾಯಿಕ ಶೈಲಿಯ ರಾಖಿ ಇದು. ದೊಡ್ಡ ಹಾಗೂ ಸಣ್ಣ ಮುತ್ತಿನ ಮಣಿಗಳನ್ನು ಬಳಸಲಾಗುತ್ತದೆ. ಹೆಚ್ಚಾಗಿ ಕೆಂಪು ದಾರದಲ್ಲಿ ಪೋಣಿಸಿ ಈ ರಾಖಿಯನ್ನು ತಯಾರಿ ಸುತ್ತಾರೆ. ಇನ್ನು ಬಗೆ ಬಗೆಯ ಕುಂದನ್ ಬಳಸಿ ಮಾಡಿರುವ ರಾಖಿಯನ್ನು ಹೆಚ್ಚಾಗಿ ಮಧ್ಯವಯಸ್ಸಿನ ಪುರುಷರು ಇಷ್ಟಪಡುತ್ತಾರೆ. ಉತ್ತರ ಭಾರತದಲ್ಲಿ ಮುತ್ತು ಹಾಗೂ ಕುಂದನ್ ರಾಖಿಯ ಬಳಕೆ ಹೆಚ್ಚಿದೆ.

ಆಕ್ಸಿಡೈಸ್ಡ್ ರಾಖಿ: ಇದು ಯುವಸಮೂಹದ ನೆಚ್ಚಿನ ರಾಖಿ. ಆಕ್ಸಿಡೈಸ್ಡ್ ಪೆಂಡೆಂಟ್ ಬಳಸಿ ಮಾಡಿರುವ ಈ ರಾಖಿ ನೋಡಲು ಆಕರ್ಷಕವಾಗಿ ಕಾಣುತ್ತದೆ. ಸೂರ್ಯ, ಆನೆ, ಆಂಜನೇಯಸ್ವಾಮಿ ಹೀಗೆ ಬಗೆ ಬಗೆಯ ಆಕ್ಸಿಡೈಸ್ಡ್ ಪೆಂಡೆಂಟ್‌ಗಳು ಲಭ್ಯವಿದೆ. ಆಸಕ್ತಿಗೆ ಅನುಸಾರವಾಗಿ ಪೆಂಡೆಂಟ್‌ಗಳು ಸಿಗುತ್ತವೆ.

ರೇಸಿನ್ ರಾಖಿ: ರೇಸಿನ್ ರಾಖಿಗಳನ್ನು ಎಪೋಕ್ಸಿ ರೇಸಿನ್ ಎನ್ನುವ ರಾಸಾಯನಿಕ ಬಳಸಿ ಮಾಡಲಾಗುತ್ತದೆ. ಯಾವುದೇ ವಸ್ತುವಿನ ಮೇಲೆ ಈ ರಾಸಾಯನಿಕವನ್ನು ಹಾಕಿದರೆ ಆ ವಸ್ತುವಿನ ಅಚ್ಚು ಪಡೆಯಬಹುದು. ಈ ಅಚ್ಚಿನ ಮೇಲೆ ಇಷ್ಟದ ಹೆಸರು, ಫೋಟೋ ಬಳಸಿ ರಾಖಿ ತಯಾರಿಸಲಾಗುತ್ತದೆ. ❖

ಎದೆಹಾಲು ದ್ರವರೂಪದ ಅಪರಂಜಿ



ಡಾ. ರವನೀತ ಜೋಶಿ

ತಾಯಿಯ ಎದೆಹಾಲು ಅಮೃತಕ್ಕೆ ಸಮಾನ. ಎದೆಹಾಲಿಗೆ ಪರ್ಯಾಯ ಅಂತ ಯಾವುದೂ ಇಲ್ಲ. ಪ್ರಸ್ತುತ ಸಮಾಜದಲ್ಲಿ ಈ ಬಗ್ಗೆ ಹೆಚ್ಚಿನ ತಿಳಿವಳಿಕೆ ಮೂಡಿಸುವ ಅಗತ್ಯವಿದೆ. ಇದೇ ಕಾರಣಕ್ಕಾಗಿ 'ಸ್ತನ್ಯಪಾನ ಸಪ್ತಾಹ'ದ ಈ ವರ್ಷದ ಘೋಷ ವಾಕ್ಯವೂ 'ಸ್ತನ್ಯಪಾನಕ್ಕಾಗಿ ಹೆಜ್ಜೆ: ಶಿಕ್ಷಣ ಮತ್ತು ಬೆಂಬಲ' ಎಂಬುದಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಮಣಿಪಾಲ ಆಸ್ಪತ್ರೆಯ ಲ್ಯಾಕ್ಟೇಶನ್ ಫಿಸಿಶಿಯನ್ ಡಾ. ರವನೀತ ಜೋಶಿ ಅವರೊಂದಿಗೆ ರೂಪಾ ಕೆ.ಎಂ. ನಡೆಸಿದ ಸಂದರ್ಶನದ ಸಂಕ್ಷಿಪ್ತ ರೂಪ ಇಲ್ಲಿದೆ.

'ಸ್ತನ್ಯಪಾನ ಸಪ್ತಾಹ' ಆಗಸ್ಟ್ 1 ರಿಂದ 7



ಪ್ರಾತಿನಿಧಿಕ ಚಿತ್ರ

- **ಸ್ತನ್ಯಪಾನ ವಿಚಾರದಲ್ಲಿ ನಿರೀಕ್ಷಿಸಿದಷ್ಟು ಜಾಗೃತಿ ಮೂಡಿದೆಯೇ ?**

ಈ ವರ್ಷದ ಘೋಷವಾಕ್ಯವನ್ನು ಗಮನಿಸಿದರೆ ಹಾಗನ್ನಿಸುವುದಿಲ್ಲ. ಆದ್ದರಿಂದಲೇ, ಸ್ತನ್ಯಪಾನದ ಬಗ್ಗೆ ಶೈಕ್ಷಣಿಕ ಜಾಗೃತಿಯ ಅಗತ್ಯವಿದೆ. ಜತೆಗೆ ಸಾಮಾಜಿಕ ಬೆಂಬಲವನ್ನೂ ನೀಡಬೇಕಿದೆ. ಮೊದಲಬಾರಿಗೆ ತಾಯಿಯಾಗುವವರಲ್ಲಿ ಹಾಲುಣಿಸುವ ಬಗ್ಗೆ ಹಲವು ಗೊಂದಲಗಳಿರುತ್ತವೆ. ಅದು ಸಹಜ ಕೂಡ. ಸೂಕ್ತ ಮಾರ್ಗದರ್ಶನದ ಮೂಲಕ ಅವರಲ್ಲಿರುವ ಗೊಂದಲಗಳನ್ನು ನಿವಾರಿಸಬೇಕಿದೆ. ಈ ಜಾಗೃತಿ ನಿರಂತರವಾಗಿರಬೇಕು. ಇದಕ್ಕೆ ಕೊನೆಯೆಂಬುದು ಇರುವುದಿಲ್ಲ.

- **ಎದೆಹಾಲಿನ ಮಹತ್ವ ತಿಳಿಸಿ**

ಎದೆಹಾಲು ಎನ್ನುವುದು ದ್ರವರೂಪದಲ್ಲಿರುವ ಅಪರಂಜಿ. ಅದಕ್ಕೆ ಪರ್ಯಾಯ ಹುಡುಕಲು ಸಾಧ್ಯವಿಲ್ಲ. ಎದೆ ಹಾಲು ಉಂಡ ಮಕ್ಕಳ ಬುದ್ಧಿಮತ್ತೆ ಚೆನ್ನಾಗಿರುತ್ತದೆ. ಹಾಗಾಗಿ ಸ್ವಸ್ಥ ಮತ್ತು ಸದೃಢ ಸಮಾಜದ ನಿರ್ಮಾಣದಲ್ಲಿ ಎದೆಹಾಲು ತನ್ನದೇ ಪಾತ್ರ ವಹಿಸಿದೆ. ಪ್ರತಿ ಮಹಿಳೆ ಎದೆಹಾಲಿನ ಮಹತ್ವವನ್ನು ಅರ್ಥ ಮಾಡಿಕೊಳ್ಳಲೇಬೇಕು. ಜತೆಗೆ ಯಾವುದೇ ಸಂದರ್ಭ, ಸ್ಥಳಗಳಲ್ಲಿಯೂ ಹಾಲುಣಿಸಬಹುದು ಎಂಬ ಧೈರ್ಯವನ್ನು ಮಹಿಳೆಯರಲ್ಲಿ ತುಂಬಬೇಕಿದೆ. ಇದಕ್ಕೆ ಸಾಮಾಜಿಕ ಬೆಂಬಲ ಸಿಗಬೇಕಿದೆ. ಹಾಲುಣಿಸುವ ಪ್ರಕ್ರಿಯೆಗೆ ಭಂಗ ತಂದರೆ ತಾಯಿ ಮತ್ತು ಮಗುವಿನ ಮೂಲಭೂತ ಹಕ್ಕಿಗೆ ತೊಂದರೆಯಾದಂತೆ. ಹಾಗಾಗಿ ಮಹಿಳೆಯಷ್ಟೇ ಅಲ್ಲದೇ, ಸಮಾಜದ ಎಲ್ಲ ವರ್ಗಗಳಲ್ಲೂ ಈ ಕುರಿತು ಜಾಗೃತಿ ಮೂಡಬೇಕಿದೆ.

- **ಬಾಣಂತಿಯರ ಆಹಾರ ಪದ್ಧತಿಯ ಬಗ್ಗೆ ಹಲವು ಮಿಥ್ಯೆಗಳಿವೆ. ಈ ಬಗ್ಗೆ ಹೇಗೆ ಜಾಗೃತಿ ಮೂಡಿಸಬಹುದು?**

ಬಾಣಂತಿ ಆಹಾರದ ಕುರಿತು ದೇಶದ ನಾನಾ ಭಾಗಗಳಲ್ಲಿ ವಿವಿಧ ರೀತಿಯ ನಂಬಿಕೆ, ರೀತಿ– ರಿವಾಜುಗಳಿವೆ. ಒಂದೊಂದು ಕಡೆ ಒಂದೊಂದು ರೀತಿ ಇದೆ. ಕೆಲವು ಪ್ರದೇಶಗಳಲ್ಲಿ ಬಾಣಂತಿ ತೂಕ ಹೆಚ್ಚಬಹುದು ಎನ್ನುವ ಆತಂಕದಿಂದ ಪಥ್ಯ ಮಾಡಲಾಗುತ್ತದೆ. ಕೆಲವೆಡೆ ಬಾಣಂತಿಯರಿಗೆ ಕಡಿಮೆ ನೀರು ಕುಡಿಸಲಾಗುತ್ತದೆ. ಇವೆಲ್ಲ ತಪ್ಪು ಕಲ್ಪನೆಗಳು. ಗರ್ಭಿಣಿಯರ ಹಾಗೆಯೇ ಬಾಣಂತಿಯರಿಗೂ ನಿತ್ಯ 500 ಕ್ಯಾಲರಿ, 25 ಗ್ರಾಂನಷ್ಟು ಪ್ರೊಟೀನ್ ಬೇಕು. ದಿನಕ್ಕೆ ಕನಿಷ್ಠ ಮೂರು ಲೀಟರ್ ನೀರು ಕುಡಿಯಬೇಕು. ಹೆಚ್ಚು ನೀರು ಕುಡಿದಷ್ಟು ಹಾಲು ಉತ್ಪತ್ತಿಯಾಗಲು ಸಹಕಾರಿಯಾಗುತ್ತದೆ.

- **ಎದೆಹಾಲು ವೃದ್ಧಿಗೆ ಸರಳ ಮಾರ್ಗಗಳನ್ನು ತಿಳಿಸಿ.**

ಬೇಡಿಕೆಗೆ ಅನುಸಾರವಾಗಿ ಹಾಲು ಉತ್ಪತ್ತಿಯಾಗುತ್ತದೆ. ಹಾಗಾಗಿ ಮಗುವಿಗೆ ಹೆಚ್ಚು ಹಾಲುಣಿಸಬೇಕು. ಮಗು ಹಾಲು ಕುಡಿದಷ್ಟು, ಹಾಲು ಉತ್ಪತ್ತಿ ಮಾಡುವ ಹಾರ್ಮೋನ್‌ಗಳು ಬಿಡುಗಡೆಯಾಗಿ, ಹಾಲು ಪೂರೈಕೆಯಾಗುತ್ತದೆ. ಹಾಗಾಗಿ ಬಿಡುವಾದಾಗೆಲ್ಲ ಮತ್ತು ಬಿಡುವು ಮಾಡಿಕೊಂಡು ಮಗುವಿಗೆ ಹಾಲುಣಿಸಬೇಕು, ಇದು ಒಂದು ಮಾರ್ಗ. ಹಾಲುಣಿಸುವ ಜೊತೆಗೆ, ತಾಯಂದಿರು ಯಥೇಚ್ಛವಾಗಿ ತರಕಾರಿ, ಹಾಲು, ಹಣ್ಣು, ಪೌಷ್ಟಿಕಾಂಶಯುಕ್ತ ಆಹಾರವನ್ನು ಸೇವಿಸಬೇಕು. ಜಂಕ್‌ಫುಡ್‌ನಿಂದ ದೂರವಿರಬೇಕು.

- **ಉದ್ಯೋಗಸ್ಥ ಮಹಿಳೆಯರು ಬ್ರೆಸ್ಟ್ ಪಂಪ್ ನೆರವಿನಿಂದ ಎದೆಹಾಲನ್ನು ಶೇಖರಿಸಿಡುತ್ತಿದ್ದಾರೆ. ಇದು ಸುರಕ್ಷಿತವೇ?**

ಬ್ರೆಸ್ಟ್ ಪಂಪ್ ಮೂಲಕ ಎದೆಹಾಲು ಶೇಖರಿಸಿಡಬಹುದು. ಆದರೆ, ಅದನ್ನು ನಿರ್ದಿಷ್ಟ ಸಮಯದೊಳಗೆ ಬಳಕೆ ಮಾಡಬೇಕು. ಕೋಣೆಯ ಉಷ್ಣತೆಯಲ್ಲಿ(ರೂಮ್ ಟೆಂಪರೇಚರ್) 4 ರಿಂದ 6 ಗಂಟೆಗಳ ಕಾಲ ಹಾಲು ಕೆಡುವುದಿಲ್ಲ. ಫ್ರಿಜ್‌ನಲ್ಲಿ 2 ದಿನ ಇಡಬಹುದು. ಫ್ರೀಜರ್‌ನಲ್ಲಿ ಮೂರು ತಿಂಗಳ ಕಾಲ ಶೇಖರಿಸಿಡಬಹುದು. ಆದರೆ, ಎಂಥ ಪರಿಸ್ಥಿತಿಯೇ ಬರಲಿ, ಎದೆಹಾಲು ನೀಡುವುದಕ್ಕೆ ಆದ್ಯತೆ ನೀಡಬೇಕು. ದಾನಿಗಳಿಂದ ಪಡೆದ ಹಾಲು ಎರಡನೇ ಆಯ್ಕೆಯಾಗಿರಲಿ. ಫಾರ್ಮೂಲ್ (ಹಾಲಿನ ಪುಡಿಯಿಂದ ತಯಾರಿಸಿದ್ದು) ಹಾಲಿನ ಬಳಕೆ ಕಡಿಮೆ ಇರಲಿ.

- **ಇತ್ತೀಚೆಗೆ ಎದೆಹಾಲು ಶೇಖರಿಸಿಡುವ 'ಮಿಲ್ಕ್ ಬ್ಯಾಂಕ್'ಗಳು ಹೆಚ್ಚಾಗುತ್ತಿವೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?**

ಎಷ್ಟೋ ತಾಯಂದಿರಿಗೆ, ಬೇರೆ ಬೇರೆ ಕಾರಣಗಳಿಗಾಗಿ ಎದೆಹಾಲು ಉತ್ಪತ್ತಿಯಾಗುವುದಿಲ್ಲ. ಪ್ರಸ್ತುತ ಎದೆಹಾಲು ವಂಚಿತ ನೂರಾರು ಮಕ್ಕಳಿದ್ದಾರೆ. ಅವರಿಗೆಲ್ಲ ಈ ಮಿಲ್ಕ್ ಬ್ಯಾಂಕ್ ಸಹಕಾರಿಯಾಗುತ್ತದೆ. ಬೇರೆ ಬೇರೆ ಕಾಯಿಲೆಗಳಿಂದ ಬಳಲುತ್ತಿರುವ ತಾಯಂದಿರು ಎದೆಹಾಲು ಉಣಿಸಲು ಸಾಧ್ಯವಾಗದಿರುವಾಗ ಅಥವಾ ಅಮ್ಮನನ್ನು ಕಳೆದುಕೊಂಡ ಹಸುಗೂಸುಗಳಿಗೆ ಈ ಬ್ಯಾಂಕ್‌ಗಳಿಂದ ತುಂಬಾ ಉಪಯೋಗವಾಗುತ್ತದೆ. ಆದರೆ, ಈ ಎದೆಹಾಲು ಸಂಗ್ರಹಿಸುವ ಕೇಂದ್ರಗಳು, ವಾಣಿಜ್ಯೀಕರಣಗೊಳ್ಳಬಾರದು. ಎದೆಹಾಲು ಮಾರಾಟಕ್ಕೆ ಇಡುವಂತಹ ವಸ್ತುವಲ್ಲ. ಆ ಎಚ್ಚರವೂ ನಮಗೆ ಇರಬೇಕು. ಹಣಕ್ಕಾಗಿ ಎದೆಹಾಲನ್ನು ಮಾರುವ ಸ್ಥಿತಿ ಬರಬಾರದು.

(ಡಾ. ರವನೀತ ಜೋಶಿ ಮಕ್ಕಳತಜ್ಞರಾಗಿದ್ದು, ಬೆಂಗಳೂರಿನ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ ಆಸ್ಪತ್ರೆಯಲ್ಲಿ ಲ್ಯಾಕ್ಟೇಶನ್ ಫಿಸಿಶಿಯನ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ)

ದೋಷಿಯಲ್ಲ ಬಲಿಪಶು

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **10ನೇ ವಯಸ್ಸಿನಲ್ಲಿ ನನ್ನಮೇಲೆ ಸಂಬಂಧಿಕರೊಬ್ಬರಿಂದಲೇ ಲೈಂಗಿಕ ದೌರ್ಜನ್ಯ ನಡೆದಿತ್ತು. ಏನೂ ಅರಿಯದ ವಯಸ್ಸಿನಲ್ಲಿ ನಡೆದ ದುಃಸ್ವಪ್ನವೊಂದು ನಿತ್ಯ ನನ್ನನ್ನು ಕಾಡುತ್ತಿದೆ. ಇದರಿಂದ ಹೊರಬರುವುದು ಹೇಗೆ ತಿಳಿಸಿ**

ಹೆಸರು ಊರು ತಿಳಿಸಿಲ್ಲ.

ನಿಮಗಾಗಿದ್ದ ಆಘಾತಕ್ಕೆ ಸಾಂತ್ವನ ಹೇಳಲು ನನ್ನಲ್ಲಿ ಶಬ್ದಗಳಿಲ್ಲ. ಬಾಲ್ಯದಲ್ಲಿ ನಡೆಯುವ ಲೈಂಗಿಕ ಶೋಷಣೆಯಿಂದ ಮೂಡಿದ ನಿಮ್ಮ ನೋವು ಕೀಳರಿಮೆ ಪಾಪಪ್ರಜ್ಞೆ ಮುಂತಾದವುಗಳು ಬಹಳ ಆಳವಾಗಿ ಬೇರೂರಿರುತ್ತವೆ. ಹಾಗಾಗಿ ನಿರಂತರವಾಗಿ ಅವು ನಿಮಗೆ ಮಾನಸಿಕ ಹಿಂಸೆಯನ್ನು ನೀಡುತ್ತವೆ. ಬುದ್ಧಿ ವಿವೇಚನೆಗೆ ಬಳಸುವ ಮಿದುಳೇ ಬೆಳೆದಿಲ್ಲದಿರುವಾಗ ಆದ ಆಘಾತಗಳು ಕೇವಲ ಮನಸ್ಸಿನಲ್ಲಿ ಮಾತ್ರವಲ್ಲ ನಿಮ್ಮ ದೇಹದ ಕಣಕಣಗಳಲ್ಲಿಯೂ ಸೇರಿಕೊಂಡಿರುತ್ತದೆ. ನಿಮ್ಮ ಈಗಿನ ವಯಸ್ಸು ಮದುವೆಯಾಗಿದೆಯೇ ಮುಂತಾದ ವಿವರಗಳನ್ನು ತಿಳಿಸಿದ್ದರೆ ಸಹಾಯವಾಗುತ್ತಿತ್ತು.

ನಿಮ್ಮ ಕಹಿ ಅನುಭವವನ್ನು ಇಲ್ಲಿಯವರೆಗೆ ನಿಮ್ಮ ಪೋಷಕರು ಮನೆಯವರು ಸ್ನೇಹಿತರು ಹೀಗೆ ಯಾರಲ್ಲಿಯಾದರೂ ಹಂಚಿಕೊಂಡಿದ್ದೀರಾ? ಹಂಚಿಕೊಳ್ಳದಿದ್ದರೆ ನಿಮ್ಮೊಳಗೆ ಮಡುವುಗಟ್ಟಿರುವ ನೋವು ಅಸಹ್ಯ ಕೋಪ ಕೀಳರಿಮೆ ಮುಂತಾದವುಗಳೆಲ್ಲಾ ಹೊರಹೋಗುವುದು ಹೇಗೆ ಸಾಧ್ಯ? ಒಬ್ಬ ಸುರಕ್ಷಿತ ವ್ಯಕ್ತಿಯೊಡನೆ ಯಾವುದೇ ಸಹಾಯದ ನಿರೀಕ್ಷೆಯಿಲ್ಲದೆ ಎಲ್ಲಾ ಕಹಿಯನ್ನೂ ಹಂಚಿಕೊಳ್ಳಬೇಕಾಗುತ್ತದೆ. ಆ ಸಮಯದಲ್ಲಿ ಮೂಡುವ ನಿಮ್ಮೆಲ್ಲಾ ನೋವು ದುಗುಡಗಳನ್ನು ಸಹಜವಾಗಿ ಹೊರಹೋಗಲು ಅವಕಾಶ ಕೊಡಬೇಕು. ಹೀಗೆ ನಿಮ್ಮ ದೇಹ ಮನಸ್ಸುಗಳನ್ನು ಹಂತಹಂತವಾಗಿ ಸ್ಥಿಮಿತಕ್ಕೆ ತರಬೇಕು. ಇವೆಲ್ಲವನ್ನು ಮಾಡಲು ಸಮಯದ ಅಗತ್ಯವಿದೆ. ಜೊತೆಗೆ ತಜ್ಞ ಮನೋಚಿಕಿತ್ಸಕರ ಸಹಾಯದ ಅಗತ್ಯವೂ ಇದೆ.

ದೌರ್ಜನ್ಯ ಮಾಡಿದ ವ್ಯಕ್ತಿ ಇನ್ನೂ ನಿಮ್ಮ ಸಂಪರ್ಕದಲ್ಲಿದ್ದರೆ ಒಮ್ಮೆ ನಿಮಗೆ ಆಗಿರುವ ಆಘಾತವನ್ನು ನೇರವಾಗಿ ತಿಳಿಸಿ ನಂತರ ಸಂಬಂಧವನ್ನು ಕಡಿದುಕೊಳ್ಳಿ. ನೀವು ಆಗಾಗ ನೆನಪಿಸಿಕೊಳ್ಳಬೇಕಾಗಿರುವುದು ನಿಮ್ಮ ಮೇಲೆ ಬಾಲ್ಯದಲ್ಲಿ ನಡೆದಿದ್ದು ಒಂದು ಅಪಘಾತ ಮತ್ತು ಒಪ್ಪಿಗೆಯಿಲ್ಲದೆ ನಿಮ್ಮ ಕೈಮೀರಿ ನಡೆದ ಕ್ರಿಮಿನಲ್ ಕೃತ್ಯ. ಇದಕ್ಕಾಗಿ ನೀವು ತಪ್ಪಿತಸ್ಥರಾಗುವುದು ಹೇಗೆ ಸಾಧ್ಯ? ಇಂತಹ ಹೇಯಕೃತ್ಯವನ್ನು ನೀವು ಅವಮಾನವಾಗಿ ಸ್ವೀಕರಿಸಿರುವದರಿಂದ ನಿಮ್ಮನ್ನೇ ದೋಷಿಯಾಗಿ ನೋಡಿಕೊಳ್ಳುವ ಸಾಧ್ಯತೆಗಳಿವೆ. ನೀವು ದೋಷಿಯಲ್ಲ ಅಸಹಾಯಕ ಬಲಿಪಶುವಾಗಿದ್ದಿರಿ. ಹಾಗಾಗಿ ನಿಮ್ಮ ಅಂತರಾತ್ಮದ ಪರಿಶುದ್ಧತೆಯನ್ನು ಯಾರೂ ಕಸಿದುಕೊಳ್ಳಲಾಗದು.

- **ಪುರುಷರಲ್ಲಿ ವೀರ್ಯ ಚಿಮ್ಮಿದಂತೆ ಮಹಿಳೆಯರಲ್ಲಿಯೂ ಅಂಡಾಣು ಚಿಮ್ಮುವುದೇ? ಸಾಮಾನ್ಯ ಜನರ ಹಿನ್ನೆಲೆಯಲ್ಲಿ ಈ ಪ್ರಶ್ನೆ ಕೇಳಿದ್ದೇನೆ. ದಯವಿಟ್ಟು ಉತ್ತರಿಸಿ. ಹೆಸರು ಊರು ಬೇಡ.**

ವಿಷಯಗಳನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳಬೇಕೆನ್ನುವ ನಿಮ್ಮ ಕುತೂಹಲ ಮೆಚ್ಚುವಂತಹದು. ಸಮಾಜದ ಎಲ್ಲರಿಗೂ ಪ್ರಮುಖವಾಗಿ ಮಕ್ಕಳಿಗೆ ಲೈಂಗಿಕತೆಯ ಕುರಿತಾದ ವೈಜ್ಞಾನಿಕ ಮಾಹಿತಿಗಳನ್ನು ತಿಳಿಸುವ ಶಿಕ್ಷಣಪದ್ಧತಿಯನ್ನು ರೂಪಿಸದಿರುವುದು ನಮ್ಮ ರಾಜಕೀಯ ಸಾಮಾಜಿಕ ಶೈಕ್ಷಣಿಕ ವ್ಯವಸ್ಥೆಯಲ್ಲಿರುವ ದೋಷವಾಗಿದೆ. ಇದಕ್ಕಾಗಿ ಯುವಜನರು ಪ್ರಶ್ನೆಗಳನ್ನು ಕೇಳಲು ಹಿಂಜರಿಯಬೇಕಾಗಿಲ್ಲ.

ಸ್ತ್ರೀಯರ ದೇಹದಲ್ಲಿ ಪ್ರತಿ ತಿಂಗಳು ಒಂದು ಅಂಡಾಣು ಉತ್ಪತ್ತಿಯಾಗುತ್ತದೆ. ಅದು ಗರ್ಭಾಶಯದ ಸುರಕ್ಷಿತ ವಾತಾವರಣದಲ್ಲಿ ಇರುತ್ತದೆ. ಪುರುಷರಲ್ಲಿ ಒಮ್ಮೆ ಸ್ಖಲನವಾಗುವ ವೀರ್ಯದಲ್ಲಿ ಕೋಟ್ಯಂತರ ವೀರ್ಯಾಣುಗಳಿರುತ್ತವೆ. ಸ್ತ್ರೀಯರ ಲೈಂಗಿಕ ಅಂಗಾಂಗಗಳು ದೇಹದ ಹೊರಭಾಗದಲ್ಲಿದ್ದರೂ ಗರ್ಭಾಶಯ ಒಳಗಡೆಯಿರುತ್ತದೆ. ವೀರ್ಯಾಣುಗಳನ್ನು ಅಲ್ಲಿಯವರೆಗೆ ತಲುಪಿಸುವ ಉದ್ದೇಶದಿಂದ ಪ್ರಕೃತಿ ಪುರುಷನ ಲೈಂಗಿಕ ಅಂಗಾಂಗಗಳಲ್ಲಿ ಚಿಮ್ಮಿಸುವ ವ್ಯವಸ್ಥೆ ರೂಪಿಸಿದೆ. ವಾತಾವರಣದ ಶಾಖವನ್ನು ಹೆಚ್ಚು ಕಾಲ ತಡೆದುಕೊಳ್ಳಲಾಗದೆ ಹೆಚ್ಚಿನ ವೀರ್ಯಾಣುಗಳು ನಿಷ್ಕ್ರಿಯವಾಗುತ್ತವೆ. ಕೇವಲ ಒಂದು ವೀರ್ಯಾಣು ಕೊನೆಗೆ ಅಂಡಾಣುವಿನೊಡನೆ ಸೇರುವುದರಲ್ಲಿ ಸಫಲವಾದಾಗ ಗರ್ಭಕಟ್ಟುತ್ತದೆ. ಸ್ತ್ರೀಯರ ಅಂಡಾಣು ಗರ್ಭಾಶಯದಲ್ಲಿಯೇ ಇರುವುದರಿಂದ ಚಿಮ್ಮುವ ಅಗತ್ಯವಿರುವುದಿಲ್ಲ. ಲೈಂಗಿಕ ಆಸಕ್ತಿ ಮೂಡಿದಾಗ ಘರ್ಷಣೆಗೆ ಅನುಕೂಲವಾಗುವಂತೆ ಜಾರುಕಗಳು (ಲ್ಯೂಬ್ರಿಕೆಂಟ್ಸ್) ಮಾತ್ರ ಸ್ತ್ರೀಯರ ಲೈಂಗಿಕ ಅಂಗಾಗಳಿಂದ ಸ್ರವಿಸಲ್ಪಡುತ್ತದೆ. ❖

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.

bhoomika@prajavani.co.in

ಕ್ಯಾನ್ಸರ್ ಪೀಡಿತರಿಗೆ ಕೇಶದಾನ

ಎಂ.ಆರ್.ಮಂಜುನಾಥ್

ಕ್ಯಾನ್ಸರ್ ಗುಣಪಡಿಸಲು ಅಗತ್ಯವಿರುವ ಚಿಕಿತ್ಸೆಯಲ್ಲಿ ಕಿಮೊಥೆರಪಿಯೂ ಒಂದು. ಇದು ಉತ್ತಮ ಪರಿಣಾಮ ಬೀರುತ್ತದೆಯಾದರೂ ದೇಹದ ಮೇಲೆ ಕೆಲವು ಅಡ್ಡಪರಿಣಾಮಗಳನ್ನು ಉಂಟುಮಾಡುತ್ತದೆ. ಅದರಲ್ಲಿ ತಲೆ ಕೂದಲು ಉದುರಿ ಬೋಳಾಗುವುದೂ ಒಂದು.

ಕ್ಯಾನ್ಸರ್ ಪೀಡಿತರಿಗೆ ಕಿಮೊಥೆರಪಿಯ ನೋವು ಒಂದು ಕಡೆಯಾದರೆ, ಕೂದಲು ಉದುರಿ, ಆತ್ಮವಿಶ್ವಾಸ ಕಳೆದುಕೊಳ್ಳುವ ಭಯವೂ ಇರುತ್ತದೆ. ಅದರಲ್ಲೂ ಮಹಿಳೆಯರು ಈ ಸಮಸ್ಯೆಯಿಂದ ಖಿನ್ನರಾಗುತ್ತಾರೆ.

ಕ್ಯಾನ್ಸರ್ ಪೀಡಿತರ ಮಾನಸಿಕ ವೇದನೆಯನ್ನು ಅರಿತ ಮೈಸೂರು ನಗರದ ಲೇಡಿಸ್ ಸರ್ಕಲ್ ಇಂಡಿಯಾ ಸಂಸ್ಥೆಯು 'ಕೂದಲು ದಾನ' ಅಭಿಯಾನ ನಡೆಸುತ್ತಾ, ಕ್ಯಾನ್ಸರ್ ರೋಗಿಗಳಿಗೆ ಉಚಿತವಾಗಿ ವಿಗ್ ತಯಾರಿಸಿ ಕೊಡಲು ಮುಂದಾಗಿದೆ.

2014ರಿಂದ ಈವರೆಗೆ ಸುಮಾರು 1000ಕ್ಕೂ ಹೆಚ್ಚು ಕ್ಯಾನ್ಸರ್‌ಪೀಡಿತರಿಗೆ ವಿಗ್‌ಗಳನ್ನು ಉಚಿತವಾಗಿ ನೀಡಿದೆ. ಮೈಸೂರಿನ 'ಕಿಮಾಯಾ'ಸಲೂನ್‌ನಲ್ಲಿ ಸಮರ್ಥಿ ಮಂಜೋ ಹಾಗೂ ಸುಚಿತ್ ಸಂಜಯ್ ಅವರ ನೆರವಿನೊಂದಿಗೆ ದಾನಿಗಳಿಂದ ಕೂದಲು ಪಡೆಯಲಾಗುತ್ತದೆ.

ಈ ಕೂದಲನ್ನು ದೆಹಲಿಯಲ್ಲಿರುವ ಹೇರ್ ಫಾರ್ ಹೋಪ್ ಹಾಗೂ ಚೆನ್ನೈನಲ್ಲಿರುವ ಚೆರಿನ್ ಫೌಂಡೇಶನ್ ಸಂಸ್ಥೆಗೆ ವಿಗ್ ತಯಾರಿಸಲು ನೀಡಲಾಗುತ್ತದೆ. ಅಲ್ಲಿಂದ ಬಂದ ವಿಗ್‌ಗಳನ್ನು ಕ್ಯಾನ್ಸರ್ ರೋಗಿಗಳಿಗೆ ಉಚಿತವಾಗಿ ನೀಡಲಾಗುತ್ತದೆ.

ರಾಸಾಯನಿಕ ಮಿಶ್ರಿತ ಬಣ್ಣ ಹಚ್ಚದ ಸಹಜವಾಗಿರುವ ಕೂದಲನ್ನು ದಾನಿಗಳಿಂದ ಪಡೆಯಲಾಗುತ್ತದೆ. 10 ಇಂಚಿಗಿಂತ ಉದ್ದವಾದ ಕೂದಲನ್ನು ಮಾತ್ರ ಸ್ವೀಕರಿಸಲಾಗುತ್ತದೆ. ದಾನಿಗಳಿಂದ ಉಚಿತವಾಗಿ ಕೂದಲು ಪಡೆದ ನಂತರ, ದಾನಿಗಳಿಗೋಸ್ಕರ ಅವರಿಗೆ ಇಷ್ಟವಾದ ಕೇಶವಿನ್ಯಾಸವನ್ನು ಉಚಿತವಾಗಿ ಮಾಡಲಾಗುತ್ತದೆ ಎನ್ನುತ್ತಾರೆ 'ಕಿಮಾಯಾ' ಸಲೂನಿನ ಸಮರ್ಥಿ ಮಂಜೊ.

ಹೆಚ್ಚಾಗಿ ಮಹಿಳೆಯರು, ವಿದ್ಯಾರ್ಥಿನಿಯರು, ಯುವಕರು ಕೇಶದಾನಕ್ಕೆ ಮುಂದಾಗುತ್ತಿದ್ದಾರೆ. 'ಆರಂಭದಲ್ಲಿ ಹೆಣ್ಣು ಮಕ್ಕಳು ತಲೆಗೂದಲು ಕತ್ತರಿಸಬಾರದು ಎಂಬ ಮೂಢನಂಬಿಕೆಯಿಂದ ಕೆಲವರು ಕೂದಲು ದಾನ ಮಾಡಲು ಹಿಂದೇಟು ಹಾಕುತ್ತಿದ್ದರು. ಈಗೀಗ ಅಂಥವೆಲ್ಲ ಸಡಿಲಗೊಳ್ಳುತ್ತಿವೆ. ಕೂದಲು ದಾನ ಮಾಡುವವರ ಸಂಖ್ಯೆಯೂ ಹೆಚ್ಚುತ್ತಿದೆ. ಹೀಗೆ ಎಲ್ಲರ ಪ್ರಯತ್ನದಿಂದ ಕ್ಯಾನ್ಸರ್ ರೋಗಿಗಳ ಮುಖದಲ್ಲಿ ನಗು ಅರಳುತ್ತಿದೆ' ಎನ್ನುತ್ತಾರೆ ಸಂಸ್ಥೆಯ ಅಧ್ಯಕ್ಷೆ ಸ್ತ್ರೀರೋಗ ತಜ್ಞೆ ಡಾ. ಪ್ರಿಯಾಂಕ ರವಿಕುಮಾರ್.

'ದೇಗುಲಗಳಿಗೆ ಹೋಗಿ ಮುಡಿ ಕೊಡುತ್ತೇವೆ. ಅದರ ಬದಲಿಗೆ ಇಂಥ ಉತ್ತಮ ಕೆಲಸ ಮಾಡುತ್ತಿರುವ ಸಂಸ್ಥೆಗೆ ಕೇಶ ದಾನ ಮಾಡಿದರೆ ಕ್ಯಾನ್ಸರ್‌ಪೀಡಿತರಿಗೆ ಅನುಕೂಲವಾಗುತ್ತದೆ' ಎಂದು ಕೇಶ ದಾನ ಮಾಡಿದ ಚಾಂದನಿ ನಗುಮೊಗದಿಂದಲೇ ಹೇಳುತ್ತಾರೆ.

ಫ್ಯಾಷನ್‌ಗಾಗಿ ಬಿಟ್ಟಿರುವ ತಲೆಕೂದಲನ್ನು ದಾನ ಮಾಡುವ ಮೂಲಕ ರೋಗಿಗಳ ಮುಖದಲ್ಲಿ ಹೂನಗೆಯನ್ನು ಅರಳಿಸಬಹುದು. ಕೇಶ ದಾನ ಮಾಡಲು ಬಯಸುವವರು ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಲೇಡಿಸ್ ಸರ್ಕಲ್ ಇಂಡಿಯಾ ಸಂಸ್ಥೆಯನ್ನು ಸಂಪರ್ಕಿಸಬಹುದು. ದಾನಿಗಳಿಗೆ ಪ್ರಮಾಣಪತ್ರ ನೀಡಲಾಗುತ್ತದೆ.



ಮೈಸೂರಿನ ವಿಜಯನಗರದ ಕುಸುಮವತ್ತಿ ಅವರು 15 ಇಂಚು ಉದ್ದದ ಕೇಶವನ್ನು ಸ್ತ್ರೀರೋಗ ತಜ್ಞೆ ಡಾ, ಪ್ರಿಯಾಂಕ ರವಿಕುಮಾರ್ ಅವರಿಗೆ ಕೊಡುತ್ತಿದ್ದಾರೆ.



ಇಪ್ಪತ್ತಾರು ಇಂಚಿನಷ್ಟು ಉದ್ದವಿರುವ ತನ್ನ ಕೂದಲನ್ನು ದಾನ ಮಾಡಿದ ಎಂಜಿನಿಯರಿಂಗ್ ವಿದ್ಯಾರ್ಥಿನಿ ಚರಿತಾ.

ಚಿತ್ರಗಳು ಲೇಖಕರವು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಪ್ರೀತಿಯಿಲ್ಲದ ಜೀವನ ಹೂ-ಹಣ್ಣುಗಳಿಲ್ಲದ ಮರದಂತೆ.
-ಖಲೀಲ್ ಗಿಬ್ರಾನ್

5ಜಿ ತರಂಗಾಂತರ ಹರಾಜು ಟೆಲಿಕಾಂ ವಲಯದ ದಾಪುಗಾಲು

ವಾರದ ಆರಂಭದಲ್ಲಿ ಕೊನೆಗೊಂಡ ಐದನೆಯ ತಲೆಮಾರಿನ (5ಜಿ) ತರಂಗಾಂತರಗಳ ಹರಾಜು ಪ್ರಕ್ರಿಯೆಯು ದೇಶದ ದೂರಸಂಪರ್ಕ ಹಾಗೂ ಇಂಟರ್ನೆಟ್ ಸೇವೆಗಳನ್ನು ಮೇಲ್ದರ್ಜೆಗೆ ಏರಿಸುವ ದೃಷ್ಟಿಯಿಂದ ಬಹಳ ದೊಡ್ಡ ಹೆಜ್ಜೆ. ಇದು ಭಾರತದಲ್ಲಿನ ದೂರಸಂಪರ್ಕ ಸೇವೆಗಳನ್ನು ಅಮೆರಿಕ, ದಕ್ಷಿಣ ಕೊರಿಯಾ, ಚೀನಾದಂತಹ ದೇಶಗಳಲ್ಲಿನ ದೂರಸಂಪರ್ಕ ಸೇವೆಗಳಿಗೆ ಸರಿಸಾಟಿಯಾಗಿ ನಿಲ್ಲಿಸುವ ಅವಕಾಶವನ್ನು ತೆರೆದಿತ್ತಿದೆ. ದೇಶದಲ್ಲಿ 5ಜಿ ಸೇವೆಗಳು ಆರಂಭವಾದ ನಂತರದಲ್ಲಿ ಗ್ರಾಹಕರಿಗೆ ಇದುವರೆಗೆ ಸಿಗುತ್ತಿದ್ದ ವೇಗಕ್ಕಿಂತ ಹತ್ತು ಪಟ್ಟು ಹೆಚ್ಚಿನ ವೇಗದ ಇಂಟರ್ನೆಟ್ ಸಂಪರ್ಕ ಲಭ್ಯವಾಗುವ ನಿರೀಕ್ಷೆ ಇದೆ. ದೇಶದ ಕೈಗಾರಿಕೆಗಳು 'ನಾಲ್ಕನೆಯ ಕೈಗಾರಿಕಾ ಕ್ರಾಂತಿ'ಯ ಕಡೆಗೆ ದಾಪುಗಾಲು ಇಡಲು ಸಾಧ್ಯವಾಗಬಹುದು ಎಂಬ ಮಾತುಗಳು ಇವೆ. ಇಂಟರ್ನೆಟ್ ಆಫ್ ಥಿಂಗ್ಸ್ ಸಾಕಾರಗೊಳ್ಳುವ ಭರವಸೆ ಇದೆ. ಇವೆಲ್ಲವೂ ನಮ್ಮ ಸಮಾಜಕ್ಕೆ ಹಾಗೂ ಅರ್ಥ ವ್ಯವಸ್ಥೆಗೆ ಹೆಚ್ಚಿನ ಲಾಭ ತಂದುಕೊಡಲಿವೆ ಎಂಬುದರಲ್ಲಿ ಅನುಮಾನ ಇಲ್ಲ. ಈ ಬಾರಿಯ ಹರಾಜಿನಲ್ಲಿ ಪಾಲ್ಗೊಂಡಿದ್ದ ಎಲ್ಲ ಕಂಪನಿಗಳಿಗೂ 5ಜಿ ತರಂಗಾಂತರ ಹಂಚಿಕೆ ಆಗಲಿದೆ. ಕೇಂದ್ರ ಸರ್ಕಾರಕ್ಕೆ ಹರಾಜು ಪ್ರಕ್ರಿಯೆ ಮೂಲಕ ₹1.5 ಲಕ್ಷ ಕೋಟಿ ವರಮಾನ ದೊರೆತಿದೆ. ಇಷ್ಟು ಮೊತ್ತವು ಕೇಂದ್ರಕ್ಕೆ ತಕ್ಷಣಕ್ಕೆ ಲಭ್ಯವಾಗುವುದಿಲ್ಲ; 20 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಸಿಗಲಿದೆ. ಹರಾಜಿನ ಸಂದರ್ಭದಲ್ಲಿ ನಿಗದಿ ಮಾಡಿದ್ದ ಮೀಸಲು ಬೆಲೆಗೆ ಹೋಲಿಸಿದರೆ ಶೇಕಡ 35ರಷ್ಟು ಮೊತ್ತ ಮಾತ್ರ ಕೇಂದ್ರಕ್ಕೆ ದೊರೆತಿದೆ. ಹೀಗಿದ್ದರೂ, ಇದು ಕೇಂದ್ರ ನಿರೀಕ್ಷೆ ಮಾಡಿದ್ದ ಮೊತ್ತಕ್ಕಿಂತ ಜಾಸ್ತಿ.



ದೇಶದಲ್ಲಿ 5ಜಿ ಸೇವೆಗಳು ಆರಂಭವಾದ ನಂತರದಲ್ಲಿ ಗ್ರಾಹಕರಿಗೆ ಇದುವರೆಗೆ ಸಿಗುತ್ತಿದ್ದ ವೇಗಕ್ಕಿಂತ ಹತ್ತು ಪಟ್ಟು ಹೆಚ್ಚಿನ ವೇಗದ ಇಂಟರ್ನೆಟ್ ಸಂಪರ್ಕ ಲಭ್ಯವಾಗುವ ನಿರೀಕ್ಷೆ ಇದೆ

ಹರಾಜು ಪ್ರಕ್ರಿಯೆ ಸಾಧ್ಯವಾಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಮೊದಲು ತಾಳಿದ್ದ ಕೆಲವು ನಿಲುವುಗಳನ್ನು ಸಡಿಲಗೊಳಿಸಿತು. ತರಂಗಾಂತರ ಸ್ವಾಧೀನ ವೆಚ್ಚವನ್ನು ತಗ್ಗಿಸಿತು, ತರಂಗಾಂತರಗಳಿಗೆ ಕೊಡಬೇಕಿರುವ ಹಣವನ್ನು ಕಂತುಗಳ ರೂಪದಲ್ಲಿ ಪಾವತಿ ಮಾಡಲು ಒಪ್ಪಿಗೆ ನೀಡಿತು, ಬ್ಯಾಂಕ್ ಖಾತರಿ ಬೇಕು ಎಂಬ ಬೇಡಿಕೆಯನ್ನು ಕೈಬಿಟ್ಟಿತು. ಅಲ್ಲದೆ, ತರಂಗಾಂತರ ಬಳಕೆ ಶುಲ್ಕವನ್ನು ಮನ್ನಾ ಮಾಡಿತು. ಹರಾಜಿನ ಮೂಲಕ ಕೇಂದ್ರವು ಒಟ್ಟು 51,236 ಮೆಗಾ ಹರ್ಟ್ಸ್ ತರಂಗಾಂತರಗಳನ್ನುಒಟ್ಟು ನಾಲ್ಕು ಕಂಪನಿಗಳಿಗೆ (ರಿಲಯನ್ಸ್ ಜಿಯೊ, ಭಾರ್ತಿ ಏರ್‌ಟೆಲ್, ವೊಡಾಫೋನ್ ಐಡಿಯಾ, ಅದಾನಿ ಡೇಟಾ ನೆಟ್‌ವರ್ಕ್ಸ್) ಮಾರಾಟ ಮಾಡಿದೆ. ತಮ್ಮ ವಾಣಿಜ್ಯ ವಹಿವಾಟಿಗೆ ಅತಿಹೆಚ್ಚು ಸೂಕ್ತವಾದ ತರಂಗಾಂತರಗಳನ್ನು ಕಂಪನಿಗಳು ಖರೀದಿ ಮಾಡಿವೆ. ಯಾವುದೇ ಕಂಪನಿ ಅತಿಯಾಗಿ ಬಿಡ್ ಮಾಡಿಲ್ಲ ಎಂಬ ವರದಿಗಳಿವೆ. ಮೌಲ್ಯದ ಲೆಕ್ಕದಲ್ಲಿ ಸರಿಸುಮಾರು ಶೇಕಡ 60ರಷ್ಟು ತರಂಗಾಂತರಗಳನ್ನು ರಿಲಯನ್ಸ್ ಜಿಯೊ ತನ್ನದಾಗಿಸಿಕೊಂಡಿದೆ. ಹೆಚ್ಚಿನ ಬೆಲೆಯ 700 ಮೆಗಾ ಹರ್ಟ್ಸ್ ತರಂಗಾಂತರವನ್ನು ಖರೀದಿ ಮಾಡಿರುವುದು ಜಿಯೊ ಮಾತ್ರ. ಜಿಯೊ ಖರೀದಿ ಮಾಡಿರುವ ತರಂಗಾಂತರಗಳ ಪ್ರಮಾಣಕ್ಕೆ ಹೋಲಿಸಿದರೆ ಏರ್‌ಟೆಲ್ ಕಂಪನಿ ಸರಿಸುಮಾರು ಶೇ 80ರಷ್ಟು ತರಂಗಾಂತರ ಖರೀದಿಸಿದೆ.

ಜಿಯೊ ಜೊತೆ ಹೋಲಿಸಿದರೆ ವೊಡಾಫೋನ್ ಐಡಿಯಾ ಖರೀದಿ ಮಾಡಿದ ತರಂಗಾಂತರಗಳ ಸಂಖ್ಯೆಯು ನಾಲ್ಕನೆಯ ಒಂದರಷ್ಟಕ್ಕೆ ಸಮ. ಅದಾನಿ ಸಮೂಹವು ಬಹಳ ಕಡಿಮೆ ಪ್ರಮಾಣದಲ್ಲಿ ತರಂಗಾಂತರ ಖರೀದಿಸಿದೆ. ಅದು ಖಾಸಗಿ ನೆಟ್‌ವರ್ಕ್ ಸ್ಥಾಪಿಸುವ ಇರಾದೆ ಹೊಂದಿರುವುದಾಗಿ ಹೇಳಿದೆ. 5ಜಿ ತರಂಗಾಂತರಗಳ ಹರಾಜು ಪ್ರಕ್ರಿಯೆಗೆ ಮಹತ್ವ ಇದೆ. ಏಕೆಂದರೆ, ಇದು ಮೊಬೈಲ್ ಬ್ರಾಡ್‌ಬ್ಯಾಂಡ್ ಸೇವೆಗಳನ್ನು ಉತ್ತಮಪಡಿಸುತ್ತದೆ. ಶಿಕ್ಷಣ, ಮನರಂಜನೆ, ಟೆಲಿ ಆರೋಗ್ಯ ಸೇರಿದಂತೆ ಹತ್ತು ಹಲವು ಕ್ಷೇತ್ರಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ. 5ಜಿ ಸೇವೆಗಳು ಈಗಾಗಲೇ ಲಭ್ಯವಿರುವ ದೇಶಗಳಲ್ಲಿ ಈ ಸೇವೆಗೆ ಭಾರಿ ಶುಲ್ಕ ನಿಗದಿ ಮಾಡಿಲ್ಲ. ಹೀಗಾಗಿ, ಈ ಸೇವೆಗಳನ್ನು ಆರಂಭಿಸಿದ ನಂತರದಲ್ಲಿ ದೂರಸಂಪರ್ಕ ವಲಯದ ಕಂಪನಿಗಳ ಆದಾಯವು ದೊಡ್ಡ ಪ್ರಮಾಣದಲ್ಲಿ ಜಾಸ್ತಿ ಆಗುವ ಸಾಧ್ಯತೆ ಇಲ್ಲ. ಕನಿಷ್ಠ ಪಕ್ಷ ಆರಂಭಿಕ ವರ್ಷಗಳಲ್ಲಿಯಂತೂ ದೊಡ್ಡ ಮಟ್ಟದ ಆದಾಯ ಸಿಗಲಿಕ್ಕಿಲ್ಲ. ಆದರೆ, ಕಂಪನಿಗಳು ಸೇವಾ ಶುಲ್ಕ ಹೆಚ್ಚಿಸುವ ಸಾಧ್ಯತೆ ಖಂಡಿತ ಇದೆ. ದೇಶದ ದೂರಸಂಪರ್ಕ ವಲಯದ ಕಂಪನಿಗಳ ಪೈಕಿ ಎಲ್ಲ ಕಂಪನಿಗಳ ಶಕ್ತಿ ಒಂದೇ ಬಗೆಯಲ್ಲಿ ಇಲ್ಲ. ಈ ವಲಯದಲ್ಲಿನ ಸ್ಪರ್ಧೆ ಕೂಡ ಆರೋಗ್ಯಕರವಾಗಿ ಇರಲಿಲ್ಲ. ಆರೋಗ್ಯಕರ ಅಲ್ಲದ ಸ್ಪರ್ಧೆಯು ಗ್ರಾಹಕರಿಗೂ, ಕಂಪನಿಗಳಿಗೂ ಒಳ್ಳೆಯದು ಮಾಡುವುದಿಲ್ಲ. ಗ್ರಾಹಕರ ಹಿತಾಸಕ್ತಿಗಳಿಗೆ ಧಕ್ಕೆಯಾಗುವ ರೀತಿಯ ಯಾವುದೇ ಬೆಳವಣಿಗೆ ದೂರಸಂಪರ್ಕ ವಲಯದಲ್ಲಿ ಕಂಡುಬಾರದಂತೆ ಎಚ್ಚರಿಕೆ ವಹಿಸಬೇಕಿದೆ.

ದಿನದ ಟ್ವೀಟ್


ವಿರೋಧಾಭಾಸದ ನಡೆ



ಹಣದುಬ್ಬರವನ್ನು ನಿಯಂತ್ರಿಸುವ ಬದಲು ಸರ್ಕಾರವು, ಹಣದುಬ್ಬರ ಹೆಚ್ಚಳ ವಿರೋಧಿಸಿ ನಡೆಯುವ ಪ್ರತಿಭಟನೆಗಳನ್ನು ನಿಯಂತ್ರಿಸುವ ಸುಲಭದ ಮಾರ್ಗ ಅನುಸರಿಸುವುದು ಬೇಸರದ ಸಂಗತಿ.

ಕೌಶಿಕ್ ಬಸು, ವಿಶ್ವ ಬ್ಯಾಂಕ್‌ನ ಮಾಜಿ ಮುಖ್ಯ ಅರ್ಥಶಾಸ್ತ್ರಜ್ಞ

ಕಿಡಿನುಡಿ



ನನ್ನನ್ನು ಕೆಲವರು ಭಗೀರಥ, ಮಹಾನ್ ನಾಯಕ ಎನ್ನುತ್ತಾರೆ. ಇನ್ನು ಕೆಲವರು ನರಿ, ಶಕುನಿ, ದುರ್ಯೋಧನ ಎನ್ನುತ್ತಾರೆ. ನೀವು ಮಾಧ್ಯಮದವರು ಏನಾದರೂ ಹೊಸ ಹೆಸರು ಇದ್ದರೆ ಕೊಡಿ.

ಕೆ.ಆರ್. ರಮೇಶ್ ಕುಮಾರ್, ಕಾಂಗ್ರೆಸ್ ಶಾಸಕ

25 ವರ್ಷಗಳ ಹಿಂದೆ

ಬುಧವಾರ, 6-8-1997

• **ಗುಟ್ಕಾ ನಿಷೇಧಕ್ಕೆ ಶಾಸಕರ ವಿರೋಧ**

ಬೆಂಗಳೂರು, ಆ. 5– ಅಡಿಕೆಯನ್ನು ಉಪಯೋಗಿಸಿ ಉತ್ಪಾದಿಸುವ ಗುಟ್ಕಾದಂತಹ ಯಾವುದೇ ವಸ್ತುವಿಗೆ ನಿಷೇಧ ಅಥವಾ ನಿರ್ಬಂಧ ಹೇರುವ ಆಲೋಚನೆಯನ್ನು ಕೈಬಿಡಬೇಕು ಎಂದು ರಾಜ್ಯದ ಅಡಿಕೆ ಬೆಳೆಯುವ ಪ್ರದೇಶಗಳ ಶಾಸಕರು ಹಾಗೂ ಪ್ರಮುಖ ಅಡಿಕೆ ಬೆಳೆಗಾರರ ಸಭೆ ಇಂದು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳನ್ನು ಒತ್ತಾಯಿಸಿದೆ.

ಗುಟ್ಕಾ ಸೇವನೆಯಿಂದ ಆರೋಗ್ಯಕ್ಕೆ ಹಾನಿಯಿದೆ ಎಂಬ ನೆಪದಲ್ಲಿ ಈ ಉತ್ಪನ್ನವನ್ನು ನಿಷೇಧಿಸುವ ವದಂತಿಯಿದ್ದು ಇದು ಈಚೆಗಿನ ತಿಂಗಳುಗಳಲ್ಲಿ ಅಡಿಕೆಯ ಬೆಲೆ ಸುಮಾರು ಶೇಕಡಾ 50ರಷ್ಟು ಕುಸಿಯಲು ಕಾರಣವಾಗಿದೆ ಎಂದು ಶಾಸಕರ ಸಭೆ ಅಂಗೀಕರಿಸಿದ ನಿರ್ಣಯದಲ್ಲಿ ಹೇಳಲಾಗಿದೆ.

ಗುಟ್ಕಾದಲ್ಲಿ ಯಾವುದೇ ಹಾನಿಕಾರಕ ವಸ್ತುಗಳನ್ನು ಸೇರಿಸದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕೇ ಹೊರತು ಶೇಕಡಾ 80 ಭಾಗದಷ್ಟು ಅಡಿಕೆಯನ್ನು ಬಳಸುವ ಗುಟ್ಕಾವನ್ನು ಸಂಪೂರ್ಣವಾಗಿ ನಿಷೇಧಿಸುವುದರಿಂದ ದೇಶದ ಸುಮಾರು 10 ಲಕ್ಷ ಅಡಿಕೆ ಬೆಳಗಾರ ಕುಟುಂಬಗಳಿಗೆ ಜೀವನದ ಆಧಾರವೇ ಇಲ್ಲದಂತಾಗುವುದು ಎಂದು ತಿಳಿಸಿವೆ.

• **ಯೂರಿಯಾ ಹಗರಣ: ಪಿವಿಎನ್ ಪುತ್ರನ ಬಂಧನ ಸಂಭವ**

ನವದೆಹಲಿ, ಆ. 5 (ಯುಎನ್‌ಐ): ರಸಗೊಬ್ಬರ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರ ಪುತ್ರ ಪ್ರಭಾಕರ್ ರಾವ್ ಅವರಿಗೆ ಆಂಧ್ರ ಪ್ರದೇಶ ಹೈಕೋರ್ಟ್ ನೀಡಿದ ನಿರೀಕ್ಷಣಾ ಜಾಮೀನನ್ನು ಸುಪ್ರೀಂ ಕೋರ್ಟ್ ಇಂದು ರದ್ದು ಮಾಡಿದೆ.

ವಿದೇಶಿ ವಿನಿಮಯ ಕಾಯ್ದೆ ಉಲ್ಲಂಘನೆಗೆ ಸಂಬಂಧಿಸಿದಂತೆ ಪ್ರಭಾಕರ್ ಅವರನ್ನು ಬಂಧಿಸುವುದಕ್ಕೆ ನ್ಯಾಯಾಲಯವು ಜಾರಿ ನಿರ್ದೇಶನಾಲಯಕ್ಕೆ ಪೂರ್ಣ ಸ್ವಾತಂತ್ರ್ಯ ನೀಡಿದೆ.

50 ವರ್ಷಗಳ ಹಿಂದೆ

ಭಾನುವಾರ, 6-8-1972

• **10 ಎಕರೆ ಮಿತಿ: ₹12,000 ಅನ್ಯ ವರಮಾನವಿದ್ದರೆ ಭೂ ಒಡೆತನ ನಿಷೇಧ**

ಬೆಂಗಳೂರು, ಆ. 5– ಗಂಡ, ಹೆಂಡತಿ ಮತ್ತು ಮೂವರು ಅಪ್ರಾಯಸ್ಥ ಮಕ್ಕಳಿರುವ ಕುಟುಂಬಕ್ಕೆ ವರ್ಷಕ್ಕೆ ಎರಡು ಭತ್ತದ ಬೆಳೆ ಬರುವ 10 ಎಕರೆ ಜಮೀನಿನ ಗರಿಷ್ಠ ಮಿತಿ ವಿಧಿಸುವ ಅವಕಾಶ ಕೇಳಿ ಕಂದಾಯ ಮಂತ್ರಿ ಹುಚ್ಚಮಾಸ್ತಿ ಗೌಡ ಅವರು ಇಂದು ವಿಧಾನ ಸಭೆಯಲ್ಲಿ ಭೂ ಸುಧಾರಣಾ ತಿದ್ದುಪಡಿ ವಿಧೇಯಕ ಮಂಡಿಸಿದರು.

ಅಧಿವೇಶನದ ಕೊನೇದಿನ ಬಂದ, ಭೂ ಸುಧಾರಣಾ ಶಾಸನಕ್ಕೆ ಸಮಗ್ರ ಬದಲಾವಣೆಗಳನ್ನು ಸೂಚಿಸಿರುವ ಈ ವಿಧೇಯಕವು ಬೇರೆ ಮೂಲಗಳಿಂದ ವರ್ಷಕ್ಕೆ ಹನ್ನೆರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಆದಾಯ ಪಡೆಯುವವರು ಜಮೀನು ಹೊಂದಿರುವುದನ್ನು ನಿಷೇಧಿಸಲು ಉದ್ದೇಶಿಸಿದೆ.

• **ಮುಂದಿನ ವರ್ಷದೊಳಗೆ ಕನ್ನಡವು ವಿಧಾನಸೌಧದ ಎತ್ತರದ ಮೆಟ್ಟಿಲನ್ನೂ ಏರಲಿ: ಎಚ್ಚೆಸ್ಕೆ**

ಮೈಸೂರು, ಆ.5– 'ಮುಂದಿನ ವರ್ಷದ ಆಗಸ್ಟ್ 15ರ ಒಳಗೆ ಕನ್ನಡ ಭಾಷೆ ವಿಧಾನ ಸೌಧದ ಎತ್ತರದ ಮೆಟ್ಟಿಲುಗಳನ್ನು ಏರುವ ಹಾಗಾಗಲಿ. ಟಿಪ್ಪಣಿಗಾರರ ತಂಪುಕೋಣೆಗಳಲ್ಲೂ ಸುತ್ತಾಡಲಿ. ಬೆರಳಚ್ಚಿನ ಯಂತ್ರಗಳಿಂದ ಕನ್ನಡ ಸುಸ್ವರ ಕೇಳಿಬರಲಿ. ನ್ಯಾಯಾಲಯ, ವಿಶ್ವವಿದ್ಯಾನಿಲಯಗಳಲ್ಲೂ ಇದರದೇ ಸಂಭ್ರಮ ಮೆರೆಯಲಿ' ಎಂದು ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಅವರು ಅಪೇಕ್ಷಿಸಿದರು.

ಕೊಳ್ಳೇಗಾಲದ ಶ್ರೀಮತಿ ವಸಂತ ಕುಮಾರಿ ಪ್ರೌಢಶಾಲೆಯ ಆವರಣದಲ್ಲಿ ನಿರ್ಮಿತವಾಗಿರುವ 'ನಿಜಗುಣ ಮಂಟಪ'ದಲ್ಲಿ ಪ್ರಾರಂಭವಾದ ಮೈಸೂರು ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಅವರು ಅಧ್ಯಕ್ಷ ಭಾಷಣ ಮಾಡಿದರು.

ತಂತ್ರಜ್ಞಾನದಿಂದಾಗಿ ಹುಟ್ಟಿರುವ ಸಮಸ್ಯೆಗೆ ತಂತ್ರಜ್ಞಾನವೇ ಪರಿಹಾರ ರೂಪಿಸಬಹುದು

ಸಾಮಾಜಿಕ ಜಾಲತಾಣ ಮತ್ತು ಪ್ರಜಾಪ್ರಭುತ್ವ



ವಿಶ್ಲೇಷಣೆ

ವಸಂತ ಶೆಟ್ಟಿ

ಸ್ಮಾರ್ಟ್‌ಫೋನ್‌ಗಳು ಎಲ್ಲರ ಕೈಯಲ್ಲಿ ಬಂದು ಕುಳಿತು ದಶಕ ಸಂದಿದೆ. ಸಾಮಾಜಿಕ ಜಾಲತಾಣಗಳ ಬಳಕೆ ವರ್ಷವರ್ಷಕ್ಕೂ ಹೆಚ್ಚುತ್ತಿದೆ. ಇವು, ಅದರಲ್ಲೂ ಮುಖ್ಯವಾಗಿ ಸಾಮಾಜಿಕ ಜಾಲತಾಣಗಳು, ತಮ್ಮನ್ನು ಬಳಕೆ ಮಾಡುವವರ ಮಾನಸಿಕ ಮತ್ತು ಕೌಟುಂಬಿಕ ಆರೋಗ್ಯ ಹಾಳುಮಾಡುತ್ತಿವೆ, ಹಲವು ದೇಶಗಳ ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡುವ ಮಟ್ಟಕ್ಕೆ ಬೆಳೆದಿವೆ. ಇದನ್ನು ಎಲ್ಲರೂ ಆತಂಕದಿಂದ ಗಮನಿಸುತ್ತಿದ್ದಾರೆ. ಜಾಗತಿಕವಾಗಿ ಸಾಮಾಜಿಕ ಜಾಲತಾಣಗಳ ಬಳಕೆ ತುತ್ತತುದಿಯನ್ನು ಈಗಾಗಲೇ ಮುಟ್ಟಿರಬಹುದು ಅನ್ನುವ ವರದಿಯೊಂದನ್ನು ಮಾರುಕಟ್ಟೆ ಮತ್ತು ಗ್ರಾಹಕರ ಅಂಕಿಅಂಶಗಳ ಸುತ್ತ ಕೆಲಸ ಮಾಡುವ 'ಸ್ಟ್ಯಾಟಿಸ್ಟಾ' ಸಂಸ್ಥೆ ಈ ಹೊತ್ತಲ್ಲಿ ಹೊರತಂದಿದೆ.

ಸ್ಟ್ಯಾಟಿಸ್ಟಾ ಡಿಜಿಟಲ್ ಎಕಾನಮಿ ಕಂಪಾಸ್ 2021 ಅನ್ನುವ ವರದಿಯ ಪ್ರಕಾರ 2012ರಲ್ಲಿ ಜಾಗತಿಕವಾಗಿ ಸಾಮಾಜಿಕ ಜಾಲತಾಣಗಳನ್ನು ಜನರು ದಿನವೊಂದಕ್ಕೆ ಸರಾಸರಿ 90 ನಿಮಿಷ ಬಳಸುತ್ತಿದ್ದರು. ಇದು ವರ್ಷವೂ ಏರುತ್ತ ಬಂದು 2020ರ ಹೊತ್ತಿಗೆ ದಿನವೊಂದಕ್ಕೆ 145 ನಿಮಿಷಗಳ ಮಟ್ಟಕ್ಕೆ ಬೆಳೆದು ತುದಿ ಮುಟ್ಟಿ, 2021ರ ಹೊತ್ತಿಗೆ 142 ನಿಮಿಷಗಳಿಗೆ ಕುಸಿದಿದ್ದು ಸಾಮಾಜಿಕ ಜಾಲತಾಣಗಳ ಏರುಹಾದಿಯ ಪಯಣ ಮುಗಿದಿರಬಹುದು ಅನ್ನುವ ಅನಿಸಿಕೆಯನ್ನು ವರದಿ ವ್ಯಕ್ತಪಡಿಸಿದೆ. ಮುಂದುವರಿದ ದೇಶಗಳಲ್ಲಿ ಇದು ನಿಜವಾಗುತ್ತಿರಬಹುದಾದರೂ ಏಳಿಗೆ ಹೊಂದುತ್ತಿರುವ ದೇಶಗಳಲ್ಲಿ ಈಗಷ್ಟೇ ಇಂಟರ್ನೆಟ್ ಮತ್ತು ಸಾಮಾಜಿಕ ಜಾಲತಾಣಗಳಿಗೆ ತೆರೆದುಕೊಳ್ಳುತ್ತಿರುವ ಹೊಸಬರ ಸಂಖ್ಯೆ ದೊಡ್ಡದಿರುವುದರಿಂದ ಈ ಬದಲಾವಣೆಯು ಭಾರತದಂತಹ ದೇಶದಲ್ಲಿ ಕಾಣಿಸಲು ಇನ್ನಷ್ಟು ಸಮಯ ಬೇಕಾಗಬಹುದು. ಸಾಮಾಜಿಕ ಜಾಲತಾಣಗಳ ಒಳಿತು-ಕೆಡುಕುಗಳ ಬಗ್ಗೆ ವಿಮರ್ಶೆ ಮಾಡಲು ಇದು ಸಕಾಲ.

ಸಂಪರ್ಕದ ಸಾಧ್ಯತೆಗಳು ಇತಿಹಾಸದ ಉದ್ದಕ್ಕೂ ಪ್ರಪಂಚದ ಹಲವು ನಾಗರಿಕತೆಗಳನ್ನು ರೂಪಿಸಿದಂತಹವು. ಅಷ್ಟೇ ಅಲ್ಲ, 18-19ನೇ ಶತಮಾನದ ಹೊತ್ತಿಗೆ ಸಂಪರ್ಕದ ಸಾಧ್ಯತೆಗಳನ್ನು ತಂತ್ರಜ್ಞಾನದ ಮೂಲಕ ಸಮರ್ಥವಾಗಿ ಕೈವಶ ಮಾಡಿಕೊಂಡ ನಾಡುಗಳು ಇತರ ಹಲವು ನಾಡುಗಳನ್ನು ತಮ್ಮ ಸಾಮ್ರಾಜ್ಯಶಾಹಿಯಡಿ ತಂದು ಶೋಷಿಸುವುದಕ್ಕೂ ಅನುಕೂಲ ಮಾಡಿಕೊಟ್ಟದ್ದವು. 20ನೇ ಶತಮಾನದಲ್ಲಿ ಎರಡು ವಿಶ್ವಯುದ್ಧಗಳ ನಂತರ ಪ್ರಪಂಚದ ಉದ್ದಗಲಕ್ಕೂ ಹುಟ್ಟಿದ ಹತ್ತಾರು ದೇಶಗಳು, ಹತ್ತಾರು ರಾಷ್ಟ್ರೀಯತೆಗಳನ್ನು ಕಟ್ಟುವಲ್ಲೂ ಆ ಹೊತ್ತಿನ ಸಂಪರ್ಕ ಸಾಧ್ಯತೆಗಳು ದೊಡ್ಡ ಕೊಡುಗೆ ಕೊಟ್ಟಿವೆ. 1990ರ ನಂತರ ಟಿ.ವಿ. ಮಾಧ್ಯಮದ ಬೆಳವಣಿಗೆಯೊಂದಿಗೆ ಕಿವಿ, ಕಣ್ಣುಗಳೆರಡನ್ನೂ ಆವರಿಸಿಕೊಳ್ಳುವ ಹೊಸ ಮಾಧ್ಯಮವೂ ಬೆಳೆಯಿತು. ಆದರೆ ಇದೆಲ್ಲ ಆಗುವಾಗಲೂ ಅವು ಅತ್ಯಂತ ನಿಯಂತ್ರಿತವಾದ ರೀತಿಯಲ್ಲೇ ಕೆಲಸ ಮಾಡುತ್ತಿದ್ದವು. ದ್ವಾರಪಾಲಕರು ಅನ್ನಿಸಿಕೊಂಡವರು ಜನರಿಗೆ ಏನನ್ನು, ಎಷ್ಟರಮಟ್ಟಿಗೆ ಕೊಡಬೇಕು ಎಂದು ನಿರ್ಧರಿಸುತ್ತಿದ್ದರೋ ಅಷ್ಟೇ ಪ್ರಮಾಣದಲ್ಲಿ ಮಾಹಿತಿ, ಸುದ್ದಿ, ಅಭಿಪ್ರಾಯ ಸಂಕಥನ ಜನರಿಗೆ ತಲುಪುತ್ತಿದ್ದವು. ಇದನ್ನು ದೊಡ್ಡ ಮಟ್ಟದಲ್ಲಿ ತಲೆಕೆಳಗಾಗಿಸಿದ್ದು ಕಳೆದ 15-20 ವರ್ಷಗಳಲ್ಲಿ ಹುಟ್ಟಿ, ಹರಡಿಕೊಂಡ ಸಾಮಾಜಿಕ ಜಾಲತಾಣಗಳು. ಹಿಂದಿನ ಯಾವುದೇ ಸಂಪರ್ಕದ ಕ್ರಾಂತಿಗಿಂತಲೂ ಬೇರಾದ ಬಗೆ ಇದಾಗಿತ್ತು. ಕ್ಷಣ ಮಾತ್ರದಲ್ಲೇ ಯಾರನ್ನು ಬೇಕಿದ್ದರೂ ತಲುಪುವ ಅವಕಾಶ, ಎಲ್ಲರೂ ತೊಡಗಿಕೊಳ್ಳುವ ಆಯ್ಕೆ, ಹೀಗೆ ಸಂಪರ್ಕದ ಸಾಧ್ಯತೆಗಳ ಮೇಲಿದ್ದ ಎಲ್ಲ ನಿಯಂತ್ರಣಗಳನ್ನು ಕಿತ್ತೆಸೆದು ಬಂದ ಈ ಜಾಲತಾಣಗಳು ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವದ ಆಶಯಗಳನ್ನು ಪ್ರಪಂಚದೆಲ್ಲೆಡೆ ಎತ್ತಿ ಹಿಡಿಯುವ ಸಾಧನಗಳು ಎಂಬಂತೆಯೇ ಗೋಚರಿಸಿದ್ದವು. ಹಲವು ದೇಶಗಳಲ್ಲಿ ಅತ್ಯಂತ ಸಾಮಾನ್ಯ ಜನರನ್ನು ಜೋಡಿಸಿ ಸರ್ವಾಧಿಕಾರಿಗಳನ್ನು ಕೆಳಗಿಳಿಸುವ ಬದಲಾವಣೆಗೂ ವೇದಿಕೆಯನ್ನು ಈ ತಾಣಗಳು ಒದಗಿಸಿದ್ದನ್ನು ಇಲ್ಲಿ ನೆನೆಯಬಹುದು. ಇನ್ನು ಕೆಲವು ದೇಶಗಳಲ್ಲಿ ಈ ತಾಣಗಳನ್ನು ಸರಿಯಾಗಿ ಬಳಸಿಕೊಳ್ಳುವ ಚಾಕಚಕ್ಯತೆ ತೋರಿದ ರಾಜಕೀಯ ಪಕ್ಷಗಳನ್ನು ಅಧಿಕಾರದ ದಂಡೆಗೆ ತಲುಪಿಸುವಲ್ಲಿಯೂ ಇವು ನೆರವಾದವು. ಇವುಗಳಿಗಿರುವ ಇಂತಹದೊಂದು ಅಮಿತ ಬಲದ ಕಾರಣಕ್ಕಾಗಿಯೇ ಪ್ರಪಂಚದ ಹಲವೆಡೆ ಅವುಗಳ ಬಲದಿಂದಲೇ ಅಧಿಕಾರಕ್ಕೆ ಬಂದ ಪಕ್ಷಗಳು ಅವುಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಇನ್ನಿಲ್ಲದ ಕಸರತ್ತು ಮಾಡಿದ್ದನ್ನು- ಮಾಡುತ್ತಿರುವುದನ್ನು ಕಾಣಬಹುದು. ಇದು ಅದರ ಒಂದು ಮುಖ.

ಸಾಮಾಜಿಕ ಜಾಲತಾಣಗಳ ಇನ್ನೊಂದು ಮುಖವೆಂದರೆ ಇವುಗಳಲ್ಲಿ ಅತ್ಯಂತ ಜನಪ್ರಿಯವಾದ ತಾಣಗಳು ಒಂದೋ ಅಮೆರಿಕ ಇಲ್ಲವೇ ಚೀನಾ ಮೂಲದವು. ಕೋಟಿಕೋಟಿಗಟ್ಟಲೆ ಜನರ ಬದುಕಿನ ಒಳಗಣ- ಹೊರಗಣವೆಲ್ಲವನ್ನೂ ಬಗೆದು ಮಾಹಿತಿ ಕೂಡಿಡುವ ಇಂತಹ ತಾಣಗಳು ಸಹಜವಾಗಿಯೇ ಈ ದೇಶಗಳ ಪಾಲಿಗೆ ಅತ್ಯಂತ ನವಿರಾದ ಗೂಢಚಾರಿಕೆಯ ಸಾಧನಗಳು. ಈ ತಾಣಗಳನ್ನು ನಡೆಸುವ ಹಲವು ಸಂಸ್ಥೆಗಳು ಜಗತ್ತಿನ ಅತ್ಯಂತ ದೊಡ್ಡ ತಂತ್ರಜ್ಞಾನ ಕಂಪನಿಗಳೂ ಹೌದು. 'ನಿರಂತರ ಲಾಭ' ಅವುಗಳ ದಿಕ್ಕನ್ನು ನಿರ್ದೇಶಿಸುವ ಒಂದು ಮಾರುಕಟ್ಟೆ ಮೌಲ್ಯವಾದರೆ, ಜಾಗತಿಕ ರಾಜಕಾರಣದ ಮೇಲಿನ ತಮ್ಮ ಹಿಡಿತ ಹೆಚ್ಚಿಸಿಕೊಳ್ಳಲು ಇವು ಮೊಗೆದು ಕೊಡುವ ಮಾಹಿತಿ ಅಲ್ಲಿನ ಸರ್ಕಾರಗಳ ಪಾಲಿಗೆ ಒಂದು ರಾಜತಾಂತ್ರಿಕ ಮೌಲ್ಯವನ್ನು ಅನಾಯಾಸವಾಗಿ ತಂದುಕೊಟ್ಟಿವೆ.



ಈ ಎರಡೂ ಉದ್ದೇಶಗಳನ್ನು ನಿರಂತರವಾಗಿ ಈಡೇರಿಸುತ್ತಲೇ ಇರಬೇಕು ಅಂದರೆ ಈ ತಾಣಗಳ ಬಳಕೆದಾರರು ಇವುಗಳನ್ನು ನಿರಂತರವಾಗಿ ಬಳಸುತ್ತಲೇ ಇರುವಂತೆ ಮಾಡಬೇಕಾಗುತ್ತದೆ. ಹಾಗೆ ಬಳಸುವುದನ್ನು ಒಂದು ಚಟವಾಗಿಸುವ ರೀತಿಯಲ್ಲೇ ಇವುಗಳನ್ನು ವಿನ್ಯಾಸಗೊಳಿಸಲಾಗಿದೆ. ಸಾರಾಯಿ, ಡ್ರಗ್ಸ್ ತೆಗೆದುಕೊಳ್ಳುವ ಮನುಷ್ಯನ ಮೆದುಳಿನಲ್ಲಿ ಆತನಿಗೆ ಸಂತಸ, ಉತ್ಸಾಹದ ಅನುಭವ ಕೊಡುವುದು ಡೋಪಮೈನ್ ಅನ್ನುವ ನ್ಯೂರೊ ಕೆಮಿಕಲ್. ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿ ಬಾರಿ ನೋಟಿಫಿಕೇಷನ್ ಬಂದಾಗಲೂ ಬಳಸುವವನ ಮೆದುಳಲ್ಲಿ ಒಮ್ಮೆಲೆ ಹೆಚ್ಚುವ ಡೋಪಮೈನ್ ಮಟ್ಟ ಅವನಿಗೆ ಅರೆಗಳಿಗೆಯ ಹುರುಪು ಕೊಡುತ್ತದೆ. ಮೆದುಳು ಬೇಡಿಕೆ ಇಡುವ ಕಾರಣಕ್ಕಾಗಿಯೇ ಬಳಸುವವನು ಮತ್ತೆ ಮತ್ತೆ ಫೋನ್ ತೆರೆಯುತ್ತ ತನ್ನ ಕಣ್ಣು ಹಾಯಿಸುತ್ತಾನೆ. ನೋಟಿಫಿಕೇಷನ್ ಕಾಣದಿದ್ದಾಗ ಚಡಪಡಿಸುತ್ತಾನೆ.

ಪ್ರತಿಯೊಬ್ಬ ಬಳಕೆದಾರನ ವೈಯಕ್ತಿಕ ಇಷ್ಟಗಳನ್ನು ತಿಳಿದುಕೊಂಡಿರುವ ಸಾಮಾಜಿಕ ಜಾಲತಾಣಗಳು ತಮ್ಮ ಅಲ್ಗೋರಿದಂಗಳನ್ನು ಬಳಸಿ ಅತ್ಯಂತ ವ್ಯವಸ್ಥಿತವಾಗಿ ಬಳಕೆದಾರನಲ್ಲಿರುವ ಎಲ್ಲ ಪೂರ್ವಗ್ರಹಗಳನ್ನು ನಿರಂತರವಾಗಿ ಗಟ್ಟಿಗೊಳ್ಳಿಸುವಂತಹ ವಿಷಯಗಳನ್ನೇ ಆಯ್ದು, ಅವುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ತೋರಿಸುತ್ತ ಆತ ಎಂದೂ ಈ ತಾಣಗಳ ಆಚೆ ಬರದಂತೆ, ಸರಿ-ತಪ್ಪುಗಳ ಕುರಿತು ಸ್ವತಂತ್ರವಾಗಿ ಯೋಚಿಸದಂತೆ ಕಟ್ಟಿಹಾಕುತ್ತವೆ. ಒಂದು ಸತ್ಯದ ಬದಲಾಗಿ ಪ್ರತಿಯೊಬ್ಬರಿಗೂ ಅವರದ್ದೇ ಸತ್ಯ ಇರುವ ಇವತ್ತಿನ ಸತ್ಯೋತ್ತರ ಕಾಲ ಬಂದಿರುವುದೇ ಇವುಗಳ ಕೃಪೆಯಿಂದ ಅಂದರೆ ತಪ್ಪಾಗದು.

ಇಂತಹ ಏರ್ಪಾಡಿನಿಂದಾಗಿಯೇ ಎಡ-ಬಲ ಅನ್ನುವ ಕಂದರ ಆಳವಾಗಿ ಭಾರತದಲ್ಲಷ್ಟೇ ಅಲ್ಲ, ಪ್ರಪಂಚದ ಬಹುತೇಕ ಪ್ರಜಾಪ್ರಭುತ್ವಗಳಲ್ಲೂ ಮೂಡುತ್ತಿದೆ. ಪರಸ್ಪರ ವಿರುದ್ಧವಾದ ನಿಲುವು, ಅಭಿಪ್ರಾಯಗಳೆರಡೂ ಸೆಣಸಿ ಒಂದು ಸಮನ್ವಯ ಸಾಧಿಸಿಕೊಳ್ಳುವುದರಲ್ಲಿ ಪ್ರಜಾಪ್ರಭುತ್ವದ ಬುನಾದಿ ಇದೆ. ಆದರೆ ಇದಕ್ಕೆ ಬೇಕಾದ ಸ್ವತಂತ್ರವಾದ ಚಿಂತನೆಯನ್ನು ಸಾಮಾನ್ಯರಲ್ಲಿ ಹುಟ್ಟದಂತೆ ನೋಡಿಕೊಳ್ಳುವಲ್ಲಿ ಇಂದು ಸಾಮಾಜಿಕ ಜಾಲತಾಣಗಳ ಪಾತ್ರ ದೊಡ್ಡದಿದೆ. ಸಾರ್ವಜನಿಕ ನಿಲುವುಗಳನ್ನು ರೂಪಿಸುವಲ್ಲಿ, ನಿಯಂತ್ರಿಸುವಲ್ಲಿ ಈ ತಾಣಗಳಿಗಿರುವ ಅಂಕೆ ಮೀರಿದ ಶಕ್ತಿಯ ಬಗ್ಗೆ ಇಂದು ಯಾರಿಗೂ ಅನುಮಾನಗಳಿಲ್ಲ. ಇದು ಯಾವುದೇ ರಾಜಕೀಯ ನಿಲುವುಳ್ಳವರನ್ನು ಯೋಚಿಸುವಂತೆ ಮಾಡಬೇಕು. ಯಾಕೆಂದರೆ ಸ್ವತಂತ್ರ ಚಿಂತನೆ, ವಸ್ತುನಿಷ್ಠತೆಯನ್ನು ಹಿಂದಕ್ಕೊಡ್ಡಿ, ಬಳಸುಗನನ್ನು ಕೀಲಿ ಕೊಟ್ಟ ಗೊಂಬೆಯಂತಾಗಿಸುವ ಅಲ್ಗೋರಿದಂಗಳ ಈ ಪ್ರಪಂಚ ಯಾವ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯ ಸ್ಥಿರತೆಗೂ ಇಂದಲ್ಲ ನಾಳೆ ಕುತ್ತು ತರದೇ ಇರುವುದಿಲ್ಲ.

ಇದಕ್ಕೆ ಸುಲಭದ ಪರಿಹಾರವಂತೂ ಇಲ್ಲ. ತಂತ್ರಜ್ಞಾನದ ಬೆಳವಣಿಗೆಯನ್ನು ಯಾರೂ ನಿಯಂತ್ರಿಸಲು ಸಾಧ್ಯವಿಲ್ಲ. ಕಳೆದ ಇನ್ನೂರು ವರ್ಷಗಳಲ್ಲಿ ಮನುಕುಲ ಎದುರಿಸಿರುವ ಬಹು ದೊಡ್ಡ ಸವಾಲುಗಳನ್ನು ದಾಟಲು ಸಾಧ್ಯವಾಗಿದ್ದು ಅವುಗಳನ್ನು ಬಗೆಹರಿಸಿಯೇ ತೀರುತ್ತೇನೆ ಎಂದು ಹೊರಟ ಮನುಷ್ಯನಲ್ಲಿರುವ ಶಕ್ತಿಯಿಂದ. ತಂತ್ರಜ್ಞಾನದಿಂದ ಹುಟ್ಟಿರುವ ಈ ಸಮಸ್ಯೆಗೆ ತಂತ್ರಜ್ಞಾನವೇ ಪರಿಹಾರವನ್ನು ರೂಪಿಸಬಹುದು. ಈ ಹೊತ್ತಿಗೆ ಅದೊಂದೇ ಭರವಸೆ.

ಚುರುಮುರಿ



ಕಾಯಿಲೆ ಕಾಳಜಿ

• ಸಿ.ಎನ್. ರಾಜು

'ನಮ್ಮ ಕಾಯಿಲೆಗಳಿಗೆ ಒಳ್ಳೆಯ ಹೆಸರಿಲ್ಲಾ ಕಣ್ರೀ' ಸುಮಿ ಬೇಸರ ವ್ಯಕ್ತಪಡಿಸಿದಳು.

'ಒಳ್ಳೆ ಹೆಸರು ಗಳಿಸಲು ಕಾಯಿಲೆಗಳು ಜನ ಮೆಚ್ಚುವಂತಹ ಯಾವುದೇ ಕೆಲಸ ಮಾಡುತ್ತಿಲ್ಲ' ಅಂದ ಶಂಕ್ರಿ.

'ಹಾಗಲ್ಲಾರೀ, ಮಂಕಿಪಾಕ್ಸ್, ಹಂದಿ ಜ್ವರ, ಹಕ್ಕಿ ಜ್ವರ, ಪಿಕ್ಕೆ ಜ್ವರ ಥೀ, ಹೆಸರುಗಳು ಅಸಹ್ಯವಾಗಿವೆ. ಕಾಯಿಲೆಗಳಿಗೆ ಆಕರ್ಷಕ ಹೆಸರಿಡುವುದು ಬೇಡ್ವೇ?'

'ಕಾಯಿಲೆಗಳಿಗೆ ಜಾತಕ, ಪಾತಕ ನೋಡಿ ಹೆಸರಿಡೋದಿಲ್ಲ. ಕಾಯಿಲೆಗಳ ಪ್ರಭಾವ, ಪರಿಣಾಮಗಳ ಆಧಾರದಲ್ಲಿ ಹೆಸರಿಡಬಹುದು'.

'ಮೊನ್ನೆ ಒಬ್ಬರು ನಿಮಗೆ ಮಂಕಿಪಾಕ್ಸ್ ಲಕ್ಷಣ ಇದೆಯಾ ಅಂತ ಕೇಳಿದರು, ನನಗೆ ಸಿಟ್ಟು ಬಂತು'.

'ಕೇಳೋದ್ರಲ್ಲಿ ತಪ್ಪೇನಿದೆ?'

'ಸಿನಿಮಾ ನಟಿಯ ಲಕ್ಷಣ ಇದೆಯಾ ಅಂತ ಕೇಳಿದ್ರೆ ಖುಷಿಪಡಬಹುದುದಿತ್ತು, ಮಂಕಿ ಲಕ್ಷಣ ಅಂತ ಅವಲಕ್ಷಣವಾಗಿ ಕೇಳಿದ್ರೆ ಸಿಟ್ಟು ಬರೋದಿಲ್ವಾ?'

'ಮಂಕಿಪಾಕ್ಸ್ ಲಕ್ಷಣ ಇರುವವರ ಪತ್ತೆ ಮಾಡಲು ಸರ್ಕಾರ ಹೇಳಿದೆ, ಅವರ್‍ಯಾರೋ ಕೇಳಿರಬಹುದು'.

'ಅಡ್ರೆಸ್, ಆಧಾರ್ ಕಾರ್ಡ್ ಇಲ್ಲದ ಕಾಯಿಲೆಗಳನ್ನು ಪತ್ತೆ ಮಾಡೊದು ಕಷ್ಟ ಅಲ್ವಾ?'

'ತಪ್ಪಿಸಿಕೊಂಡ ಕಳ್ಳರನ್ನೇ ಪೊಲೀಸರು ಪತ್ತೆಹಚ್ಚುತ್ತಾರೆ, ಕಾಯಿಲೆ ಯಾವ ಲೆಕ್ಕ?'

'ಕಳ್ಳರು ಪೊಲೀಸರಿಗೆ ಹೆದರುವಂತೆ ಕಾಯಿಲೆಗಳು ಯಾರಿಗಾದರೂ ಹೆದರುತ್ತವೇನ್ರೀ?'

'ಡಾಕ್ಟರಿಗೆ ಹೆದರುತ್ತವೆ. ಅವರು ಕಿವಿಗೆ ಸ್ಟೆತಾಸ್ಕೋಪ್ ಏರಿಸಿಕೊಂಡು, ಕೈಗೆ ಸಿರಿಂಜ್ ತಗೊಂಡ್ರೆ ಎಂಥಾ ಹಠಮಾರಿ ಕಾಯಿಲೆಗಳೂ ಹೆದರಿಬಿಡುತ್ತವೆ'.

'ಕಾಯಿಲೆಮುಕ್ತ ಬದುಕು ನಮಗೆ ಸಾಧ್ಯವಿಲ್ಲವೇನ್ರೀ?'

'ಸಾಧ್ಯವಿಲ್ಲ. ಅತಿಥಿಗಳು ಬಂದು ಹೋಗುವಂತೆ ಕಾಯಿಲೆಗಳು ಬಂದುಹೋಗುತ್ತವೆ. ಬಂದಾಗ ಸೂಕ್ತ ಆರೈಕೆ, ಆತಿಥ್ಯ ನೀಡಿ ಸತ್ಕರಿಸಿ ಕಳಿಸಬೇಕು. ನಾವು ಕಾಯಿಲೆಗಳನ್ನು ನಂಬಿಕೊಂಡಿಲ್ಲವಾದರೂ ಕಾಯಿಲೆಗಳು ನಮ್ಮನ್ನು ನಂಬಿಕೊಂಡಿವೆ' ಅಂದ ಶಂಕ್ರಿ.

ಸಂಗತ

ಸಮಯ ಪಾಲನೆ ಮತ್ತು ಸಭೆಯ ಸೊಬಗು

ಅನವಶ್ಯಕವಾಗಿ ಮಾತು ಲಂಬಿಸುವುದರಿಂದ ಸಭೆಯ ಘನತೆಗೆ ಕುಂದು ಉಂಟಾಗುತ್ತದೆ. ಪ್ರೇಕ್ಷಕರು ಕಸಿವಿಸಿಗೆ ಒಳಗಾಗುತ್ತಾರೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಯುವ ಕವಿಯೊಬ್ಬರ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮಕ್ಕೆ ಈಚೆಗೆ ಹೋಗಿದ್ದೆ. ಕಾರ್ಯಕ್ರಮದ ಸಂಘಟಕರಲ್ಲಿ ಒಬ್ಬರು ಸ್ವಾಗತ ಭಾಷಣ ಮಾಡಲು ವೇದಿಕೆಗೆ ಬಂದು ಅರ್ಧ ಗಂಟೆಗೂ ಹೆಚ್ಚು ಕಾಲ ಮಾತನಾಡಿದರು. ಸ್ವಾಗತದ ಗಡಿ ದಾಟಿ ಸಂಕಲನದಲ್ಲಿನ ಕವನಗಳ ಮೌಲ್ಯಮಾಪನ ಮಾಡಿದರು. ಕಲೆ, ಸಾಹಿತ್ಯದ ಮಹತ್ವ ವಿವರಿಸಿದರು. ರಾಜಕೀಯ ವಿದ್ಯಮಾನಗಳ ವಿಶ್ಲೇಷಣೆಯನ್ನೂ ಮಾಡಿದರು. ಕೆಲವರು ಮಾತು ನಿಲ್ಲಿಸಲು ಅವರಿಗೆ ಮತ್ತೆ ಮತ್ತೆ ಸೂಚಿಸಿದರೂ ಪ್ರಯೋಜನವಾಗಲಿಲ್ಲ. ಅವರು ತಮ್ಮ ಭಾಷಣದ ಚಪಲ ತೀರಿಸಿಕೊಂಡೇ ಮಾತು ನಿಲ್ಲಿಸಿದರು.

ಒಂದು ಗಂಟೆಯ ಕಾರ್ಯಕ್ರಮದಲ್ಲಿ ಅರ್ಧ ಗಂಟೆಗೂ ಹೆಚ್ಚು ಸಮಯ ಸ್ವಾಗತ ಭಾಷಣ ಕಬಳಿಸಿದಾಗ 'ಎಲ್ಲ ಬಣ್ಣವನ್ನೂ ಮಸಿ ನುಂಗಿತು' ಎನ್ನುವ ನುಡಿ ನೆನಪಾಯಿತು.


ಬಹಳಷ್ಟು ಸಭೆ- ಸಮಾರಂಭಗಳಲ್ಲಿ ಇಂಥ ಅಧ್ವಾನಗಳು ನಡೆಯುತ್ತವೆ. ಅನವಶ್ಯಕವಾಗಿ ಮಾತು ಲಂಬಿಸುವುದರಿಂದ ಸಭೆಯ ಘನತೆಗೆ ಕುಂದು ಉಂಟಾಗುತ್ತದೆ. ಆಮಂತ್ರಿತ ತಜ್ಞರಿಗೆ ವಿಷಯ ಮಂಡನೆಗೆ ಸಮಯದ ಕೊರತೆಯಾಗುತ್ತದೆ. ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳೂ ಉಳಿದುಬಿಡುತ್ತವೆ. ಸಭೆಯ ಮುಖ್ಯ ಉದ್ದೇಶ ಹಿನ್ನೆಲೆಗೆ ಸರಿಯುತ್ತದೆ. ಸಭೆಗೊಂದು ಸಭ್ಯತೆ ಮತ್ತು ಸಂಸ್ಕೃತಿ ಇರುತ್ತದೆ. ಮೈಕ್ ಮುಂದೆ ನಿಲ್ಲುವ ಮುಂದೆ ಅದನ್ನು ತಿಳಿದಿರಬೇಕು.

ಕಾರ್ಯಕ್ರಮದ ಸಂಘಟಕರು ಶಿಸ್ತು, ಸಮಯ ಪಾಲನೆ ಮತ್ತು ಉದ್ದೇಶಿತ ವಿಷಯಗಳ ಚರ್ಚೆಗೆ ಹೆಚ್ಚಿನ ಗಮನ ಕೊಡಬೇಕು. ಕಾರ್ಯಕ್ರಮಕ್ಕೆ ಸೂಕ್ತ ಚೌಕಟ್ಟು ಹಾಕಿಕೊಳ್ಳಬೇಕು. ಅತಿಥಿಗಳ ಭಾಷಣಕ್ಕೆ ಸಮಯ ನಿಗದಿಪಡಿಸಬೇಕು. ಕಡ್ಡಾಯವಾಗಿ ಅದು ಪಾಲನೆ ಆಗುವಂತೆ ನೋಡಿಕೊಳ್ಳಬೇಕು. ಸ್ವಾಗತ ಮತ್ತು ವಂದನಾರ್ಪಣೆ ಚುಟುಕಾಗಿರಬೇಕು. ಕಾರ್ಯಕ್ರಮದ ರೂಪುರೇಷಗಳನ್ನು ಮುಂಚಿತವಾಗಿಯೇ ಸಿದ್ಧಪಡಿಸಿ, ಅವಶ್ಯವಿದ್ದಲ್ಲಿ ತಾಲೀಮು ಕೂಡ ಮಾಡಬೇಕು. ಸಭೆಯ ಸೊಬಗಿಗೆ ಧಕ್ಕೆಯಾಗದಂತೆ ಎಚ್ಚರ ವಹಿಸಬೇಕು.

ನಿರೂಪಕರ ಪಾತ್ರ ಅತ್ಯಂತ ಮಹತ್ವದ್ದು. ಆದ್ದರಿಂದಲೇ ಅವರನ್ನು ಕಾರ್ಯಕ್ರಮದ ಮಾಸ್ಟರ್ ಎಂದು ಕರೆಯುತ್ತಾರೆ. ಆದರೆ ಅವರು ಕೂಡ ಅನೇಕ ಸಲ ತಮ್ಮ ವ್ಯಾಪ್ತಿ ಮೀರಿ ಮಾತನಾಡುತ್ತಾರೆ. ಭಾಷಣಕಾರರು ಹೇಳಿದ ವಿಷಯವನ್ನು ಪುನಃ ಹೇಳಿ ಸಮಯ ಹಾಳು ಮಾಡುತ್ತಾರೆ. ಇದು ಆಗಬಾರದು.

ಕೆಲವು ಸಲ ಅತಿಥಿಗಳು ತಡವಾಗಿ ಬಂದು, ತಮಗೆ ಬೇರೆ ಕೆಲಸದ ಒತ್ತಡ ಇದೆ ಎಂದು ಹೇಳಿ ಭಾಷಣ ಮಾಡಿ ಸಭೆ ನಡೆಯುತ್ತಿರುವಾಗಲೇ ಹೊರಟು ಹೋಗುತ್ತಾರೆ. ಕೆಲವರಿಗೆ ಹೋಗಲೇಬೇಕಾದ ಅನಿವಾರ್ಯ ಇದ್ದಿರಬಹುದು. ಆದರೆ ಹೆಚ್ಚಿನವರಿಗೆ ಅದೊಂದು ನೆವ. ಇನ್ನೊಬ್ಬರ ಭಾಷಣ ಕೇಳುವ ಸೌಜನ್ಯವಾಗಲೀ ಸಭೆಯ ಬಗ್ಗೆ ಹೆಚ್ಚಿನ ಆಸಕ್ತಿಯಾಗಲೀ ಅವರಿಗೆ ಇರುವುದಿಲ್ಲ. ಅಂಥವರನ್ನು ಅತಿಥಿಯಾಗಿ ಕರೆಯದಿರುವುದೇ ಲೇಸು.

ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಪತ್ರಕರ್ತ ಪಾಟೀಲ ಪುಟ್ಟಪ್ಪ ವಹಿಸಿದ್ದರು. ಆಗ ಮುಖ್ಯಮಂತ್ರಿ ಆಗಿದ್ದ ಎಸ್.ಎಂ. ಕೃಷ್ಣ ಅವರು ಸಮ್ಮೇಳನ ಉದ್ಘಾಟಿಸಿ ಭಾಷಣ ಮಾಡಿದರು. ನಂತರ ಭಾಷಣ ಮಾಡಲು ಪಾಪು ಎದ್ದು ನಿಂತರು. ಕೃಷ್ಣ ಅವರು ತಮಗೆ ಬೇರೆ ಅವಶ್ಯ ಕೆಲಸ ಇದೆ ಎಂದು ಹೇಳಿ ಸಾವಕಾಶ ವೇದಿಕೆಯಿಂದ ಇಳಿಯತೊಡಗಿದರು. ಆಗ ಪಾಪು 'ಮಾನ್ಯ ಕೃಷ್ಣ ಅವರೇ, ಮುಖ್ಯಮಂತ್ರಿಯಾದವರಿಗೆ ಕೆಲಸದ ಒತ್ತಡ ಬಹಳ ಇರುತ್ತದೆ. ಅದು ಎಲ್ಲರಿಗೂ ಗೊತ್ತು. ಆದರೆ ಈಗ ನಾನು 5 ಕೋಟಿ ಕನ್ನಡಿಗರ ಪ್ರತಿನಿಧಿಯಾಗಿ ಮಾತನಾಡುತ್ತಿದ್ದೇನೆ. ನೀವು ಕೇಳಬೇಕು' ಎಂದು ಹೇಳಿದರು. ಸೇರಿದ್ದ ಜನ ಜೋರಾಗಿ ಚಪ್ಪಾಳೆ ತಟ್ಟಿ ಕೂಗು ಹಾಕಿ ಪಾಪು ಮಾತಿಗೆ ಬೆಂಬಲ ವ್ಯಕ್ತಪಡಿಸಿದರು. ಪ್ರತಿಕ್ರಿಯೆಯ ತೀವ್ರತೆ ಗಮನಿಸಿದ ಕೃಷ್ಣ ಅವರು ತುಟಿ-ಪಿಟಿಕ್ ಎನ್ನದೆ ಪ್ರೇಕ್ಷಕರ ಮುಂದಿನ ಆಸನದಲ್ಲಿ ಕುಳಿತು ಭಾಷಣ ಆಲಿಸಿದರು. ಮುಖ್ಯಮಂತ್ರಿಯವರಿಗೆ ದೈನಂದಿನ ಆಡಳಿತಕ್ಕೆ ಸಂಬಂಧಿಸಿ ಏನೇನೋ ಒತ್ತಡಗಳು ಇರುತ್ತವೆ. ಆದರೆ ನೆವ ಮುಂದಿಡುವ ಎಲ್ಲರಿಗೂ ಅಂತಹ ಒತ್ತಡಗಳು ಖಂಡಿತ ಇರಲಾರವು.



ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರನ್ನು ಲೇಖಕ ಖುಷವಂತ್ ಸಿಂಗ್ ಅವರು ತಮ್ಮ ನಿವಾಸಕ್ಕೆ ಊಟಕ್ಕೆ ಆಮಂತ್ರಿಸಿದ್ದರು. ರಾಜೀವ್ ರಾತ್ರಿ 8 ಗಂಟೆಗೆ ಬರುವುದಾಗಿ ಒಪ್ಪಿಗೆ ಸೂಚಿಸಿದ್ದರು. ಆದರೆ ನಿಗದಿತ ಸಮಯಕ್ಕೆ ಬರಲಿಲ್ಲ. 9 ಗಂಟೆಗೆ ಬರುವುದಾಗಿ ಅವರು ಸಂದೇಶ ರವಾನಿಸಿದರು. 'ಸಮಯ ಮೀರಿದೆ, ನಾನು ಮಲಗಿದ್ದೇನೆ' ಎಂದು ಸಿಂಗ್ ಮಾಹಿತಿ ರವಾನಿಸಿದರು. ಸಮಯ ಪಾಲನೆಗೆ ಸಿಂಗ್ ಅಂತಹ ಮಹತ್ವ ನೀಡುತ್ತಿದ್ದರು.

ಸಭೆ, ಸಮಾರಂಭಗಳು ಜನ ಒಂದೆಡೆ ಸೇರಲು, ಹರಟಲು, ಪರಿಣತರ ಮಾತು ಆಲಿಸಲು ಅನುವಾಗಿಸುತ್ತವೆ. ಪ್ರೇಕ್ಷಕರು ಸಮಯ ಹೊಂದಿಸಿಕೊಂಡು ಎಲ್ಲಿಂದಲೋ ಅಲ್ಲಿಗೆ ಬಂದಿರುತ್ತಾರೆ. ಅವರಿಗೆ ಕಿರಿಕಿರಿಯಾಗದಂತೆ ನೋಡಿಕೊಳ್ಳುವುದು ಸಂಘಟಕರ ಜವಾಬ್ದಾರಿ. ಅದಕ್ಕೆ ಅತಿಥಿಗಳ ಸಹಕಾರವೂ ಅಗತ್ಯ. ಭಾಗವಹಿಸಿದ್ದಕ್ಕೆ ಪ್ರೇಕ್ಷಕರಿಗೆ ಯಾವುದೋ ಒಂದು ಬಗೆಯಲ್ಲಿ ಖುಷಿ ಕೊಡಬೇಕು. ಅದಕ್ಕೆ ಬಾಧಕ ಆಗಬಾರದು.

ವಾಚಕರ ವಾಣಿ

ಗುಪ್ತಚರ ಇಲಾಖೆಯನ್ನು ಬಲಪಡಿಸಿ

ರಾಜ್ಯದಲ್ಲಿ 15 ದಿನಗಳಿಂದ ಈಚೆಗೆ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿರುವ ಸರಣಿ ಕೊಲೆಗಳನ್ನು ಗಮನಿಸಿದರೆ ಈ ಕೊಲೆಗಳು ಯಾವುವೂ ಆಕಸ್ಮಿಕವಾಗಿ ನಡೆದಂತೆ ಭಾಸವಾಗುವುದಿಲ್ಲ. ಅವೆಲ್ಲವೂ ಪೂರ್ವತಯಾರಿಯಿಂದಲೇ ನಡೆದಿರಬಹುದಾದ ಶಂಕೆ ಮೂಡುತ್ತದೆ. ಇದರಿಂದ ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ರಾಜ್ಯದಲ್ಲಿ ಗುಪ್ತಚರ ಇಲಾಖೆಯೊಂದು ಇದೆಯೋ ಇಲ್ಲವೋ ಎಂಬ ಅನುಮಾನ ಬರುತ್ತದೆ. ಕೊಲೆಯಾದ ಮೇಲೆ ತನಿಖೆ, ಬಂಧನ, ವಿಚಾರಣೆ ಎಂದು ಹೆಣಗುತ್ತೇವೆ. ಆದರೆ ಕೊಲೆ ತಡೆಯಲು ಬಿಗಿ ಕ್ರಮ ತೆಗೆದುಕೊಳ್ಳಲು ನಮ್ಮಿಂದ ಇನ್ನೂ ಸಾಧ್ಯವಾಗಿಲ್ಲ. ಈ ದಿಸೆಯಲ್ಲಿ ಗುಪ್ತಚರ ಇಲಾಖೆಯ ಪಾತ್ರ ಮುಖ್ಯವಾಗಿದೆ. ಅದನ್ನು ಬಲಪಡಿಸುವ ಕೆಲಸ ತಕ್ಷಣ ಆಗಬೇಕು.

ಡಾ.ಆನಂದಕುಮಾರ ಎಂ. ಜಕ್ಕಣ್ಣವರ, ಸುಲಧಾಳ

ಬೆಳೆಹಾನಿ: ರೈತರ ಕಷ್ಟಕ್ಕೆ ಸ್ಪಂದಿಸಿ

ಮಳೆ ವಿಪರೀತ ಆಗಿರುವುದರಿಂದ ರಾಜ್ಯದ ಅನೇಕ ಕಡೆ ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟ ಆಗಿದೆ. ಕಷ್ಟಪಟ್ಟು ಬೆಳೆದ ಬೆಳೆ ಮಳೆಗೆ ಆಹುತಿಯಾದರೆ ರೈತನ ಪಾಡು ಹೇಳತೀರದು. ಸಾಲ ಬೆನ್ನೇರುತ್ತದೆ. ಅದರಿಂದ ಹೊರಬರಲು ವರ್ಷಗಳೇ ಕಾಯಬೇಕಾಗುತ್ತದೆ. ಬೆಳೆನಷ್ಟ ಸಮೀಕ್ಷೆಯನ್ನು ತಕ್ಷಣ ಪೂರೈಸಿ, ಪರಿಹಾರ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು.

ಚುನಾವಣೆ ಸಂದರ್ಭದಲ್ಲಿ ಆಡಳಿತಾರೂಢ ಬಿಜೆಪಿ ಮುಖಂಡರು 'ಡಬಲ್ ಎಂಜಿನ್' ಸರ್ಕಾರದ ಬಗ್ಗೆ ಪದೇ ಪದೇ ಹೇಳುತ್ತಾರೆ. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ನೇತೃತ್ವದ ಸರ್ಕಾರ ಇದ್ದರೆ ಆಗುವ ಪ್ರಯೋಜನ ಏನು ಎಂಬುದನ್ನು ಇಂತಹ ಕಷ್ಟದ ಸಂದರ್ಭದಲ್ಲಾದರೂ ತೋರಿಸಬೇಕು. ಬರೀ ಮಾತು, ಘೋಷಣೆಗಳಿಂದ ಜನರಿಗೆ ಪ್ರಯೋಜನ ಇಲ್ಲ. ಹೆಚ್ಚಿನ ನೆರವು ಪಡೆಯಲು ಮುಖ್ಯಮಂತ್ರಿಯವರು ಕೇಂದ್ರದ ಮೇಲೆ ಒತ್ತಡ ಹೇರಬೇಕು.

ಜಿ.ಎಚ್. ಹಿರೇಮಠ, ಬೆಳಗಾವಿ

ಒಳ್ಳೆಯ ಮನಸ್ಸುಗಳನ್ನು ಹುಡುಕುವ ಬರಹ

'ಅಶೋಕ ಭಾರತ ನಾವು ಮರೆತೆವೇ?' ಶೀರ್ಷಿಕೆಯ ರಘುನಾಥ ಚ.ಹ. ಅವರ ಲೇಖನ ಸಾಂದರ್ಭಿಕವಾಗಿದೆ. ಆಪ್ತತೆಯನ್ನು ತುಂಬುವಂತಹ ಬರಹ ಇದು. ಇವತ್ತಿನ ಸಂದರ್ಭಕ್ಕೆ ಒಳ್ಳೆಯ ಮನಸ್ಸುಗಳನ್ನು ಹುಡುಕುವ, ಒಳ್ಳೆಯತನವನ್ನು ಮರು ಹುಟ್ಟಿಸುವ, ಒಳ್ಳೆಯ ಮನಸ್ಸಿನ ಬರಹ.

ಪ್ರೊ.ಹಿ.ಶಿ. ರಾಮಚಂದ್ರೇಗೌಡ, ಮೈಸೂರು

ಧೈರ್ಯ ತುಂಬುವ ಕೆಲಸ ಆಗಬೇಕು

ಮಳೆ ಈ ಸಲ ಮತ್ತೆ ರೈತರ ಬದುಕಿನ ಜೊತೆ 'ಜೂಜಾಟ' ಆಡಿದೆ. ಹೊಲ-ಗದ್ದೆಗಳು ಹಸಿರಿನಿಂದ ಕಂಗೊಳಿಸುತ್ತಿದ್ದವು. ಎಲ್ಲವನ್ನೂ ಮಳೆ ನುಂಗಿಹಾಕಿದೆ. ನಮ್ಮ ಪ್ರದೇಶವು ತೊಗರಿಯ ಕಣಜ ಎಂದೇ ಹೆಸರುವಾಸಿ. ಕಲಬುರಗಿಯಲ್ಲಿ ಕಳೆದ ತಿಂಗಳು, ಎಂಟು ದಿನ ಎಡೆಬಿಡದೆ ಮಳೆ ಸುರಿದಿತ್ತು. ಬಿಸಿಲಿಗಾಗಿ ರೈತರು ಮುಗಿಲಿನತ್ತ ಮುಖ ಮಾಡಿದ್ದರು. ಬಿಸಿಲು ಕಾಣಿಸಿಕೊಂಡಾಗ ಮುಖ ಅರಳಿತು. ಈಗ ಪುನಃ ಮಳೆ ಅಪ್ಪಳಿಸಿದೆ. ತೊಗರಿಬೆಳೆಗೆ ಚರಮಗೀತೆ ಹಾಡಿದೆ. ರೈತರ ಮುಖ ಬಾಡಿದೆ. ಆತ್ಮಸ್ಥೈರ್ಯ ಕುಗ್ಗಿದೆ.

'ನಿಮ್ಮ ಜೊತೆ ಸರ್ಕಾರ ಇದೆ' ಎಂದು ರೈತರಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಆಗಬೇಕು. ಬೆಳೆ ನಷ್ಟಕ್ಕೆ ತಕ್ಷಣ ಪರಿಹಾರ ನೀಡಬೇಕು. ಮುಂದಿನ ಬೆಳೆಗೆ ಸಹಾಯಹಸ್ತ ಚಾಚುತ್ತೇವೆ ಎಂಬ ಭರವಸೆ ನೀಡಬೇಕು ಮತ್ತು ಅದರಂತೆ ನಡೆದುಕೊಳ್ಳಬೇಕು.

ಮಹೇಶ ಕೇವಂಟಗಿ, ಕಲಬುರಗಿ

ಹಣದ ಆಸೆಗೆ ಮರುಳಾಗುವುದು ಬೇಡ

'ಗಾಳಕ್ಕೆ ಸಿಲುಕುವುದು ಬೇಡ' ಎಂಬ ಶೀರ್ಷಿಕೆಯ ರಾಜಕುಮಾರ ಕುಲಕರ್ಣಿ ಅವರ ಲೇಖನ (ಸಂಗತ, ಆ. 4) ಅರ್ಥಪೂರ್ಣವಾಗಿದೆ. ಸುಲಭವಾಗಿ ಎಲ್ಲರಿಗೂ ನಿಲುಕುವಂತೆ ಅವರು ವಿವರಿಸಿದ್ದಾರೆ. ಜಾತಿ, ಧರ್ಮ, ಪ್ರದೇಶ, ಭಾಷೆಯ ಹೆಸರಿನಲ್ಲಿ ವೋಟಿಗಾಗಿ ಗಾಳ ಹಾಕುವ ರಾಜಕಾರಣಿಗಳ ಹುನ್ನಾರಗಳನ್ನು ಜನ ಅರಿತು ಹೊಣೆಗಾರಿಕೆಯಿಂದ ಮತ ಚಲಾಯಿಸಿದರೆ ಜನತಂತ್ರದ ಬೇರು ಬಲಗೊಳ್ಳುತ್ತದೆ.

ರಾಜಕಾರಣಿಗಳಿಗೆ ಓದಿನ ಕೊರತೆ ಇರುವುದು ಸತ್ಯ. ಆದರೆ ಇದು ಕಾಂಚಾಣದ ಕುಣಿತಕ್ಕೆ ಮರುಳಾಗುವ ಕಾಲಘಟ್ಟ. ದುಡ್ಡಿನ ಆಸೆಗಾಗಿ ಮತ ಮಾರಿಕೊಳ್ಳುವ ಪರಿಪಾಟ ಹೆಚ್ಚುತ್ತಿರುವುದರಿಂದ ರಾಜಕಾರಣಿಗಳಲ್ಲಿ ಖರೀದಿಸುವ ಪ್ರವೃತ್ತಿಯೂ ಹೆಚ್ಚುತ್ತಿದೆ. ಒಂದು ದಿನದ ಮಟ್ಟಿಗೆ ಅವರು ಕೊಡುವ ನಾಲ್ಕು ಕಾಸಿಗೆ ಮರುಳಾಗಿ ಮತದ ಮಾನ ಕಳೆಯಬಾರದು. ಜನರಲ್ಲಿ ಇಂತಹ ಪ್ರಜ್ಞೆ ಬೆಳೆದಾಗ ಪುನಃ ಒಳ್ಳೆಯ ನಾಯಕರನ್ನು ಕಾಣಬಹುದು.

ಬಸವರಾಜ ತಳವಾರ, ಬೆಳಗಾವಿ

ಇನ್ನಷ್ಟು ಅರ್ಥಪೂರ್ಣಗೊಳಿಸಬಹುದಿತ್ತು

ಬದುಕಿನಲ್ಲಿ 75 ವರ್ಷ ಎಂಬುದು ಒಂದು ಮಹತ್ವದ ಘಟ್ಟ. ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬದ ಆಚರಣೆ ಮೂಲಕ ಯಾರಿಗೆ ಏನು ಸಂದೇಶ ತಲುಪಿಸಬೇಕಿತ್ತೋ ಅದನ್ನು ತಲುಪಿಸುವಲ್ಲಿ ಸಂಘಟಕರು ಯಶಸ್ಸು ಆದಂತಿದೆ. ಸ್ವಪಕ್ಷದಲ್ಲೇ ಎದುರಾಳಿಗಳು ಇರುವಂತೆ, ವಿರೋಧ ಪಕ್ಷಗಳಲ್ಲೂ ಅವರಿಗೆ ಸ್ನೇಹಿತರಿದ್ದಾರೆ. ಈ ಕಾರ್ಯಕ್ರಮಕ್ಕೆ ಬೇರೆ ಪಕ್ಷಗಳ ನಾಯಕರನ್ನೂ ಕರೆಯಬಹುದಿತ್ತು. ಆಗ ಅದು ಮಾದರಿ ನಡೆ ಆಗುತ್ತಿತ್ತು. ಆ ಅವಕಾಶ ಬಳಸಿಕೊಳ್ಳಲಿಲ್ಲ.

ಬಿ.ಎನ್. ಭರತ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕರ್ನಾಟಕಕ್ಕೆ 'ಯೋಗಿ ಮಾದರಿ'ಯ ಅಗತ್ಯ ಇದೆಯೇ?

ಶಾಂತಿಯ ತೋಟಕ್ಕೆ ಅಶಾಂತಿಯ ಮಾದರಿ ಏಕೆ?



• ಪ್ರಿಯಾಂಕ್ ಖರ್ಗೆ

ಭಾರತದ ಸಂವಿಧಾನದ ಆಶಯಗಳನ್ನು ಅರಿತಿರುವ ಯಾವುದೇ ಮುಖ್ಯಮಂತ್ರಿ ತನ್ನದೇ ರಾಜ್ಯದ ಪ್ರಜೆಗಳನ್ನು ಹಿಂಸೆಗೊಳಪಡಿಸುವುದನ್ನು ಒಪ್ಪುವುದಾದರೂ ಹೇಗೆ ಸಾಧ್ಯ? ಇದು 'ಮಾದರಿ' ಅಲ್ಲ, ಸಂವಿಧಾನದ ದಮನ. ಯಾವುದೋ ಒಂದು ರಾಜ್ಯದಲ್ಲಿ ಸಂವಿಧಾನವನ್ನು ದಮನ ಮಾಡುತ್ತಿದ್ದಾರೆ ಎಂದರೆ, ಅದನ್ನು ಮಾದರಿ ಎನ್ನಲು ಸಾಧ್ಯವೇ? ಕರ್ನಾಟಕದಂತಹ ವಿವೇಕವಂತ ಜನರಿರುವ ರಾಜ್ಯದಲ್ಲಿ ಅದರ ಅನುಷ್ಠಾನ ಮಾಡುವುದು ಬುದ್ಧಿಗೇಡಿ ವರ್ತನೆ ಅಲ್ಲವೇ?

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕರ್ನಾಟಕದಲ್ಲಿ ಉತ್ತರ ಪ್ರದೇಶ ಮಾದರಿಯನ್ನು ಜಾರಿಗೆ ತರುವ ಬಗ್ಗೆ ಮಾತನಾಡಿದ್ದು ಇದೀಗ ಚರ್ಚೆಯ ವಸ್ತುವಾಗಿದೆ. ಆದರೆ, ಉತ್ತರ ಪ್ರದೇಶದಲ್ಲಿ ಮಾನವೀಯತೆ ಹಾಗೂ ಸಾಮಾಜಿಕ ನ್ಯಾಯವನ್ನು ಗಾಳಿಗೆ ತೂರಿದ ಅಂಥಾ ಕಾನೂನಿನ ಮಾದರಿಯು ದೇಶದಾದ್ಯಂತ ಭೀತಿಯನ್ನುಂಟು ಮಾಡಿದ್ದು ಅವರ ಗಮನದಲ್ಲಿ ಇಲ್ಲ ಎನಿಸುತ್ತದೆ.

ಬಿಜೆಪಿಯವರು ಮೊದಲು ಗುಜರಾತ್ ಮಾದರಿಯನ್ನು ಬಿಂಬಿಸಿದ್ದರು. ಇದೀಗ ಆ ಮಾದರಿ ಇಡೀ ದೇಶದಲ್ಲಿ ಕೆಲಸ ಮಾಡುತ್ತಿರುವುದರಿಂದಾಗಿ ನಿರುದ್ಯೋಗ ಹೆಚ್ಚಳವಾಗಿದೆ, ಇತಿಹಾಸದಲ್ಲಿ ಎಂದೂ ನಿರುದ್ಯೋಗ ಪ್ರಮಾಣ ಇಷ್ಟೊಂದು ಹೆಚ್ಚು ಇರಲಿಲ್ಲ. ಜೊತೆಗೆ ಆರ್ಥಿಕ ಸ್ಥಿತಿಯೂ ಹದಗೆಟ್ಟಿದೆ. ಡಾಲರ್ ಎದುರು ರೂಪಾಯಿ ಮೌಲ್ಯ ₹80ಕ್ಕೆ ಕುಸಿದಿದೆ.

ಗುಜರಾತ್ ಮಾದರಿ, ಬಿ.ಎಸ್. ಯಡಿಯೂರಪ್ಪ ಮಾದರಿ ಹಾಗೂ ಬಸವರಾಜ ಬೊಮ್ಮಾಯಿ ಮಾದರಿಗಳೆಲ್ಲವೂ ವಿಫಲವಾದ ಬಳಿಕ ಇದೀಗ ಉತ್ತರ ಪ್ರದೇಶದ ಯೋಗಿ ಮಾದರಿಯ ಬಗ್ಗೆ ಬಿಜೆಪಿಯವರು ಮಾತನಾಡುತ್ತಿದ್ದಾರೆ. ಉತ್ತರ ಪ್ರದೇಶ ಮಾದರಿ ಎಂದರೆ, ಪೊಲೀಸ್ ಮತ್ತು ಸರ್ಕಾರದ ಇತರ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಂಡು ಬಿಜೆಪಿ ವಿರೋಧಿಗಳಿಗೆ ಹಿಂಸೆ ಕೊಡುವುದು, ಅಲ್ಪಸಂಖ್ಯಾತರು, ದಲಿತರ ಮನೆಗಳ ಮೇಲೆ ಬುಲ್ಡೋಜರ್ ಹರಿಸಿ ಮನೆಗಳನ್ನು ನೆಲಸಮಗೊಳಿಸಿ ಭೀತಿಯುಂಟು ಮಾಡುವುದೇ ಆಗಿದೆ.

ಇಂತಹ ಕೆಟ್ಟ ಮಾದರಿಯನ್ನು ಕರ್ನಾಟಕದಲ್ಲಿ ಜಾರಿಗೆ ತರಲು ಹೊರಟರೆ, ಇಲ್ಲಿ ಉದ್ಯಮಗಳಲ್ಲಿ ಬಂಡವಾಳ ಹೂಡಲು ಯಾರು ತಾನೇ ಮುಂದೆ ಬರುತ್ತಾರೆ?

ಯಾವ ಮಾನದಂಡದಲ್ಲಿ ನೋಡಿದರೂ ಕರ್ನಾಟಕವು ಉತ್ತರ ಪ್ರದೇಶಕ್ಕಿಂತ ಎಷ್ಟೋ ಮೇಲೆ ಇರುವ ರಾಜ್ಯ. ಆರೋಗ್ಯ, ಶಿಕ್ಷಣ, ಆಡಳಿತ ಸುವ್ಯವಸ್ಥೆ... ಹೀಗೆ ಯಾವುದರಲ್ಲಿಯೂ ಕರ್ನಾಟಕಕ್ಕೆ ಉತ್ತರ ಪ್ರದೇಶವು ಸರಿಸಾಟಿ ಅಲ್ಲ. ಉತ್ತರ ಪ್ರದೇಶದ ಯುವಕರು ಕೆಲಸ ಹುಡುಕಿಕೊಂಡು ಕರ್ನಾಟಕಕ್ಕೆ ಬರುತ್ತಿದ್ದಾರೆಯೇ ಹೊರತು ಕರ್ನಾಟಕದವರು ಉತ್ತರ ಪ್ರದೇಶಕ್ಕೆ ಹೋಗುತ್ತಿಲ್ಲ. ಹೀಗಿದ್ದರೂ ರಾಜ್ಯಕ್ಕೆ ಒಗ್ಗುವುದು ಸಾಧ್ಯವೇ ಇಲ್ಲದ ಮಾದರಿಯನ್ನು ಜನರ ಮೇಲೆ ಹೇರಲು ಹೊರಟಿರುವುದು ಹುಂಬತನದ ಪರಮಾವಧಿ, ಅಷ್ಟೇ ಅಲ್ಲ ಸರ್ಕಾರದ ಅಸಾಮರ್ಥ್ಯದ ತಪ್ಪೊಪ್ಪಿಗೆಯಂತಿದೆ.



ಉತ್ತರ ಪ್ರದೇಶದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಡುಗೆ ಮಾಡುವ ಕೆಲಸಕ್ಕೆ ಅಧಿಸೂಚನೆ ಹೊರಡಿಸಿದರೆ ಲಕ್ಷಾಂತರ ಪದವೀಧರರು ಅರ್ಜಿ ಹಾಕುತ್ತಾರೆ. ಕಾಂಗ್ರೆಸ್ ಆಡಳಿತವು ಹಿಂದೆ 'ಕರ್ನಾಟಕ ಮಾದರಿ' ಹಾಕಿಕೊಟ್ಟಿದೆ. ಅದನ್ನು ಉಪಯೋಗಿಸಲು ಬಿಜೆಪಿ ಸರ್ಕಾರ ತಯಾರಿದ್ದಂತಿಲ್ಲ.

15ನೇ ಹಣಕಾಸು ಆಯೋಗದ ಒಪ್ಪಂದದ ಪ್ರಕಾರ, ಕರ್ನಾಟಕದಲ್ಲಿ ಸಂಗ್ರಹವಾದ ತೆರಿಗೆಯ ಪಾಲನ್ನು ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಉತ್ತರ ಪ್ರದೇಶಕ್ಕೆ ನೀಡುತ್ತಿರುವುದು ಇವರಿಗೆ ಗೊತ್ತಿದೆಯೇ? ನಮ್ಮ ಹಣದಲ್ಲಿ ಅವರು ರಸ್ತೆ, ಸೇತುವೆಗಳನ್ನು ಕಟ್ಟುತ್ತಿದ್ದಾರೆ. ನಮ್ಮಲ್ಲಿಗಿಂತ ಐದು ಪಟ್ಟು ಅಧಿಕ ಅಪರಾಧ ಕೃತ್ಯಗಳು ಅಲ್ಲಿ ನಡೆಯುತ್ತಿವೆ.

ಕೃಷಿ, ಶಿಕ್ಷಣ, ಆರೋಗ್ಯ, ಉದ್ಯೋಗ ಸೃಷ್ಟಿ, ಉದ್ಯಮಶೀಲತೆ, ನವೋದ್ಯಮಗಳಿಗೆ ಪೂರಕ ವಾತಾವರಣ, ಆರ್ಥಿಕ ಚಟುವಟಿಕೆ, ಬಂಡವಾಳ ಹೂಡಿಕೆ, ತೆರಿಗೆ ಸಂಗ್ರಹ ಸೇರಿದಂತೆ ಎಲ್ಲಾ ವಿಷಯಗಳಲ್ಲಿ ಕರ್ನಾಟಕದ ಸಾಧನೆಗಳ ಹತ್ತಿರಕ್ಕೂ ಸುಳಿಯಲಾಗದ ಉತ್ತರ ಪ್ರದೇಶವನ್ನು ಮಾದರಿ ಎನ್ನುವುದು ನಾಚಿಕೆಗೇಡಿನ ಮಾತೇ ಸರಿ.

ಸಂವಿಧಾನದ ಮೌಲ್ಯಗಳನ್ನು ಉತ್ತರ ಪ್ರದೇಶದಲ್ಲಿ ಹತ್ಯೆ ಮಾಡಲಾಗುತ್ತಿದೆ. ಹಾಥರಸ್‌ನಲ್ಲಿ ಯುವತಿಯ ಮೇಲೆ ಅತ್ಯಾಚಾರ ಮಾಡಿ ಹತ್ಯೆ ಮಾಡಿದ್ದು ಇವರಿಗೆ ಗೊತ್ತಿದೆಯೇ? ಬಿಜೆಪಿ ಮುಖಂಡರು ತಮ್ಮ ಮನೆಯ ಹೆಣ್ಣುಮಕ್ಕಳನ್ನು ವಿದ್ಯಾಭ್ಯಾಸಕ್ಕೆ, ಉದ್ಯೋಗಕ್ಕೆ ಉತ್ತರ ಪ್ರದೇಶಕ್ಕೆ ಕಳಿಸಲು ಸಿದ್ಧರಿದ್ದಾರೆಯೇ? ಪ್ರಸ್ತುತ ವಾತಾವರಣದಲ್ಲಿ ಉತ್ತರ ಪ್ರದೇಶದಲ್ಲಿ ಮಹಿಳಾ ಸುರಕ್ಷತೆ, ಆರ್ಥಿಕತೆ, ಸಾಮಾಜಿಕ ನ್ಯಾಯವೆಂಬುದೇ ಇಲ್ಲದಂತಾಗಿದೆ.

ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ನಾಡಗೀತೆಯಲ್ಲಿಯೇ 'ಹಿಂದೂ, ಕ್ರೈಸ್ತ, ಮುಸಲ್ಮಾನ, ಪಾರಸಿಕ ಜೈನರುದ್ಯಾನ' ಎಂಬ ಸರ್ವರಿಗೂ ಸಮಬಾಳಿನ ಆಶಯವಿದೆ. ಸರ್ವಜನಾಂಗದ ಶಾಂತಿಯ ತೋಟ ಎಂಬ ಉದಾತ್ತ ಪರಿಕಲ್ಪನೆ ಇದೆ. ಆದರೆ, ಉತ್ತರ ಪ್ರದೇಶದಲ್ಲಿ ಸರ್ವರನ್ನು ಒಳಗೊಳ್ಳುವ ಒಂದಾದರೂ ಯೋಜನೆಯನ್ನು ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ರೂಪಿಸಿದ್ದಿದೆಯೇ?

ಮಾತೆತ್ತಿದರೆ ಬುಲ್ಡೋಜರ್, ಶೂಟೌಟ್ ಎನ್ನುವ ಉತ್ತರ ಪ್ರದೇಶದಲ್ಲಿ ದಲಿತರು, ಹಿಂದುಳಿದವರ ಮೇಲೆ ಹಿಂಸೆ ನಡೆಸಿ ಗರ್ಜಿಸುತ್ತಿರುವುದು ಭಯದ ವಾತಾವರಣವನ್ನು ಉಂಟು ಮಾಡಿದೆ. ಅಲ್ಪಸಂಖ್ಯಾತರು ಎಂಬ ಒಂದೇ ಕಾರಣಕ್ಕೆ ಅಂಥವರ ಮನೆಗಳನ್ನು ಹುಡುಕಿ ಬುಲ್ಡೋಜರ್ ಬಳಸಿ ದಾಳಿ ಮಾಡಿದ್ದನ್ನು ಸಮರ್ಥಿಸುವುದಾದರೂ ಹೇಗೆ? ಭಾರತದ ಸಂವಿಧಾನದ ಆಶಯಗಳನ್ನು ಅರಿತಿರುವ ಯಾವುದೇ ಮುಖ್ಯಮಂತ್ರಿ ತನ್ನದೇ ರಾಜ್ಯದ ಪ್ರಜೆಗಳನ್ನು ಹೀಗೆ ಹಿಂಸೆಗೊಳಪಡಿಸುವುದನ್ನು ಒಪ್ಪುವುದಾದರೂ ಹೇಗೆ ಸಾಧ್ಯ? ಇದು 'ಮಾದರಿ' ಅಲ್ಲ, ಸಂವಿಧಾನದ ದಮನ. ಯಾವುದೋ ಒಂದು ರಾಜ್ಯದಲ್ಲಿ ಸಂವಿಧಾನವನ್ನು ದಮನ ಮಾಡುತ್ತಿದ್ದಾರೆ ಎಂದರೆ, ಅದನ್ನು ಮಾದರಿ ಎನ್ನಲು ಸಾಧ್ಯವೇ? ಕರ್ನಾಟಕದಂತಹ ವಿವೇಕವಂತ ಜನರಿರುವ ರಾಜ್ಯದಲ್ಲಿ ಅದರ ಅನುಷ್ಠಾನ ಮಾಡುವುದು ಬುದ್ಧಿಗೇಡಿ ವರ್ತನೆ ಅಲ್ಲವೇ?

ಉತ್ತರ ಪ್ರದೇಶದಲ್ಲಿ ಯಾವ ಕಾನೂನು, ಕಟ್ಟಳೆಗಳ ಭಯವೂ ಇಲ್ಲದಂತಾಗಿರುವುದನ್ನು ಇತ್ತೀಚಿನ ದಿನಗಳಲ್ಲಿ ಕಾಣುತ್ತಿದ್ದೇವೆ. ಹಾಥರಸ್‌ನಲ್ಲಿ ಯುವತಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆಯ ಬಗ್ಗೆ ಮಾಹಿತಿ ಪಡೆಯಲು ತೆರಳುತ್ತಿದ್ದ ಕಾಂಗ್ರೆಸ್ ಮುಖಂಡರಾದ ಪ್ರಿಯಾಂಕಾ ಗಾಂಧಿ ಹಾಗೂ ರಾಹುಲ್ ಗಾಂಧಿಯವರನ್ನು ಮಧ್ಯದಲ್ಲಿಯೇ ತಡೆದು ವಶಕ್ಕೆ ಪಡೆಯಲಾಯಿತು. ಕಾಂಗ್ರೆಸ್ ಕಾರ್ಯಕರ್ತರನ್ನು ಉತ್ತರ ಪ್ರದೇಶ ಪೊಲೀಸರು ಮನಬಂದಂತೆ ಥಳಿಸಿದರು. ಒಂದು ಕೊಲೆ, ಅತ್ಯಾಚಾರದ ಪ್ರಕರಣದಲ್ಲಿ ಸಂತ್ರಸ್ತ ಕುಟುಂಬದವರನ್ನು ಭೇಟಿ ಮಾಡಲು ವಿರೋಧ ಪಕ್ಷದ ನಾಯಕರು ಇಷ್ಟೊಂದು ಹರಸಾಹಸ ಪಡಬೇಕೇ? ತಮ್ಮ ವಿರೋಧಿಗಳನ್ನು ನಕಲಿ ಎನ್‌ಕೌಂಟರ್ ಹೆಸರಿನಲ್ಲಿ ಆದಿತ್ಯನಾಥ ಅವರು ಶೂಟೌಟ್ ಮಾಡಿಸಿ ಬೀಗುತ್ತಿದ್ದಾರೆ. ಕಾನೂನು ಕಟ್ಟಳೆಗಳ ಭಯವೇ ಇಲ್ಲದೇ ತಮಗೆ ತೋಚಿದಂತೆ ಆಡಳಿತ ನಡೆಸುತ್ತಿರುವ ವ್ಯವಸ್ಥೆಯನ್ನು ಕರ್ನಾಟಕಕ್ಕೆ ತಂದರೆ ಶಾಂತಿಪ್ರಿಯ ರಾಜ್ಯದ ಜನರ ಗತಿಯೇನಾಗಬಹುದು?

ಕರ್ನಾಟಕದವರು ಯಾವಾಗಲೂ ಕಾನೂನು, ಸಂವಿಧಾನವನ್ನು ನಂಬಿದವರು. ಕೋಮು ಸೌಹಾರ್ದ ಕುರಿತಂತೆ ಐತಿಹಾಸಿಕ ತೀರ್ಪುಗಳು ಕರ್ನಾಟಕದಲ್ಲಿ ಹೊರಬಂದಿವೆ. ಉತ್ತರ ಪ್ರದೇಶ ಮಾದರಿಯಿಂದ ಭೀತಿಗೊಳಗಾಗಿ ಕಳೆದ ಮೂರು ವರ್ಷಗಳಲ್ಲಿ 10 ಲಕ್ಷ ಜನರು ತಮ್ಮ ಭಾರತೀಯ ಪೌರತ್ವವನ್ನು ತ್ಯಜಿಸಿದ್ದಾರೆ. ಈ ಮಾದರಿ ಬೇಕೆ ನಮಗೆ?

ಬುದ್ಧ, ಬಸವ, ಅಂಬೇಡ್ಕರ್ ಎಂದು ನಾವು ಒಂದೇ ಉಸಿರಿನಲ್ಲಿ ಹೇಳುತ್ತೇವೆ. ಬಸವ ತತ್ವದಲ್ಲಿ ಸಮಬಾಳು, ಸಮಪಾಲಿನ ಆಶಯವಿದೆ. ಆದರೆ, ಬಿಜೆಪಿಯವರ ಕೇಸರಿ ಶಾಲಿನಲ್ಲಿ ಒಂದೇ ಧರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿಲಾಗುತ್ತಿದೆ. ಆದರೆ, ಈ ಕೇಸರಿ ಶಾಲು ಬರೀ ಬಡವರು, ಹಿಂದುಳಿದವರ ಮಕ್ಕಳ ಬಳಿ ಮಾತ್ರ ಏಕಿರಬೇಕು? ಬಿಜೆಪಿ ನಾಯಕರ ಮಕ್ಕಳು ಕೇಸರಿ ಶಾಲು ಹಾಕಿಕೊಂಡು ಧರ್ಮ ರಕ್ಷಣೆ, ಗೋರಕ್ಷಣೆ ಮಾಡುತ್ತಿದ್ದಾರೆಯೇ? ಇಲ್ಲ. ಅವರೆಲ್ಲ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆದು ಸ್ವಂತ ಉದ್ಯಮಗಳನ್ನು ನಡೆಸುತ್ತಿದ್ದಾರೆ.

ನಮಗಿಂತ ಕಳಪೆಯಾಗಿರುವುದನ್ನು ನಾವು ಮಾದರಿ ಎಂದು ಭಾವಿಸುತ್ತೇವೆ ಎಂದಾದರೆ, ನಾವು ಅಧಃಪತನದತ್ತ ಸಾಗುತ್ತಿದ್ದೇವೆ ಎಂದರ್ಥ.

ಸಮಾಜದ ಕಟ್ಟಕಡೆಯ ಮನುಷ್ಯನಿಗೆ ಸ್ವಾಭಿಮಾನದ ಬದುಕು ಕೊಡುವುದು, ಬಡತನದ ರೇಖೆಯಿಂದ ಮೇಲೆತ್ತುವುದು, ಸಂವಿಧಾನದ ಆಶಯಗಳನ್ನು ಮೇಲೆತ್ತುವುದು ಬಹಳ ಉತ್ತಮವಾದ ಮಾದರಿ, ಉತ್ತರ ಪ್ರದೇಶದ ಮಾದರಿ ಅನುಸರಿಸಿದರೆ ಇಲ್ಲಿನ ಜನರಿಗೆ ಶಿಕ್ಷಣ, ಉದ್ಯೋಗವಷ್ಟೇ ಅಲ್ಲ ಕೊನೆಗೆ ನೆಮ್ಮದಿಯೂ ಸಿಗುವುದಿಲ್ಲ. ಕರ್ನಾಟಕಕ್ಕೆ ಅದರದ್ದೇ ಆದ ಗೌರವಯುತ ಮಾದರಿ ಇದೆ, ಕೋಮು ಸೌಹಾರ್ದದ ಉದಾರವಾದಿ ಮಾದರಿ ಇದೆ. ಅದನ್ನು ಉಳಿಸಿಕೊಂಡರೆ ಅಷ್ಟೇ ಸಾಕು.

ಲೇಖಕ: ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ

ನಿರೂಪಣೆ: ಮನೋಜಕುಮಾರ್ ಗುದ್ದಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 192



ಕಣ್ಣೀರಿಟ್ಟ ದಕ್ಷ

ಹಿಂದೆ ಶಿವದ್ವೇಷದಿಂದ ಪಾಪಿಯಾಗಿದ್ದ ದಕ್ಷನ ಮೇಲೆ ಶಿವನ ಪ್ರಸನ್ನದೃಷ್ಟಿ ಬಿದ್ದಾಗ ಶರತ್ಕಾಲದ ಚಂದ್ರನಂತೆ ನಿರ್ಮಲನಾದ. ಆಗ ಅವನು ಮೃತಳಾದ ತನ್ನ ಮಗಳು ಸತಿಯನ್ನು ನೆನಪಿಸಿಕೊಂಡು ದುಃಖಿಸಿದ. ಮನೆಯ ನಂದಾದೀಪದಂತಿದ್ದ ಮಗಳನ್ನು ತನ್ನ ಅಜ್ಞಾನ, ದುರಹಂಕಾರದಿಂದ ಸಾವಿಗೀಡಾಗುವಂತೆ ಮಾಡಿದ ಮಹಾಪಾಪಿ ತಾನೆಂದು ರೋದಿಸಿದ. ಮಗಳೆಂಬ ಕನಿಕರವೂ ಇಲ್ಲದೆ ನಿಕೃಷ್ಟನಾಗಿ ನಡೆದುಕೊಂಡೆ. ಅಳಿಯನೆಂಬ ಬಂಧುತ್ವವನ್ನೂ ಪರಿಗಣಿಸದೆ ನಿನ್ನನ್ನು ಅವಮಾನಿಸಿದೆ – ಎಂದು ಸಂಕಟಪಟ್ಟ. ಬಳಿಕ ಶಂಕರನಿಗೆ ನಮಸ್ಕರಿಸಿ, 'ಓ ವಿಶ್ವೇಶ್ವರ, ನೀನು ಜಗದ್ರೂಪನು, ಪರಬ್ರಹ್ಮಸ್ವರೂಪನು, ಜೀವಾತ್ಮರೂಪನು, ಜಗತ್ತನ್ನು ಸಲಹುವ ಹರಿ ಮುಂತಾದವರನ್ನೂ ಸಲಹುವವನು, ಸರ್ವೋತ್ತಮನು. ದೇವದೇವನಾದ ಓ ಮಹಾದೇವ, ನನ್ನಲ್ಲಿ ಅನುಗ್ರಹವನ್ನು ಮಾಡಿ ನನ್ನ ಅಪರಾಧವನ್ನು ಕ್ಷಮಿಸು. ಓ ಶಂಭೋ, ಶಿಕ್ಷಿಸುವ ನೆವದಿಂದ ನನ್ನಲ್ಲಿ ಅನುಗ್ರಹವನ್ನೇ ನೀನು ಮಾಡಿರುವೆ. ನಾನು ತಿಳಿವಳಿಕೆಯಿಲ್ಲದ ಮೂಢನಾಗಿದ್ದೆ. ಈಗ ನಿನ್ನ ಸ್ವರೂಪವು ತಿಳಿಯಿತು. ನೀನು ಎಲ್ಲರಿಗಿಂತಲೂ ಶ್ರೇಷ್ಠನು. ವಿಷ್ಣು, ಬ್ರಹ್ಮ ಮೊದಲಾದವರು ನಿನ್ನನ್ನು ಸೇವಿಸುವರು. ವೇದಗಳು ನಿನ್ನನ್ನು ಸ್ತುತಿಸುವುವು. ಪರಮೇಶ್ವರನೇ ನೀನು ಸತ್ಪುರುಷರಿಗೆ ಕಲ್ಪವೃಕ್ಷದಂತೆ ಬೇಕಾದುದನ್ನು ಕೊಡುವೆ. ನೀನು ವಿದ್ಯಾ, ತಪಸ್ಸು, ವ್ರತಗಳನ್ನು ಅನುಷ್ಠಾನಿಸುವ ಸಜ್ಜನರನ್ನು ಮೊದಲಿಗೆ ಮುಖದಿಂದ ಸೃಜಿಸಿರುವೆ. ಆತ್ಮತತ್ವವನ್ನು ತಿಳಿಯಲು ಅವರನ್ನು ಈ ರೀತಿ ಸೃಷ್ಟಿಸಿದೆ. ಗೋಪಾಲನು ಪಶುಗಳನ್ನು ರಕ್ಷಿಸುವಂತೆ, ನೀನು ಪ್ರಾಣಿಗಳನ್ನು ಎಲ್ಲ ಅಪತ್ತುಗಳಿಂದಲೂ ರಕ್ಷಿಸುವೆ. ದುಷ್ಟರನ್ನು ಶಿಕ್ಷಿಸಿ, ಧರ್ಮವನ್ನು ರಕ್ಷಿಸುವೆ. ನಿನ್ನನ್ನು ಕೆಟ್ಟ ಮಾತುಗಳೆಂಬ ಬಾಣಗಳಿಂದ ಬಹಳವಾಗಿ ಪ್ರಹರಿಸಿದೆ. ದೇವತೆಗಳು ಮಹಾ ಅಪರಾಧವನ್ನು ಮಾಡಿದರು. ಆದರೂ ದಯಾಮಯನಾದ ನೀನು ನಮ್ಮೆಲ್ಲರನ್ನು ಕ್ಷಮಿಸಿ, ಅನುಗ್ರಹಿಸಿರುವೆ' ಎಂದು ಬಹಳ ಸ್ತೋತ್ರ ಮಾಡಿದನು.

ನಂತರ ಹರಿಯು ಶಿವನಿಗೆ ನಮಸ್ಕರಿಸಿ,'ಓ ಪರಮೇಶ್ವರನೆ, ನೀನು ದೇವದೇವನು, ಪರಬ್ರಹ್ಮನು, ಪರಮಾತ್ಮನು, ದಯಾಮಯನು, ಜಗತ್ತೆಲ್ಲವನ್ನೂ ವ್ಯಾಪಿಸಿರುವ ಸ್ವತಂತ್ರನು, ನಿನ್ನ ಯಶಸ್ಸನ್ನು ವೇದಗಳು ಗಾನಮಾಡುವುವು. ಇಂತಹ ನೀನು ಅಪರಾಧಿಗಳಾದ ನಮ್ಮಲ್ಲಿ ಅನುಗ್ರಹವನ್ನು ಮಾಡಿರುವೆ. ದಕ್ಷನ ಅಪರಾಧವನ್ನು ಮನ್ನಿಸಿದೆ. ನೀನು ಸ್ತುತಿನಿಂದೆಗಳಿಂದ ಮನೋವಿಕಾರವನ್ನು ಹೊಂದುವವನಲ್ಲ. ಮೂಢತನದಿಂದ ನಾನೂ ನಿನಗೆ ಅಪರಾಧವನ್ನು ಮಾಡಿರುವೆ. ನೀನು ಪರಬ್ರಹ್ಮಸ್ವರೂಪನು. ಸಮಸ್ತರಿಗೂ ನೀನು ಜನಕನಾಗಿರುವೆ. ಆದುದರಿಂದ ನನ್ನ ಅಪರಾಧಗಳನ್ನು ಕ್ಷಮಿಸು' ಎಂದು ಸ್ತುತಿಸಿದ.

ನಂತರ ಬ್ರಹ್ಮ ಹೀಗೆ ಸ್ತುತಿಸಿದ: 'ಓ ಮಹಾದೇವನೆ, ನೀನು ಸ್ವತಂತ್ರನು. ಪರಮಾತ್ಮನು, ಪರಮೇಶ್ವರನು. ನಿನಗಾದ ಅವಮಾನವನ್ನು ಗಣಿಸದೆ ನನ್ನ ಪುತ್ರನಾದ ದಕ್ಷನಲ್ಲಿ ಅನುಗ್ರಹವನ್ನು ಮಾಡಿರುವೆ. ಓ ದೇವೇಶ, ಈಗ ನೀನು ಪ್ರಸನ್ನನಾಗಿ ದಕ್ಷಯಜ್ಞವನ್ನು ಉದ್ಧರಿಸಿ ಸಮಾಪ್ತಿಗೊಳಿಸು. ಎಲ್ಲರ ಶಾಪವನ್ನು ಹೋಗಲಾಡಿಸು. ನಮ್ಮನ್ನು ಸತ್ಕರ್ಮದಲ್ಲಿ ಪ್ರೇರಿಸುವವನೂ ನೀನೆ, ದುಷ್ಕರ್ಮವನ್ನು ನಿರಾಕರಿಸುವವನೂ ನೀನೆ ಆಗಿರುವೆ' ಎಂದು ಪರಮೇಶ್ವರನನ್ನು ಅಂಜಲಿಬದ್ಧನಾಗಿ, ಸ್ತೋತ್ರಮಾಡಿ ವಿನಯದಿಂದ ನಿಂತ.

ದಕ್ಷ, ವಿಷ್ಣು, ಬ್ರಹ್ಮರ ನಂತರ ಇಂದ್ರ ಮೊದಲಾದ ದೇವತೆಗಳು, ಲೋಕಪಾಲರು, ಪ್ರಸನ್ನನಾದ ಪರಮೇಶ್ವರನನ್ನು ಭಕ್ತಿಯಿಂದ ಅನೇಕ ವಿಧವಾಗಿ ಸ್ತುತಿಸಿದರು. ಸಿದ್ಧರು, ಗಂಧರ್ವರು, ದೇವಮುನಿಗಳು, ನಾಗದೇವತೆಗಳು ಎಲ್ಲರೂ ಭಕ್ತಿಯಿಂದ ಶಿವನನ್ನು ನಮಸ್ಕರಿಸಿ ಸ್ತುತಿಸಿದರು ಎಂಬಲ್ಲಿಗೆ ಸತೀಖಂಡದ ನಲವತ್ತೆರಡನೆಯ ಅಧ್ಯಾಯ ಮುಗಿಯುತ್ತದೆ.

ಕಠಿಣ ಕಾನೂನುಗಳ ಕಟ್ಟುನಿಟ್ಟಿನ ಜಾರಿ ಅನಿವಾರ್ಯ

• ಪಿ. ರಾಜೀವ್



ವಿಪಕ್ಷಗಳು ಆರೋಪಿಸುವಂತೆ ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆಯೇ? ಯೋಗಿ ಮಾದರಿ ಇದಕ್ಕೆ ಪರ್ಯಾಯವಾಗಬಲ್ಲುದೇ? ಯೋಗಿ ಮಾದರಿಯನ್ನು ಕರ್ನಾಟಕದಲ್ಲಿಯೂ ಜಾರಿಗೊಳಿಸಲು ಸಿದ್ಧ ಎನ್ನುತ್ತಿದ್ದಂತೆ ವಿಪಕ್ಷಗಳು ಬೇರೊಂದು ರಾಗವನ್ನು ಎತ್ತಿ ಆತಂಕವನ್ನು ವ್ಯಕ್ತಪಡಿಸುತ್ತಿರುವುದಾದರೂ ಏಕೆ?

ಕರ್ನಾಟಕದಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲವು ಅಹಿತಕರ ಘಟನೆಗಳು ನಡೆದಿವೆ. ಕೆಲವೇ ದಿನಗಳಲ್ಲಿ ಮೂರು ಕೊಲೆಗಳು ಸಂಭವಿಸಿವೆ. ಕರ್ನಾಟಕದಲ್ಲಿ ಇಂತಹ ಘಟನೆಗಳನ್ನು ಹತ್ತಿಕ್ಕಬೇಕಾದರೆ ಯೋಗಿ ಮಾದರಿಯ ಆಡಳಿತವನ್ನು ಜಾರಿಗೊಳಿಸಬೇಕು ಎಂಬ ಕೂಗು ಕೇಳಿಬರುತ್ತಿದೆ. ಸಾರ್ವಜನಿಕ ವಲಯದಲ್ಲಿ ತೀಕ್ಷ್ಣವಾಗಿ ವ್ಯಕ್ತವಾಗುತ್ತಿದ್ದ ಅಭಿಪ್ರಾಯಕ್ಕೆ ಮನ್ನಣೆ ನೀಡುವಂತೆ, ಅಗತ್ಯಬಿದ್ದರೆ ಯೋಗಿ ಮಾದರಿಯನ್ನು ಕರ್ನಾಟಕದಲ್ಲಿಯೂ ಜಾರಿಗೊಳಿಸಲು ಸಿದ್ಧ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೇ ನುಡಿದಿದ್ದಾರೆ. ವಿಪಕ್ಷಗಳು ಆರೋಪಿಸುವಂತೆ ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆಯೇ? ಯೋಗಿ ಮಾದರಿ ಇದಕ್ಕೆ ಪರ್ಯಾಯವಾಗಬಲ್ಲುದೇ? ಯೋಗಿ ಮಾದರಿಯನ್ನು ಕರ್ನಾಟಕದಲ್ಲಿಯೂ ಜಾರಿಗೊಳಿಸಲು ಸಿದ್ಧ ಎನ್ನುತ್ತಿದ್ದಂತೆ ವಿಪಕ್ಷಗಳು ಬೇರೊಂದು ರಾಗವನ್ನು ಎತ್ತಿ ಆತಂಕವನ್ನು ವ್ಯಕ್ತಪಡಿಸುತ್ತಿರುವುದಾದರೂ ಏಕೆ?

ಒಂದು ರಾಜ್ಯ ಅಥವಾ ದೇಶದ ಒಟ್ಟಾರೆ ಅಭಿವೃದ್ಧಿಯನ್ನು ಭೌತಿಕ ಗುರಿಗಳ ಅನುಷ್ಠಾನದಿಂದ ಮಾತ್ರ ಅಳೆಯಲಾಗುವುದಿಲ್ಲ. ಆ ಭೌಗೋಳಿಕ ಪ್ರದೇಶದಲ್ಲಿ ನೆಲೆಸಿರುವ ಜನಸಮುದಾಯದ ಸಂತೃಪ್ತಿ ಕೋಷ್ಟಕದೊಂದಿಗೆ ಅವಲೋಕನ ಮಾಡಬೇಕಾಗುತ್ತದೆ. ಕರ್ನಾಟಕದ ಭೂಪ್ರದೇಶ 1.91 ಲಕ್ಷ ಚದರ ಕಿ.ಮೀ ಇದ್ದರೆ ಉತ್ತರ ಪ್ರದೇಶದ ಭೌಗೋಳಿಕ ಪ್ರದೇಶ 2.43 ಲಕ್ಷ ಚದರ ಕಿ.ಮೀನಷ್ಟಿದೆ. ಕರ್ನಾಟಕದ ಜನಸಂಖ್ಯೆ 2011ರ ಜನಗಣತಿಯಂತೆ 6 ಕೋಟಿಯಷ್ಟಿದ್ದರೆ ಉತ್ತರ ಪ್ರದೇಶದ ಜನಸಂಖ್ಯೆ ಸುಮಾರು 19 ಕೋಟಿಯಷ್ಟಿದೆ. ಜನಪ್ರಿಯ ಯೋಜನೆಗಳು ಹಾಗೂ ಓಟ್‌ಬ್ಯಾಂಕ್‌ಗಾಗಿ ತುಷ್ಟೀಕರಣದ ರಾಜಕೀಯಕ್ಕೆ ಶರಣಾಗಿದ್ದರಿಂದ ಉತ್ತರ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದುಹೋಗಿತ್ತು. 2017ಕ್ಕೂ ಮುಂಚೆ ಇದ್ದ ಸಮಾಜವಾದಿ ಪಕ್ಷ ಹಾಗೂ ಬಹುಜನ ಸಮಾಜ ಪಕ್ಷದ ಆಡಳಿತದ ಶೈಲಿಯಿಂದಾಗಿ ಉತ್ತರ ಪ್ರದೇಶವು ಗೂಂಡಾರಾಜ್ಯ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿತ್ತು. ತುಷ್ಟೀಕರಣದ ಪರಾಕಾಷ್ಠೆಯನ್ನು ತಲುಪುವ ರಾಜಕೀಯ ತೀರ್ಮಾನಗಳು ಕೆಲವು ವರ್ಗದವರಿಗೆ ವಿಪರೀತವಾದ ಸೌಲಭ್ಯವನ್ನು ನೀಡಿದ್ದರೆ, ಕೆಲವು ಸಮುದಾಯಗಳು ಅದರಿಂದ ಸ್ಪಷ್ಟವಾಗಿ ವಂಚನೆಗೊಳಗಾಗಿದ್ದವು. ಹೆಣ್ಣುಮಕ್ಕಳು ಸಂಜೆಯ ಬಳಿಕ ಸಾರ್ವಜನಿಕ ಸ್ಥಳಗಳಲ್ಲಿ ಸ್ವತಂತ್ರವಾಗಿ ತಿರುಗಾಡುವಂತಹ ಸುರಕ್ಷತೆ ಇದ್ದಿರಲಿಲ್ಲ.

ಕಾನೂನುಗಳು ಎಷ್ಟೇ ಪ್ರಬಲವಾಗಿದ್ದರೂ ಅನುಷ್ಠಾನಗೊಳಿಸುವ ಸಂಸ್ಥೆ ಹಾಗೂ ನೌಕರರಲ್ಲಿ ಬದ್ಧತೆ ಇರದಿದ್ದರೆ ಯಾವುದೇ ಮಹತ್ತರ ಬದಲಾವಣೆಗಳು ಸಾಧ್ಯವಾಗುವುದಿಲ್ಲ. ಹಾಗೆಯೇ ಅನುಷ್ಠಾನಗೊಳಿಸುವ ಸಂಸ್ಥೆ ಮತ್ತು ಅಧಿಕಾರಿಗಳಿಗೆ ಇಚ್ಛಾಶಕ್ತಿ, ಕರ್ತವ್ಯ ಬದ್ಧತೆ ಇದ್ದಲ್ಲಿ ಅಸ್ತಿತ್ವದಲ್ಲಿರುವ ನಿಯಮಾವಳಿಗಳ ಚೌಕಟ್ಟಿನಲ್ಲಿಯೇ ಮಹತ್ತರ ಬದಲಾವಣೆಯನ್ನು ಸಾಧಿಸಬಹುದಾಗಿದೆ. 2017ರಲ್ಲಿ ಯೋಗಿ ಆದಿತ್ಯನಾಥ ಅವರು ಉತ್ತರ ಪ್ರದೇಶ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ, ಕಡಿಮೆ ಅವಧಿಯಲ್ಲಿಯೇ ಗೂಂಡಾ ರಾಜ್ಯವನ್ನು ಸುರಕ್ಷಿತ ರಾಜ್ಯವನ್ನಾಗಿ ಪರಿವರ್ತಿಸಿದ್ದಾರೆ. ಅಸ್ತಿತ್ವದಲ್ಲಿದ್ದ ಕಾನೂನು ಹಾಗೂ ನಿಯಮಗಳ ಅಡಿಯಲ್ಲಿಯೇ ಇದು ಸಾಧ್ಯವಾಗಿದೆ. ಮಾಫಿಯಾ ದೊರೆಗಳನ್ನು ಮಟ್ಟಹಾಕಲು ಪೊಲೀಸರಿಗೆ ಮುಕ್ತ ಅವಕಾಶ ನೀಡಲಾಗಿದೆ. ಅಧಿಕಾರಿ ವರ್ಗವು ಯಾವುದೇ ಪೂರ್ವಗ್ರಹವಿಲ್ಲದೇ ನಿರ್ಭೀತಿಯಿಂದ ಕರ್ತವ್ಯವನ್ನು ನಿರ್ವಹಿಸುವಾಗ ಅಗತ್ಯವಾದಷ್ಟು ಬಲಪ್ರಯೋಗ ಮಾಡಲು ಭಾರತೀಯ ದಂಡ ಸಂಹಿತೆ ಮತ್ತು ಅಪರಾಧ ಪ್ರಕ್ರಿಯಾ ಸಂಹಿತೆ ಮುಕ್ತ ಅವಕಾಶ ನೀಡಿವೆ.

ಗೂಂಡಾಗಳನ್ನು ನಿಯಂತ್ರಿಸಲು ಅಧಿಕಾರಿಗಳನ್ನು ಜಾಗೃತಗೊಳಿಸಲಾಯಿತು. ಭಯಮುಕ್ತ ಕರ್ತವ್ಯ ನಿರ್ವಹಣೆಗೆ ಹಿಂದೇಟು ಹಾಕಿದ ಅಧಿಕಾರಿಗಳು ಇಲಾಖಾ ಶಿಸ್ತುಕ್ರಮಕ್ಕೂ ಒಳಗಾದರು. ನಿನ್ನೆ-ಮೊನ್ನೆಯವರೆಗೆ ಸಲಾಂ ಹೊಡೆಯುತ್ತಿದ್ದ ಪೊಲೀಸರು ಇದ್ದಕ್ಕಿದ್ದಂತೆ ಅಧಿಕಾರ ಚಲಾಯಿಸಲಾರಂಭಿಸಿದಾಗ ಇಲ್ಲಿಯವರೆಗೆ ಕೊಬ್ಬಿಹೋಗಿದ್ದ ರೌಡಿಗಳು ಕಸಿವಿಸಿಗೊಂಡರು. ಕೆಲ ರೌಡಿಗಳಂತೂ ಸರ್ಕಾರಿ ನೌಕರರ ಮೇಲೆ ಲಾಂಗು-ಮಚ್ಚುಗಳಿಂದ ಹಲ್ಲೆಗೆ ಮುಂದಾದರು. ಸದುದ್ದೇಶದ ಕರ್ತವ್ಯ ನಿರ್ವಹಣೆಗೆ ಪ್ರತಿಭಟನೆ ಎದುರಾದಾಗ ಪೊಲೀಸರ ಬಳಿ ಇದ್ದ ಆಯುಧಗಳು ಸೊಂಟದ ಪೌಚ್‌ನಿಂದ ಅಂಗೈಗೆ ಸ್ಥಳಾಂತರಗೊಂಡವು. ಈವರೆಗೆ ಉತ್ತರ ಪ್ರದೇಶದಲ್ಲಿ ಪೊಲೀಸರು ಮತ್ತು ರೌಡಿಗಳ ನಡುವೆ 8,472 ಎನ್‌ಕೌಂಟರ್‌ಗಳು ಘಟಿಸಿವೆ. ಸುಮಾರು 3,302 ಜನ ಗಾಯಗೊಂಡಿದ್ದರೆ, ಪೊಲೀಸರು ತಮ್ಮ ಜೀವರಕ್ಷಣೆಗಾಗಿ 146 ಮಂದಿಯನ್ನು ಕೊಂದಿದ್ದಾರೆ. ಇಂತಹ ಎನ್‌ಕೌಂಟರ್‌ಗಳಲ್ಲಿ 1,057 ಮಂದಿ ಪೊಲೀಸರು ಗಾಯಗೊಂಡಿದ್ದರೆ 13 ಜನ ನೌಕರರು ಸಹ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಸಾರ್ವಜನಿಕ ನೆಮ್ಮದಿಯನ್ನು ಹಾಳು ಮಾಡುತ್ತಿದ್ದ 18,225 ರೌಡಿಗಳನ್ನು ಐದೂವರೆ ವರ್ಷಗಳಲ್ಲಿ ಬಂಧಿಸಲಾಗಿದೆ. ಕೆಲವು ರೌಡಿಗಳಂತೂ ಜೀವಭಯದಿಂದ ತಾವೇ ನ್ಯಾಯಾಲಯದ ಮುಂದೆ ಶರಣಾದ ಉದಾಹರಣೆಗಳಿವೆ.

ಮುಷ್ಕರ ಅಥವಾ ಪ್ರತಿಭಟನೆಗಳಲ್ಲಿ ಸಾರ್ವಜನಿಕ ಆಸ್ತಿಗಳಿಗೆ ನಷ್ಟವನ್ನುಂಟುಮಾಡಿದರೆ ಆ ನಷ್ಟವನ್ನು ಕೃತ್ಯವೆಸಗಿದ ವ್ಯಕ್ತಿಯಿಂದಲೇ ವಸೂಲಿ ಮಾಡಬೇಕು ಎಂಬ ಕಾನೂನು ಜಾರಿಯಲ್ಲಿದೆ. ಈ ಕಾನೂನು ಪರಿಣಾಮಕಾರಿಯಾಗಿ ಜಾರಿಗೊಂಡಿದ್ದು ಉತ್ತರಪ್ರದೇಶದಲ್ಲಿ ಮಾತ್ರ. ಯಾವುದೇ ಅಪರಾಧಿ ಬೇರೆ ಪ್ರಕರಣಗಳಲ್ಲಿ ಭಾಗಿಯಾಗಿದ್ದರೆ ಅಥವಾ ಒತ್ತುವರಿ ಮಾಡಿದ್ದರೆ ಅಥವಾ ಸಮಾಜಘಾತುಕ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡಿದ್ದರೆ ಅಂತಹ ಕ್ರಿಮಿನಲ್‌ಗಳ ಮೇಲೆ ವಿಶೇಷ ನಿಗಾ ವಹಿಸಿ ಕಾನೂನಿನ ಮೂಲಕವೇ ಕ್ರಮ ಕೈಗೊಳ್ಳುವುದು ಹಾಗೂ ಒತ್ತುವರಿಯನ್ನು ತೆರವುಗೊಳಿಸುವುದು ಯೋಗಿ ಆಡಳಿತದ ಒಂದು ವಿಧಾನವಾಗಿದೆ. ಆದ್ದರಿಂದಲೇ ಯೋಗಿಯನ್ನು ಉತ್ತರ ಪ್ರದೇಶದಲ್ಲಿ 'ಬುಲ್ಡೋಜರ್ ಬಾಬಾ' ಎಂದು ಕರೆಯುತ್ತಾರೆ.

ತನ್ನ ರಾಜ್ಯದಲ್ಲಿ ವಾಸಿಸುವವರೆಲ್ಲರೂ ಈ ನೆಲದ ಕಾನೂನನ್ನು ಗೌರವಿಸಬೇಕು. ಹಾಗಾಗಿ ಮದರಸಾಗಳಲ್ಲಿ ರಾಷ್ಟ್ರಗೀತೆಯನ್ನು ಪ್ರತಿನಿತ್ಯ ಹಾಡಬೇಕು ಎಂಬ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಯಿತು. ಮದರಸಾಗಳಲ್ಲಿ ರಾಷ್ಟ್ರಗೀತೆ ಹಾಡುವ ವಿಡಿಯೊವನ್ನು ಮುಖ್ಯಮಂತ್ರಿ ಕಾರ್ಯಾಲಯಕ್ಕೆ ಕಳುಹಿಸಬೇಕು ಎಂಬ ಸುತ್ತೋಲೆ ಹೊರಡಿಸಲಾಗಿದೆ. ಕಾನೂನು ಸುವ್ಯವಸ್ಥೆ ನಿಯಂತ್ರಣಕ್ಕೆ ಬರುತ್ತಿದ್ದಂತೆ ವಿದೇಶಿ ಹೂಡಿಕೆಯ ಪ್ರಮಾಣ ಹೆಚ್ಚಿದೆ. ಮುಖ್ಯಮಂತ್ರಿಯಾಗಿ ಎಲ್ಲಾ ಇಲಾಖೆಗಳ ಆಡಳಿತಾತ್ಮಕ ಪ್ರಗತಿ ಪರಿಶೀಲನೆಯನ್ನು ಸ್ವತಃ ಯೋಗಿ ಆದಿತ್ಯನಾಥ ಅವರೇ ನಿರ್ವಹಿಸುತ್ತಿರುವುದರಿಂದ ಭ್ರಷ್ಟಾಚಾರ ಇಳಿಮುಖವಾಗಿದೆ.

ಗೋಹತ್ಯೆ ನಿಷೇಧವನ್ನು ಜಾರಿಗೆ ತಂದಿದ್ದಲ್ಲದೆ ಗೋವುಗಳ ಕಳ್ಳಸಾಗಾಣಿಕೆಗೆ ಸಂಬಂಧಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಅಕ್ರಮ ಕಸಾಯಿಖಾನೆಗಳಿಗೆ ಶಾಶ್ವತವಾಗಿ ಬೀಗ ಜಡಿಯಲಾಗಿದೆ. ಜನಸಂಖ್ಯೆ ನಿಯಂತ್ರಣ ನಿಯಮ ಪಾಲಿಸುವವರಿಗಷ್ಟೇ ಸರ್ಕಾರದ ಸೌಲಭ್ಯಗಳು ದೊರೆಯಲಿವೆ ಎಂಬ ಅತ್ಯಂತ ಗಂಭೀರ ತೀರ್ಮಾನವನ್ನು ಜಾರಿಗೊಳಿಸಲಾಗುತ್ತಿದೆ. ಅಯೋಧ್ಯೆಯ ರಾಮ ಮಂದಿರ ನಿರ್ಮಾಣಕ್ಕೆ ಅಡಿಗಲ್ಲು ಹಾಕುವುದರ ಮೂಲಕ ಪ್ರತಿಪಾದಿಸಿದ ಸಿದ್ಧಾಂತಗಳನ್ನು ಅವಕಾಶ ಸಿಕ್ಕಾಗ ಅನುಷ್ಠಾನಗೊಳಿಸುವ ಬದ್ಧತೆ ಯೋಗಿ ಅವರಿಂದ ವ್ಯಕ್ತವಾಗಿದೆ.

ಕರ್ನಾಟಕದಲ್ಲಿ ಸರ್ಕಾರ ಮತ್ತು ಆಡಳಿತದ ಮನಸ್ಥಿತಿಯನ್ನು ಏಕಾಭಿಮುಖವಾಗಿ ಕೊಂಡೊಯ್ಯುವತ್ತ ಬೊಮ್ಮಾಯಿಯವರ ಪ್ರಯತ್ನ ಸಾಗಿದೆ. ಕರ್ನಾಟಕದಲ್ಲಿ ಈವರೆಗೆ ಭಾರತೀಯ ಜನತಾ ಪಕ್ಷವು ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚಿಸಲು ಸಾಧ್ಯವಾಗಿಲ್ಲ. ಆಡಳಿತ ನಡೆಸಿದ ಎರಡು ಅವಧಿಯಲ್ಲಿಯೂ ಸಣ್ಣ ಪ್ರಮಾಣದ ಕಿಚಡಿ ರೂಪದ ಮೈತ್ರಿ ಮನಸ್ಥಿತಿಯ ಸರ್ಕಾರವೇ ಅಸ್ತಿತ್ವಕ್ಕೆ ಬಂದಿದ್ದರಿಂದ ಕರ್ನಾಟಕದ ಅಧಿಕಾರಿಗಳ ಮನಸ್ಥಿತಿ ಹೊಸ ಆಯಾಮಕ್ಕೆ ಸಿದ್ಧಗೊಂಡಂತೆ ಕಾಣುವುದಿಲ್ಲ.


ಕನ್ನಡಿಗರು ಬಯಸುವ ಚುರುಕಿನ ಕಾರ್ಯನಿರ್ವಹಣೆಗೆ ಅಧಿಕಾರಿಗಳ ಮನಸ್ಥಿತಿಯನ್ನು ಸಿದ್ಧಗೊಳಿಸಬೇಕಾಗಿದೆ. ರಾಜಕೀಯ ಹಸ್ತಕ್ಷೇಪ ಹೊರತಾದ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ಅಧಿಕಾರಿಗಳಿಗೂ ಮುಕ್ತ ಸ್ವಾತಂತ್ರ್ಯವನ್ನು ನೀಡಬೇಕಾಗುತ್ತದೆ. ಮುಕ್ತ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳುವ ಅಧಿಕಾರಿ ವರ್ಗವನ್ನು ನಿಯಂತ್ರಿಸುವ ಶಿಸ್ತುಕ್ರಮದ ಅಂಕುಶ ಮತ್ತಷ್ಟು ಮೊನಚುಗೊಳ್ಳಬೇಕಾಗಿದೆ.

ಅಸ್ತಿತ್ವದಲ್ಲಿರುವ ಕಾನೂನುಗಳ ಸಮಯೋಚಿತ ಬಳಕೆ, ನ್ಯಾಯಾಲಯಗಳ ತೀರ್ಪುಗಳು, ಸಾರ್ವಜನಿಕರ ಮನಸ್ಥಿತಿ ಹಾಗೂ ಮಾಧ್ಯಮಗಳ ದೃಷ್ಟಿಕೋನ ಸಮನ್ವಯಗೊಳ್ಳಬೇಕಿದೆ. ಅಭಿವೃದ್ಧಿಯ ಜೊತೆಗೆ ಸಾರ್ವಜನಿಕರಿಗೆ ಅವಶ್ಯಕವಾದ ಸಾಮಾಜಿಕ ಸುರಕ್ಷತೆಯನ್ನು ಒದಗಿಸಬೇಕು; ಕಾನೂನನ್ನು ಕೈಗೆತ್ತಿಕೊಳ್ಳುವವರು, ಸಾಮಾಜಿಕ ಶಾಂತಿಯನ್ನು ಕದಡುವವರು ಭಯಪಡುವಂತಹ ವಾತಾವರಣವನ್ನು ಸೃಷ್ಟಿಸಬೇಕಿದೆ. ಸಮಾಜಘಾತುಕರನ್ನು ಕಾನೂನಿನ ಕುಣಿಕೆಗೆ ಒಳಪಡಿಸಬೇಕಿದೆ. ಇವೆಲ್ಲವುಗಳನ್ನು ಗಮನದಲ್ಲಿ ಇರಿಸಿಕೊಂಡೇ ಬೊಮ್ಮಾಯಿ ಅವರು, ಅಗತ್ಯಬಿದ್ದರೆ ಯೋಗಿ ಮಾದರಿಯನ್ನು ಜಾರಿಗೆ ತರಲಾಗುವುದು ಎಂದು ಹೇಳಿದ್ದಾರೆ ಎಂಬುದಾಗಿ ವ್ಯಾಖ್ಯಾನಿಸಬಹುದು.

ಲೇಖಕ: ಕುಡಚಿ ಕ್ಷೇತ್ರದ ಶಾಸಕ

ಪದಬಂಧ 5041

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1. ಕನ್ನಡಿಗ ಹಿಡಿದಿರುವ ಮೈಕ್ರೋಸ್ಕೋಪ್!(5)
3. ಕೂಸಿನ ತಲೆಗೆ ಕಟ್ಟುವ ಟೋಪಿ(3)
5. ಆಹಾ! ರುಚಿಕಟ್ಟಾದ ಭೋಜನ(5)
7. ಕೊನೆಗೆ ಹಣ್ಣನ್ನಿಟ್ಟರೆ ಖಂಡಿತಾ ಯಶಸ್ವಿ! (3)
8. ಯಾವುದೇ ಅಪರಾಧವನ್ನು ಮಾಡದಿರುವವನು(5)
10. ಅಲಕ್ಷ್ಯಕ್ಕೆ ಪರ್ಯಾಯ ಪದ (3)
11. ನವ ಬಾಳಿದು(5)
14. ಮರಿಗೆ ಜರೂರಾಗಿ ನೀಡಿದ ಕೂಲಿ(3)
15. ಪ್ರಸವ ಕೋಣೆಯಿದು(5)

ಮೇಲಿಂದ ಕೆಳಕ್ಕೆ
1. ಕರ ಕೊನೆಗಿಟ್ಟಾಗ ಹಂದಿ ಕಾಣಿಸಿತೇ? (3)
2. ಹತ್ತು ವರ್ಷಗಳ ಕಾಲದ ಅವಧಿ(3)
4. ಯಥೇಚ್ಛ ಎಂದು ಹೀಗೆನ್ನಿ(3)
6. ವರನಲ್ಲಿ ಪ್ರತಿನಿಧಿ ಕಾಣುತ್ತಿದ್ದಾನೆ(3)
7. ಸತ್ತವರನ್ನು ಹೂಳುವ ಸ್ಥಳ(3)
8. ಪರೀಕ್ಷೆ ಗಾಗಿ ಎದುರು ನೋಡುವುದು!(3)
9. ರಾಯರಿಂದ ಬಂದಿರುವ ನಿರೂಪ(3)
10. ಕೊನೆಗೆ ಮಗ ತಿರುಗಿದಾಗ ಹುಟ್ಟು ಕಾಣುತ್ತದೆ (3)
12. ಇದೊಂದು ಸಾಂಬಾರ ದ್ರವ್ಯ(3)
13. ಮಾದರಿ ಇಲ್ಲಿದೆ(3)

5040ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮತಿಹೀನ 3.ವರಮಾನ
5.ಗಗನ 7.ವಿರಹ
9.ಬಾಲಕ 10.ಪ್ರಭವ
11.ಬಯಕೆ 13.ನಯನ
14.ಕಲಭ 16.ಮಾನ್ಯತೆ
18.ಕಳೆಬರ 19.ನೆರೆಮನೆ

ಮೇಲಿಂದ ಕೆಳಕ್ಕೆ:
1.ಮನವಿ 2.ನಗ
3.ವನ 4.ನಡುಕ
6.ಗಹ್ವರ 8.ಹಯವದನ
9.ಬಾಲಬಡುಕ 12.ಅನನ್ಯ
13.ನರ್ತಕ 15.ಭಜನೆ
16.ಮಾರ 17.ತೆನೆ

ಸುಡೊಕು 5427

	6			2		5		
5		4			7		2	3
	2		5			6		7
8		1		3				9
			9		8			
9		2		5		3		6
7		3		9				
	8		7		5	9	3	
		9		8			7	5

5426 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಆಗಸ್ಟ್ 6, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯಣ– ವರ್ಷ ಋತು ತಿಥಿ: (ಶ್ರಾವಣ ಶುಕ್ಲ) ನವಮಿ ಗಂ. 26-11 ನಕ್ಷತ್ರ: ವಿಶಾಖ ಗಂ. 17-51 ಯೋಗ: ಶುಕ್ಲ ಗಂ. 12-41, ಕರಣ: ಬಾಲವ ಗಂ. 15-09 ಕರ್ಕಾಟಕ ಮಾಸದ 20 ನೇ ದಿನ.
ರಾಹುಕಾಲ : ಬೆಳಿಗ್ಗೆ 09:00 – 10:30
ಸೂರ್ಯೋದಯ : 06-20 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ :07 ಮೊಹರಮ್
ಅದೃಷ್ಟ ಸಂಖ್ಯೆ: 7, 9

ಮೇಷ: ಸಂಬಂಧಿಕರಲ್ಲಿ ಇರುವ ಋಣಬಾಧೆಯಿಂದ ಮುಕ್ತರಾಗಲು ಗಮನ ನೀಡಿ. ಚಿತ್ರಕಲೆ, ಕಥೆ- ಕವನಗಳ ಬರವಣಿಗೆಯಲ್ಲಿ ಆಸಕ್ತಿ ಮೂಡಲಿದೆ. ನಟನಾ ವೃತ್ತಿಯವರಿಗೆ ಖ್ಯಾತಿ , ಸಂಪತ್ತು ಹರಿದು ಬರಲಿದೆ.

ವೃಷಭ: ಹಣಕಾಸಿನ ವ್ಯವಹಾರದಲ್ಲಿ ಪಾಲುದಾರಿಕೆ ಪಡೆಯುವ ಬಗ್ಗೆ ಯೋಚಿಸಲು ಸರಿಯಾದ ಸಮಯ. ರೈತಾಪಿ ವರ್ಗದವರಿಗೆ ಆಹಾರ ಪದಾರ್ಥಗಳ ಬೆಳೆಯು ಲಾಭವನ್ನು ಉಂಟುಮಾಡಲಿದೆ.

ಮಿಥುನ: ನಿಮ್ಮ ಚಾಣಾಕ್ಷತನದಿಂದ ಸಂಘ ಸಂಸ್ಥೆಗಳ ಪದಾಧಿಕಾರ ಹತ್ತಾರು ಜನರ ತೀರ್ಮಾನದ ಫಲವಾಗಿ ಆಕಸ್ಮಿಕವಾಗಿ ದೊರಕುವುದು. ಸುಖ ಸಂಪತ್ತಿನ ಜೊತೆಯಲ್ಲಿ ಚಿಂತೆಯು ನಿದ್ದೆಗೆಡಿಸುತ್ತದೆ.

ಕರ್ಕಾಟಕ: ಪ್ರೇಮಿಗಳಿಗೆ ಜೀವನ ನಿರ್ಣಯಿಸಲು ಉತ್ತಮ ಅವಕಾಶಗಳು ಈ ದಿನ ಬರಲಿದೆ. ಅಬಕಾರಿ ಇಲಾಖೆಯವರಿಗೆ ಹೆಚ್ಚಿನ ಕೆಲಸದಿಂದಾಗಿ ಅತಿಯಾದ ದೇಹಾಯಾಸ ಆಗುವುದು. ಶ್ರೀ ರಾಮ ನಾಮದ ಜಪ ಮಾಡಿ.

ಸಿಂಹ: ತಂದೆ-ತಾಯಿಯ ಶುಭ ಆಶೀರ್ವಾದದೊಂದಿಗೆ ಈ ದಿನವನ್ನು ಪ್ರಾರಂಭಿಸಿ. ಮನೆ ಕಟ್ಟಲೇಬೇಕೆಂಬ ನಿಮ್ಮ ಆಸೆಯು ಪ್ರಾರಂಭದ ಹಾದಿಯನ್ನು ಹಿಡಿಯುವುದು. ಮನೆಯಲ್ಲಿ ಸುಖ ಶಾಂತಿ ಹೆಚ್ಚಲಿದೆ.

ಕನ್ಯಾ: ಪ್ರಯಾಣದಲ್ಲಿ ಅಪವಾದದ ಸನ್ನಿವೇಶಗಳು ಎದುರಾಗಬಹುದು. ಜಾಗ್ರತರಾಗಿರಿ. ಆರ್ಥಿಕವಾಗಿ ಖರ್ಚಿನ ಮೇಲೆ ನಿಯಂತ್ರಣವಿರಲಿ. ಉದ್ಯೋಗದಲ್ಲಿ ಸಿಗುವಂತಹ ವರ್ಗಾವಣೆಯ ಅವಕಾಶ ಬಿಡಬೇಡಿ.

ತುಲಾ: ನಿಯೋಜಿತ ದಿನಚರಿಯ ಪಾಲನೆಯಿಂದ ಅನಗತ್ಯ ಅಲೆದಾಟ ತಪ್ಪಲಿದೆ. ದುರ್ಜನರ ಸಹವಾಸದಿಂದ ಗೌರವ ಕಳೆದುಕೊಳ್ಳುವಂತೆ ಆಗಬಹುದು. ಸಜ್ಜನರ ಒಡನಾಟದಿಂದ ಯಶೋಭಿವೃದ್ಧಿ ಉಂಟಾಗಲಿದೆ.


ವೃಶ್ಚಿಕ: ಕುಟುಂಬದ ಹಿರಿಯರ ಆರೋಗ್ಯ ನಷ್ಟದಿಂದಾಗಿ ಆಸ್ಪತ್ರೆಯ ತಿರುಗಾಟದ ಕ್ಲೇಶ ಸಂಭವಿಸಬಹುದು. ವಿದ್ಯಾಭ್ಯಾಸದಲ್ಲಿ ಉದಾಸೀನ ತೋರುತ್ತಿದ್ದ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಹೆಚ್ಚಿನ ಆಸಕ್ತಿ ಉಂಟಾಗಲಿದೆ.

ಧನು: ಸಂಬಂಧಿಕರ ವಲಯದಲ್ಲಿ ನಿಮ್ಮ ಮೇಲಿದ್ದ ತಪ್ಪು ಅಭಿಪ್ರಾಯಗಳು ದೂರಾಗುವುದು. ಔಷಧಿ ಹಾಗೂ ರಾಸಾಯನಿಕ ಕಾರ್ಯಕ್ಷೇತ್ರಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಈ ದಿನ ಹರ್ಷದಾಯಕವಾಗಿರುತ್ತದೆ.

ಮಕರ: ಸಂಸ್ಥೆಗೆ ಕಾರ್ಮಿಕ ವರ್ಗದವರ ಪರಿಶ್ರಮದಿಂದ ಹೆಚ್ಚಿನ ಆದಾಯ ಉಂಟಾಗಲಿದೆ. ಭವಿಷ್ಯದ ಯೋಜನೆಗಳಿಗೆ ಹೆಚ್ಚು ಗಮನ ಕೊಡುವಿರಿ. ಸಾಲದ ಹಣ ಹಿಂತಿರುಗಿ ಬರುವುದು. ಮಕ್ಕಳ ಆರೋಗ್ಯದಲ್ಲಿ ಗಮನ ನೀಡಿ.

ಕುಂಭ: ಈ ದಿನ ಕೆಲಸಗಳನ್ನು ಸಮರ್ಪಕವಾಗಿ ಮಾಡಿದ ತೃಪ್ತಿಕರ ಭಾವ ನಿಮ್ಮಲ್ಲುಂಟಾಗಲಿದೆ. ಎಲೆಕ್ಟ್ರಾನಿಕ್ ಮತ್ತು ಹಾರ್ಡ್‌ವೇರ್ ವಸ್ತುಗಳಿಂದ ಅಧಿಕ ಲಾಭ ಪಡೆಯಲಿದ್ದೀರಿ. ಸಂತೋಷವಿರುವುದು.

ಮೀನ: ಕುಶಲ ಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯವಿರುವುದು. ಸಾಂಸಾರಿಕವಾಗಿ ಹೊಂದಿಕೊಂಡು ಹೋಗುವುದೇ ಉತ್ತಮ ಎಂಬ ನಿಮ್ಮ ಭಾವನೆ ಸರಿಯಾಗಿದೆ.

ದೇವರಹಿಪ್ಪರಗಿ, ಬಸವನಬಾಗೇವಾಡಿ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆ ಡೋಣಿ ನದಿಯ ಪ್ರವಾಹದಿಂದ ಸಾತಿಹಾಳ ಗ್ರಾಮದ ಬಳಿ ಮುಳುಗಿರುವುದು (ಎಡ ಚಿತ್ರ) ಮಡಿಕೇರಿ ತಾಲ್ಲೂಕಿನ ಬೆಟ್ಟತ್ತೂರು ಗ್ರಾಮದಲ್ಲಿ ಮಣ್ಣು ಕುಸಿದಿರುವುದು

ಕಾವೇರಿ ತೀರದಲ್ಲಿ ಪ್ರವಾಹ ಭೀತಿ ● ಸುಳ್ಯ ತಾಲ್ಲೂಕಿನಲ್ಲಿ ಗುಡ್ಡ ಕುಸಿತ

ಮಳೆ ಅಬ್ಬರ: ಮನೆ, ಬೆಳೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶುಕ್ರವಾರವೂ ವರುಣನ ಆರ್ಭಟ ಮುಂದುವರಿದಿದೆ. ಹಲವೆಡೆ ಮನೆ, ಬೆಳೆ ಹಾನಿಯಾಗಿದೆ.

ವಿಜಯಪುರ ಜಿಲ್ಲೆಯಾದ್ಯಂತ ಬಹುತೇಕ ಹಳ್ಳ ಕೊಳ್ಳ, ಬಾಂದಾರ ಹಾಗೂ ಕೆರೆ ಕಟ್ಟೆಗಳು ತುಂಬಿ ಹರಿಯುತ್ತಿವೆ. ಬಸವನಬಾಗೇವಾಡಿ-ಮುದ್ದೇಬಿಹಾಳ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಸಾತಿಹಾಳ ಗ್ರಾಮದ ಹತ್ತಿರದಲ್ಲಿರುವ ಡೋಣಿ ನದಿಯ ಸೇತುವೆ ಪ್ರವಾಹದಲ್ಲಿ ಮುಳುಗಿದ್ದು, ಸಂಚಾರ ಅಸ್ತವ್ಯಸ್ತಗೊಂಡಿತು.

ದೇವರ ಹಿಪ್ಪರಗಿ ಪಟ್ಟಣದಲ್ಲಿ ಹೊಸೂರಹಳ್ಳ ತುಂಬಿ ತಾಳಿಕೋಟೆ ಸೇತುವೆ ಮೇಲೆ ನೀರು ಹರಿಯಿತು. ಐತಿಹಾಸಿಕ ಮಲ್ಲಯ್ಯ ದೇವಸ್ಥಾನದ ಗರ್ಭಗುಡಿಯೊಳಗೆ ನೀರು ಪ್ರವೇಶಿಸಿತು. ದೇವಸ್ಥಾನದ ಕಾಣಿಕೆ ಹುಂಡಿಯ ಹಣ ಕೆಸರು ನೀರಿನಲ್ಲಿ ತೊಯ್ದವು.

ತಿಕೋಟಾ ತಾಲ್ಲೂಕಿನ ಕಳ್ಳಕವಟಗಿ, ಧನ್ಯಾಳ, ದಾಸ್ಯಾಳ, ಕೊಟ್ಯಾಳ ಗ್ರಾಮಗಳು ಈ ನದಿ ದಡದಲ್ಲಿಯೇ ಇದ್ದು, ಮುಳುಗಡೆಯ ಭೀತಿ ಎದುರಿಸುತ್ತಿವೆ. ಹಲವು ರೈತರ ಜಮೀನುಗಳಿಗೆ ನುಗ್ಗಿದ ಮಳೆ ನೀರಿನಿಂದ ಕಬ್ಬು, ತೊಗರಿ, ಉದ್ದು, ಹೆಸರು ಬೆಳೆಗಳನ್ನು ನೀರಲ್ಲಿ ನಿಂತು ಹಾಳಾಗಿವೆ.

ಮಳೆ ವಿವರ ಸೆಂ. ಮೀ	
ಬಬಲೇಶ್ವರ	13.24
ದೇವರ ಹಿಪ್ಪರಗಿ	10.52
ಮಾಳ (ಕಾರ್ಕಳ)	17.6
ಕೊಕ್ಕಡ (ಬೆಳ್ತಂಗಡಿ)	10.5
ಕೊಟ್ಟಿಗೆಹಾರ	13.3
ಕೆರೆಕಟ್ಟೆ	10.4
ಹೊಸಕೆರೆ	10.2
ಮದೆ (ಮಡಿಕೇರಿ)	15
ಭಾಗಮಂಡಲ	12
ಗಾಳಿಬೀಡು	12
ಹೆತ್ತೂರು (ಹಾಸನ)	11

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮೈಸೂರು ಭಾಗದ ಐದು ಜಿಲ್ಲೆಗಳಲ್ಲಿ ಶುಕ್ರವಾರವೂ ಮಳೆ ಮುಂದುವರಿದಿದ್ದು, ಕೊಡಗಿನ ಎಲ್ಲ ಶಾಲೆಗಳಿಗೆ ಆಗಸ್ಟ್ 6ರಂದು ರಜೆ ಘೋಷಿಸಲಾಗಿದೆ. ಕಾವೇರಿ ನದಿ ತೀರದಲ್ಲಿ ಪ್ರವಾಹ ಭೀತಿ ಎದುರಾಗಿದ್ದು, ಶ್ರೀರಂಗಪಟ್ಟಣದ ಪಟ್ಟಣದ ಸ್ನಾನಘಟ್ಟ, ಪಶ್ಚಿಮವಾಹಿನಿ, ಕಾವೇರಿ ಸಂಗಮಕ್ಕೆ ಯಾರೂ ತೆರಳುವಂತಿಲ್ಲ. ಐತಿಹಾಸಿಕ ವೆಲ್ಲೆಸ್ಲಿ ಸೇತುವೆ ಮೇಲೆ ಸಂಚಾರವನ್ನು ನಿಷೇಧಿಸಿದ್ದು, ಸೇತುವೆಯ ಎರಡೂ ಬದಿಯಲ್ಲಿ ಬ್ಯಾರಿಕೇಡ್ ಹಾಕಲಾಗಿದೆ.

ಕೆ.ಆರ್.ಪೇಟೆ ತಾಲ್ಲೂಕು ಕೋಟಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು ಮಹದೇವಪುರದಲ್ಲಿ ತಲಾ ಒಂದು ಮನೆ ಕುಸಿದಿದೆ. ನಾಗಮಂಗಲ ತಾಲ್ಲೂಕು ಅಣೆಚನ್ನಾಪುರದ ಬಳಿ ಗೂಡ್ಸ್ ವಾಹನ ಹಳ್ಳದ ನೀರಿನಲ್ಲಿ ಕೊಚ್ಚಿ ಹೋಗಿದ್ದು, ಚಾಲಕನನ್ನು ರಕ್ಷಿಸಲಾಗಿದೆ.

ಮಡಿಕೇರಿ ತಾಲ್ಲೂಕಿನ ದಬ್ಬಡ್ಕದಲ್ಲಿ ಅಪಾಯದ ಸ್ಥಳದಲ್ಲಿದ್ದವರನ್ನು ಕಾಳಜಿ ಕೇಂದ್ರಗಳಿಗೆ ಕಳುಹಿಸಲಾಗುತ್ತಿದೆ. ಚೆಂಬು ಗ್ರಾಮದಲ್ಲಿ ಮೇವಿನ ಕೊರತೆ ಎದುರಾಗಿದ್ದು, ಜಿಲ್ಲಾಡಳಿತ ಮೇವು ವಿತರಣೆ ಆರಂಭಿಸಿದೆ. ಹಾಸನ ಜಿಲ್ಲೆಯಲ್ಲಿ 20ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಹಿರೀಸಾವೆ ಹೋಬಳಿಯ ತೆಂಗಿನ ತೋಟಕ್ಕೆ ಹಳ್ಳದ ನೀರು ನುಗ್ಗಿದೆ.

ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕಿನ ಕಾಟ್ನಾಳ್ ಗ್ರಾಮದ ದೊಡ್ಡ ಕೆರೆ ಏರಿ ಕುಸಿದಿದೆ. ಹುಣಸೂರು ತಾಲ್ಲೂಕಿನ ಬನ್ನಿಕುಪ್ಪೆ ಪಂಚಾಯಿತಿ ವ್ಯಾಪ್ತಿಯ ಕೆಬ್ಬನಕೊಪ್ಪಲು, ಹಗರನ ಹಳ್ಳಿ, ಮರದೂರು, ತಟ್ಟೆಕೆರೆ ಗ್ರಾಮದಲ್ಲಿ ತಂಬಾಕು ಬ್ಯಾರನ್ ಕುಸಿದಿದೆ.

ತಮಿಳುನಾಡಿನ ಮೆಟ್ಟೂರು ಜಲಾಶಯದಿಂದ 2.10 ಲಕ್ಷ ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದ್ದು, ನದಿ ಪಾತ್ರದ ಆಲಂಬಾಡಿ, ಆತೂರು, ಜಂಬಲ್‌ಪಟ್ಟಿ ಗ್ರಾಮಗಳಲ್ಲಿ ನೆರೆ ಭೀತಿ ಮೂಡಿದೆ. ಹೊಗೇನಕಲ್-ಗೋಪಿನಾಥಂ ಸೇತುವೆ ಜಲಾವೃತವಾಗಿದ್ದು ಸಂಚಾರಕ್ಕೆ ತೊಂದರೆಯಾಗಿದೆ. ಹೊಗೇನಕಲ್ ರಸ್ತೆಯಲ್ಲಿರುವ ಸಂಗೈಕೊಂಬು ಸೇತುವೆ ಮುಳುಗಡೆಯಾಗಿದೆ.

ಸುಳ್ಯ ತಾಲ್ಲೂಕಿನ ಮಡಪ್ಪಾಡಿಯ ಗೋಳಿಯಡಿಯಲ್ಲಿ ಗುಡ್ಡ ಕುಸಿದು ರಸ್ತೆಗೆ ಮಣ್ಣು ಬಿದ್ದು ಬ್ಲಾಕ್ ಆಗಿ, ವಾಹನ ಸಂಚಾರಕ್ಕೆ ಅಡಚಣೆಯಾಯಿತು. ಮಡಪ್ಪಾಡಿಯಿಂದ ಶೀರಡ್ಕ, ದೇರುಮಜಲು ಸಂಪರ್ಕಿಸುವ ರಸ್ತೆಯಲ್ಲಿ ಅಂಬೆಕಲ್ಲು ಎಂಬಲ್ಲಿ ಬಿರುಕು ಕಾಣಿಸಿಕೊಂಡಿದೆ. ಪೂಂಬಾಡಿ ಸಂಪರ್ಕಿಸುವ ಶೆಟ್ಟಿಮಜಲು ಸೇತುವೆ ಮುಳುಗಡೆಯಾಗಿದೆ.

ತುಮಕೂರು ಜಿಲ್ಲೆಯಲ್ಲಿ ವಾರದಿಂದ ಸತತವಾಗಿ ಬೀಳುತ್ತಿದ್ದ ಮಳೆ ಶುಕ್ರವಾರ ಬಿಡುವು ಕೊಟ್ಟಿದೆ. ಮಧ್ಯಾಹ್ನ, ಸಂಜೆ ಅಲ್ಲಲ್ಲಿ ತುಂತುರು ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.74	68,887	78,324
ಹಾರಂಗಿ	2,859	2,855.69	9,400	14,100
ಕಬಿನಿ	2,284	2283.40	26,000	25,000
ಹೇಮಾವತಿ	2,922	2921.75	15,375	18,110
ಲಿಂಗನಮಕ್ಕಿ	1,819	1,800.20	8,215	4,318.25
ಸೂಪಾ (ಮೀ)	564	542.17	4,245	1,138
ಮಾಣಿ	594	584.74	2,250	-
ತುಂಗಭದ್ರಾ	1,633	1,631.83	66,170	63,611
ಮಲಪ್ರಭಾ	2079.5	2,070.60	4,032	294
ಘಟಪ್ರಭಾ	2175	2,159.66	3,016	104
ಭದ್ರಾ	186	184.4	11,832	12,723
ಆಲಮಟ್ಟಿ (ಮೀ)	519.6	518.84	25,066	1,537
ನಾರಾಯಣಪುರ (ಮೀ)	492.25	491.80	4,000	4,000

* ನೆಲಮಟ್ಟದಿಂದ

ಕೇರಳದ 8 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್

ತಿರುವನಂತಪುರ (ಪಿಟಿಐ): ದಕ್ಷಿಣ ಕರ್ನಾಟಕ ಮತ್ತು ಉತ್ತರ ಕೇರಳ ಭಾಗದಲ್ಲಿ ಭಾರಿ ಮಳೆ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಉತ್ತರ ಕೇರಳದ ಕಾಸರಗೋಡು, ಇಡುಕ್ಕಿ, ತ್ರಿಶೂರ್, ಪಾಲಕ್ಕಾಡ್, ಮಲಪ್ಪುರಂ, ಕೋಯಿಕೋಡ್, ವಯನಾಡು, ಕಣ್ಣೂರು ಜಿಲ್ಲೆಗಳಲ್ಲಿ ಭಾರಿ ಮಳೆ ಮುನ್ಸೂಚನೆ ಇದ್ದು, ದಿನದ ಮಟ್ಟಿಗೆ ಆರೆಂಜ್ ಅಲರ್ಟ್ ಘೋಷಿಸಿದೆ.

ಮಧ್ಯ ಕೇರಳದ ಕೆಲವೆಡೆ 2018ರ ಪ್ರವಾಹ ಪರಿಸ್ಥಿತಿ ಸಂಭವಿಸಬಹುದು ಎಂದು ಸರ್ಕಾರ ಎಚ್ಚರಿಕೆ ನೀಡಿತ್ತು. ಶುಕ್ರವಾರ ಬೆಳಿಗ್ಗೆ ನೀರಿನ ಮಟ್ಟ ಕಡಿಮೆಯಾಗಲು ಪ್ರಾರಂಭಿಸಿದ ನಂತರ ಆತಂಕ ಕಡಿಮೆಯಾಗಿದೆ. ಜುಲೈ 31ರಿಂದ ಕೇರಳದಾದ್ಯಂತ ಈವರೆಗೆ 19 ಜನರು ಸಾವನ್ನಪ್ಪಿದ್ದಾರೆ. ಹಲವು ಜಿಲ್ಲೆಗಳಲ್ಲಿ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಿದೆ. ರಾಜ್ಯದಲ್ಲಿ 4ರಿಂದ 11 ಸೆಂ.ಮೀ.ವರೆಗೂ ಮಳೆ ಸುರಿದಿದೆ.

ಸುದ್ದಿ 2 ನಿಮಿಷ

‘ತಿರಂಗಾ ಅಭಿಯಾನದ ಮುನ್ನ ಆರ್‌ಎಸ್‌ಎಸ್ ಕ್ಷಮೆ ಯಾಚಿಸಲಿ’

ಬೆಂಗಳೂರು: ದೇಶದಲ್ಲಿ ಪ್ರತಿ ಮನೆಯ ಮೇಲೂ ತ್ರಿವರ್ಣ ಧ್ವಜ ಹಾರಿಸಬೇಕೆಂಬ ಅಭಿಯಾನಕ್ಕೆ ಕರೆ ನೀಡುತ್ತಿರುವ ಆರ್‌ಎಸ್‌ಎಸ್ ಹಾಗೂ ಬಿಜೆಪಿ ನಾಯಕರು, ರಾಷ್ಟ್ರಧ್ವಜ, ರಾಷ್ಟ್ರಗೀತೆ ಮತ್ತು ಸಂವಿಧಾನಗಳ ಕುರಿತು ತಮ್ಮ ಅಭಿಪ್ರಾಯಕ್ಕಾಗಿ ದೇಶದ ಜನರ ಕ್ಷಮೆ ಯಾಚಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಈ ಕುರಿತ ಹೇಳಿಕೆಯಲ್ಲಿ ಅವರು, ‘ಮನೆ ಮನೆಯಲ್ಲಿ ಧ್ವಜ’ ಅಭಿಯಾನಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ, ಅದಕ್ಕೂ ಮೊದಲು ಆರ್‌ಎಸ್‌ಎಸ್‌ನ ಎಲ್ಲ ಶಾಖೆಗಳು, ಕೇಶವ ಕೃಪಾದಂತಹ ಕಚೇರಿಗಳ ಮೇಲೂ ರಾಷ್ಟ್ರಧ್ವಜ ಹಾರಿಸಲಿ’ ಎಂದು ಒತ್ತಾಯಿಸಿದ್ದಾರೆ.



‘ರಾಷ್ಟ್ರಧ್ವಜ ಅಪಶಕುನದ ಸಂಕೇತ ಎಂಬುದಾಗಿ ಬಿಂಬಿಸಿ ಆರ್‌ಎಸ್‌ಎಸ್‌ನ ಮುಖವಾಣಿ ‘ಆರ್ಗನೈಸರ್’ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಲೇಖನವನ್ನು ಹಿಂಪಡೆಯಬೇಕು. ರಾಷ್ಟ್ರಧ್ವಜ, ರಾಷ್ಟ್ರಗೀತೆ ಮತ್ತು ಸಂವಿಧಾನದ ಕುರಿತು ಆರ್‌ಎಸ್‌ಎಸ್, ಜನಸಂಘ, ಬಿಜೆಪಿ ಮತ್ತು ಅದರ ಪರಿವಾರದ ಸಂಘಟನೆಗಳು ನೀಡಿರುವ ಅಸಮರ್ಪಕ ಹೇಳಿಕೆಗಳಿಗಾಗಿ ದೇಶದ ಕ್ಷಮೆ ಯಾಚಿಸಬೇಕು’ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.


ಭಾರತದ ಧ್ವಜವನ್ನು ಸುರಯ್ಯಾ ತಯ್ಯಬ್ಜಿ, ಪಿಂಗಳಿ ವೆಂಕಯ್ಯ, ಗಾಂಧೀಜಿ, ನೆಹರೂ, ಸುಭಾಷ್‌ಚಂದ್ರ ಬೋಸ್ ಮುಂತಾದ ಮಹಾನ್ ದೇಶಭಕ್ತರು ಸ್ವಾತಂತ್ರ್ಯ ಹೋರಾಟದ ದೀರ್ಘ ಪ್ರಯತ್ನದ ಮೂಲಕ ಸಿದ್ಧಗೊಳಿಸಿದ್ದಾರೆ ಎಂಬುದನ್ನು ಒಪ್ಪಿಕೊಳ್ಳಬೇಕು. ಇಲ್ಲವಾದರೆ ಅಭಿಯಾನ ನಡೆಸುವ ನೈತಿಕತೆಯೇ ಇರುವುದಿಲ್ಲ ಎಂದಿದ್ದಾರೆ.

‘ರಾಜ್ಯದಲ್ಲಿರುವುದು ಹಿಂದಿ ಮತ್ತು ಸಂಸ್ಕೃತಿ ಇಲಾಖೆಯೆ?’

ಬೆಂಗಳೂರು: ರಾಜ್ಯದಲ್ಲಿರುವುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೋ? ಅಥವಾ ಹಿಂದಿ ಮತ್ತು ಸಂಸ್ಕೃತಿ ಇಲಾಖೆಯೋ? ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಿದ್ದ ‘ಸಂಕಲ್ಪ್ ಸೆ ಸಿದ್ಧಿ’ ಕಾರ್ಯಕ್ರಮದ ಬ್ಯಾನರ್ ಸಂಪೂರ್ಣ ಹಿಂದಿಮಯವಾಗಿತ್ತು. ಇನ್ನೊಂದೆಡೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೇ ತನ್ನ ಜಾಲತಾಣದಲ್ಲಿ ಹಿಂದಿಯ ಕಿರೀಟ ಇಟ್ಟುಕೊಂಡು ಮೆರೆಸುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೇ ಹಿಂದಿ ಭಾಷೆಯ ಪ್ರಚಾರಕ್ಕೆ ಇಳಿದರೆ ಕನ್ನಡವನ್ನು ರಕ್ಷಿಸುವವರು ಯಾರು? ಅಧಿಕಾರ ಉಳಿಸಿಕೊಳ್ಳಲು ಕನ್ನಡಿಗರ ಸ್ವಾಭಿಮಾನವನ್ನು ‘ಉತ್ತರ ಕುಮಾರ’ರ ಕಾಲಿನಡಿ ಏಕೆ ಅಡಮಾನ ಇಡುತ್ತೀರಿ? ಶರಣಾಗತಿ ಕನ್ನಡದ ಮಣ್ಣಿನ ಗುಣವಲ್ಲ, ವೀರರಾಣಿ ಅಬ್ಬಕ್ಕನ ನೆಲದಿಂದ ಬಂದ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಅವರಿಗೆ ಇಂಥಹ ಗುಲಾಮಿ ಮನಸ್ಥಿತಿ ಬರಬಾರದಿತ್ತು ಎಂದು ಹೇಳಿದ್ದಾರೆ.



ಪಿಎಸ್‌ಐ ಅಕ್ರಮ: ಮತ್ತೆ 8 ಅಭ್ಯರ್ಥಿಗಳ ಬಂಧನ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮಕ್ಕೆ ಸಂಬಂಧಿಸಿದಂತೆ ಮತ್ತೆ ಎಂಟು ಮಂದಿ ಅಭ್ಯರ್ಥಿಗಳನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ.

ಹೈದರಾಬಾದ್ ಕರ್ನಾಟಕ ವೃಂದದಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದ ಜೇವರ್ಗಿಯ ಭಗವಂತರಾಯ ಜೋಗೂರ, ನಾಲ್ಕನೇ ರ್‍ಯಾಂಕ್ ಪಡೆದಿದ್ದ-ಪ್ರಸ್ತುತ ರಾಯಚೂರು ಜಿಲ್ಲೆ ದೇವದುರ್ಗದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಆಗಿರುವ ಕಲ್ಲಪ್ಪ ಸಿದ್ದಪ್ಪ ಅಲ್ಲಾಪುರ, ರವಿರಾಜ, ಪೀರಪ್ಪ ಸಿದ್ನಾಳ, ಶ್ರೀಶೈಲ ಹಚ್ಚಡ, 22ನೇ ರ್‍ಯಾಂಕ್ ಪಡೆದಿದ್ದ ಅಫಜಲಪುರ ತಾಲ್ಲೂಕಿನ ಸಿದ್ದುಗೌಡ ಶರಣಪ್ಪ ಪಾಟೀಲ, ಸೋಮನಾಥ, ವಿಜಯಕುಮಾರ್ ಗುಡೂರ ಬಂಧಿತರು.



ಸಿದ್ದುಗೌಡ ಕಲ್ಲಪ್ಪ ಪೀರಪ್ಪ ಸೋಮನಾಥ



ಭಗವಂತರಾಯ ರವಿರಾಜ ಶ್ರೀಶೈಲ ವಿಜಯಕುಮಾರ್

ಆರೋಪಿ ಸಿದ್ದುಗೌಡ ಪಾಟೀಲ ಪ್ರಕರಣದ ಕಿಂಗ್‌ಪಿನ್ ಆರ್.ಡಿ.ಪಾಟೀಲನ ಪತ್ನಿಯ ತಮ್ಮ. ಆತ ಯಾದಗಿರಿ ಜಿಲ್ಲೆ ಮುದ್ನಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ದರ್ಜೆ ಸಹಾಯಕ.

ಸಿಐಡಿ ಡಿವೈಎಸ್ಪಿಗಳಾದ ಶಂಕರಗೌಡ ಪಾಟೀಲ, ಪ್ರಕಾಶ ರಾಠೋಡ, ವೀರೇಂದ್ರಕುಮಾರ್, ಡಿಟೆಕ್ಟಿವ್ ವಿಭಾಗದ ಪಿಎಸ್‌ಐಗಳಾದ ಆನಂದ, ಯಶವಂತ, ಶಿವಪ್ರಸಾದ್ ನೆಲ್ಲೂರ ಅವರನ್ನು ಒಳಗೊಂಡ ತಂಡ ಬಂಧಿಸಿದೆ.

‘ಬಂಧಿತರ ಪೈಕಿ ರವಿರಾಜ, ಪೀರಪ್ಪ ಸಿದ್ನಾಳ ಮತ್ತು ಶ್ರೀಶೈಲ ಹಚ್ಚಡ ಕಲಬುರಗಿಯ ಶರಣಬಸವೇಶ್ವರ ಕಲಾ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದರೆ, ಸಿದ್ದುಗೌಡ ಪಾಟೀಲ ಶರಣಬಸವೇಶ್ವರ ವಿಜ್ಞಾನ ಕಾಲೇಜಿನ ಕೇಂದ್ರದಲ್ಲಿ ಮತ್ತು ಭಗವಂತರಾಯ ಜೋಗೂರ ಶರಣಬಸವೇಶ್ವರ ವಾಣಿಜ್ಯ ಕಾಲೇಜಿನಲ್ಲಿ ಪರೀಕ್ಷೆ ಬರೆದಿದ್ದರು. ಗೋದುತಾಯಿ ಎಂಜಿನಿಯರಿಂಗ್ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಸೋಮನಾಥ ಪರೀಕ್ಷೆಗೆ ಹಾಜರಾದರೆ, ಸರ್ಕಾರಿ ಪ್ರಥಮದರ್ಜೆ (ಸ್ವಾಯತ್ತ) ಕಾಲೇಜಿನಲ್ಲಿ ಕಲ್ಲಪ್ಪ ಅಲ್ಲಾಪುರ ಪರೀಕ್ಷೆ ಬರೆದಿದ್ದ. ಎಂ.ಎಸ್.ಇರಾನಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ವಿಜಯಕುಮಾರ್ ಗುಡೂರ ಪರೀಕ್ಷೆ ಬರೆದಿದ್ದ’ ಎಂದು ಮೂಲಗಳು ತಿಳಿಸಿವೆ.

‘ಈ ಅಭ್ಯರ್ಥಿಗಳು ಬ್ಲೂಟೂತ್ ಬಳಸಿ ಪಾಸಾಗಲು ಆರ್.ಡಿ.ಪಾಟೀಲ ನೆರವಾಗಿದ್ದ. ಇವರಿಂದ ಆರ್.ಡಿ.ಪಾಟೀಲ, ಇತರರು ಎಷ್ಟು ಹಣ ಪಡೆದಿದ್ದಾರೆ ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಡಿಯಿಂದ ಎಸೆದು ಮಗು ಕೊಂದ ತಾಯಿ

ಮಗು ತಳ್ಳಿ ರಕ್ಷಣೆ ನಾಟಕ ● ಬುದ್ಧಿಮಾಂದ್ಯ ಎಂಬ ಕಾರಣಕ್ಕೆ ಕೃತ್ಯ ● ದಂತ ವೈದ್ಯೆ ಬಂಧನ

ಪ್ರಜಾವಾಣಿ ವಾರ್ತೆ



ಸುಷ್ಮಾ

ಬೆಂಗಳೂರು: ಸಂಪಂಗಿರಾಮ ನಗರ ಠಾಣೆ ವ್ಯಾಪ್ತಿಯಲ್ಲಿ ದ್ವಿತಿ ಎಂಬ ನಾಲ್ಕು ವರ್ಷದ ಹೆಣ್ಣು ಮಗುವನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ತಾಯಿ ಸುಷ್ಮಾ (34) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಅದ್ವಿತ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ವಾಸವಿದ್ದ ಸುಷ್ಮಾ, ತಮ್ಮದೇ ಮಗು ದ್ವಿತಿಯನ್ನು ನಾಲ್ಕನೇ ಮಹಡಿಯಿಂದ ಕೆಳಗೆ ಹಾಕಿ ಕೊಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ಪತಿ ಕಿರಣ್ (38) ನೀಡಿರುವ ದೂರು ಆಧರಿಸಿ ಸುಷ್ಮಾ ಅವರನ್ನು ಬಂಧಿಸಲಾಗಿದೆ’ ಎಂದು ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್ ಗೌಡ ತಿಳಿಸಿದರು.

‘ನಿಲ್ದಾಣದಲ್ಲೇ ಮಗು ಬಿಟ್ಟುಬಂದಿದ್ದ ಸುಷ್ಮಾ’

‘ಮಗು ಬೇಡವೆಂದು ತೀರ್ಮಾನಿಸಿದ್ದ ತಾಯಿ, ಅದನ್ನು ಎಲ್ಲಿಯಾದರೂ ಬಿಟ್ಟು ಬರಲು ಸಾಕಷ್ಟು ಬಾರಿ ಪ್ರಯತ್ನಿಸಿದ್ದರು. ಆದರೆ, ಅದಕ್ಕೆ ಪತಿ ಕಿರಣ್ ಒಪ್ಪಿರಲಿಲ್ಲ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮೂರು ತಿಂಗಳ ಹಿಂದೆ ಪತಿಗೆ ಗೊತ್ತಾಗದಂತೆ ಮಗುವನ್ನು ರೈಲು ನಿಲ್ದಾಣಕ್ಕೆ ಕರೆದೊಯ್ದಿದ್ದ ತಾಯಿ, ಅಲ್ಲಿಯೇ ಬಿಟ್ಟು ವಾಪಸು ಬಂದಿದ್ದರು. ವಿಷಯ ತಿಳಿಯುತ್ತಿದ್ದಂತೆ ಕಿರಣ್ ಅವರೇ ನಿಲ್ದಾಣಕ್ಕೆ ಹೋಗಿ ಮಗುವನ್ನು ವಾಪಸು ಕರೆತಂದಿದ್ದರು’ ಎಂದೂ ತಿಳಿಸಿವೆ.

‘ದಂತವೈದ್ಯೆ ಆಗಿರುವ ಸುಷ್ಮಾ, ಸಾಫ್ಟ್‌ವೇರ್ ಕಂಪನಿ ಉದ್ಯೋಗಿ ಕಿರಣ್ ಅವರನ್ನು 10 ವರ್ಷಗಳ ಹಿಂದೆ ಮದುವೆಯಾಗಿದ್ದರು. ಕೆಲ ವರ್ಷ ಲಂಡನ್‌ನಲ್ಲಿ ದಂಪತಿ ವಾಸವಿದ್ದರು. ಬಳಿಕ, ಬೆಂಗಳೂರಿಗೆ ಬಂದು ಸಿ.ಕೆ. ಗಾರ್ಡನ್‌ನಲ್ಲಿರುವ ಅದ್ವಿತ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ದ್ವಿತಿ ಜೊತೆ ವಾಸವಿದ್ದರು. ಕಿರಣ್ ಅವರ ತಾಯಿಯೂ ಜೊತೆಗಿದ್ದರು’ ಎಂದು ಹೇಳಿದರು.


ಬುದ್ಧಿಮಾಂದ್ಯ ಎಂಬ ಕಾರಣಕ್ಕೆ ಕೃತ್ಯ: ‘ಸುಷ್ಮಾ ಅವರಿಗೆ ಮದುವೆಯಾಗಿ ಆರು ವರ್ಷವಾದರೂ ಮಗು ಆಗಿರಲಿಲ್ಲ. ಹಲವು ವೈದ್ಯರ ಬಳಿ ಚಿಕಿತ್ಸೆ ಪಡೆದುಕೊಂಡಿದ್ದರು. ಬಳಿಕ ದ್ವಿತಿ ಹುಟ್ಟಿದ್ದಳು. ಮಗುವನ್ನು ತಾಯಿ ಆರಂಭದಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಮಗು ಹೆಚ್ಚು ಕ್ರಿಯಾಶೀಲವಾಗಿರಲಿಲ್ಲ. ಹಲವು ವೈದ್ಯರ ಬಳಿ ಚಿಕಿತ್ಸೆ ಕೊಡಿಸಲಾಗಿತ್ತು. ಅದಕ್ಕೂ ಸ್ಪಂದಿಸಿರಲಿಲ್ಲ. ಕೆಲ ತಿಂಗಳ ಹಿಂದೆಯಷ್ಟೆ ಮಗುವಿನ ಪರೀಕ್ಷೆ ನಡೆಸಿದ್ದ ವೈದ್ಯರೊಬ್ಬರು, ‘ಮಗು ಬುದ್ಧಿಮಾಂದ್ಯವಿದ್ದು, ಮಾತು ಬರುವುದಿಲ್ಲ’ ಎಂದಿದ್ದರು. ಇದರಿಂದ ಸುಷ್ಮಾ ಮಾನಸಿಕವಾಗಿ ಕುಗ್ಗಿದ್ದರು. ಮಗುವಿನ ಯಾತನೆ ಹಾಗೂ ಅದಕ್ಕೆ ಮಾತು ಬರುವುದಿಲ್ಲವೆಂದು ತಿಳಿದು ತಾಯಿಯು ಕೊಲೆಗೆ ಸಂಚು ರೂಪಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ

ಮಗು ತಳ್ಳಿ ರಕ್ಷಣೆ ನಾಟಕ: ‘ಕಿರಣ್ ತಾಯಿ ಗುರುವಾರ ಮಧ್ಯಾಹ್ನ ಮನೆಯೊಳಗೆ ಮಗು ಜೊತೆ ಆಟವಾಡುತ್ತಿದ್ದರು. ಇದೇ ವೇಳೆಯೇ ಮಗುವನ್ನು ಪಡೆದುಕೊಂಡಿದ್ದ ಸುಷ್ಮಾ, ಮನೆಯಿಂದ ಹೊರಗೆ ಬಂದಿದ್ದರು. ಮಹಡಿಯಲ್ಲಿ ಅತ್ತಿತ್ತ ಓಡಾಡುತ್ತ, ಮಗುವನ್ನು ಎಸೆದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೈ ಜಾರಿ ಮಗು ಬಿತ್ತು’ ಎಂದು ಚೀರಾಡಿದ್ದ ಸುಷ್ಮಾ, ರಕ್ಷಣೆ ಕೋರುವ ನಾಟಕವಾಡಿದ್ದರು. ತೀವ್ರ ಗಾಯಗೊಂಡ ಸ್ಥಿತಿಯಲ್ಲೂ ಮಗು ಉಸಿರಾಡುತ್ತಿತ್ತು. ಅದನ್ನು ಗಮನಿಸಿದ್ದ ಸ್ಥಳೀಯರು ನಿಮ್ಹಾನ್ಸ್‌ಗೆ ಕರೆದೊಯ್ದಿದ್ದರು. ಅಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ಮಗು ಅಸುನೀಗಿತು’ ಎಂದು ತಿಳಿಸಿವೆ.

ಸಿ.ಸಿ.ಟಿ.ವಿ ದೃಶ್ಯ ನೀಡಿದ ಸುಳಿವು: ‘ಆಕಸ್ಮಿಕ ಘಟನೆಯೆಂದೇ ಬಿಂಬಿಸಿದ್ದ ಸುಷ್ಮಾ, ಅಸಹಜ ಸಾವು (ಯುಡಿಆರ್) ಪ್ರಕರಣ ದಾಖಲಿಸಲು ಪ್ರಯತ್ನಿಸುತ್ತಿದ್ದರು. ಅವರ ನಡೆಯಿಂದ ಅನುಮಾನ ಬಂದು, ಅಪಾರ್ಟ್‌ಮೆಂಟ್‌ನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಲಾಯಿತು. ಅವರೇ ಮಗುವನ್ನು ಎಸೆದಿದ್ದು ಖಾತ್ರಿಯಾಯಿತು. ಮಗು ಎಸೆದ ನಂತರ ಸುಷ್ಮಾ ಸಹ ಮಹಡಿಯಿಂದ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ್ದರು. ಶಬ್ದ ಕೇಳಿ ಹೊರಬಂದಿದ್ದ ಪಕ್ಕದ ಫ್ಲ್ಯಾಟ್ ನಿವಾಸಿಗಳು, ಸುಷ್ಮಾ ಅವರನ್ನು ರಕ್ಷಿಸಿದ್ದಾರೆ’ ಎಂದು ಮೂಲಗಳು ಹೇಳಿವೆ..

ಪುನೀತ್‌ಗೆ ನ. 1ರಂದು ಕರ್ನಾಟಕ ರತ್ನ ಪ್ರದಾನ



ಪುನೀತ್ ರಾಜ್‌ಕುಮಾರ್

ಬೆಂಗಳೂರು: ‘ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರಿಗೆ ನವೆಂಬರ್ 1ರಂದು ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ತಿಳಿಸಿದರು.

ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಆಯೋಜಿಸಿರುವ 212ನೇ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಪ್ರಶಸ್ತಿ ಪ್ರದಾನ ಸಮಾರಂಭದ ಸಿದ್ಧತೆಗಳನ್ನು ಕೈಗೊಳ್ಳಲು ಸಮಿತಿ ರಚಿಸಲಾಗುವುದು. ಈ ಸಮಿತಿಯಲ್ಲಿ ಡಾ.ರಾಜ್‌ಕುಮಾರ್ ಕುಟುಂಬದ ಸದಸ್ಯರೂ ಇರುತ್ತಾರೆ’ ಎಂದರು.

ಸಂಕ್ಷಿಪ್ತ ಸುದ್ದಿ

ದೇಗುಲದ ಕಲ್ಲಿನ ಕಂಬ ಬಿದ್ದು ಸಾವು

ಯಾದಗಿರಿ: ಜಿಲ್ಲೆಯ ವಡಗೇರಾ ತಾಲ್ಲೂಕಿನ ಉಳ್ಳೆಸುಗೂರು ಗ್ರಾಮದ ಹನುಮಾನ ದೇವಸ್ಥಾನದಲ್ಲಿ ಗುರುವಾರ ರಾತ್ರಿ ಕಲ್ಲಿನ ಕಂಬ ಬಿದ್ದು ಉಳ್ಳೇಸುಗೂರು ಗ್ರಾಮಸ್ಥ ದೇವಪ್ಪ ಪೂಜಾರಿ (40) ಮೃತಪಟ್ಟರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಮತ್ತು ಪುತ್ರ ಇದ್ದಾರೆ. ‘ಶ್ರಾವಣ ಮಾಸದ ಪ್ರಯುಕ್ತ ದೇವಸ್ಥಾನದಲ್ಲಿ ಭಜನೆ ನಡೆಯುತ್ತಿತ್ತು. ಇತ್ತೀಚೆಗೆ ಸುರಿದ ನಿರಂತರ ಮಳೆಯಿಂದ ದೇವಸ್ಥಾನದ ಕಂಬಗಳು ಶಿಥಿಲಗೊಂಡಿದ್ದವು’ ಎಂದು ವಡಗೇರಾ ಠಾಣೆ ಪೊಲೀಸರು ತಿಳಿಸಿದ್ದಾರೆ.

ಅಪಘಾತ; ಒಂದೇ ಕುಟುಂಬದ ಆರು ಮಂದಿ ಸಾವು

ಯಾದಗಿರಿ: ತೆಲಂಗಾಣದ ದರ್ಗಾಕ್ಕೆ ತೆರಳಿ ಮರಳುವಾಗ, ಗುರುಮಠಕಲ್ ತಾಲ್ಲೂಕಿನ ಅರಕೇರಾ (ಕೆ) ಬಳಿ ಗುರುವಾರ ರಾತ್ರಿ ಕಾರು- ಲಾರಿ ನಡುವೆ ಅಪಘಾತ ಸಂಭವಿಸಿ ಒಂದೇ ಕುಟುಂಬದ 6 ಮಂದಿ ಮೃತಪಟ್ಟರು.

‘ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಹಟ್ಟಿಯ ನಿವಾಸಿಗಳಾದ ಮಹಮ್ಮದ್ ನಜರ್ ಹುಸೇನ್ (76), ನೂರ್ ಜಹಾನ್ ಬೇಗಂ (70), ಮಹಮ್ಮದ್ ವಾಜೀದ್ ಹುಸೇನ್ (40), ಹೀನಾ ಬೇಗಂ (30), ಇಮ್ರಾನ್ (22), ಉಮೇಜಾ (5 ತಿಂಗಳ ಹೆಣ್ಣು ಶಿಶು) ಮೃತರು. ವಾಜಿದ್‌ನ ಎರಡೂವರೆ ವರ್ಷದ ಪುತ್ರ ಮಹಮ್ಮದ್ ಫಾಝಿಲ್ ಹುಸೇನ್‌ಗೆ ಗಾಯಗಳಾಗಿವೆ. ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಉಮೇಜಾಳ ಜವಳಕ್ಕಾಗಿ ಕುಟುಂಬ ತೆಲಂಗಾಣದ ದರ್ಗಾಕ್ಕೆ ತೆರಳಿತ್ತು. ಅಪಘಾತದ ನಂತರ ಲಾರಿ ಚಾಲಕ ಪರಾರಿಯಾಗಿದ್ದಾನೆ’ ಎಂದು ಗುರುಮಠಕಲ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮಂಡ್ಯದ ಬೀಡಿ ಕಾರ್ಮಿಕರ ಕಾಲೊನಿಯಲ್ಲಿ ಮಾನವೀಯತೆ ಮೆರೆದ ದಂಪತಿ

ಮುಸ್ಲಿಂ ಕುಟುಂಬಗಳಿಗೆ ‘ಆಶಾ’ಶ್ರಯ

● ಎಂ.ಎನ್.ಯೋಗೇಶ್

ಮಂಡ್ಯ: ಪ್ರವಾಹಕ್ಕೆ ಸಿಲುಕಿ ನಿರಾಶ್ರಿತರಾಗಿರುವ ನಗರದ ಬೀಡಿ ಕಾರ್ಮಿಕರ ಕಾಲೊನಿಯ ನಾಲ್ಕು ಮುಸ್ಲಿಂ ಕುಟುಂಬಗಳಿಗೆ ಅದೇ ಬಡಾವಣೆಯ ಆಶಾ-ಸಿದ್ದರಾಮು ದಂಪತಿ ಐದು ದಿನದಿಂದ ಆಶ್ರಯ ನೀಡಿದ್ದಾರೆ. ಸಣ್ಣ ಮನೆಯಲ್ಲೇ ಸಂಕಷ್ಟದಲ್ಲಿರುವವರ ಕಾಳಜಿ ಮಾಡುತ್ತಿದ್ದಾರೆ.

ಸಾವಿರಕ್ಕೂ ಹೆಚ್ಚು ಕುಟುಂಬಗಳ ಕಾಲೊನಿಯಲ್ಲಿ ಮುಸ್ಲಿಮರೇ ಹೆಚ್ಚಿದ್ದು, ಮಳೆ ನೀರಿನ ಜೊತೆ ವಿ.ಸಿ ನಾಲೆ ನೀರು ಕೂಡ ನುಗ್ಗಿದ್ದು, ಇಡೀ ಬಡಾವಣೆ ಜಲಾವೃತಗೊಂಡಿದೆ.

ಆಶ್ರಯ ಯೋಜನೆಯಡಿ ರೈತ ದಂಪತಿ ನಿರ್ಮಿಸಿಕೊಂಡಿರುವ ಹೊಸ ಮನೆ ಎತ್ತರದಲ್ಲಿರುವುದರಿಂದ ನೀರು ನುಗ್ಗಿಲ್ಲ. ಸುತ್ತಲಿನ ಮನೆಗಳಿಗೆ ನೀರು ನುಗ್ಗಿದ್ದು, ದವಸ, ಧಾನ್ಯ, ಬಟ್ಟೆ ಬರೆ ಕಳೆದುಕೊಂಡು ಸಂಕಷ್ಟದಲ್ಲಿದ್ದ ನಾಲ್ಕು ಕುಟುಂಬಗಳ ಮಹಿಳೆಯರು ಹಾಗೂ ಮಕ್ಕಳನ್ನು ದಂಪತಿ ತಮ್ಮ ಮನೆಯಲ್ಲೇ ಇರಿಸಿಕೊಂಡಿದ್ದಾರೆ. ಮುಸ್ಲಿಂ ಮಹಿಳೆಯರು ಅಲ್ಲಿಯೇ ಒಟ್ಟಾಗಿ ಅಡುಗೆ ಮಾಡಿಕೊಳ್ಳುತ್ತಿದ್ದಾರೆ.



ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಆಶಾ–ಸಿದ್ದರಾಮು ಮನೆಯಲ್ಲಿ ಒಬ್ಬಟ್ಟು ಊಟಕ್ಕೆ ಮೈದಾ ಸಿದ್ಧಗೊಳಿಸುತ್ತಿರುವ ಸಲ್ತಾನತ್‌ ಮೆರರುನ್ನೀಸಾ, ಶಾಬಾನಾ, ಆಶಾ, ನೂರ್ ಸಲ್ಮಾ ಇದ್ದಾರೆ

ದಂಪತಿಯ ಮಗ ಚೇತನ್‌ಗೌಡ ಅವರು ಮಕ್ಕಳಿಗೆ ನಿತ್ಯ ಹಾಲು, ಔಷಧ, ಕ್ಯಾನ್‌ನಿಂದ ಶುದ್ಧ ಕುಡಿಯುವ ನೀರು ತಂದು ಕೊಡುತ್ತಿದ್ದಾರೆ.

‘ಆ.1ರಂದು ಮಧ್ಯರಾತ್ರಿಯಲ್ಲಿ ಮನೆಗೆ ನೀರು ನುಗ್ಗಿತು. ನೋಡುತ್ತಿದ್ದಂತೆ ವಸ್ತುಗಳೆಲ್ಲವೂ ಮುಳುಗಿದವು, ವಿದ್ಯುತ್ ಕೂಡ ಇರಲಿಲ್ಲ. ಹೊರಗೆ ಬರಲೂ ಸಾಧ್ಯವಾಗದೇ ಸಿಲುಕಿಕೊಂಡಿದ್ದೆವು. ಆಗ ಆಶಾ- ಸಿದ್ದರಾಮು 1 ಗಂಟೆ ರಾತ್ರಿಯಲ್ಲಿ ನಮ್ಮ ಕುಟುಂಬವನ್ನು ರಕ್ಷಿಸಿ ತಮ್ಮ ಮನೆಗೆ ಕರೆದೊಯ್ದರು. ಮಧುಮೇಹದಿಂದ ಬಳಲುತ್ತಿರುವ ನನಗೆ ಔಷಧಿಯನ್ನೂ ಕೊಡಿಸಿದ್ದಾರೆ. ಅವರ ಋಣವನ್ನು ತೀರಿಸುವುದು ಹೇಗೆ’ ಎಂದು ಪ್ರಶ್ನಿಸುತ್ತಾ ಮೆಹರುನ್ನೀಸಾ ಭಾವುಕರಾದರು.

‘ಸಂಕಷ್ಟದಲ್ಲಿರುವ ಬಡಾವಣೆ ಜನರಿಗೆ ಹಲವು ಸಂಘ–ಸಂಸ್ಥೆಗಳು ಆಹಾರ ಪೂರೈಸುತ್ತಿವೆ. ಕಾಳಜಿ ಕೇಂದ್ರ ಸಹ ತೆರೆಯಲಾಗಿದೆ. ಆದರೆ ಆಶಾ–ಸಿದ್ದರಾಮು ತೋರುತ್ತಿರುವ ಪ್ರೀತಿಯನ್ನು ಮರೆಯಲು ಸಾಧ್ಯವಿಲ್ಲ’ ಎಂದು ನಗರಸಭೆ ಸದಸ್ಯ ಜಾಕೀರ್ ಪಾಷಾ ಹೇಳಿದರು.

ಹಿಂದೂ– ಮುಸ್ಲಿಮರ ಹಬ್ಬ ಆಚರಣೆ

ಶುಕ್ರವಾರ ವರಮಹಾಲಕ್ಷ್ಮಿ ಹಬ್ಬವನ್ನು ಆಶಾ ಅವರೊಂದಿಗೆ ಮುಸ್ಲಿಂ ಮಹಿಳೆಯರೂ ಒಟ್ಟಾಗಿ ಆಚರಿಸಿದರು. ಬೆಳಿಗ್ಗೆ ಸರಳವಾಗಿ ಲಕ್ಷ್ಮಿ ಪೂಜೆ ನೆರವೇರಿಸಲಾಯಿತು. ಮಧ್ಯಾಹ್ನ ಒಬ್ಬಟ್ಟು ಊಟಕ್ಕೆ ಸಲ್ತಾನತ್ ಮೈದಾ ಸಿದ್ಧಗೊಳಿಸಿದರೆ, ನೂರ್ ಸಲ್ಮಾ ಹೂರಣ ಮಾಡಿದರು. ಆಶಾ ಒಬ್ಬಟ್ಟು ಬೇಯಿಸಿದರು.

‘ನಾವೇನೂ ಶ್ರೀಮಂತರಲ್ಲ, ಬಡತನದಲ್ಲೇ ಇದ್ದೇವೆ. ಆದರೂ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು ಮನುಷ್ಯತ್ವ ಗುಣ’ ಎಂದು ಆಶಾ ಹೇಳಿದರು.

ನ್ಯಾಯಾಂಗ ಬಂಧನಕ್ಕೆ ಪಾರ್ಥ ಚಟರ್ಜಿ, ಅರ್ಪಿತಾ

ಕೋಲ್ಕತ್ತ (ಪಿಟಿಐ): ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ಪಶ್ಚಿಮ ಬಂಗಾಳದ ಮಾಜಿ ಸಚಿವ ಪಾರ್ಥ ಚಟರ್ಜಿ ಹಾಗೂ ಅವರ ಆಪ್ತೆ ಅರ್ಪಿತಾ ಮುಖರ್ಜಿ ಅವರನ್ನು ಇಲ್ಲಿನ ವಿಶೇಷ ನ್ಯಾಯಾಲಯವು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಸ್ಥಾಪನೆಯಾಗಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಜಿಬೋನ್ ಕುಮಾರ್ ಸಾಧು ಅವರು ಜಾರಿ ನಿರ್ದೇಶನಾಲಯದ (ಇ.ಡಿ) ಮನವಿಯ ಮೇರೆಗೆ ಪಾರ್ಥ ಮತ್ತು ಅರ್ಪಿತಾ ಅವರನ್ನು ಆಗಸ್ಟ್ 18ರವರೆಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದರು.

ವಿಶೇಷ ನ್ಯಾಯಾಲಯವು ಪಾರ್ಥ ಚಟರ್ಜಿ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ವಿಚಾರಣಾ ದಿನಾಂಕವಾದ ಇದೇ 18ರಂದು ಪಾರ್ಥ ಚಟರ್ಜಿ ಮತ್ತು ಅರ್ಪಿತಾ ಅವರನ್ನು ಹಾಜರುಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿತು.

ಮೇಕೆದಾಟು ಯೋಜನೆಯ ಸಮಗ್ರ ಯೋಜನಾ ವರದಿ

ಚರ್ಚೆಯೇ ನಡೆಸದ ಕಾವೇರಿ ಪ್ರಾಧಿಕಾರ

• ಮಂಜುನಾಥ ಹೆಬ್ಬಾರ್

ನವದೆಹಲಿ: ಮೇಕೆದಾಟು ಬಳಿ ಸಮತೋಲನ ಜಲಾಶಯ ನಿರ್ಮಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಸಲ್ಲಿಸಿರುವ ಸಮಗ್ರ ಯೋಜನಾ ವರದಿಯ (ಡಿಪಿಆರ್) ಕುರಿತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು (ಸಿಡಬ್ಲ್ಯುಎಂಎ) ಇದುವರೆಗೆ ಚರ್ಚೆಯನ್ನೇ ನಡೆಸಿಲ್ಲ.

ವಿಧಾನಸಭಾ ಚುನಾವಣಾ ದಿನಾಂಕ ಘೋಷಣೆಗೆ ಮುನ್ನವೇ ಮೇಕೆದಾಟು ಯೋಜನೆಗೆ ಚಾಲನೆ ನೀಡಬೇಕು ಎಂಬ ಉದ್ದೇಶದಿಂದ ಕರ್ನಾಟಕ ಸರ್ಕಾರ ₹1 ಸಾವಿರ ಕೋಟಿ ಮೀಸಲಿಟ್ಟಿದೆ. ಆದರೆ, ಯೋಜನೆಯ ಡಿಪಿಆರ್‌ಗೆ ಒಪ್ಪಿಗೆ ಸಿಗುವುದು ವಿಳಂಬವಾಗುತ್ತಿರುವುದು ರಾಜ್ಯ ಸರ್ಕಾರದ ಆತಂಕಕ್ಕೆ ಕಾರಣವಾಗಿದೆ.

'ಪ್ರಾಧಿಕಾರವು ಡಿಪಿಆರ್ ಬಗ್ಗೆ ಚರ್ಚೆ ನಡೆಸಬಹುದು. ಆದರೆ, ಯೋಜನೆ ಕುರಿತು ಅಧಿಕೃತವಾಗಿ ಯಾವುದೇ ಅಭಿಪ್ರಾಯಕ್ಕೆ ಬರುವಂತಿಲ್ಲ' ಎಂದು ಸುಪ್ರೀಂಕೋರ್ಟ್ ಜುಲೈ 20ರಂದು ಸೂಚಿಸಿತ್ತು. ಆದರೆ, 'ಇತ್ತೀಚೆಗೆ ನಡೆದ ಪ್ರಾಧಿಕಾರದ 16ನೇ ಸಭೆಯಲ್ಲಿ ಸಹ ಡಿಪಿಆರ್ ಬಗ್ಗೆ ಚರ್ಚೆ ಆಗಿಲ್ಲ. ಮೇಕೆದಾಟು ಯೋಜನೆಯ ಬಗ್ಗೆ ಲೋಕಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಸಂಸದರು ಕೇಳಿರುವ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಕೇಂದ್ರ ಜಲಶಕ್ತಿ ಸಚಿವರು ಈ ಉತ್ತರ ನೀಡಿದ್ದಾರೆ.

ಮುಖ್ಯಾಂಶಗಳು
- ಕಾರ್ಯಸಾಧ್ಯತಾ ವರದಿಗೆ ಒಪ್ಪಿಗೆ ನೀಡಿರುವ ಜಲ ಆಯೋಗ
- ಕಾನೂನು ಸಚಿವಾಲಯದ ಅಭಿಪ್ರಾಯ ಪಡೆದ ಜಲಶಕ್ತಿ ಸಚಿವಾಲಯ
- ಸುಪ್ರೀಂ ಕೋರ್ಟ್‌ನಲ್ಲಿ ಆಗಸ್ಟ್ 10ರಂದು ವಿಚಾರಣೆ


ಮೇಕೆದಾಟು (ಸಂಗ್ರಹ ಚಿತ್ರ)

ಮೇಕೆದಾಟು ಯೋಜನೆಯ ಕಾರ್ಯಸಾಧ್ಯತಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಕರ್ನಾಟಕ ಸರ್ಕಾರವು ಸಲ್ಲಿಸಿತ್ತು. ಕೆಲವು ಷರತ್ತುಗಳನ್ನು ವಿಧಿಸಿ ಜಲ ಆಯೋಗವು ಕಾರ್ಯಸಾಧ್ಯತಾ ವರದಿಗೆ ಒಪ್ಪಿಗೆ ನೀಡಿತ್ತು. 'ಸುಪ್ರೀಂಕೋರ್ಟ್ ಮಾರ್ಪಾಡು ಮಾಡಿರುವ ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ತೀರ್ಪಿನ ಅನ್ವಯವೇ ಈ ಯೋಜನೆ ಅನುಷ್ಠಾನ ಮಾಡಲಾಗುತ್ತದೆ ಎಂದು ಕಾರ್ಯಸಾಧ್ಯತಾ ವರದಿಯಲ್ಲಿ ತಿಳಿಸಲಾಗಿದೆ. ಯೋಜನೆಯ ಡಿಪಿಆರ್‌ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಒಪ್ಪಿಗೆ ಪಡೆಯಬೇಕು' ಎಂದು ಜಲ ಆಯೋಗವು ಸೂಚಿಸಿತ್ತು.

ಜಲ ಆಯೋಗಕ್ಕೆ ರಾಜ್ಯ ಸರ್ಕಾರವು 2019ರ ಜನವರಿಯಲ್ಲಿ ಡಿಪಿಆರ್ ಸಲ್ಲಿಸಿತ್ತು. ಅದರ ಒಂದು ಪ್ರತಿಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೂ ನೀಡಲಾಗಿತ್ತು. ಪ್ರಸ್ತಾವಿತ ಯೋಜನೆಗೆ ಸಂಬಂಧಿಸಿದ ಕಾರ್ಯಸೂಚಿ 2019ರ ಏಪ್ರಿಲ್ 25ರಂದು ನಡೆದ ಪ್ರಾಧಿಕಾರದ ಮೂರನೇ ಸಭೆಯಲ್ಲಿ ಮಂಡನೆಯಾಗಿತ್ತು. ಸಭೆಯಲ್ಲಿ ಚರ್ಚೆಗೆ ಕಾರ್ಯಸೂಚಿಯನ್ನು ಬಂದಿರಲಿಲ್ಲ. ಆ ಬಳಿಕ ನಡೆದ ಹಲವು ಸಭೆಗಳ ಕಾರ್ಯಸೂಚಿ ಪಟ್ಟಿಯಲ್ಲಿ ಈ ವಿಷಯ ಇತ್ತು. ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು ಒಮ್ಮತಕ್ಕೆ ಬಾರದ ಕಾರಣ ಪ್ರಾಧಿಕಾರದ ಸಭೆಯಲ್ಲಿ ಡಿಪಿಆರ್ ಕುರಿತು ಚರ್ಚೆ ನಡೆದಿಲ್ಲ ಎಂದು ಜಲಶಕ್ತಿ ಸಚಿವರು ಉತ್ತರ ನೀಡಿದ್ದಾರೆ.

ಈ ನಡುವೆ, ಯೋಜನೆಯ ಬಗ್ಗೆ ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯದಿಂದ ಜಲಶಕ್ತಿ ಸಚಿವಾಲಯವು ಅಭಿಪ್ರಾಯ ಪಡೆದು ಪ್ರಾಧಿಕಾರಕ್ಕೆ ನೀಡಿದೆ.

'ಕಾವೇರಿ ಜಲವಿವಾದ ನ್ಯಾಯಾಧಿಕರಣದ ಮಾರ್ಪಾಡಾಗಿರುವ ಅಂತಿಮ ತೀರ್ಪಿನ ಪ್ರಕಾರ, ಮೇಕೆದಾಟು ಯೋಜನೆಯ ಬಗ್ಗೆ ಪ್ರಾಧಿಕಾರಕ್ಕೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದ್ದಾರೆ. ಪ್ರಾಧಿಕಾರವು ಸಾಲಿಸಿಟರ್ ಜನರಲ್ ಅವರ ಅಭಿಪ್ರಾಯವನ್ನು ಕೇಳಿತ್ತು. ಪ್ರಾಧಿಕಾರವು ಯೋಜನೆಯ ಬಗ್ಗೆ ಚರ್ಚಿಸಿ ಕೇಂದ್ರ ಜಲ ಆಯೋಗಕ್ಕೆ ವರದಿ ಸಲ್ಲಿಸಬಹುದು ಎಂದು ಮೆಹ್ತಾ ಪ್ರತಿಪಾದಿಸಿದ್ದಾರೆ.

ಮೇಕೆದಾಟು ಯೋಜನೆಯ ಕುರಿತು ಸುಪ್ರೀಂಕೋರ್ಟ್‌ನಲ್ಲಿ ಮುಂದಿನ ವಿಚಾರಣೆ ಆಗಸ್ಟ್ 10ಕ್ಕೆ ನಿಗದಿ ಆಗಿದೆ.

ಉಪರಾಷ್ಟ್ರಪತಿ ಚುನಾವಣೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ನೂತನ ಉಪರಾಷ್ಟ್ರಪತಿ ಆಯ್ಕೆಗೆ ಶನಿವಾರ ಚುನಾವಣೆ ನಡೆಯಲಿದ್ದು, ಸಂಸತ್ತಿನಲ್ಲಿ ಇರುವ ಸಂಖ್ಯಾಬಲವನ್ನು ನೋಡಿದರೆ ಎನ್‌ಡಿಎ ಅಭ್ಯರ್ಥಿ ಜಗದೀಪ್ ಧನಕರ್ ಅವರು ಗೆಲ್ಲುವ ಸಾಧ್ಯತೆ ಅಧಿಕವಾಗಿದೆ.

ವಿರೋಧ ಪಕ್ಷಗಳ ಅಭ್ಯರ್ಥಿಯಾಗಿ ಮಾರ್ಗರೆಟ್ ಆಳ್ವ ಅವರು ಕಣಕ್ಕೆ ಇಳಿದಿದ್ದು, ಬಹುತೇಕ ಪ್ರತಿಪಕ್ಷಗಳು ಇವರಿಗೆ ಬೆಂಬಲ ಸೂಚಿಸಿವೆ. ಟಿಆರ್‌ಎಸ್ ಕೂಡ ಅವರನ್ನು ಬೆಂಬಲಿಸುವುದಾಗಿ ಶನಿವಾರ ಘೋಷಿಸಿದೆ. ಟಿಆರ್‌ಎಸ್ ಸಂಸದೀಯ ಪಕ್ಷದ ನಾಯಕ ಡಾ. ಕೆ.ಕೇಶವ ರಾವ್ ಅವರು ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ.

ಲೋಕಸಭೆಯ 543 ಹಾಗೂ ರಾಜ್ಯಸಭೆಯ 237 ಸದಸ್ಯರು ಮತದಾನದ ಹಕ್ಕು ಹೊಂದಿದ್ದಾರೆ. ರಾಜ್ಯಸಭೆಯಲ್ಲಿ ಎಂಟು ಸ್ಥಾನಗಳು ಖಾಲಿ ಇವೆ. ಶನಿವಾರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಮತದಾನ ನಡೆಯಲಿದ್ದು, ಇದಾದ ಬಳಿಕ ಮತಗಳ ಎಣಿಕೆ ನಡೆಯಲಿದೆ.

ಪಕ್ಷಗಳ ಸಂಖ್ಯಾಬಲ ಆಧರಿಸಿ ಹೇಳುವುದಾದರೆ ಜಗದೀಪ್ ಧನಕರ್ ಅವರು 518 ರಿಂದ 539 ಮತಗಳನ್ನು ಹಾಗೂ ಮಾರ್ಗರೇಟ್ ಆಳ್ವ ಅವರು 189 ಮತಗಳನ್ನು ಪಡೆಯುವ ಸಾಧ್ಯತೆ ಇದೆ. ತೃಣಮೂಲ ಕಾಂಗ್ರೆಸ್ ಚುನಾವಣೆಯಿಂದ ದೂರ ಉಳಿಯಲು ನಿರ್ಧರಿಸಿದೆ. ಎನ್‌ಡಿಎ ಮಿತ್ರ ಕೂಟದಲ್ಲಿ ಇರುವ ಪಕ್ಷಗಳು ಅಲ್ಲದೆ ಬಿಜೆಡಿ, ಬಿಎಸ್‌ಪಿ, ವೈಎಸ್‌ಆರ್ ಕಾಂಗ್ರೆಸ್, ಟಿಡಿಪಿ ಮೊದಲಾದ ಪಕ್ಷಗಳು ಧನಕರ್ ಅವರಿಗೆ ಬೆಂಬಲ ಸೂಚಿಸಿವೆ.

ಯುಪಿಎ ಮೈತ್ರಿಕೂಟದಲ್ಲಿ ಇಲ್ಲದೆ ಇರುವ ಎಎಪಿ ಕೂಡ ವಿರೋಧ ಪಕ್ಷಗಳ ಅಭ್ಯರ್ಥಿಯಾದ ಆಳ್ವ ಅವರಿಗೆ ಬೆಂಬಲ ಘೋಷಿಸಿದೆ. ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರನ್ನು ಬೆಂಬಲಿಸಿದ್ದ ಜೆಎಂಎಂ, ಉಪರಾಷ್ಟ್ರಪತಿ ಚುನಾವಣೆಯಲ್ಲಿ ಆಳ್ವ ಅವರನ್ನು ಬೆಂಬಲಿಸುವುದಾಗಿ ಹೇಳಿದೆ. ಉಪರಾಷ್ಟ್ರಪತಿಯಾಗಿ ಆಯ್ಕೆಯಾದವರು ರಾಜ್ಯಸಭೆಯ ಸಭಾಪತಿಯಾಗಿಯೂ ಕಾರ್ಯನಿರ್ವಹಿಸಲಿದ್ದಾರೆ.

ಹಾಲಿ ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರ ಅಧಿಕಾರ ಅವಧಿ ಆಗಸ್ಟ್ 10ಕ್ಕೆ ಕೊನೆಗೊಳ್ಳಲಿದೆ

ಪ್ರತಿಭಟನೆ ತಡೆದ ದೆಹಲಿ ಪೊಲೀಸರು • ಕೇಂದ್ರದ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ

ಜನತಂತ್ರದ ಕೊಲೆ: ಕಾಂಗ್ರೆಸ್ ಸಂಸದರ ಆಕ್ರೋಶ

ನವದೆಹಲಿ (ಪಿಟಿಐ): ಬೆಲೆ ಏರಿಕೆಯ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಸಂಸದರು ಮತ್ತು ಕಾರ್ಯಕರ್ತರನ್ನು ದೆಹಲಿ ಪೊಲೀಸರು ಶುಕ್ರವಾರ ಎಳೆದೊಯ್ದಿರುವುದನ್ನು, ಪಕ್ಷವು ತೀವ್ರವಾಗಿ ಖಂಡಿಸಿದೆ. 'ದೇಶದಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ. ಪ್ರಜಾಪ್ರಭುತ್ವ ನೆನಪು ಮಾತ್ರ' ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಬೆಲೆ ಏರಿಕೆಯ ವಿರುದ್ಧ ಕಾಂಗ್ರೆಸ್ ಶುಕ್ರವಾರ ದೇಶದಾದ್ಯಂತ ಪ್ರತಿಭಟನೆಗೆ ಕರೆ ನೀಡಿತ್ತು. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ಸಂಸತ್ ಭವನದ 1ನೇ ದ್ವಾರದ ಬಳಿ ಪಕ್ಷದ ಸಂಸದರು ಪ್ರತಿಭಟನೆ ನಡೆಸಿದರು. ಎಲ್ಲರೂ ಕಪ್ಪು ಬಟ್ಟೆ ಧರಿಸಿದ್ದರು. ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಘೋಷಣೆ ಕೂಗಿದರು. ನಂತರ ಅಲ್ಲಿಂದ ರಾಷ್ಟ್ರಪತಿ ಭವನದತ್ತ ಮೆರವಣಿಗೆ ಹೊರಟರು.

ಪ್ರತಿಭಟನಕಾರರು ವಿಜಯ್ ಚೌಕ್ ತಲುಪುವಷ್ಟರಲ್ಲೇ ಪೊಲೀಸರು ಅವರನ್ನು ತಡೆದರು. ದೆಹಲಿಯಲ್ಲಿ ನಿಷೇಧಾಜ್ಞೆ ಇರುವುದರಿಂದ ಪ್ರತಿಭಟನೆ ನಡೆಸಲು ಅವಕಾಶವಿಲ್ಲ, ಪ್ರತಿಭಟನೆ ನಿಲ್ಲಿಸಿ ಎಂದು ಪೊಲೀಸರು ಹೇಳಿದರು. ಅದನ್ನು ಲೆಕ್ಕಿಸದೆ ಕಾಂಗ್ರೆಸ್ ಸದಸ್ಯರು ಮೆರವಣಿಗೆ ಮುಂದುವರಿಸಿದರು. ಆಗ ಪೊಲೀಸರು ರಾಹುಲ್ ಗಾಂಧಿ ಸೇರಿ ಅವರೆಲ್ಲರನ್ನೂ ವಶಕ್ಕೆ ಪಡೆದು, ಬಸ್‌ಗಳಲ್ಲಿ ಪೊಲೀಸ್ ಠಾಣೆಗೆ ಕರೆದೊಯ್ದರು. ಪ್ರಧಾನಿ ನಿವಾಸದತ್ತ ಹೊರಟ ಕಾಂಗ್ರೆಸ್ ಕಾರ್ಯಕರ್ತರನ್ನೂ ಪೊಲೀಸರು ವಶಕ್ಕೆ ಪಡೆದರು.

ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರನ್ನು ಪೊಲೀಸರು ಹೊತ್ತೊಯ್ಯುತ್ತಿರುವ ಚಿತ್ರ ಮತ್ತು ವಿಡಿಯೊಗಳನ್ನು ಪಕ್ಷದ ನಾಯಕರು ಟ್ವೀಟ್ ಮಾಡಿದ್ದಾರೆ.

ಪ್ರಿಯಾಂಕಾರನ್ನು ಎಳೆದೊಯ್ದ ಪೊಲೀಸರು: ಇನ್ನೊಂದೆಡೆ, ಇಲ್ಲಿನ ಅಕ್ಬರ್ ರಸ್ತೆಯಲ್ಲಿರುವ ಕಾಂಗ್ರೆಸ್ ಕೇಂದ್ರ ಕಚೇರಿಯ ಬಳಿಯಿಂದ ರಾಷ್ಟ್ರಪತಿ ಭವನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲು ಕಾಂಗ್ರೆಸ್ ಮುಂದಾಗಿತ್ತು. ಆದರೆ, ಪ್ರತಿಭಟನೆಗೆ ಪೊಲೀಸರು ಅನುಮತಿ ನೀಡಲಿಲ್ಲ. ಕಾಂಗ್ರೆಸ್ ಕಚೇರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು. ಈ ಮೂಲಕ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ತಮ್ಮ ಪಕ್ಷದ ಕಚೇರಿಗೆ ತಲುಪುವುದನ್ನು ತಡೆಯಲಾಗಿತ್ತು.


ಕಾಂಗ್ರೆಸ್ ಸಂಸದರು ಮತ್ತು ನಾಯಕರು ಪ್ರತಿಭಟನೆ ನಡೆಸಿದರು

ಪ್ರಜಾಪ್ರಭುತ್ವವನ್ನು ರಕ್ಷಿಸಲು, ಜನರ ಪರವಾಗಿ ದನಿ ಎತ್ತಲು ನಾವು ಹೋರಾಡುತ್ತಿದ್ದೇವೆ. ಆದರೆ ನಮ್ಮ ಸಂಸದರ ಮೇಲೆ ಹಲ್ಲೆ ನಡೆಸಲಾಗಿದೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಪ್ರಜಾಸತ್ತಾತ್ಮಕವಾಗಿ ಪ್ರತಿಭಟನೆ ನಡೆಸುವ ನಮ್ಮ ಹಕ್ಕನ್ನು ಕಿತ್ತುಕೊಳ್ಳಲಾಗಿದೆ. ಕಾಂಗ್ರೆಸ್ ಸಂಸದರನ್ನು ಪೊಲೀಸ್ ವಾಹನಗಳಲ್ಲಿ ತುಂಬಲಾಗಿದೆ

ಜೈರಾಮ್ ರಮೇಶ್, ಕಾಂಗ್ರೆಸ್ ರಾಜ್ಯಸಭಾ ಸದಸ್ಯ

ಹಣದುಬ್ಬರದ ಬಗ್ಗೆ ಆರ್‌ಬಿಐ ಗವರ್ನರ್ ಚಿಂತಾಕ್ರಾಂತರಾಗಿದ್ದಾರೆ. ಹಣಕಾಸು ಸಚಿವರು ಮಾತ್ರ ಹಣದುಬ್ಬರ ಇಲ್ಲ ಎಂದು ಸಂಸತ್ತಿನಲ್ಲಿ ಸುಳ್ಳು ಹೇಳಿದರು

ಗೌರವ್ ಗೊಗೊಯಿ, ಕಾಂಗ್ರೆಸ್ ಸಂಸದ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ಶ್ರೀನಿವಾಸ ಸೇರಿದಂತೆ ಹಲವರು ಪಕ್ಷದ ಕಚೇರಿಗೆ ಹೋಗಲು ಯತ್ನಿಸಿದರು. ಕಚೇರಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಹಾಕಲಾಗಿದ್ದ ಬ್ಯಾರಿಕೇಡ್ ಅನ್ನು ಹತ್ತಿದ ಪ್ರಿಯಾಂಕಾ ಅವರನ್ನು ಪೊಲೀಸರು ತಡೆದರು. ಪ್ರಿಯಾಂಕಾ ಅವರು ಅಲ್ಲಿಯೇ ರಸ್ತೆಯಲ್ಲೇ ಧರಣಿ ಕೂತರು. ಕಾಂಗ್ರೆಸ್ ಕಾರ್ಯಕರ್ತರೂ ಅವರಿಗೆ ಜತೆಯಾದರು.

ಕಪ್ಪು ಬಟ್ಟೆ...

ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಸಂಸದರು, ನಾಯಕರು ಮತ್ತು ಕಾರ್ಯಕರ್ತರು ಕಪ್ಪು ಬಟ್ಟೆ ಧರಿಸಿದ್ದರು. ಪ್ರತಿಭಟನೆಗೂ ಮುನ್ನ ಮಾಧ್ಯಮಗೋಷ್ಠಿ ನಡೆಸಿದ್ದ ರಾಹುಲ್ ಗಾಂಧಿ ಅವರು ಅವರು ಬಿಳಿ ಜುಬ್ಬಾ ತೊಟ್ಟಿದ್ದರು ಮತ್ತು ತೋಳಿಗೆ ಕಪ್ಪು ಕಟ್ಟಿದ್ದರು. ಆದರೆ ಪ್ರತಿಭಟನೆಯಲ್ಲಿ ಭಾಗಿಯಾಗುವಾಗ ಕಪ್ಪು ಬಟ್ಟೆ ಧರಿಸಿದ್ದರು.

ಪ್ರಿಯಾಂಕಾ ಗಾಂಧಿ ಸಹ ಕಪ್ಪು ಬಟ್ಟೆ ಧರಿಸಿದ್ದರು. ಪಿ.ಚಿದಂಬರಂ, ಕಾರ್ತಿ ಚಿದಂಬರಂ, ಅಧೀರ್ ರಂಜನ್ ಚೌಧರಿ, ಮನೀಷ್ ತಿವಾರಿ, ರಣದೀಪ್ ಸಿಂಗ್ ಸುರ್ಜೇವಾಲಾ, ಪವನ್ ಖೇರಾ, ಶಶಿ ತರೂರ್ ಸೇರಿದಂತೆ ಕಾಂಗ್ರೆಸ್‌ನ ಸಂಸದರು ಮತ್ತು ರಾಜ್ಯಸಭಾ ಸದಸ್ಯರೆಲ್ಲರೂ ಕಪ್ಪು ಬಟ್ಟೆ ಧರಿಸಿದ್ದರು. ಸಂಸತ್ತಿನ ಉಭಯ ಸದನಗಳಲ್ಲಿ ಭಾಗಿಯಾಗುವಾಗಲೂ ಅವರು ಕಪ್ಪು ಪಟ್ಟು ಧರಿಸಿ ತಮ್ಮ ಪ್ರತಿಭಟನೆ ದಾಖಲಿಸಿದರು.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಕಪ್ಪು ಧಿರಿಸು ಗಮನ ಸೆಳೆಯಿತು. ಬಿಳಿ ಕಚ್ಚೆ ಪಂಚೆಯ ಮೇಲೆ ಕಪ್ಪು ಜುಬ್ಬಾ ಧರಿಸಿದ್ದ ಅವರು, ತಲೆಗೆ ಕಪ್ಪು ಪೇಟ ಸುತ್ತಿದ್ದರು. ಅವರ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.



ಧರಣಿ ಕೂತ ಪ್ರಿಯಾಂಕಾ ಅವರನ್ನು ಮಹಿಳಾ ಪೊಲೀಸರು ಬಲವಂತವಾಗಿ ವಾಹನ ಹತ್ತಿಸಲು ಯತ್ನಿಸಿದರು. ಆಗ ಪ್ರಿಯಾಂಕಾ ತೀವ್ರ ಪ್ರತಿರೋಧ ಒಡ್ಡಿದರು. ನಂತರ ಪೊಲೀಸರು, ಇಲ್ಲಿ ಪ್ರತಿಭಟನೆ ನಡೆಸುವಂತಿಲ್ಲ ಹೊರಡಿ ಎಂದರು. ಆಗಲೂ ಪ್ರಿಯಾಂಕಾ ಧರಣಿ ಮುಂದುವರಿಸಿದರು. ಏಳೆಂಟು ಮಹಿಳಾ ಪೊಲೀಸರು ಬಂದು ಪ್ರಿಯಾಂಕಾರನ್ನು ಬಲವಂತವಾಗಿ ಎತ್ತಿಕೊಂಡು ಹೋದರು. ಪೊಲೀಸ್ ವಾಹನವನ್ನು ಏರಲು ಪ್ರಿಯಾಂಕಾ ತೀವ್ರ ಪ್ರತಿರೋಧ ಒಡ್ಡಿದಾಗ, ಅವರ ಕೈಕಾಲು ಹಿಡಿದು ವಾಹನದೊಳಕ್ಕೆ ಎಳೆದೊಯ್ದರು.

ಈ ವೇಳೆ ಮಹಿಳಾ ಪೊಲೀಸರೊಬ್ಬರು ಪ್ರಿಯಾಂಕಾ ಅವರ ಕುತ್ತಿಗೆಯನ್ನು ಮೊಣಕೈನಿಂದ ಒತ್ತಿದ್ದಾರೆ. ಈ ದೃಶ್ಯಗಳಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಹಲವೆಡೆ ಪ್ರತಿಭಟನೆ

- ನಿಂಬೆಹಣ್ಣು, ಮೆಣಸಿನಕಾಯಿ, ಹಾಲಿನ ಖಾಲಿ ಪೊಟ್ಟಣಗಳು ಮತ್ತು ತರಕಾರಿಗಳ ಸರವನ್ನು ಧರಿಸಿ ಕಾಂಗ್ರೆಸ್‌ನ ಸಂಸದರು, ಸಂಸತ್ ಭವನದ ಆವರಣದಲ್ಲಿ ಪ್ರತಿಭಟನೆ ನಡೆಸಿದರು
- ತಮಿಳುನಾಡು ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ಎಸ್. ಅಳಗಿರಿ ಅವರ ನೇತೃತ್ವದಲ್ಲಿ ಚೆನ್ನೈನಲ್ಲಿಯ ರಾಜ ಭವನಕ್ಕೆ ಮುತ್ತಿಗೆ ಹಾಕಲು ಹೊರಟಿದ್ದ ಪಕ್ಷದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ನಂತರ ಬಿಡುಗಡೆ ಮಾಡಿದರು
- ಪುದುಚೇರಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಸುಮಾರು 200 ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ನಂತರ ಬಿಡುಗಡೆ ಮಾಡಿದ್ದಾರೆ
- ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ರಾಜಸ್ಥಾನದ ಜೈಪುರದಲ್ಲಿ ಪ್ರತಿಭಟನೆ ನಡೆಸಿದರು
- ಉತ್ತರಾಖಂಡ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ರಾಜ ಭವನ ಚಲೋ ನಡೆಸಿದರು
- ಛತ್ತೀಸಗಡದಲ್ಲಿ ಸುರಿಯುತ್ತಿದ್ದ ಮಳೆಯ ನಡುವೆಯೇ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು
- ಉತ್ತರ ಪ್ರದೇಶದ ಲಖನೌನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕಪ್ಪು ಪಟ್ಟಿಗಳನ್ನು ಧರಿಸಿ ಪ್ರತಿಭಟನೆ ನಡೆಸಿದರು. ರಾಜ ಭವನಕ್ಕೆ ಮುತ್ತಿಗೆ ಹಾಕಲು ಹೊರಟಿದ್ದ ಅವರನ್ನು ಪೊಲೀಸರು ತಡೆದರು
- ಬಿಹಾರ ಕಾಂಗ್ರೆಸ್ ಕಾರ್ಯಕರ್ತರು ಪಟ್ನಾದ ಸಾದಕತ್ ಆಶ್ರಮದಿಂದ ರಾಜ ಭವನಕ್ಕೆ ಪ್ರತಿಭಟನಾ ಮೆರವಣಿಗೆ ಆರಂಭಿಸಿದ್ದರು. ಅವರಲ್ಲಿ ನೂರಾರು ಕಾರ್ಯಕರ್ತರನ್ನು ಪೊಲೀಸರು ಮಾರ್ಗಮಧ್ಯೆಯೇ ವಶಕ್ಕೆ ತೆಗೆದುಕೊಂಡರು
- ಪಂಜಾಬ್ ಕಾಂಗ್ರೆಸ್ ಕಾರ್ಯಕರ್ತರು ರಾಜ ಭವನಕ್ಕೆ ತೆರಳುವ ಮಾರ್ಗ ಮಧ್ಯೆಯೇ ಪೊಲೀಸರು ಜಲಫಿರಂಗಿಗಳನ್ನು ಬಳಸಿ ಅವರನ್ನು ತಡೆದರು. ಹರಿಯಾಣದಲ್ಲೂ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

'ಮೋದಿಗೆ ಬೆಲೆ ಏರಿಕೆ ಕಾಣುವುದಿಲ್ಲ'

ಹಿಟ್ಟು, ಅಕ್ಕಿ, ಅಡುಗೆ ಅನಿಲ ಎಲ್ಲವುಗಳ ಬೆಲೆ ಏರಿಕೆಯಾಗಿದೆ. ಆದರೆ ಪ್ರಧಾನಿ ನರೇಂದ್ರ ಮೋದಿಗೆ ಬೆಲೆ ಏರಿಕೆಯಾಗಿರುವುದು ಕಾಣುವುದಿಲ್ಲ ಎಂದು ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.

ಕಾಂಗ್ರೆಸ್ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದ ಅವರನ್ನು ಪೊಲೀಸರು ವಶಕ್ಕೆ ಪಡೆದು ವಾಹನದಲ್ಲಿ ಕೂರಿಸಿದ ನಂತರ ಪತ್ರಕರ್ತರ ಜತೆಗೆ ಪ್ರಿಯಾಂಕಾ ಮಾತನಾಡಿದರು. 'ಬೆಲೆ ಏರಿಕೆಯಾಗುತ್ತಿರುವುದು ಮೋದಿ ಅವರ ಸಚಿವರಿಗೆ ಕಾಣಿಸುತ್ತಿಲ್ಲ. ಅದನ್ನು ಮೋದಿ ಅವರಿಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ನಾವು ಪ್ರಧಾನಿ ನಿವಾಸದತ್ತ ಹೊರಟಿದ್ದೆವು. ಅವರಿಗೆ ಅತಿ ಹಣದುಬ್ಬರ, ಬೆಲೆ ಏರಿಕೆಯನ್ನು ತೋರಿಸಬೇಕು ಎಂದುಕೊಂಡಿದ್ದೆವು' ಎಂದು ಪ್ರಿಯಾಂಕಾ ಹೇಳಿದರು.

'ಮೋದಿ ಅವರ ಪಾಲಿಗೆ ಹಣದುಬ್ಬರ ಇಲ್ಲವೇ ಇಲ್ಲ ಬಿಡಿ. ಅವರು ದೇಶದ ಸಂಪತ್ತೆಲ್ಲವನ್ನೂ ಕೆಲವೇ ಜನರಿಗೆ ಹಂಚಿದ್ದಾರೆ. ಆ ಕೆಲವು ಜನರು ಮಾತ್ರ ಶ್ರೀಮಂತರಾಗುತ್ತಲೇ ಇದ್ದಾರೆ, ಸಾಮಾನ್ಯ ಜನರು ಬಡವರಾಗುತ್ತಲೇ ಇದ್ದಾರೆ. ಅವರ ಬಳಿ ಸಾಕಷ್ಟು ಹಣವಿದೆ, ಹೀಗಾಗಿ ಅವರಿಗೆ ಬೆಲೆ ಏರಿಕೆಯ ಬಿಸಿ ಮುಟ್ಟುವುದಿಲ್ಲ' ಎಂದು ಪ್ರಿಯಾಂಕಾ ಟೀಕಿಸಿದ್ದಾರೆ.

ವಿಮಾನ ಅಪಘಾತ ಸಂತ್ರಸ್ತರಿಂದ ಆಸ್ಪತ್ರೆ ಕಟ್ಟಡ ನಿರ್ಮಾಣ

ತಿರುವನಂತಪುರ: ಕೋಯಿಕ್ಕೋಡ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಂಭವಿಸಿದ್ದ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದವರ ಕುಟುಂಬದವರು ಮತ್ತು ಗಾಯಾಳುಗಳು ದೇಣಿಗೆ ನೀಡುವ ಮೂಲಕ, ಸ್ಥಳೀಯರಿಗಾಗಿ ಆಸ್ಪತ್ರೆಯ ಹೊಸ ಕಟ್ಟಡ ನಿರ್ಮಾಣಕ್ಕೆ ನೆರವಾಗಲು ನಿರ್ಧರಿಸಿದ್ದಾರೆ.

2020ರಲ್ಲಿ ಕೋವಿಡ್ ಸಾಂಕ್ರಾಮಿಕದ ಮಧ್ಯೆ ವಂದೇ ಭಾರತ್ ಅಭಿಯಾನದ ಅಡಿ ದುಬೈನಿಂದ ಭಾರತೀಯರನ್ನು ಹೊತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನವು ಕೋಯಿಕ್ಕೋಡ್ ವಿಮಾನ ನಿಲ್ದಾಣಕ್ಕೆ ಬಂದಿತ್ತು. ರನ್‌ವೇಯಲ್ಲಿ ಇಳಿದ ನಂತರ ಜಾರಿದ್ದ ವಿಮಾನವು, ಮುಂದಿದ್ದ ಕಂದಕಕ್ಕೆ ಬಿದ್ದು ಹೋಳಾಗಿತ್ತು. ಅವಘಡದಲ್ಲಿ 21 ಜನರು ಮೃತಪಟ್ಟು 169 ಮಂದಿ ಗಾಯಗೊಂಡಿದ್ದರು.

ಕತ್ತಲಲ್ಲಿ ನಡೆದಿದ್ದ ಈ ಅವಘಡದಲ್ಲಿ ಸಂತ್ರಸ್ತರ ನೆರವಿಗೆ ಮೊದಲು ಧಾವಿಸಿದ್ದು ಸ್ಥಳೀಯರು. ಅವಘಡದ ಸ್ಥಳದಲ್ಲಿ ಉಂಟಾಗಬಹುದಾದ ಅಪಾಯವನ್ನು ಲೆಕ್ಕಿಸದೆ ಸ್ಥಳೀಯರು ರಕ್ಷಣಾ ಕಾರ್ಯಕ್ಕೆ ಮುಂದಾಗಿದ್ದರು. ಇದಕ್ಕೆ ಕೃತಜ್ಞತೆ ಸಲ್ಲಿಸುವ ಉದ್ದೇಶದಿಂದ ಸಂತ್ರಸ್ತರು, ಆಸ್ಪತ್ರೆ ಕಟ್ಟಡ ನಿರ್ಮಿಸಲು ಮುಂದಾಗಿದ್ದಾರೆ.

ಅವಘಡದ ಸಂಬಂಧ ವಿಮಾನಯಾನ ಕಂಪನಿಯು ನೀಡಿರುವ ಪರಿಹಾರದಲ್ಲೇ, ಹಲವರು ಸ್ವಲ್ಪ ಪ್ರಮಾಣವನ್ನು ದೇಣಿಗೆ ನೀಡಿ ₹50 ಲಕ್ಷ ಒಟ್ಟು ಮಾಡಿದ್ದಾರೆ. ಅವಘಡ ಸಂಭವಿಸಿ ಇದೇ ಭಾನುವಾರಕ್ಕೆ ಎರಡು ವರ್ಷ ಆಗಲಿದೆ. ಆಸ್ಪತ್ರೆ ನಿರ್ಮಾಣ ಸಂಬಂಧದ ಪ್ರಸ್ತಾವವನ್ನು ಅಂದು ಸರ್ಕಾರಕ್ಕೆ ನೀಡಲಾಗುತ್ತದೆ.

ಆಕ್ಷೇಪಾರ್ಹ ಚಿತ್ರ: ಎಫ್‌ಐಆರ್

ಕಾನ್ಪುರ (ಉತ್ತರ ಪ್ರದೇಶ)(ಪಿಟಿಐ): ಶಿವ ಮತ್ತು ಕಾಳಿ ದೇವತೆಯ ಆಕ್ಷೇಪಾರ್ಹ ಚಿತ್ರ ಪ್ರಕಟಿಸಲಾಗಿದೆ ಎಂಬ ಕಾರಣಕ್ಕಾಗಿ 'ದಿ ವೀಕ್' ನಿಯತಕಾಲಿಕೆ ವಿರುದ್ಧ ಆಕ್ರೋಶ ಭುಗಿಲೆದ್ದಿದ್ದು, ಹಿಂದೂ ಸಂಘಟನೆ ಕಾರ್ಯಕರ್ತರು 'ದಿ ವೀಕ್' ಪ್ರತಿಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜುಲೈ 24ರಂದು ವಿವೇಕ್ ದೆಬ್ರೊಯ್ ಅವರ ಲೇಖನದ ಜೊತೆಯಲ್ಲಿ ಆಕ್ಷೇಪಾರ್ಹ ಎನ್ನಲಾದ ಚಿತ್ರವನ್ನು ಪ್ರಕಟಿಸಲಾಗಿತ್ತು. ಇದರ ಬೆನ್ನಲ್ಲೇ ನಿಯತಕಾಲಿಕೆ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದೆ ಎಂದು ಆರೋಪಿಸಿ ರಾಜ್ಯ ಬಿಜೆಪಿ ಘಟಕದ ಮಾಜಿ ಉಪಾಧ್ಯಕ್ಷ ಪ್ರಕಾಶ ಶರ್ಮಾ ಗುರುವಾರ ದೂರು ದಾಖಲಿಸಿದ್ದರು. ಈ ಹಿನ್ನೆಲೆಯಲ್ಲಿ ಕಾನ್ಪುರದ ಕೊತ್ವಾಲಿ ಪೊಲೀಸರು ನಿಯತಕಾಲಿಕೆಯ ಸಂಪಾದಕರು ಮತ್ತು ಆಡಳಿತ ಮಂಡಳಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಬಜರಂಗದಳ ಕಾರ್ಯಕರ್ತರು ನಿಯತಕಾಲಿಕೆ ಪ್ರತಿಗಳನ್ನು ಸುಟ್ಟಿದ್ದು ಸಂಪಾದಕರ ವಿರುದ್ಧ ಕ್ರಮಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಈ ಮಧ್ಯೆ ನಿಯತಕಾಲಿಕೆಯ ಅಂಕಣಕಾರರಾಗಿದ್ದ ಅರ್ಥಶಾಸ್ತ್ರಜ್ಞ ವಿವೇಕ್ ದೆಬ್ರೊಯ್ ನಿಯತಕಾಲಿಕೆಯಿಂದ ಸಂಬಂಧ ಕಡಿದುಕೊಂಡಿದ್ದಾರೆ.

ರಾಜ್ಯಸಭೆಯಲ್ಲಿ ಸಭಾಪತಿ ಎಂ.ವೆಂಕಯ್ಯ ನಾಯ್ಡು

'ಸಂಸದರಿಗೆ ಬಂಧನದಿಂದ ರಕ್ಷಣೆ ಇಲ್ಲ'

ನವದೆಹಲಿ (ಪಿಟಿಐ): 'ಕ್ರಿಮಿನಲ್ ಪ್ರಕರಣಗಳಲ್ಲಿ ಸಂಸದರಿಗೆ ಬಂಧನದಿಂದ ರಕ್ಷಣೆ ಇಲ್ಲ' ಎಂದು ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ರಾಜ್ಯಸಭೆಯಲ್ಲಿ ಶುಕ್ರವಾರ ಹೇಳಿದ್ದಾರೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ, ಸಂಸತ್ ಅಧಿವೇಶನದ ಮಧ್ಯೆಯೇ ಜಾರಿ ನಿರ್ದೇಶನಾಲಯವು (ಇ.ಡಿ) ಸಮನ್ಸ್ ನೀಡಿದ್ದನ್ನು ಖಂಡಿಸಿ ವಿರೋಧ ಪಕ್ಷಗಳ ಸದಸ್ಯರು ಶುಕ್ರವಾರ ರಾಜ್ಯಸಭೆಯಲ್ಲಿ ಪ್ರತಿಭಟನೆ ನಡೆಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ವೆಂಕಯ್ಯ ನಾಯ್ಡು ಅವರು ಹೀಗೆ ಹೇಳಿದ್ದಾರೆ.

'ಸಂಸದರಿಗೆ ಬಂಧನದಿಂದ ರಕ್ಷಣೆ ಇದೆ ಎಂಬ ಸಾಮಾನ್ಯ ನಂಬಿಕೆ ಇದೆ. ಆದರೆ, ನಿಜಕ್ಕೂ ಹಾಗಿಲ್ಲ. ಸಿವಿಲ್ ಪ್ರಕರಣಗಳಲ್ಲಾದರೆ, ಅಧಿವೇಶನದ ಅವಧಿ ಮತ್ತು ಆನಂತರದ 40 ದಿನದ ಒಳಗೆ ಸಂಸದರನ್ನು ಬಂಧಿಸುವಂತಿಲ್ಲ. ಆದರೆ ಕ್ರಿಮಿನಲ್ ಪ್ರಕರಣಗಳಲ್ಲಿ ಅಂತಹ ರಕ್ಷಣೆ ಇಲ್ಲ' ಎಂದು ಅವರು ಹೇಳಿದ್ದಾರೆ.

ಯಾವ ಸದಸ್ಯರೂ ಸದನದಲ್ಲಿ ಕಲಾಪ ನಡೆಯುತ್ತಿದೆ ಎಂಬ ನೆಪ ಒಡ್ಡಿ, ತನಿಖಾ ಸಂಸ್ಥೆಗಳ ಎದುರು ವಿಚಾರಣೆಗೆ ಹಾಜರಾಗುವುದನ್ನು ತಪ್ಪಿಸಬಾರದು ಎಂದು ಅವರು ಹೇಳಿದ್ದಾರೆ.

ಕಲಾಪ ಮುಂದೂಡಿಕೆ: ತನಿಖಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ವಿರೋಧ ಪಕ್ಷಗಳ ಸಂಸದರು ರಾಜ್ಯಸಭೆಯಲ್ಲಿ ಪ್ರತಿಭಟನೆ ನಡೆಸಿದರು. ಹೀಗಾಗಿ ಕಲಾಪವನ್ನು ಕೆಲಕಾಲ ಮುಂದೂಡಲಾಗಿತ್ತು.

ಬೆಲೆ ಏರಿಕೆ ಕುರಿತು ಚರ್ಚೆಗೆ ಅವಕಾಶ ನೀಡಿಲ್ಲ ಎಂದು ಆರೋಪಿಸಿ ಲೋಕಸಭೆಯಲ್ಲಿ ಡಿಎಂಕೆ ಸದಸ್ಯರು ಸದನದಿಂದ ಹೊರ ನಡೆದರು.

ಮಕ್ಕಳಲ್ಲಿ ರಕ್ತಹೀನತೆ ಪ್ರಮಾಣ ಶೇ 9ರಷ್ಟು ಹೆಚ್ಚಳ

ನವದೆಹಲಿ(ಪಿಟಿಐ): ಕಳೆದ ಐದು ವರ್ಷಗಳಲ್ಲಿ ಆರು ತಿಂಗಳಿನಿಂದ 5 ವರ್ಷದೊಳಗಿನ ಮಕ್ಕಳಲ್ಲಿ ರಕ್ತಹೀನತೆ ಪ್ರಮಾಣ ಶೇಕಡ 9ಕ್ಕಿಂತ ಹೆಚ್ಚಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ಲೋಕಸಭೆಯಲ್ಲಿ ಮಾಹಿತಿ ನೀಡಿದೆ.

2015–16ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್-4) ಪ್ರಕಾರ, ರಕ್ತಹೀನತೆಯಿಂದ ಬಳಲುವ ಮಕ್ಕಳ ಪ್ರಮಾಣ ಶೇಕಡ 58.6ರಷ್ಟಿತ್ತು. ಆದರೆ 2019–21ರ ಸಮೀಕ್ಷೆಯಲ್ಲಿ ಈ ಪ್ರಮಾಣ ಶೇಕಡ 67.1ಕ್ಕೆ ಏರಿಕೆಯಾಗಿದೆ.

ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು, 'ಎನ್‌ಎಫ್‌ಎಚ್‌ಎಸ್–5 ಪ್ರಕಾರ ಲಡಾಖ್‌ನಲ್ಲಿ 6 ತಿಂಗಳಿನಿಂದ 5 ವರ್ಷದೊಳಗಿನ ಮಕ್ಕಳಲ್ಲಿ ರಕ್ತಹೀನತೆ ಗರಿಷ್ಠ ಪ್ರಮಾಣದಲ್ಲಿದೆ(ಶೇ 90ರಷ್ಟು). ನಂತರದಲ್ಲಿ ಗುಜರಾತ್ (ಶೇ 80), ದಾದ್ರಾ ಮತ್ತು ನಗರ್ ಹವೇಲಿ, ದಾಮನ್ ಮತ್ತು ದಿಯು(ಶೇ 76), ಮಧ್ಯಪ್ರದೇಶ ಮತ್ತು ಜಮ್ಮು–ಕಾಶ್ಮೀರ (ಶೇ 73) ಮತ್ತು ಪಂಜಾಬ್ ಮತ್ತು ರಾಜಸ್ಥಾನ (ಶೇ 71) ಇದೆ ಎಂದು ತಿಳಿಸಿದ್ದಾರೆ.

ಇದೇ ವೇಳೆ ರಕ್ತಹೀನತೆ ಪ್ರಮಾಣ ಕಡಿಮೆ ಮಾಡಲು ಸರ್ಕಾರ ಪೋಷಣ್ ಅಭಿಯಾನವನ್ನು ಆರಂಭಿಸಿದೆ ಎಂದು ತಿಳಿಸಿದರು.

ಕರ್ನಾಟಕ: ಐದು ವರ್ಷಗಳಲ್ಲಿ 6,137 ರೈತರ ಆತ್ಮಹತ್ಯೆ

ನವದೆಹಲಿ: ಕರ್ನಾಟಕದಲ್ಲಿ ಐದು ವರ್ಷಗಳ ಅವಧಿಯಲ್ಲಿ 6,137 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಸದಸ್ಯರೊಬ್ಬರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) 2020ರ ವರೆಗೆ ವರದಿ ಪ್ರಕಟಿಸಿದೆ. ಮಹಾರಾಷ್ಟ್ರದಲ್ಲಿ ಅತೀ ಹೆಚ್ಚು (12,462) ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎರಡನೇ ಸ್ಥಾನದಲ್ಲಿ ಕರ್ನಾಟಕ ಇದೆ' ನಂತರದ ಸ್ಥಾನಗಳಲ್ಲಿ ತೆಲಂಗಾಣ, ಮಧ್ಯಪ್ರದೇಶ ಹಾಗೂ ಆಂಧ್ರ ಪ್ರದೇಶ ರಾಜ್ಯಗಳು ಇವೆ ಎಂದಿದ್ದಾರೆ.

ಕರ್ನಾಟಕದಲ್ಲಿ ರೈತರ ಆತ್ಮಹತ್ಯೆ

ವರ್ಷ	ಸಂಖ್ಯೆ
2016	1,212
2017	1,157
2018	1,365
2019	1,331
2020	1,072

ಸಂಸತ್ ಅಧಿವೇಶನ

ಚೀನಾ ಪ್ರಜೆಗಳಿಗೆ ವೀಸಾ ನೀಡಿದ ಪ್ರಕರಣ: ಇ.ಡಿ ಶೋಧ

ನವದೆಹಲಿ (ಪಿಟಿಐ): ಚೀನಾದ 263 ಮಂದಿಗೆ ವೀಸಾ ನೀಡುವ ವೇಳೆ ನಡೆದಿರುವ ಹಣ ಅಕ್ರಮ ವರ್ಗಾವಣೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ತಮಿಳುನಾಡಿನ ಆರು ಸ್ಥಳಗಳಲ್ಲಿ ಶೋಧ ನಡೆಸಿದೆ. ಇದರಲ್ಲಿ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಭಾಗಿಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೆನ್ನೈ ಮತ್ತು ಹತ್ತಿರದ ಪ್ರದೇಶಗಳಲ್ಲಿ ಕೆಲ ಕಂಪನಿ ಮತ್ತು ಅವುಗಳ ಪ್ರವರ್ತಕರಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಇದೇ ಪ್ರಕರಣದಲ್ಲಿ ಸಿಬಿಐ ದಾಖಲಿಸಿರುವ ಎಫ್‌ಐಆರ್ ಆಧರಿಸಿ ಇ.ಡಿ ಮೇ ತಿಂಗಳಲ್ಲಿ ತನಿಖೆ ಆರಂಭಿಸಿ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಪ್ರಕರಣ ದಾಖಲಿಸಿತ್ತು.

ಕಾರ್ತಿ ಚಿದಂಬರಂ ಅವರನ್ನು ವಿಚಾರಣೆಗೆ ಒಳಪಡಿಸಿದ ಸಿಬಿಐ, ಚಿದಂಬರಂ ಕುಟುಂಬಕ್ಕೆ ಸೇರಿದ ಸ್ಥಳಗಳ ಮೇಲೆ ದಾಳಿ ನಡೆಸಿ ಭಾಸ್ಕರ್‌ರಾಮನ್ ಅವರನ್ನು ಬಂಧಿಸಿತ್ತು.

ಈ ಆರೋಪ ನಿರಾಕರಿಸಿರುವ ಕಾರ್ತಿ, 'ಇದು ಕಿರುಕುಳ ಅಲ್ಲದೆ ಮತ್ತೇನು?. 250 ಮಂದಿ ಹೊರತುಪಡಿಸಿ ವೀಸಾ ಪ್ರಕ್ರಿಯೆಯಲ್ಲಿ ಚೀನಾದ ಒಬ್ಬ ಪ್ರಜೆಗೂ ಅನುಕೂಲ ಕಲ್ಪಿಸಿಕೊಟ್ಟಿಲ್ಲ' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಪಂಜಾಬ್‌ನಲ್ಲಿ ವಿದ್ಯುತ್ ಸ್ಥಾವರ ಸ್ಥಾಪಿಸುತ್ತಿರುವ ವೇದಾಂತ ಗ್ರೂಪ್ ಕಂಪನಿ ತಲ್ವಾಂಡಿ ಸಾಬೋ ಪವರ್ ಲಿಮಿಟೆಡ್‌ನ ಅಧಿಕಾರಿಗಳಿಂದ ಕಾರ್ತಿ ಮತ್ತು ಅವರ ನಿಕಟವರ್ತಿ ಎಸ್. ಭಾಸ್ಕರ ರಾಮನ್‌ಗೆ ಕಿಕ್ ಬ್ಯಾಕ್ ಆಗಿ ₹50 ಲಕ್ಷ ಪಾವತಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ.

ತಾಂತ್ರಿಕ ಸಮಸ್ಯೆ: ಸಿಯುಇಟಿ ಪರೀಕ್ಷಾರ್ಥಿಗಳ ಅಸಮಾಧಾನ

ನವದೆಹಲಿ (ಪಿಟಿಐ): ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದ ವಿಶ್ವವಿದ್ಯಾಲಯದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ) ಎರಡನೇ ದಿನವಾದ ಶುಕ್ರವಾರ ತಾಂತ್ರಿಕ ಸಮಸ್ಯೆಗಳು ಅಭ್ಯರ್ಥಿಗಳಿಗೆ ಬಾಧಿಸಿದವು.

ಅನೇಕ ವಿದ್ಯಾರ್ಥಿಗಳು ಸುಮಾರು ಎರಡು ಗಂಟೆ ಪರೀಕ್ಷೆ ಎದುರಿಸಲು ಕಾಯಬೇಕಾಯಿತು. ಆದರೆ, ಅಂತಿಮವಾಗಿ ಅವರಿಗೆ ದಿನದ ಪರೀಕ್ಷೆಯನ್ನು ರದ್ದುಪಡಿಸಲಾಗಿದೆ ಎಂಬ ಮಾಹಿತಿಯನ್ನು ನೀಡಲಾಯಿತು.

ಆದರೆ, ಪರೀಕ್ಷೆ ನಡೆಸಿದ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ), ದಿನದ ಮೊದಲ ಅವಧಿಯ ಪರೀಕ್ಷೆ ಸುಗಮವಾಗಿ ನಡೆದಿದೆ. ದೇಶದಾದ್ಯಂತ ಶೇ 95ರಷ್ಟು ಹಾಜರಿ ಇತ್ತು ಎಂದು ತಿಳಿಸಿದೆ.

ಮುಂದೂಡಲಾದ ಪರೀಕ್ಷೆಯನ್ನು ಆಗಸ್ಟ್ 12ರಂದು ನಡೆಸಲಾಗುವುದು ಎಂದು ತಿಳಿಸಲಾಗಿದೆ. ಭಾರಿ ಮಳೆಯ ಕಾರಣ ಕೇರಳದಲ್ಲಿ ಆಗಸ್ಟ್ 4, 5 ಮತ್ತು 6ರಂದು ನಡೆಯಬೇಕಿದ್ದ ಪರೀಕ್ಷೆಗಳನ್ನೂ ಮುಂದೂಡಲಾಗಿದೆ.

'ನಾನು 34 ಕಿ.ಮೀ ದೂರದಿಂದ ನೊಯ್ಡಾ ಸೆಕ್ಟರ್ 64ಕ್ಕೆ ಪರೀಕ್ಷೆಗೆ ಬಂದಿದೆ. ಟರ್ಮಿನಲ್ಸ್‌ನಲ್ಲಿ ಕೂರಿಸಿದ್ದರು. ಕೊನೆಗೆ ತಾಂತ್ರಿಕ ಕಾರಣದಿಂದ ಪರೀಕ್ಷೆ ನಡೆಸಲಾಗದು ಎಂದು ತಿಳಿಸಿದರು' ಎಂದು ಅಭ್ಯರ್ಥಿ ಗಣಿಕಾ ಹೇಳಿದರು. ಇದು ಪರೀಕ್ಷಾ ವ್ಯವಸ್ಥೆ ನಿರ್ವಹಣೆಯ ವೈಫಲ್ಯ ಎಂದು ಮತ್ತೊಬ್ಬ ಅಭ್ಯರ್ಥಿ ಹಮಾನ್‌ಶೆ ಉದರ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ಸಂಪುಟ ಕಾರ್ಯದರ್ಶಿ ಸೇವಾ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರದ ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ ಅವರ ಸೇವಾ ಅವಧಿಯನ್ನು ಸರ್ಕಾರ ಒಂದು ವರ್ಷ ವಿಸ್ತರಿಸಿದೆ.

ಗೌಬಾ ಅವರನ್ನು 2019ರಲ್ಲಿ ಎರಡು ವರ್ಷದ ಅವಧಿಗೆ ನೇಮಕ ಮಾಡಲಾಗಿತ್ತು. ಕಳೆದ ವರ್ಷ ಆಗಸ್ಟ್‌ನಲ್ಲಿ ಒಂದು ವರ್ಷ ವಿಸ್ತರಣೆ ಮಾಡಲಾಗಿತ್ತು.

ತಲೈವಟ್ಟಿ ಮುನಿಯಪ್ಪನ್ ಈಗ ಬುದ್ಧ!

ಚೆನ್ನೈ (ಪಿಟಿಐ): ತಮಿಳುನಾಡಿನ ಸೇಲಂ ಜಿಲ್ಲೆಯ ದೇಗುಲದ ಮುಖ್ಯ ದೇವರ ವಿಗ್ರಹ 'ತಲೈವೆಟ್ಟಿ ಮುನಿಯಪ್ಪನ್' ಅಲ್ಲ 'ಬುದ್ಧ' ಎಂದು ಮದ್ರಾಸ್ ಹೈಕೋರ್ಟ್ ಘೋಷಿಸಿದೆ.

ಪುರಾತತ್ವ ಇಲಾಖೆ ಆಯುಕ್ತರು ಸಲ್ಲಿಸಿದ ವರದಿ ಪರಿಶೀಲನೆ ಬಳಿಕ ನ್ಯಾಯಾಧೀಶ ಎನ್.ಆನಂದ್ ವೆಂಕಟೇಶನ್ ಅವರು ಈ ತೀರ್ಪು ನೀಡಿದ್ದಾರೆ. ಜೊತೆಗೆ ದೇಗುಲವನ್ನು ಇಲಾಖೆ ಸ್ವಾಧೀನಕ್ಕೆ ನೀಡುವಂತೆ ತಮಿಳುನಾಡು ಹಿಂದೂ ಧಾರ್ಮಿಕ ಮತ್ತು ಮುಜರಾಯಿ ಇಲಾಖೆಗೆ ಸೂಚಿಸಿದೆ.


ಸೇಲಂನಲ್ಲಿರುವ ಬುದ್ಧ ಟ್ರಸ್ಟ್, ತಲೈವಟ್ಟಿ ಮುನಿಯಪ್ಪನ್ ದೇಗುಲದ ವಿಗ್ರಹದ ಹಿನ್ನೆಲೆ ಬಗ್ಗೆ ಪರಿಶೀಲನೆ ನಡೆಸಲು ಭಾರತೀಯ ಪುರಾತತ್ವ ಇಲಾಖೆಗೆ (ಎಎಸ್‌ಐ) ಸೂಚನೆ ನೀಡಬೇಕು ಎಂದು ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿತ್ತು. ಬಳಿಕ ವಿಗ್ರಹ ಪರಿಶೀಲನೆಗೆ ರಾಜ್ಯ ಪುರಾತತ್ವ ಇಲಾಖೆ ಆಯುಕ್ತರಿಗೆ ಕೋರ್ಟ್ ಸೂಚಿಸಿತ್ತು. ಇದು ದೇಗುಲದ ಮೂರ್ತಿ ಬುದ್ಧ ಎಂದು ವರದಿ ನೀಡಿತ್ತು.

ಕಳ್ಳಬಟ್ಟಿ: 7 ಸಾವು

ಛಾಪ್ರಾ, ಬಿಹಾರ (ಪಿಟಿಐ): ಬಿಹಾರದ ಸರನ್ ಜಿಲ್ಲೆಯಲ್ಲಿ ನಡೆದಿರುವ ಕಳ್ಳಬಟ್ಟಿ ದುರಂತದಲ್ಲಿ ಕನಿಷ್ಠ ಏಳು ಮಂದಿ ಮೃತಪಟ್ಟಿದ್ದು, 15 ಮಂದಿ ಅಸ್ವಸ್ಥಗೊಂಡಿದ್ದಾರೆ. ಈ ಪೈಕಿ ಕೆಲವರು ದೃಷ್ಟಿ ಕಳೆದುಕೊಂಡಿದ್ದಾರೆ.

ಜಿಲ್ಲಾಧಿಕಾರಿ ರಾಜೇಶ್ ಮೀನಾ ಅವರ ಪ್ರಕಾರ, ಮಕೆರ್ ಪೊಲೀಸ್ ಠಾಣಾ ವ್ಯಾಪ್ತಿಯ ಗ್ರಾಮಗಳಲ್ಲಿ ಈ ಅವಘಡ ನಡೆದಿದೆ. ಕಳ್ಳಬಟ್ಟಿ ಸೇವನೆಯೇ ದುರಂತಕ್ಕೆ ಕಾರಣ ಎಂದು ಮೇಲ್ನೋಟಕ್ಕೆ ತಿಳಿದುಬಂದಿದೆ.

ಷೇರುಪೇಟೆ ವಹಿವಾಟು 89



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,382
ಇಂದಿನ ಅಂತ್ಯ	17,397
▲	15
ದಿನದ ಗರಿಷ್ಠ	17,474

ವಿನಿಮಯ ದರ

$ ಡಾಲರ್	79.24
£ ಪೌಂಡ್	96.18
€ ಯುರೊ	81.04
¥ ಯೆನ್ (100ಕ್ಕೆ)	59

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹405
12 ಮೊಟ್ಟೆಗೆ	₹57
ಮೈಸೂರು	
100 ಮೊಟ್ಟೆಗೆ	₹405

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹1240(1240)
ಸೂರ್ಯಕಾಂತಿ (ರಿಫೈನ್ಡ್)	₹1600 (1570)
ಪಾಮೋಲಿನ್	₹1215 (1215)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹220-520
ದ್ವಿತಳಿ (ಬಿ.ವಿ)	₹333-792

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹165
ಆರ್ಎಸ್ಎಸ್-5	₹155
ಗುಡ್ ಲಾಟ್	₹148

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಮಹೀಂದ್ರ ಲಾಭ ₹ 2,360 ಕೋಟಿ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಜೂನ್ ತ್ರೈಮಾಸಿಕದ ತೆರಿಗೆ ನಂತರದ ಲಾಭವು ₹ 2,360 ಕೋಟಿ ಆಗಿದೆ. ಆಟೊಮೊಬೈಲ್ ಹಾಗೂ ಕೃಷಿ ವಿಭಾಗದಲ್ಲಿ ಉತ್ತಮ ವಹಿವಾಟು ಕಂಡುಬಂದ ಕಾರಣ ಇಷ್ಟು ಲಾಭ ಸಾಧ್ಯವಾಗಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು ₹ 331 ಕೋಟಿ ನಷ್ಟ ಅನುಭವಿಸಿತ್ತು. ಕಂಪನಿಯ ಕಾರ್ಯಾಚರಣೆ ವರಮಾನವು ಜೂನ್ ತ್ರೈಮಾಸಿಕದಲ್ಲಿ ₹ 28,412 ಕೋಟಿಗೆ ಏರಿಕೆ ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ವರಮಾನವು ₹ 19,171 ಕೋಟಿ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಆಟೊಮೊಬೈಲ್ ವಿಭಾಗದಲ್ಲಿ ಕಂಪನಿಯು ₹ 12,740 ಕೋಟಿ ವರಮಾನವನ್ನು ದಾಖಲಿಸಿದೆ.

ಸಾಲ ಇನ್ನಷ್ಟು ತುಟ್ಟಿ ಸಾಧ್ಯತೆ

ಒಂದನೇ ಪುಟದಿಂದ....

ಕೋವಿಡ್ ಪೂರ್ವ ಮಟ್ಟ ಮೀರಿದ ರೆಪೊ: ಶುಕ್ರವಾರದ ಹೆಚ್ಚಳದ ಪರಿಣಾಮವಾಗಿ ರೆಪೊ ದರವು ಶೇ 5.40ಕ್ಕೆ ತಲುಪಿದೆ. ಇದು ಕೋವಿಡ್‌ಗೂ ಮೊದಲು ಇದ್ದ ಮಟ್ಟಕ್ಕಿಂತ ಶೇ 0.25ರಷ್ಟು ಹೆಚ್ಚು.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಮೂರು ದಿನಗಳ ಸಭೆಯು ಶುಕ್ರವಾರ ಅಂತ್ಯವಾಗಿದ್ದು, ರೆಪೊ ದರ ಹೆಚ್ಚಿಸಲು ಎಂಪಿಸಿಯ ಆರೂ ಸದಸ್ಯರು ಒಮ್ಮತ ಸೂಚಿಸಿದ್ದಾರೆ. ಇದೇ ವೇಳೆ, ಹೊಂದಾಣಿಕೆಯ ನೀತಿಯನ್ನು ಕೈಬಿಡುವ ನಿರ್ಧಾರಕ್ಕೆ ಬದ್ಧವಿರುವುದಾಗಿಯೂ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಆರು ತಿಂಗಳಿನಿಂದಲೂ ಶೇ 6ರ ಮಟ್ಟಕ್ಕಿಂತ ಹೆಚ್ಚಿಗೆ ಇದೆ. ಹೀಗಾಗಿ ಇದನ್ನು ನಿಯಂತ್ರಿಸಲು ಶೇ 0.50ರಷ್ಟು ಬಡ್ಡಿದರ ಹೆಚ್ಚಳವು ಸಾಲದು ಎನ್ನುವ ಸುಳಿವನ್ನು ಆರ್‌ಬಿಐ ಗವರ್ನರ್ ದಾಸ್ ನೀಡಿದ್ದಾರೆ.

ಎನ್‌ಆರ್‌ಐಗೂ ಭಾರತ್ ಬಿಲ್ ಪೇಮೆಂಟ್

ಅನಿವಾಸಿ ಭಾರತೀಯರು (ಎನ್‌ಆರ್‌ಐ) ಭಾರತದಲ್ಲಿ ಇರುವ ತಮ್ಮ ಕುಟುಂಬದವರ ಪರವಾಗಿ ಯುಟಿಲಿಟಿ ಬಿಲ್‌ಗಳು (ವಿದ್ಯುತ್, ಗ್ಯಾಸ್ ಇತ್ಯಾದಿ) ಹಾಗೂ ಶಿಕ್ಷಣ ಶುಲ್ಕಗಳ ಪಾವತಿಗೆ ಭಾರತ್ ಬಿಲ್ ಪೇಮೆಂಟ್ ವ್ಯವಸ್ಥೆಯನ್ನು ಶೀಘ್ರದಲ್ಲೇ ಬಳಸುವಂತೆ ಆಗಲಿದೆ ಎಂದು ಆರ್‌ಬಿಐ ತಿಳಿಸಿದೆ.

ಹಿರಿಯ ನಾಗರಿಕರಿಗೆ ಇದರಿಂದ ಹೆಚ್ಚಿನ ಅನುಕೂಲ ಆಗಲಿದೆ ಎಂದು ಹೇಳಿದೆ. ಸದ್ಯ, ಭಾರತದ ಬಳಕೆದಾರರು ಈ ವ್ಯವಸ್ಥೆಯ ಪ್ರಯೋಜನ ಪಡೆದುಕೊಳ್ಳುತ್ತಿದ್ದು, ಎನ್‌ಆರ್‌ಐಗಳಿಗೂ ಲಭ್ಯವಾಗುವಂತೆ ಮಾಡುವ ಪ್ರಸ್ತಾವ ಬಂದಿದೆ ಎಂದು ತಿಳಿಸಿದೆ.

> **ಹಣದುಬ್ಬರವು ಒಪ್ಪಲಾಗದಂತಹ ಮಟ್ಟದಲ್ಲಿ ಇರುವುದರಿಂದ ರೆಪೊ ದರವನ್ನು ಶೇ 0.50ರಷ್ಟು ಹೆಚ್ಚಿಸಲಾಗಿದೆ**
> **ಶಕ್ತಿಕಾಂತ ದಾಸ್**, ಆರ್‌ಬಿಐ ಗವರ್ನರ್

'2022–23ನೇ ಹಣಕಾಸು ವರ್ಷದ ಮೊದಲ ಮೂರು ತ್ರೈಮಾಸಿಕಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿಯೇ ಇರುವ ಅಂದಾಜು ಮಾಡಲಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಉಂಟಾಗಿರುವ ಅಸ್ಥಿರತೆಯು ದೇಶದಲ್ಲಿ ಹಣದುಬ್ಬರ ಒತ್ತಡ ಹೆಚ್ಚಾಗಲು ಕಾರಣವಾಗುತ್ತಿದೆ' ಎಂದು ದಾಸ್ ಹೇಳಿದ್ದಾರೆ.

ಇನ್ನಷ್ಟು ಹೆಚ್ಚಳ ನಿರೀಕ್ಷೆ: ರೆಪೊ ದರವು 'ತಟಸ್ಥ ದರ' ಅಂದರೆ ಶೇ 6ರಿಂದ ಶೇ 6.5ರವರೆಗೆ ಬರುವ ತನಕವೂ ಬಡ್ಡಿದರ ಹೆಚ್ಚಳ ಮುಂದುವರಿಯಲಿದೆ ಎಂದು ಆರ್ಥಿಕ ತಜ್ಞರು ಮತ್ತು ವಿಶ್ಲೇಷಕರು ಹೇಳಿದ್ದಾರೆ.

ನಾಳೆ ಪ್ರಧಾನಿ ಅಧ್ಯಕ್ಷತೆಯಲ್ಲಿ ನೀತಿ ಆಯೋಗದ ಸಭೆ

ನವದೆಹಲಿ (ಪಿಟಿಐ): ನೀತಿ ಆಯೋಗದ ಏಳನೇ ಆಡಳಿತ ಮಂಡಳಿ ಸಭೆ ಆಗಸ್ಟ್ 7ರಂದು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಇದು ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಹಯೋಗದ ಹೊಸ ಯುಗಕ್ಕೆ ನಾಂದಿ ಹಾಡಲಿದೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಆಯೋಗದ ಸದಸ್ಯರು ಹಾಗೂ ಮುಖ್ಯಮಂತ್ರಿಗಳಿಗೆ 2019ರ ಜುಲೈ ನಂತರ ಇದು ಮೊದಲ ಭೌತಿಕ ಸಭೆಯಾಗಿದೆ.

ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಲಿರುವ ಸಭೆಯ ಕಾರ್ಯಸೂಚಿಯಲ್ಲಿ ಬೆಳೆ ವೈವಿಧ್ಯೀಕರಣ ಮತ್ತು ಎಣ್ಣೆಕಾಳು, ಬೇಳೆ ಕಾಳು, ಕೃಷಿ ಸಮುದಾಯದಲ್ಲಿ ಸ್ವಾವಲಂಬನೆ ಸಾಧಿಸುವುದು, ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಒಳಗೊಂಡಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷದ ಹಿನ್ನೆಲೆಯಲ್ಲಿ ರಾಜ್ಯಗಳು ಸ್ವಾವಲಂಬಿಗಳಾಗಿ 'ಆತ್ಮನಿರ್ಭರ್ ಭಾರತ್' ಕಡೆಗೆ ಚಲಿಸುವ ಅವಶ್ಯಕತೆಯಿದೆ. ಸ್ಥಿರ, ಸುಸ್ಥಿರ ಭಾರತ ನಿರ್ಮಿಸುವ ನಿಟ್ಟಿನಲ್ಲಿ ಸಭೆ ನಡೆಯಲಿದೆ. ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ನಡುವಿನ ಸಹಯೋಗ ಮತ್ತು ಸಹಕಾರದ ಹೊಸ ಯುಗದ ಕಡೆಗೆ ದಾರಿ ಮಾಡಿಕೊಡುತ್ತದೆ ಎಂದು ಹೇಳಿಕೆ ತಿಳಿಸಿದೆ.

ಎಂಎಸ್‌ಪಿ ವ್ಯವಸ್ಥೆ ಸುಧಾರಣೆಗೆ ಸಮಿತಿ

ನವದೆಹಲಿ (ಪಿಟಿಐ): ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನೀಡುವ ವ್ಯವಸ್ಥೆಯನ್ನು ಬಲಪಡಿಸುವ ಸಾಧ್ಯತೆಗಳ ಬಗ್ಗೆ ಅಧ್ಯಯನ ನಡೆಸಲು ತಜ್ಞರ ಸಮಿತಿ ರಚಿಸಲಾಗಿದೆ ಎಂದು ಕೇಂದ್ರ ಸರ್ಕಾರವು ರಾಜ್ಯಸಭೆಗೆ ಮಾಹಿತಿ ನೀಡಿದೆ.

'ಕೃಷಿಯಲ್ಲಿ ವೈವಿಧ್ಯ ತರಲು, ನೈಸರ್ಗಿಕ ಕೃಷಿಯನ್ನು ಉತ್ತೇಜಿಸಲು ಮತ್ತು ಎಂಎಸ್‌ಪಿ ವ್ಯವಸ್ಥೆಯನ್ನು ಬಲಪಡಿಸುವ ಬಗ್ಗೆ ಈ ಸಮಿತಿಯು ಅಧ್ಯಯನ ನಡೆಸಲಿದೆ. ರೈತರ ಪ್ರತಿನಿಧಿಗಳು, ರಾಜ್ಯ ಸರ್ಕಾರದ ಪ್ರತಿನಿಧಿಗಳು ಮತ್ತು ಕೇಂದ್ರ ಸರ್ಕಾರದ ಪ್ರತಿನಿಧಿಗಳೂ ಈ ಸಮಿತಿಯಲ್ಲಿ ಇದ್ದಾರೆ' ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವ ಕೈಲಾಶ್ ಚೌಧರಿ ಮಾಹಿತಿ ನೀಡಿದ್ದಾರೆ.

ಪೆಲೋಸಿ, ಕುಟುಂಬ ಸದಸ್ಯರಿಗೆ ನಿರ್ಬಂಧ: ತೈವಾನ್ ಸುತ್ತ ಸೇನಾ ತಾಲೀಮು

ಅಮೆರಿಕ ಸಂಬಂಧ ತೊರೆದ ಚೀನಾ

ಬೀಜಿಂಗ್ (ಎಎಫ್‌ಪಿ): ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರ ತೈವಾನ್ ಭೇಟಿಗೆ ಪ್ರತೀಕಾರವಾಗಿ ದ್ವೀಪದ ಮೇಲೆ ವ್ಯಾಪಾರ ನಿರ್ಬಂಧ ಹೇರಿದ್ದ ಚೀನಾ, ಅಮೆರಿಕದೊಂದಿಗೆ ಹವಾಮಾನ, ರಕ್ಷಣಾ ಕ್ಷೇತ್ರದಲ್ಲಿನ ಸಹಕಾರ ಸಂಬಂಧವನ್ನು ಶುಕ್ರವಾರ ಕೊನೆಗೊಳಿದೆ. ಅಲ್ಲದೇ, ಪೆಲೋಸಿ ಮತ್ತು ಅವರ ಕುಟುಂಬಕ್ಕೂ ನಿರ್ಬಂಧ ಹೇರಿದೆ.

ಅಮೆರಿಕದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಚೀನಾ, ತೈವಾನ್ ದ್ವೀಪ ತನ್ನ ಅವಿಭಾಜ್ಯ ಅಂಗ. ಅಗತ್ಯಬಿದ್ದರೆ ಅದನ್ನು ವಶಕ್ಕೆ ಪಡೆಯುವ ಪ್ರತಿಜ್ಞೆ ಮಾಡಿರುವುದಾಗಿ ಘೋಷಿಸಿದೆ.

ಹವಾಮಾನ ಬದಲಾವಣೆ, ಮಾದಕ ವಸ್ತು ನಿಗ್ರಹ, ಭದ್ರತೆ ಸಂಬಂಧ ಉಭಯ ದೇಶಗಳ ನಡುವಿನ ಹಲವು ಒಪ್ಪಂದಗಳ ಕುರಿತ ಮಾತುಕತೆ, ಅಕ್ರಮ ವಲಸಿಗರ ವಾಪಸಾತಿ, ಬಹುರಾಷ್ಟ್ರೀಯ ಅಪರಾಧ ಪ್ರಕರಣಗಳ ತನಿಖೆಯಲ್ಲಿ ಪರಸ್ಪರ ಸಹಕಾರ, ಉಭಯ ಸೇನೆಗಳ ಮುಖ್ಯಸ್ಥರ ಮಾತುಕತೆ ಸ್ಥಗಿತಗೊಳಿಸಿರುವುದಾಗಿ ಚೀನಾ ವಿದೇಶಾಂಗ ಸಚಿವಾಲಯ ಘೋಷಿಸಿದೆ.

ಅಮೆರಿಕದ ರಾಯಭಾರಿ ಕ್ರಿಸ್ ಬರ್ನ್ಸ್ ಅವರನ್ನು ಕರೆಸಿಕೊಂಡು, ಪೆಲೋಸಿ ಅವರ ಭೇಟಿ ಖಂಡಿಸಿ ತೀವ್ರ ಪ್ರತಿಭಟನೆ ದಾಖಲಿಸಿರುವ ಚೀನಾ ವಿದೇಶಾಂಗ ಸಚಿವಾಲಯ, ತಮ್ಮ ಗಂಭೀರ ಕಳವಳ ಮತ್ತು ದೃಢ ವಿರೋಧವನ್ನು ಲೆಕ್ಕಿಸದ ಪೆಲೋಸಿ ಮತ್ತು ಅವರ ಕುಟುಂಬದವರಿಗೆ ತೈವಾನ್ ದ್ವೀಪವೂ ಸೇರಿ ತನ್ನ ದೇಶಕ್ಕೆ ಕಾಲಿಡದಂತೆ ನಿರ್ಬಂಧ ಹೇರಲಾಗಿದೆ ಎಂದು ತಿಳಿಸಿದೆ.

'ಅಮೆರಿಕವು 'ಒಂದೇ ಚೀನಾ ನೀತಿ' ಉಲ್ಲಂಘಿಸಿ, ದೇಶದ ಆಂತರಿಕ ವಿಷಯದಲ್ಲಿ ಮೂಗು ತೂರಿಸಿ, ಗಡಿ ಸಾರ್ವಭೌಮತೆಗೆ ಧಕ್ಕೆ ತಂದಿದೆ' ಎಂದು ವ್ಯಗ್ರಗೊಂಡಿರುವ ಚೀನಾ, ಈ ನಿರ್ಬಂಧ ಕ್ರಮ ಸಾಂಕೇತಿಕ ಎನ್ನುವ ಮೂಲಕ, ಇನ್ನಷ್ಟು ಕಠಿಣ ನಿರ್ಬಂಧಗಳನ್ನು ಹೇರುವ ಸುಳಿವು ನೀಡಿದೆ. ಈ ಹಿಂದೆ ಟ್ರಂಪ್ ಆಡಳಿತದಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಮೈಕ್ ಪಾಂಪಿಯೊ ಸೇರಿ 28 ಮಂದಿಗೆ ಚೀನಾ ನಿರ್ಬಂಧ ಹೇರಿತ್ತು.

ತೈವಾನ್ ಸುತ್ತ ಯುದ್ಧ ವಿಮಾನಗಳು, ಸಮರ ನೌಕೆಗಳು, ಕ್ಷಿಪಣಿ ಪಡೆಗಳನ್ನು ನಿಯೋಜಿಸಿ ಕಳೆದ ಎರಡು ದಿನಗಳಿಂದ ನಡೆಸುತ್ತಿರುವ ಸಂಪೂರ್ಣ ಸೇನಾ ತಾಲೀಮಿಗೆ ಮತ್ತೆ ನೂರಕ್ಕೂ ಹೆಚ್ಚು ಯುದ್ಧ ವಿಮಾನಗಳು ಮತ್ತು ಹತ್ತು ಯುದ್ಧನೌಕೆಗಳನ್ನು ನಿಯೋಜಿಸುವುದಾಗಿ ಸೇನೆ ಹೇಳಿದೆ.

ಶುಕ್ರವಾರ ಕೂಡ ತೈವಾನ್ ಕೇಂದ್ರವಾಗಿರಿಸಿಕೊಂಡು ಮತ್ತಷ್ಟು ಹೊಸ ಅವತರಣಿಕೆಯ ಕ್ಷಿಪಣಿಗಳನ್ನು ಪ್ರಯೋಗಿಸಿದೆ.

ತೈವಾನ್ ಕರಾವಳಿಯ ಆರು ವಲಯಗಳಲ್ಲಿ ನಡೆಯುತ್ತಿರುವ 'ಜಂಟಿ ನಿರ್ಬಂಧದ ಕಾರ್ಯಾಚರಣೆ'ಗಳಲ್ಲಿ ಸೇನೆ, ಬಾಂಬರ್ ವಿಮಾನಗಳು, ಕ್ಷಿಪಣಿಗಳು, ಯುದ್ಧನೌಕೆಗಳನ್ನು ಬಳಸಲಾಗಿದೆ. ತೈವಾನ್ ಮೇಲೆ ಗುರುತಿಸಲಾಗದ ಗುರಿಗಳ ಮೇಲೆ ಹೊಸ ಆವೃತ್ತಿಯ ನಿಖರ ಕ್ಷಿಪಣಿಗಳನ್ನು ಉಡಾಯಿಸಿತು. ತೈವಾನಿನ ಮೇಲೆ ಪೆಸಿಫಿಕ್‌ನಿಂದಲೂ ಕ್ಷಿಪಣಿಗಳನ್ನು ಹಾರಿಸಿದೆ ಎಂದು ಸೇನೆ ಮಾಹಿತಿ ಉಲ್ಲೇಖಿಸಿ ಷಿನ್‌ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ. ಚೀನಾದ ಈ ನಡೆಗೆ ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳು ತೀವ್ರ ಕಿಡಿಕಾರಿವೆ.

'ತೈವಾನ್ ಪ್ರತ್ಯೇಕಿಸಲು ಬಿಡೆವು'

ಚೀನಾ ಪ್ರವಾಸ ನಿರ್ಬಂಧಿಸುವ ಮೂಲಕ ತೈವಾನ್ ಅನ್ನು ಪ್ರತ್ಯೇಕವಾಗಿರಿಸುವುದು ಅಸಾಧ್ಯ ಎಂದು ಚೀನಾದ ಕ್ರಮಕ್ಕೆ ಅಮೆರಿಕ ಸಂಸತ್ ಸ್ಪೀಕರ್ ನ್ಯಾನ್ಸಿ ಪೆಲೋಸಿ ಶುಕ್ರವಾರ ಜಪಾನ್ ರಾಜಧಾನಿ ಟೋಕಿಯೊದಲ್ಲಿ ತಿರುಗೇಟು ನೀಡಿದ್ದಾರೆ.

ಚೀನಾ–ತೈವಾನ್ ಸಂಘರ್ಷದ ಬೆಳವಣಿಗೆ

- ತೈವಾನ್ ದ್ವೀಪದ ಸುತ್ತ ಸೃಷ್ಟಿಸಿರುವ ಉದ್ವಿಗ್ನತೆಯನ್ನು ಚೀನಾ ಶಾಂತಿಯುತವಾಗಿ ಬಗೆಹರಿಸಬೇಕೆಂದು ಜಿ 7 ರಾಷ್ಟ್ರಗಳು ಕರೆ ನೀಡಿರುವುದನ್ನು ಖಂಡಿಸಿರುವ ಚೀನಾ, ಬೀಜಿಂಗ್‌ನಲ್ಲಿರುವ ಕೆನಡಾ ರಾಜತಾಂತ್ರಿಕ ಜಿಮ್ ನಿಕ್ಕಲ್ ಅವರಿಗೆ ಸಮನ್ಸ್ ನೀಡಿದೆ. ಹೇಳಿಕೆ ಬದಲಿಸುವಂತೆ ಚೀನಾ ಒತ್ತಡ ಹೇರಿದೆ.
- ತೈವಾನ್ ಸುತ್ತ ಕ್ಷಿಪಣಿಗಳ ಉಡಾವಣೆ ಅಕ್ರಮ ಮತ್ತು ಅಸಮಂಜಸ. ನ್ಯಾಯಯುತವಲ್ಲದ ಈ ಕ್ರಮ ತೈವಾನ್ ಭದ್ರತೆಗೆ ಕಳವಳಕಾರಿ. ಅಮೆರಿಕ ತೈವಾನ್ ಬಿಕ್ಕಟ್ಟು ಬಯಸುತ್ತಿಲ್ಲವೆಂದು ಚೀನಾಕ್ಕೆ ಪದೇ ಪದೇ ಸ್ಪಷ್ಟಪಡಿಸಲಾಗಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಬ್ಲಿಂಕನ್ ಅವರು ಆಸಿಯಾನ್ ಪ್ರಾದೇಶಿಕ ಸಮಾವೇಶದಲ್ಲಿ ಚೀನಾ ಸೇನೆ ವಿರುದ್ಧ ಹರಿಹಾಯ್ದಿದ್ದಾರೆ

ಸಂಕ್ಷಿಪ್ತ ಸುದ್ದಿ

ಫ್ರಾನ್ಸ್‌ನಲ್ಲಿ ಭೀಕರ ಬರಗಾಲ: ಪ್ರಧಾನಿ ಎಲಿಸಬೆತ್

ಪ್ಯಾರಿಸ್ (ಎಪಿ): 'ಫ್ರಾನ್ಸ್ ದೇಶವು ಈ ಬಾರಿ ಅತ್ಯಂತ ಭೀಕರ ಬರಗಾಲವನ್ನು ಎದುರಿಸುತ್ತಿದೆ' ಎಂದು ಫ್ರಾನ್ಸ್ ಪ್ರಧಾನಿ ಎಲಿಸಬೆತ್ ಬೋರ್ನ್ ತಿಳಿಸಿದ್ದು, ಇದರ ನಿರ್ವಹಣೆಗೆ ಸರ್ಕಾರಿ ಬಿಕ್ಕಟ್ಟು ನಿರ್ವಹಣಾ ಘಟಕವನ್ನು ಸಕ್ರಿಯಗೊಳಿಸುವುದಾಗಿ ತಿಳಿಸಿದ್ದಾರೆ.

'ಈ ವರ್ಷದ ಬೇಸಿಗೆಯ ವೇಳೆ ಫ್ರಾನ್ಸ್‌ನಲ್ಲಿ ಮೂರನೇ ಬಾರಿಗೆ ಬಿಸಿ ಗಾಳಿಯ ಅಲೆ ಮುಂದುವರಿದಿದ್ದು, ದೇಶದ ಅನೇಕ ಪ್ರದೇಶಗಳು ಬರಪೀಡಿತವಾಗಿವೆ. ಅನೇಕ ಪ್ರದೇಶಗಳು ನೀರಿನಿಂದ ವಂಚಿತವಾಗಿವೆ. ಇದರಿಂದ ನಮ್ಮ ರೈತರು, ನಮ್ಮ ಪರಿಸರ ವ್ಯವಸ್ಥೆ ಮತ್ತು ಜೀವ ವೈವಿಧ್ಯತೆ ತೊಂದರೆಗೀಡಾಗಿವೆ' ಎಂದು ಬೋರ್ನ್ ಶುಕ್ರವಾರ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಂಕಿಪಾಕ್ಸ್ : ಆರೋಗ್ಯ ತುರ್ತುಸ್ಥಿತಿ ಘೋಷಣೆಗೆ ಸಿದ್ಧತೆ

ವಾಷಿಂಗ್ಟನ್ (ಎಪಿ): ದೇಶದಲ್ಲಿ ಮಂಕಿ ಪಾಂಕ್ಸ್ ರೋಗ ತೀವ್ರಗತಿಯಲ್ಲಿ ಹರಡಿದ್ದು, ಈಗಾಗಲೇ 6,600 ಪ್ರಕರಣಗಳು ವರದಿಯಾಗಿವೆ. ಇದರಿಂದಾಗಿ ದೇಶದಲ್ಲಿ ಸಾರ್ವಜನಿಕ ಆರೋಗ್ಯ ತುರ್ತು ಸ್ಥಿತಿ ಘೋಷಿಸಲು ಅಮೆರಿಕ ಮುಂದಾಗಿದೆ ಎಂದು ಇಬ್ಬರು ವಿಷಯ ತಜ್ಞರು ಹೇಳಿದ್ದಾರೆ.

ಈ ಘೋಷಣೆಯಿಂದ ವೈರಸ್ ವಿರುದ್ಧ ಹೋರಾಡಲು ಹಣ ಮತ್ತು ಇತರೆ ಸಂಪನ್ಮೂಲ ಲಭಿಸಲಿದೆ. ಚಳಿ, ಜ್ವರ, ಮೈ, ಕೈ ನೋವು, ಚರ್ಮದ ಮೇಲೆ ಗುಳ್ಳೆಗಳು, ಆಯಾಸ– ರೋಗದ ಲಕ್ಷಣಗಳಾಗಿವೆ.

ಮಂಕಿಪಾಕ್ಸ್ ಲಸಿಕೆ ಲಭ್ಯತೆಯ ಬಗ್ಗೆ ಬೈಡನ್ ಆಡಳಿತ ಟೀಕೆ ಎದುರಿಸುತ್ತಿರುವ ಕಾರಣ ಈ ಘೋಷಣೆ ಬಂದಿದೆ. ಬೇಡಿಕೆಗೆ ತಕ್ಕಷ್ಟು ಲಸಿಕೆ ಪೂರೈಕೆಯಾಗಿಲ್ಲ ಎಂದು ನ್ಯೂಯಾರ್ಕ್ ಮತ್ತು ಸ್ಯಾನ್ ಫ್ರಾನ್ಸಿಸ್ಕೋದಂತಹ ಪ್ರಮುಖ ನಗರಗಳ ಕ್ಲಿನಿಕ್‌ಗಳು ಹೇಳಿದರೆ, ಮತ್ತೆ ಕೆಲವು ಮೊದಲ ಡೋಸ್ ಪೂರೈಕೆ ಖಚಿತಪಡಿಸಿಕೊಳ್ಳಲು ಎರಡನೇ ಡೋಸ್ ನೀಡುವುದನ್ನು ನಿಲ್ಲಿಸಿವೆ. 1.1 ಮಿಲಿಯನ್‌ಗಿಂತಲೂ ಹೆಚ್ಚು ಡೋಸ್ ಲಭ್ಯ ಇದೆ. ರೋಗ ನಿರ್ಣಯ ಸಾಮರ್ಥ್ಯವನ್ನು ವಾರಕ್ಕೆ 80 ಸಾವಿರ ಪರೀಕ್ಷೆಗಳಿಗೆ ಹೆಚ್ಚಿಸಲು ಸಹಾಯ ಮಾಡಲಾಗಿದೆ ಎಂದು ಶ್ವೇತಭವನ ತಿಳಿಸಿದೆ.

ಕಾರುಗಳಿಗೆ ಆರು ಏರ್‌ಬ್ಯಾಗ್ ಕಡ್ಡಾಯ: ಗಡ್ಕರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾರುಗಳಲ್ಲಿ ಆರು ಏರ್‌ಬ್ಯಾಗ್ ಇರುವುದನ್ನು ಕಡ್ಡಾಯಗೊಳಿಸಲು ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಪ್ರತಿ ಏರ್‌ಬ್ಯಾಗ್ ದರ ₹ 800 ಆಗಲಿದೆ. ಹೀಗಾಗಿ, ಆಟೊಮೊಬೈಲ್ ಉತ್ಪಾದಕರಿಗೆ ಇನ್ನು ಮುಂದೆ ಕಾರುಗಳಲ್ಲಿ ಕಡ್ಡಾಯವಾಗಿ ಆರು ಏರ್‌ಬ್ಯಾಗ್ ಅಳವಡಿಸಿ ಸುರಕ್ಷತಾ ಕ್ರಮ ಹೆಚ್ಚಿಸುವಂತೆ ಸೂಚಿಸಲಿದೆ ಎಂದು ಹೇಳಿದ್ದಾರೆ.

ಪ್ರಸ್ತುತ ಎಲ್ಲ ಕಾರುಗಳಲ್ಲಿ ಮುಂಭಾಗದ ಎರಡು ಸೀಟುಗಳಿಗೆ ಏರ್‌ಬ್ಯಾಗ್ ಇರುವುದು ಕಡ್ಡಾಯ. ಆರು ಏರ್‌ಬ್ಯಾಗ್ ಕಡ್ಡಾಯಗೊಳಿಸಿ ಶೀಘ್ರದಲ್ಲೇ ಅಧಿಸೂಚನೆ ಹೊರಡಿಸಲಾಗುವುದು ಎಂದು ರಾಜ್ಯಸಭೆಗೆ ತಿಳಿಸಿದರು.

ಭಾರತದಲ್ಲಿ ಪ್ರತಿವರ್ಷ ಅಪಘಾತಗಳಿಂದ ಲಕ್ಷಕ್ಕೂ ಅಧಿಕ ಜನರು ಸಾಯುತ್ತಿದ್ದಾರೆ. ಇದನ್ನು ತಗ್ಗಿಸುವುದು ಇದರ ಉದ್ದೇಶವಾಗಿದೆ. ಜೊತೆಗೆ ಸುರಕ್ಷತಾ ಮಾರ್ಗದಂಡಗಳಿಗೆ ಅನುಸಾರವಾಗಿ ವಿವಿಧ ಮಾದರಿಯ ಕಾರುಗಳಿಗೆ ಶ್ರೇಣಿಯನ್ನು ನೀಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಗಾಜಾ ಮೇಲೆ ಇಸ್ರೇಲ್ ವಾಯುದಾಳಿ: ಕಮಾಂಡರ್ ಸೇರಿ 10 ಮಂದಿ ಸಾವು



ಇಸ್ರೇಲ್ ವಾಯುದಾಳಿ ಬಳಿಕ ಪ್ಯಾಲೆಸ್ತೀನ್ ಅಗ್ನಿಶಾಮಕ ಸಿಬ್ಬಂದಿ ಅಗ್ನಿಯನ್ನು ನಂದಿಸುತ್ತಿರುವುದು –ಎಎಫ್‌ಪಿ ಚಿತ್ರ

ಗಾಜಾ (ಎಪಿ): ಇಸ್ರೇಲ್ ಶುಕ್ರವಾರ ಗಾಜಾ ನಗರದಲ್ಲಿ ನಡೆಸಿದ ವಾಯುದಾಳಿಯಲ್ಲಿ ಹಿರಿಯ ಭಯೋತ್ಪಾದಕ ಸೇರಿ ಕನಿಷ್ಠ 10 ಜನರು ಮೃತಪಟ್ಟು, 40 ಮಂದಿ ಗಾಯಗೊಂಡಿದ್ದಾರೆ ಎಂದು ಪ್ಯಾಲೆಸ್ತೀನ್ ಅಧಿಕಾರಿಗಳು ತಿಳಿಸಿದ್ದಾರೆ.

ಮೃತರ ಪೈಕಿ ಗಾಜಾ ಕಮಾಂಡರ್ ತೈಸೀರ್ ಅಲ್–ಜಬಾರಿ ಸಹ ಸೇರಿದ್ದಾರೆ ಎಂದು ಇಸ್ಲಾಮಿಕ್ ಜಿಹಾದ್ ಸಂಘಟನೆ ತಿಳಿಸಿದೆ.

ಹಿರಿಯ ಉಗ್ರನ ಬಂಧನದ ನಂತರ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾದ ಹಿನ್ನೆಲೆಯಲ್ಲಿ ಇಸ್ಲಾಮಿಕ್ ಜಿಹಾದ್ ಉಗ್ರ ಗುಂಪುಗಳನ್ನು ಗುರಿಯಾಗಿಸಿಕೊಂಡು ಈ ವಾಯುದಾಳಿ ನಡೆಸಲಾಗಿತ್ತು ಎಂದು ಇಸ್ರೇಲ್ ತಿಳಿಸಿದೆ.

ತೇಜಸ್ ಖರೀದಿಗೆ 6 ದೇಶಗಳ ಆಸಕ್ತಿ

ನವದೆಹಲಿ (ಪಿಟಿಐ): ಭಾರತದ ತೇಜಸ್ ಯುದ್ಧವಿಮಾನ ಖರೀದಿಗೆ ಅಮೆರಿಕ, ಆಸ್ಟ್ರೇಲಿಯಾ, ಇಂಡೋನೇಷ್ಯಾ ಮತ್ತು ಫಿಲಿಪ್ಪೀನ್ಸ್ ಸೇರಿ ಆರು ದೇಶಗಳು ಆಸಕ್ತಿ ತೋರಿವೆ. ಮಲೇಷ್ಯಾ ಈಗಾಗಲೇ ತೇಜಸ್ ಅನ್ನು ತನ್ನ ಸೇನೆಗೆ ಸೇರ್ಪಡೆ ಮಾಡಿಕೊಳ್ಳಲು ಬಹುತೇಕ ನಿರ್ಧರಿಸಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಅರ್ಜೆಂಟಿನಾ ಮತ್ತು ಈಜಿಪ್ಟ್ ಸಹ ತೇಜಸ್ ಖರೀದಿಗೆ ಆಸಕ್ತಿ ವ್ಯಕ್ತಪಡಿಸಿವೆ ಎಂದು ರಕ್ಷಣಾ ಇಲಾಖೆ ರಾಜ್ಯ ಸಚಿವ ಅಜಯ್ ಭಟ್ ಲೋಕಸಭೆಯಲ್ಲಿ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಅಭಿವೃದ್ಧಿಪಡಿಸಿರುವ ತೇಜಸ್, ಒಂದೇ ಎಂಜಿನ್ ಇರುವ ಬಹುಪಯೋಗಿ ಯುದ್ಧ ವಿಮಾನ. ಇದು ಅತ್ಯಂತ ಅಪಾಯಕಾರಿ ವಾಯು ಪರಿಸರದಲ್ಲೂ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದೆ.

ಇಂಥ 83 ಹಗುರ ಯುದ್ಧ ವಿಮಾನ ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರವು ಕಳೆದ ವರ್ಷ ಎಚ್‌ಎಎಲ್‌ನೊಂದಿಗೆ ₹48,000 ಕೋಟಿ ಮೊತ್ತದ ಒಪ್ಪಂದ ಮಾಡಿಕೊಂಡಿದೆ.

'ಸ್ಕೈಲೈಟ್' ತಾಲೀಮು ನಡೆಸಿದ ಭಾರತೀಯ ಸೇನೆ

ನವದೆಹಲಿ (ಪಿಟಿಐ): ಭಾರತೀಯ ಸೇನೆಯು ಕಾರ್ಯಾಚರಣೆಯ ಸಿದ್ಧತೆಯ ಖಾತ್ರಿಗೆ ಉಪಗ್ರಹಗಳ ಸಂಪರ್ಕದ ತನ್ನೆಲ್ಲ ಸೇನಾ ಉಪಕರಣಗಳ ವ್ಯವಸ್ಥೆಯನ್ನು ಪರೀಕ್ಷಿಸಲು 'ಸ್ಕೈಲೈಟ್' ಹೆಸರಿನಲ್ಲಿ ಐದು ದಿನಗಳ ತಾಲೀಮು ನಡೆಸಿದೆ ಎಂದು ರಕ್ಷಣಾ ಮೂಲಗಳು ಶುಕ್ರವಾರ ತಿಳಿಸಿವೆ.

ರಷ್ಯಾ-ಉಕ್ರೇನ್ ಯುದ್ಧದ ಸಮಯದಲ್ಲಿ ವರದಿಯಾದ ಉಪಗ್ರಹ ಸಂವಹನ, ಸೈಬರ್ ದಾಳಿ ಮತ್ತು ವಿದ್ಯುತ್ಕಾಂತೀಯ ಪರಿಣಾಮಗಳ ಅಧ್ಯಯನವನ್ನು ಸೇನೆ ನಡೆಸಿದೆ. 'ಸ್ಕೈಲೈಟ್' ತಾಲೀಮು ಜುಲೈ 25ರಿಂದ ಜುಲೈ 29ರವರೆಗೆ ನಡೆಸಲಾಯಿತು ಎಂದು ಮೂಲಗಳು ತಿಳಿಸಿವೆ.

ಮಲಬಾರ್ ಗೋಲ್ಡ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ಚಿನ್ನಾಭರಣ ಮಾರಾಟ ಕಂಪನಿಯಾಗಿರುವ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ '48ನೆಯ ಅಖಿಲ ಭಾರತದ ಹರಳು ಮತ್ತು ಚಿನ್ನಾಭರಣ ಪ್ರಶಸ್ತಿ' ಕಾರ್ಯಕ್ರಮದಲ್ಲಿ ಎರಡು ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ.

ಅತಿಹೆಚ್ಚಿನ ಸಂಖ್ಯೆಯಲ್ಲಿ ನೌಕರಿ ನೀಡಿದ್ದಕ್ಕಾಗಿ ಒಂದು ಪ್ರಶಸ್ತಿ ಹಾಗೂ ವರ್ಷದ ಜಾಗತಿಕ ರಿಟೇಲರ್ ಎಂಬ ಇನ್ನೊಂದು ಪ್ರಶಸ್ತಿಯು ಕಂಪನಿಗೆ ಸಿಕ್ಕಿದೆ ಎಂದು ಪ್ರಕಟಣೆ ತಿಳಿಸಿದೆ. ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನಾ ಮಂಡಳಿ ಈ ಪ್ರಶಸ್ತಿಗಳನ್ನು ಆಯೋಜಿಸುತ್ತಿದೆ.

ಟಿ.ವಿ ಚರ್ಚೆಯಲ್ಲಿ ಮತದಾರರ ಮನಗೆದ್ದ ರಿಷಿ ಸುನಕ್



ರಿಷಿ ಸುನಕ್

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಅಭ್ಯರ್ಥಿ ಸ್ಥಾನದ ಅಂತಿಮ ಸ್ಪರ್ಧಿಯಾಗಿ ನೇರ ಹಣಾಹಣಿ ಎದುರಿಸುತ್ತಿರುವ ಮಾಜಿ ಚಾನ್ಸಲರ್ ರಿಷಿ ಸುನಕ್ ಅವರು ಪ್ರತಿಸ್ಪರ್ಧಿ ವಿದೇಶಾಂಗ ಸಚಿವೆ ಲಿಜ್ ಟ್ರಸ್ ಅವರನ್ನು ಟಿ.ವಿ ಚರ್ಚೆಯಲ್ಲಿ ಮಣಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸ್ಕೈ ನ್ಯೂಸ್‌ನಲ್ಲಿ ಗುರುವಾರ ರಾತ್ರಿ, 'ಬ್ಯಾಟಲ್ ಫಾರ್ ನಂಬರ್ 10' ಅಥವಾ ಬೋರಿಸ್ ಜಾನ್ಸನ್ ಅವರ ಬದಲಾಗಿ ಏಕೆ ಬ್ರಿಟನ್ ಯಾಗಬೇಕು ಎಂಬ ವಿಷಯದ ಟಿ.ವಿ ಚರ್ಚೆಯಲ್ಲಿ ಇಬ್ಬರೂ ಬಿರುಸಿನ ಚರ್ಚೆ ನಡೆಸಿದರು. ಬಳಿಕ ವೀಕ್ಷಕರು ಸುನಕ್ ಅವರು ಅತ್ಯುತ್ತಮವಾಗಿ ವಿಷಯವನ್ನು ಮಂಡಿಸಿದರು ಎಂಬ ತೀರ್ಪು ನೀಡಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹಳತು	46000-56000
ಹೊಸತು	40000-45000
ಕುಮಟ	
ಚಿಪ್ಪು	27509-32509
ಕೋಕ	20111-31569
ಫ್ಯಾಕ್ಟರಿ	13509-21999
ಹಳೆಚಾಲಿ	43509-44899
ಹೊಸಚಾಲಿ	37089-40311
ಪುತ್ತೂರು	
ಹೊಸತು	32000-45000
ಶಿವಮೊಗ್ಗ	
ಬೆಟ್ಟೆ	52309-54189
ಗೊರಬಲು	16980-38869
ರಾಶಿ	48109-50439
ಸರಕು	61019-81070
ಸಿದ್ದಾಪುರ	
ಬಿಳಿಗೋಟು	28409-33899
ಚಾಲಿ	35399-40399
ಕೋಕ	24299-33499
ಕೆಂಪುಗೋಟು	31209-34209
ರಾಶಿ	46109-50589
ತಟ್ಟಿಬೆಟ್ಟೆ	39619-49299
ಶಿರಸಿ	
ಬೆಟ್ಟೆ	20199-46649
ಬಿಳಿಗೋಟು	24599-34392
ಚಾಲಿ	35700-41132
ರಾಶಿ	42689-52099
ಯಲ್ಲಾಪುರ	
ಬಿಳಿಗೋಟು	26969-34969
ಚಾಲಿ	35109-40889
ಕೋಕ	18312-31612
ಕೆಂಪುಗೋಟು	27199-35147
ರಾಶಿ	47600-55415
ತಟ್ಟಿಬೆಟ್ಟೆ	37599-46569

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	15500	15850	209.90 ಸೆಂಟ್ಸ್
ಎಸಿ	8820	8400	8800	
ಆರ್‌ಪಿ	9500	9500	9700	ಲಂಡನ್
ಆರ್‌ಸಿ	4550	4500	4550	2027 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

5-8-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10650-10700

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1180 (1175)
ಪಾಮ್ ವಾರದ ಡೆಲಿವರಿ	1213 (1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1490)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,600 (51,700)
ಬೆಳ್ಳಿ ಕೆ.ಜಿ 57,000 (57,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ





1.ಸಾಕ್ಷಿ ಮಲಿಕ್ (ಎಡ) ಮತ್ತು ಅನಾ ಪೌಲಾ ಗೊಡಿನೆಸ್ ಗೊನ್ಸಾಲೆಸ್ ನಡುವಣ ಸೆಣಸಾಟ. 2. ಬಜರಂಗ್ ಪೂನಿಯಾ (ಬಲ) ಮತ್ತು ಕೆನಡಾದ ಲಾಕ್ಲನ್ ಮೆಕ್‌ನೀಲ್ ನಡುವಿನ ಪೈಪೋಟಿ. 3.ದೀಪಕ್ ಪೂನಿಯಾ ಸಂಭ್ರಮ– ಪಿಟಿಐ ಚಿತ್ರಗಳು

ಬಜರಂಗ್, ದೀಪಕ್, ಸಾಕ್ಷಿ ಮಲಿಕ್ ಅಮೋಘ ಸಾಧನೆ; ಅನ್ಶು ಮಲಿಕ್‌ಗೆ ಬೆಳ್ಳಿ ಪದಕ

ಕುಸ್ತಿ ಅಖಾಡದಲ್ಲಿ ಭಾರತಕ್ಕೆ 3 ಚಿನ್ನ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಕೂಟದ ಕುಸ್ತಿ ಅಖಾಡದಲ್ಲಿ ಭಾರತ ಪದಕಗಳ ಬೇಟೆಯಾಡಿದ್ದು, ಮೂರು ಚಿನ್ನ ,ಒಂದು ಬೆಳ್ಳಿ ಹಾಗೂ ಎರಡು ಕಂಚಿನ ಪದಕಗಳನ್ನು ಬಗಲಿಗೆ ಹಾಕಿಕೊಂಡಿದೆ.

ಸಾಕ್ಷಿ ಮಲಿಕ್, ದೀಪಕ್ ಪೂನಿಯಾ ಮತ್ತು ಬಜರಂಗ್ ಪೂನಿಯಾ ಅವರು ಚಿನ್ನದ ನಗು ಬೀರಿದರೆ, ಅನ್ಶು ಮಲಿಕ್ ಬೆಳ್ಳಿಯ ಪದಕ ಗೆದ್ದುಕೊಂಡರು. ದಿವ್ಯಾ ಕಾಕ್ರನ್ ಮತ್ತು ಮೋಹಿತ್ ಗ್ರೆವಾಲ್ ಕಂಚು ಜಯಿಸಿದರು.

ಶುಕ್ರವಾರ ನಡೆದ ಪುರುಷರ ಫ್ರೀಸ್ಟೈಲ್ ಕುಸ್ತಿಯ 65 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಬಜರಂಗ್ ಅವರು ಕೆನಡಾದ ಲಾಕ್ಲನ್ ಮೆಕ್‌ಲೀನ್ ಎದುರು 9–2 ಪಾಯಿಂಟ್‌ಗಳಿಂದ ಗೆದ್ದರು.

28 ವರ್ಷದ ಬಜರಂಗ್ ಇದಕ್ಕೂ ಮುನ್ನ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್‌ನ ಜಾರ್ಜ್ ರಾಮ್ ವಿರುದ್ಧ 10–0 ರಲ್ಲಿ ಜಯ ಸಾಧಿಸಿದ್ದರು.



ಬೆಳ್ಳಿ ಪದಕ ಗೆದ್ದ ಅನ್ಶು ಮಲಿಕ್ –ಪಿಟಿಐ ಚಿತ್ರ

ಮೊದಲ ಸುತ್ತಿನ ಹಣಾಹಣಿಯಲ್ಲಿ ನೌರು ದ್ವೀಪದ ಲೊವ್ ಬಿಂಗ್‌ಹ್ಯಾಮ್ ಅವರನ್ನು ಮಣಿಸಿದ್ದರೆ, ಕ್ವಾರ್ಟರ್ ಫೈನಲ್‌ನಲ್ಲಿ ಮಾರಿಷಸ್‌ನ ಜೀನ್ ಗಯ್ಲಿಯಾನ್ ಜೊರಿಸ್ ಅವರನ್ನು ಪರಾಭವಗೊಳಿಸಿದ್ದರು.

ಬಜರಂಗ್ ಶುಕ್ರವಾರ ಸ್ಪರ್ಧಿಸಿದ ನಾಲ್ಕು ಬೌಟ್‌ಗಳಲ್ಲಿ ಮೂರನ್ನು ಕೂಡಾ ಮೊದಲ ಸುತ್ತಿನಲ್ಲೇ ಗೆದ್ದುಕೊಂಡರು. ತಾವು ಕಲಿತ ಎಲ್ಲ ಪಟ್ಟುಗಳನ್ನು ಸಮರ್ಥವಾಗಿ ಪ್ರಯೋಗಿಸಿ ಎದುರಾಳಿಗಳನ್ನು ತಬ್ಬಿಬ್ಬುಗೊಳಿಸಿದರು.

ಸಾಕ್ಷಿ ಮಲಿಕ್ ಅವರು ಮಹಿಳೆಯರ 62 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಕೆನಡಾದ ಅನಾ ಪೌಲಾ ಗೊಡಿನೆಸ್ ಗೊನ್ಸಾಲೆಸ್ ಅವರನ್ನು ಮಣಿಸಿದರು.

ಆರಂಭದ ಎರಡು ನಿಮಿಷ ಜಿದ್ದಾಜಿದ್ದಿನ ಪೈಪೋಟಿ ನಡೆದು ಇಬ್ಬರೂ 4–4 ಪಾಯಿಂಟ್‌ಗಳಿಂದ ಸಮಬಲ ಸಾಧಿಸಿದ್ದರು. ಆ ಬಳಿಕ ಲಯ ಕಂಡುಕೊಂಡ ಸಾಕ್ಷಿ, ಎದುರಾಳಿಯನ್ನು ಚಿತ್ ಮಾಡಿ ಅಖಾಡದಲ್ಲಿ ಗೆಲುವಿನ ಸಂಭ್ರಮ ಆಚರಿಸಿದರು.

ಮೊದಲ ಸುತ್ತಿನಲ್ಲಿ ಇಂಗ್ಲೆಂಡ್‌ನ ಕೆಲ್ಸೆ ಬಾರ್ನೆಸ್ ಎದುರು ಗೆದ್ದಿದ್ದ ಅವರು ಆ ಬಳಿಕ ಕ್ಯಾಮರೂನ್‌ನ ಬೆರ್ತ್ ಎಮಿಲಿಯೆನ್ ಅವರನ್ನು ಸೋಲಿಸಿದ್ದರು.

ಪುರುಷರ 86 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ದೀಪಕ್ ಪೂನಿಯಾ, ಪಾಕಿಸ್ತಾನದ ಮುಹಮ್ಮದ್ ಇನಾಮ್ ಎದುರು 3–0 ಪಾಯಿಂಟ್‌ಗಳಿಂದ ಗೆದ್ದರು.ದೀಪಕ್ ಮೊದಲ ಸುತ್ತಿನಲ್ಲಿ ನ್ಯೂಜಿಲೆಂಡ್‌ನ ಮ್ಯಾಥ್ಯೂ ಕ್ಲೇ ಅವರನ್ನು ಮಣಿಸಿದ್ದರೆ, ಸೆಮಿಫೈನಲ್‌ನಲ್ಲಿ ಕೆನಡಾದ ಅಲೆಕ್ಸಾಂಡರ್ ಮೂರ್ ಎದುರು 3–1 ರಲ್ಲಿ ಜಯ ಸಾಧಿಸಿದ್ದರು.

ಅನ್ಶು ಅವರು ಮಹಿಳೆಯರ 57 ಕೆ.ಜಿ. ಫ್ರೀಸ್ಟೈಲ್ ಕುಸ್ತಿ ಸ್ಪರ್ಧೆಯಲ್ಲಿ ಬೆಳ್ಳಿ ಜಯಿಸಿದರು. ಫೈನಲ್‌ನಲ್ಲಿ ಅವರು 3–7 ರಲ್ಲಿ ನೈಜೀರಿಯದ ಒಡುನಯೊ ಅಡೆಕುರೆಯೊ ಎದುರು ಸೋತರು. ಆರಂಭಿಕ ಬೌಟ್‌ಗಳಲ್ಲಿ ಅಮೋಘ ಪ್ರದ ರ್ಶನ ನೀಡಿ ಫೈನಲ್ ಪ್ರವೇಶಿಸಿದ್ದರೂ, ಅಂತಿಮ ಹಣಾಹಣಿಯಲ್ಲಿ ಎಡವಿದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ವಿಜೇತೆಗೆ, ನೈಜೀರಿಯಾದ ಸ್ಪರ್ಧಿ ಯ ರಕ್ಷಣೆಯನ್ನು ಭೇದಿಸಲು ಆಗಲಿಲ್ಲ.

ಅನ್ಶು ಇದಕ್ಕೂ ಮುನ್ನ ನಡೆದ ಸೆಮಿಫೈನಲ್‌ನಲ್ಲಿ 10–0 ರಲ್ಲಿ ಶ್ರೀಲಂಕಾದ ನೇತಮಿ ಪೊರುತೊತಗೆ ಅವರನ್ನು ಮಣಿಸಿದ್ದರು. ಕ್ವಾರ್ಟರ್ ಫೈನಲ್‌ನಲ್ಲಿ ಆಸ್ಟ್ರೇಲಿಯಾದ ಐರಿನಾ ಸೈಮೊನಿಡಿಸ್ ಎದುರು ಗೆದ್ದಿದ್ದರು.

ದಿವ್ಯಾ, ಮೋಹಿತ್‌ಗೆ ಕಂಚು: ಮಹಿಳೆಯರ 68 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ದಿವ್ಯಾ ಕಾಕ್ರನ್ ಹಾಗೂ ಪುರುಷರ 125 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಮೋಹಿತ್ ಗ್ರೆವಾಲ್ ಕಂಚಿನ ಪದಕ ಗೆದ್ದುಕೊಂಡರು.

ಪದಕದ ಸುತ್ತಿನ ಪ್ಲೇ ಆಫ್‌ಗಳಲ್ಲಿ ದಿವ್ಯಾ ಅವರು 2–0ರಿಂದ ತೋಂಗಾದ ಟೈಗರ್ ಲಿಲಿ ಎದುರು ಗೆದ್ದರೆ, ಮೋಹಿತ್ 6–0ಯಿಂದ ಜಮೈಕಾದ ಆ್ಯರನ್ ಜಾನ್ಸನ್ ವಿರುದ್ಧ ಗೆದ್ದರು.

ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಆಸ್ಟ್ರೇಲಿಯಾ	50	43	45	138
2	ಇಂಗ್ಲೆಂಡ್	47	45	37	129
3	ಕೆನಡಾ	19	24	24	67
4	ನ್ಯೂಜಿಲೆಂಡ್	17	11	13	41
5	ಭಾರತ	9	8	9	26
6	ಸ್ಕಾಟ್ಲೆಂಡ್	8	8	19	35

ಬ್ಯಾಡ್ಮಿಂಟನ್: ಎಂಟರಘಟ್ಟಕ್ಕೆ ಸಿಂಧು, ಶ್ರೀಕಾಂತ್ ಲಗ್ಗೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರು ಕ್ರೀಡಾಕೂಟದ ಬ್ಯಾಡ್ಮಿಂಟನ್ ಸಿಂಗಲ್ಸ್ ವಿಭಾಗಗಳಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಎನ್‌ಇಸಿ ಹಾಲ್‌ನಲ್ಲಿ ಶುಕ್ರವಾರ ನಡೆದ ಮಹಿಳೆಯರ ಸಿಂಗಲ್ಸ್ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸಿಂಧು 21–10, 21–9ರಿಂದ ಉಗಾಂಡದ ಹುಸಿನಾ ಕೋಬುಗಬೆ ಅವರನ್ನು ಪರಾಭವಗೊಳಿಸಿದರು. ಈ ಪಂದ್ಯದಲ್ಲಿ ಸಿಂಧು ಸಂಪೂರ್ಣ ಪಾರಮ್ಯ ಮೆರೆದರು.

ಪುರುಷರ ವಿಭಾಗದಲ್ಲಿ ಶ್ರೀಕಾಂತ್ 21–9, 21–12ರಿಂದ ಶ್ರೀಲಂಕಾದ ದುಮಿಂದು ಅಭಯವಿಕ್ರಮ ಎದುರು ಗೆದ್ದರು.

ಮಹಿಳೆಯರ ಡಬಲ್ಸ್‌ನಲ್ಲಿ ತ್ರೀಶಾ ಜೋಲಿ– ಗಾಯತ್ರಿ ಗೋಪಿಚಂದ್ 21–2, 21–4ರಿಂದ ಮಾರಿಷಸ್‌ನ ಲೆಂಗ್ ಫೊರ್ ಸ್ಯಾಂಗ್ ಜೆಮಿಮಾ– ಮುಂಗ್ರಾ ಗಣೇಶ ಎದುರು ಜಯಿಸಿ ಎಂಟರಘಟ್ಟ ತಲುಪಿದರು.



ಕಿದಂಬಿ ಶ್ರೀಕಾಂತ್ ಆಟದ ವೈಖರಿ –ಪಿಟಿಐ ಚಿತ್ರ

ಮುರಳಿಗೆ ಲಾಂಗ್‌ಜಂಪ್ ಬೆಳ್ಳಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಕೂಟದ ಅಥ್ಲೆಟಿಕ್ಸ್‌ನಲ್ಲಿ ಭಾರತದ ಪದಕದ ಭರವಸೆ ಎನಿಸಿದ್ದ ಮುರಳಿ ಶ್ರೀಶಂಕರ್ ನಿರಾಸೆ ಉಂಟುಮಾಡಲಿಲ್ಲ. ಪುರುಷರ ಲಾಂಗ್‌ಜಂಪ್‌ನಲ್ಲಿ ಬೆಳ್ಳಿಯೆಡೆಗೆ ಜಿಗಿದು ಐತಿಹಾಸಿಕ ಸಾಧನೆ ಮಾಡಿದರು.

ಗುರುವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ ಅವರು 8.08 ಮೀ. ಸಾಧನೆಯೊಂದಿಗೆ ಎರಡನೇ ಸ್ಥಾನ ಪಡೆದರು. ಬಹಮಾಸ್‌ನ ಲಕ್ವಾನ್ ನಯರ್ನ್ ಚಿನ್ನ ಗೆದ್ದರು. ತುರುಸಿನ ಪೈಪೋಟಿ ನಡೆದ ಸ್ಪರ್ಧೆಯಲ್ಲಿ ಮುರಳಿ ಮತ್ತು ಲಕ್ವಾನ್ ಇಬ್ಬರೂ ಒಂದೇ ದೂರ ಕಂಡುಕೊಂಡರು.ಇದರಿಂದ ಚಿನ್ನವನ್ನು ನಿರ್ಧರಿಸಲು ಇವರಿಬ್ಬರ ಎರಡನೇ ಅತ್ಯುತ್ತಮ ಪ್ರದರ್ಶನವನ್ನು ಪರಿಗಣಿಸಲಾಯಿತು. ಬಹಮಾಸ್‌ನ ಅಥ್ಲೀಟ್‌ನ ಎರಡನೇ ಅತ್ಯುತ್ತಮ ಪ್ರದರ್ಶನ 7.98 ಮೀ. ಆಗಿದ್ದರೆ, ಮುರಳಿ ಅವರದ್ದು 7.84 ಮೀ. ಆಗಿದೆ. ಆದ್ದರಿಂದ ಚಿನ್ನ ಲಕ್ವಾನ್ ಪಾಲಾಯಿತು.

ಲಾಂಗ್‌ಜಂಪ್ ನಿಯಮದ ಪ್ರಕಾರ, ಇಬ್ಬರು ಅಥ್ಲೀಟ್‌ಗಳ ನಡುವೆ 'ಟೈ' ಆದರೆ ಎರಡನೇ ಅತ್ಯುತ್ತಮ ಪ್ರದರ್ಶನದ ಆಧಾರದಲ್ಲಿ ವಿಜೇತರನ್ನು ನಿರ್ಧರಿಸಲಾಗುತ್ತದೆ. ದಕ್ಷಿಣ ಆಫ್ರಿಕಾದ ಯುವಾನ್ ವಾನ್ ವುರೆನ್ (8.06 ಮೀ.) ಕಂಚು ಗೆದ್ದರು. ಕಣದಲ್ಲಿದ್ದ ಭಾರತದ ಇನ್ನೊಬ್ಬ ಸ್ಪರ್ಧಿ ಮುಹಮ್ಮದ್ ಅನೀಸ್ ಯಾಹ್ಯಾ (7.97 ಮೀ.) ಐದನೇ ಸ್ಥಾನ ಪಡೆದುಕೊಂಡರು.

ಮೊದಲ ಅಥ್ಲೀಟ್: ಕಾಮನ್‌ವೆಲ್ತ್ ಲಾಂಗ್‌ಜಂಪ್‌ನಲ್ಲಿ ಬೆಳ್ಳಿ ಗೆದ್ದ ಭಾರತದ ಮೊದಲ ಅಥ್ಲೀಟ್ ಎಂಬ ಗೌರವ ಶ್ರೀಶಂಕರ್‌ಗೆ ಒಲಿಯಿತು. ಸುರೇಶ್ ಬಾಬು 1978ರ ಕೂಟದಲ್ಲಿ ಕಂಚು ಗೆದ್ದಿದ್ದರು.ಮಹಿಳೆಯರ ವಿಭಾಗದಲ್ಲಿ ಪ್ರಜೂಶಾ ಮಲಿಯಕ್ಕಲ್ 2010ರ ನವದೆಹಲಿ ಕೂಟದಲ್ಲಿ ಬೆಳ್ಳಿ ಹಾಗೂ ಅಂಜು ಬಾಬಿ ಜಾರ್ಜ್ 2002ರಲ್ಲಿ ಕಂಚು ಜಯಿಸಿದ್ದರು. ಪ್ರಮುಖ ಅಂತರರಾಷ್ಟ್ರೀಯ ಕೂಟದಲ್ಲಿ ಶ್ರೀಶಂಕರ್‌ಗೆ ದೊರೆತ ಮೊದಲ ಪದಕ ಇದು. ಇದಕ್ಕೂ ಮುನ್ನ 2018ರಲ್ಲಿ ಏಷ್ಯನ್ ಅಂಡರ್–20 ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದಿದ್ದರು. ಅಮೆರಿಕದ ಯೂಜಿನ್‌ನಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಅವರು 7ನೇ ಸ್ಥಾನ ಪಡೆದಿ ದ್ದರು.

ಮುಖ್ಯಾಂಶಗಳು
- 8.08 ಮೀ. ದೂರ ಜಿಗಿದ ಮುರಳಿ
- ಅನೀಸ್ ಯಾಹ್ಯಾಗೆ ಐದನೇ ಸ್ಥಾನ



ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದ ಮುರಳಿ ಜಿಗಿದ ಪರಿ–ಪಿಟಿಐ ಚಿತ್ರ

ಪ್ಯಾರಾ ಕ್ರೀಡೆಗಳಲ್ಲಿ ಭಾರತದ ಪದಕ ಬೇಟೆ ಆರಂಭ

ಸುಧೀರ್ ಚಿನ್ನದ 'ಪವರ್'

ಬರ್ಮಿಂಗ್‌ಹ್ಯಾಮ್ (ಪಿಟಿಐ): ಬಾಲ್ಯದಲ್ಲಿ ಪೋಲಿಯೊ ಪೀಡಿತರಾಗಿ ಕಾಲಿನಲ್ಲಿ ಬಲ ಕಳೆದುಕೊಂಡಿದ್ದ ಸುಧೀರ್ ಛಲ ಕಳೆದುಕೊಳ್ಳಲಿಲ್ಲ. ಈ ಬಾರಿಯ ಕಾಮನ್‌ವೆಲ್ತ್ ಕ್ರೀಡಾಕೂಟದ ಪ್ಯಾರಾ ಕ್ರೀಡೆಯಲ್ಲಿ ಭಾರತಕ್ಕೆ ಮೊದಲ ಪದಕ ಗೆದ್ದುಕೊಟ್ಟ ಹಿರಿಮೆ ಅವರದಾಯಿತು.

ಹೆವಿವೇಟ್ ಪವರ್‌ಲಿಫ್ಟಿಂಗ್‌ನಲ್ಲಿ ಶುಕ್ರವಾರ ಚಿನ್ನದ ಪದಕ ಮುಡಿಗೇರಿಸಿಕೊಂಡ ಅವರು, ಕೂಟ ದಾಖಲೆಯನ್ನೂ ಬರೆದರು. ಏಷ್ಯನ್ ಪ್ಯಾರಾ ಗೇಮ್ಸ್ ಕಂಚು ವಿಜೇತ ಸುಧೀರ್, ಇಲ್ಲಿ ಮೊದಲ ಪ್ರಯತ್ನದಲ್ಲಿ 208 ಕೆಜಿ ತೂಕ ಎತ್ತಿದರು. ಎರಡನೇ ಯತ್ನದಲ್ಲಿ ಅದನ್ನು 212ಕ್ಕೇ ಏರಿಸಿದರು. ಒಟ್ಟು 134.5 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನ ಗಳಿಸಿದರು.

ಸುಧೀರ್ ಗಳಿಸಿದ ಪಾಯಿಂಟ್ಸ್ ಕೂಟ ದಾಖಲೆಯಾಗಿದೆ. ನೈಜೀರಿಯಾದ ಇಕೆಚುಕ್ವು ಕ್ರಿಸ್ಟಿಯನ್ ಒಬಿಚುಕ್ವು (133.6) ಬೆಳ್ಳಿ ಮತ್ತು ಸ್ಕಾಟ್ಲೆಂಡ್‌ನ ಮಿಕಿ ಯೂಲೆ (130.9) ಕಂಚಿನ ಪದಕಕ್ಕೆ ಕೊರಳೊಡ್ಡಿದರು.

27 ವರ್ಷದ ಸುಧೀರ್, ದಕ್ಷಿಣ ಕೊರಿಯಾದಲ್ಲಿ ಜೂನ್‌ನಲ್ಲಿ ನಡೆದ ಏಷ್ಯಾ ಒಷಿನಿಯಾ ಓಪನ್ ವಿಶ್ವ ಪ್ಯಾರಾ ಪವರ್‌ಲಿಫ್ಟಿಂಗ್‌ನಲ್ಲಿ ಕಂಚು ಗೆದ್ದಿದ್ದರು. ಆಗ ಅವರು 214 ಕೆಜಿ ಸಾಧನೆ ಮಾಡಿದ್ದರು. ಹರಿಯಾಣದ ಸೋನಿಪತ್‌ನ ಸುಧೀರ್, 2013ರಲ್ಲಿ ಮೊದಲ ಬಾರಿ ಪವರ್‌ಲಿಫ್ಟಿಂಗ್ ಕ್ರೀಡೆಯ ಕಣಕ್ಕಿಳಿದರು. ಮುಂದಿನ ವರ್ಷ ನಡೆಯಲಿರುವ ಏಷ್ಯನ್ ಪ್ಯಾರಾ ಗೇಮ್ಸ್‌ಗೂ ಅವರೂ ಅರ್ಹತೆ ಗಳಿಸಿದ್ದಾರೆ.



ಸುಧೀರ್– ಪಿಟಿಐ ಚಿತ್ರ

ರಾಷ್ಟ್ರಪತಿ, ಪ್ರಧಾನಿ ಅಭಿನಂದನೆ: ಸುಧೀರ್ ಅವರ ಸಾಧನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮುಂತಾದವರು ಅಭಿನಂದನೆ ತಿಳಿಸಿದ್ದಾರೆ.

ಫೈನಲ್‌ಗೆ ಭಾವಿನಾ

ಟೋಕಿಯೊ ಪ್ಯಾರಾಲಿಂಪಿಕ್ಸ್ ಟೇಬಲ್ ಟೆನಿಸ್ ಬೆಳ್ಳಿ ಪದಕ ವಿಜೇತೆ ಭಾವಿನಾಬೆನ್ ಪಟೇಲ್ ಅವರು ಮಹಿಳಾ ಸಿಂಗಲ್ಸ್‌ನ 3–5 ವಿಭಾಗದಲ್ಲಿ ಫೈನಲ್ ತಲುಪಿದ್ದು ಪದಕ ಖಚಿತಪಡಿಸಿದ್ದಾರೆ.

ಭಾವಿನಾ ಅವರು ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ 11-6, 11-6, 11-6ರಿಂದ ಇಂಗ್ಲೆಂಡ್‌ನ ಸುಯಿ ಬೇಲಿ ಅವರನ್ನು ಪರಾಭವಗೊಳಿಸಿದರು. 35 ವರ್ಷದ ಭಾವಿನಾ ಫೈನಲ್‌ನಲ್ಲಿ ನೈಜೀರಿಯಾದ ಕ್ರಿಸ್ಟಿಯನ್ ಇಕ್‌ಪೊಯಿ ಅವರನ್ನು ಎದುರಿಸುವರು. ಫೈನಲ್ ಶನಿವಾರ ನಡೆಯಲಿದೆ.

ಭಾರತದ ಇನ್ನೋರ್ವ ಆಟಗಾರ್ತಿ ಸೋನಾಲ್‌ಬೆನ್ ಪಟೇಲ್ 11-8, 6-11, 4-11, 7-11ರಿಂದ ಇಕ್‌ಪೊಯಿ ಎದುರು ಎಡವಿದರು. ಕಂಚಿನ ಪದಕಕ್ಕಾಗಿ ಅವರು ಸುಯಿ ಎದುರು ಸೆಣಸುವರು.



ಪ್ರಶಸ್ತಿಯೊಂದಿಗೆ ಶ್ರೀಕರ್ ದೋನಿ ಮತ್ತು ಸ್ನಿಗ್ಧಾ ಕಾಂತ

ಟೆನಿಸ್: ಶ್ರೀಕರ್, ಸ್ನಿಗ್ಧಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶ್ರೀಕರ್ ದೋನಿ ಮತ್ತು ಸ್ನಿಗ್ಧಾ ಕಾಂತ ಅವರು ಕೆಎಸ್‌ಎಲ್‌ಟಿಎ ಟ್ರಾನ್ಸ್‌ಫಾರ್ಮ್ ಸೂಪರ್ ಸಿರೀಸ್ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ಶುಕ್ರವಾರ ನಡೆದ ಟೂರ್ನಿಯ ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ಶ್ರೀಕರ್ 6-2, 6-3ರಿಂದ ಕರ್ನಾಟಕದವರೇ ಆದ ದಿಗಂತ್ ಎಂ. ಅವರನ್ನು ಮಣಿಸಿದರು. ಸೆಮಿಫೈನಲ್‌ಗಳಲ್ಲಿ ಶ್ರೀಕರ್ ಅವರು ತೆಲಂಗಾಣದ ವೇದಾಂತ್ ಗುಂಡು ಎದುರು ಗೆದ್ದರೆ, ದಿಗಂತ್ ಅವರು ಬಾಲಗಣೇಶ್ ಪಟೇಲ್ ಎದುರು ಜಯಿಸಿದ್ದರು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಸ್ನಿಗ್ಧಾ 6-1, 1-6, 6-2ರಿಂದ ತಮಿಳುನಾಡಿನ ಸವಿತಾ ಭುವನೇಶ್ವರನ್ ಅವರನ್ನು ಸೋಲಿಸಿದರು. ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಸವಿತಾ 6-2, 6-4ರಿಂದ ಗುಜರಾತ್‌ನ ಶೈವಿ ದಲಾಲ್ ಎದುರು, ಸ್ನಿಗ್ಧಾ 6-4, 7-6 (6) ರಿಂದ ಮೇಘನಾ ಜಿ.ಡಿ. ವಿರುದ್ಧ ಗೆದ್ದಿದ್ದರು.

ಕಳಚಿ ಬಿದ್ದ ಧ್ವನಿವರ್ಧಕ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಕೂಟದ ಕುಸ್ತಿ ಪಂದ್ಯ ನಡೆಯುತ್ತಿದ್ದ ಸ್ಥಳದಲ್ಲಿ ಚಾವಣಿಗೆ ಜೋಡಿಸಿದ್ದ ಧ್ವನಿವರ್ಧಕವೊಂದು ಕಳಚಿ ಬಿದ್ದಿರುವ ಘಟನೆ ಶುಕ್ರವಾರ ನಡೆದಿದ್ದು, ಸಂಘಟಕರು ಮುಜುಗರ ಅನುಭವಿಸಿದ್ದಾರೆ.

ಬೆಳಗ್ಗಿನ ಅವಧಿಯ ಕುಸ್ತಿ ಹಣಾಹಣಿ ನಡೆಯುತ್ತಿದ್ದ ವೇಳೆಯೇ ಸ್ಪೀಕರ್ ಕಳಚಿಬಿದ್ದಿದೆ. ಅದೃಷ್ಟವಶಾತ್ ಆ ಸ್ಥಳದಲ್ಲಿ ಯಾರೂ ಇರಲಿಲ್ಲ. ಇದರಿಂದ ಸುಮಾರು ಎರಡು ಗಂಟೆಗೂ ಹೆಚ್ಚು ಹೊತ್ತು ಸ್ಪರ್ಧೆಯನ್ನು ಸ್ಥಗಿತಗೊಳಿಸಲಾಯಿತು. ಮುನ್ನೆಚ್ಚರಿಕೆ ಕ್ರಮವಾಗಿ ಹಾಲ್ ನಲ್ಲಿದ್ದ ಎಲ್ಲ ಪ್ರೇಕ್ಷಕರು ಮತ್ತು ಸ್ಪರ್ಧಿಗಳನ್ನು ಕೆಲಹೊತ್ತು ಹೊರಕ್ಕೆ ಕಳುಹಿಸಲಾಯಿತು.

'ಘಟನೆ ನಡೆಯುವ ವೇಳೆ ನಾವು ತಾಲೀಮು ನಡೆಸುವ ಸ್ಥಳದಲ್ಲಿದ್ದೆವು. ಸ್ಪೀಕರ್ ಕಳಚಿ ಮ್ಯಾಟ್‌ಗೆ ಬೀಳುವ ಶಬ್ದ ಕೇಳಿಸಿತು' ಎಂದು ಭಾರತ ತಂಡದ ಅಧಿಕಾರಿಯೊಬ್ಬರು ತಿಳಿಸಿದರು.

ಟಿಟಿ: ಕ್ವಾರ್ಟರ್‌ಗೆ ಮಣಿಕಾ, ಶ್ರೀಜಾ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಮಣಿಕಾ ಬಾತ್ರಾ ಮತ್ತು ಶ್ರೀಜಾ ಅಕುಲಾ ಅವರು ಟೇಬಲ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಶುಕ್ರವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಮಣಿಕಾ 11-4, 11-8, 11-6, 12-10 ರಲ್ಲಿ ಆಸ್ಟ್ರೇಲಿಯಾದ ಜೀ ಮಿನ್‌ಯಂಗ್ ಅವರನ್ನು ಮಣಿಸಿದರು. 27 ವರ್ಷದ ಮಣಿಕಾ ಮುಂದಿನ ಪಂದ್ಯದಲ್ಲಿ ಸಿಂಗಪುರದ ಜಿಯಾನ್ ಜೆಂಗ್ ಎದುರು ಸೆಣಸುವರು.

ತುರುಸಿನ ಪೈಪೋಟಿ ಕಂಡುಬಂದ ಇನ್ನೊಂದು ಪಂದ್ಯದಲ್ಲಿ ಶ್ರೀಜಾ 8-11, 11-7, 12-14, 9-11, 11-4, 15-13, 12-10 ರಲ್ಲಿ ವೇಲ್ಸ್‌ನ ಚಾರ್ಲೊಟ್ ಕೇರಿ ಎದುರು ಗೆದ್ದರು. 1–3 ಗೇಮ್‌ಗಳಿಂದ ಹಿನ್ನಡೆ ಅನುಭವಿಸಿದ್ದ ಶ್ರೀಜಾ, ಆ ಬಳಿಕ ಅಮೋಘ ರೀತಿಯಲ್ಲಿ ತಿರುಗೇಟು ನೀಡಿ ಗೆಲುವು ಒಲಿಸಿಕೊಂಡರು.

24 ವರ್ಷದ ಶ್ರೀಜಾ ಕ್ವಾರ್ಟರ್ ಫೈನಲ್‌ನಲ್ಲಿ ಕೆನಡಾದ ಮೊ ಜಾಂಗ್ ಅವರ ಸವಾಲು ಎದುರಿಸುವರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಬಾತ್ರಾ ಮತ್ತು ಜಿ. ಸತ್ಯನ್ 11-7, 11-6, 11-7 ರಲ್ಲಿ ನೈಜೀರಿಯದ ಒಲಾಜಿದ್ ಒಮೊಟಯೊ– ಅಜೊಕ್ ಒಜೊಮು ಎದುರು ಗೆದ್ದು ಎಂಟರಘಟ್ಟಕ್ಕೆ ಲಗ್ಗೆಯಿಟ್ಟರು.

ಶ್ರೀಜಾ ಮತ್ತು ಅಚಂತಾ ಶರತ್ ಕಮಲ್ 5-11, 11-2, 11-6, 11-5 ರಲ್ಲಿ ಮಲೇಷ್ಯಾದ ಲಿಯೊಂಡ್ ಚೀ ಫಾಂಗ್– ಹೊ ಯಿಂಗ್ ಅವರನ್ನು ಸೋಲಿಸಿದರು. ರೀತ್ ಟೆನಿಸನ್ ಅವರು ಸಿಂಗಪುರದ ಫೆಂಗ್ ತಿಯಾನ್‌ವಿ ಎದುರು ಸೋತು ಹೊರಬಿದ್ದರು. ತಿಯಾನ್‌ವಿ 11-2, 11-4, 9-11, 11-3, 11-4 ರಲ್ಲಿ ಜಯಿಸಿದರು.

ಚೆಸ್: ಭಾರತ 'ಎ', 'ಬಿ' ತಂಡಗಳಿಗೆ ಗೆಲುವು

ಮಹಾಬಲಿಪುರಂ (ಪಿಟಿಐ): ಭಾರತ 'ಎ' ಮತ್ತು 'ಬಿ' ತಂಡಗಳು ಚೆಸ್ ಒಲಿಂಪಿಯಾಡ್‌ನ ಮುಕ್ತ ವಿಭಾಗದ ಏಳನೇ ಸುತ್ತಿನಲ್ಲಿ ಗೆಲುವು ಪಡೆದವು.

ಶುಕ್ರವಾರ ನಡೆದ ಪಂದ್ಯದಲ್ಲಿ ಭಾರತ 'ಎ' 3–1 ರಲ್ಲಿ ಭಾರತ 'ಸಿ' ತಂಡವನ್ನು ಮಣಿಸಿತು. ಗ್ರ್ಯಾಂಡ್‌ಮಾಸ್ಟರ್‌ಗಳಾದ ಅರ್ಜುನ್ ಎರಿಗೈಸಿ ಮತ್ತು ಎಸ್.ಎಲ್.ನಾರಾಯಣನ್ ಅವರು ಕ್ರಮವಾಗಿ ಅಭಿಜಿತ್ ಗುಪ್ತಾ ಹಾಗೂ ಅಭಿಮನ್ಯು ಪುರಾಣಿಕ್ ಅವರನ್ನು ಮಣಿಸಿದರು.

ಪಿ.ಹರಿಕೃಷ್ಣ– ಸೂರ್ಯಶೇಖರ್ ಗಂಗೂಲಿ ಮತ್ತು ವಿದಿತ್ ಸಂತೋಷ್ ಗುಜರಾತಿ– ಎಸ್.ಪಿ.ಸೇತುರಾಮನ್ ನಡುವಿನ ಪಂದ್ಯಗಳು ಡ್ರಾದಲ್ಲಿ ಕೊನೆಗೊಂಡವು.

ಭಾರತ 'ಬಿ' ತಂಡ 3.5–0.5 ರಲ್ಲಿ ಕ್ಯೂಬಾ ಎದುರು ಗೆದ್ದಿತು. ಅತ್ಯುತ್ತಮ ಆಟ ಮುಂದುವರಿಸಿದ ಡಿ.ಗುಕೇಶ್ ಸತತ ಏಳನೇ ಗೆಲುವು ದಾಖಲಿಸಿದರು. ಅವರು ಕ್ಯೂಬಾದ ಕಾರ್ಲೋಸ್ ಅಲ್ಬೊರ್ನೋಜ್ ಎದುರು ಗೆದ್ದರು.

ನಿಹಾಲ್ ಸರಿನ್ ಮತ್ತು ಆರ್. ಪ್ರಗ್ನಾನಂದ ಅವರೂ ಗೆಲುವು ಪಡೆದರೆ, ಬಿ.ಅಧಿಬನ್ ಅವರು ಎದುರಾಳಿಯ ಜತೆ ಪಾಯಿಂಟ್ ಹಂಚಿಕೊಂಡರು.

ಮಹಿಳಾ 'ಎ' ತಂಡಕ್ಕೆ ಗೆಲುವು: ಮಹಿಳೆಯರ ವಿಭಾಗದಲ್ಲಿ ಭಾರತ 'ಎ' ತಂಡವು 2.5-1.5 ಪಾಯಿಂಟ್‌ಗಳಿಂದ ಅಜರ್‌ಬೈಜಾನ್ ತಂಡವನ್ನು ಮಣಿಸಿತು.

ತಂಡದ ಅನುಭವಿ ಆಟಗಾರ್ತಿ ಕೊನೇರು ಹಂಪಿ ಅವರು ಗುನಯ್ ಮಮದ್‌ಜದಾ ಎದುರು ಪರಾಭವಗೊಂಡರು. ಆದರೆ ಆರ್. ವೈಶಾಲಿ ಮತ್ತು ತಾನಿಯಾ ಸಚ್‌ದೇವ್ ಅವರು ಕ್ರಮವಾಗಿ ಯುಲಿಯಾ ಫತಲಿಯೆವಾ ಹಾಗೂ ಗೊಹರ್ ಬೆಯ್ದುಲ್ಲಯೆವಾ ಎದುರು ಗೆದ್ದರು. ಡಿ.ಹರಿಕಾ ಅವರು ಖನಿಮ್ ಬಲಯೆವಾ ಜತೆ ಡ್ರಾ ಮಾಡಿಕೊಂಡರು.

ಸತತ ಏಳನೇ ಗೆಲುವು ಪಡೆದ ಭಾರತ 'ಎ' ತಂಡ ಚಿನ್ನದ ಪದಕದತ್ತ ದಿಟ್ಟ ಹೆಜ್ಜೆಯಿಟ್ಟಿದೆ. ಟೂರ್ನಿಯಲ್ಲಿ ಇನ್ನು ನಾಲ್ಕು ಸುತ್ತುಗಳ ಆಟ ಬಾಕಿಯುಳಿದಿವೆ.

ಭಾರತ 'ಬಿ' ತಂಡ 1.5–2.5 ಪಾಯಿಂಟ್‌ಗಳಿಂದ ಗ್ರೀಸ್ ಎದುರು ಸೋತರೆ, 'ಸಿ' ತಂಡ 3–1 ರಿಂದ ಸ್ವಿಟ್ಜರ್‌ಲೆಂಡ್ ತಂಡವನ್ನು ಮಣಿಸಿತು.

ಬಂಡೀಪುರ– ಮಂಡ್ಯ ಮೊದಲ ಹಣಾಹಣಿ

ಬೆಂಗಳೂರು: ಬಂಡೀಪುರ ಟಸ್ಕರ್ಸ್ ಮತ್ತು ಮಂಡ್ಯ ಬುಲ್ಸ್ ತಂಡಗಳು ಚೊಚ್ಚಲ ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್‌ನ (ಜಿಪಿಬಿಎಲ್) ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಕ್ರೀಡಾಂಗಣದಲ್ಲಿ ಇದೇ 12ರಂದು ಪಂದ್ಯ ನಡೆಯಲಿದೆ. ಬಂಡೀಪುರ ತಂಡಕ್ಕೆ ಮಾಜಿ ರಾಷ್ಟ್ರೀಯ ಚಾಂಪಿಯನ್ ಆಟಗಾರ್ತಿ ಜ್ವಾಲಾ ಗುಟ್ಟಾ ಮಾರ್ಗದರ್ಶನ ನೀಡುತ್ತಿದ್ದಾರೆ. ಮಂಡ್ಯ ತಂಡವು ಬಿ.ಸಾಯಿ ಪ್ರಣೀತ್ ಅವರ ಮಾರ್ಗದರ್ಶನದಲ್ಲಿ ಆಡಲಿದೆ. ಲೀಗ್ ಹಂತದ ಪಂದ್ಯಗಳ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ಸೆಮಿಫೈನಲ್, ಫೈನಲ್ ಹೊರತ ಪಡಿಸಿ ಎಲ್ಲ ಪಂದ್ಯಗಳು ಮಧ್ಯಾಹ್ನ 3 ಮತ್ತು ಸಂಜೆ 6 ಗಂಟೆಗೆ ಆರಂಭವಾಗಲಿವೆ.

ಪುಣೆ ರೇಸ್

ಎ ಸ್ಟಾರ್ ಈಸ್ ಬಾರ್ನ್ ಗೆಲ್ಲುವ ನಿರೀಕ್ಷೆ

ಜವಾರಿ ಎಸ್.ಪೂನಾವಾಲ ಈವ್ ಚಾಂಪಿಯನ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎ ಸ್ಟಾರ್ ಈಸ್ ಬಾರ್ನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸೋ ಸೋ ಸ್ಪೆಷಲ್ 1, ಟ್ರೂತ್ ಅಂಡ್ ಡೇರ್ 2
2ನೇ ರೇಸ್: ಫಿಡಾಟೊ 1, ಫರೆಲ್ 2, ಸಸ್ಪಿಂಗ್ 12
3ನೇ ರೇಸ್: ಬೊಟೆರೊ 1, ಓನ್ ವಾಯ್ಸ್ 2
4ನೇ ರೇಸ್: ಕಾಗ್ನೊಸ್ಕೊ 2, ದೌಸಾಬೆಲ್ 3, ನೆಸ್ಟ್‌ಲಾಮೊರ್ 4
5ನೇ ರೇಸ್: ಗೋಲ್ಡನ್ ಕಿಂಗ್ಡಮ್ 4, ಎಂಪರರ್ ರೊಡೆರಿಕ್ 1, ಲೇಡಿ ಡಿ 5
6ನೇ ರೇಸ್: ಎ ಸ್ಟಾರ್ ಈಸ್ ಬಾರ್ನ್ 1, ಟೈಮೂರ್ 3
7ನೇ ರೇಸ್: ಚಾನ್ಸೆಲರ್ 1, ರೂಬಿಕ್ ಸ್ಟಾರ್ 3, ಟಾಸ್ಮಾನ್ 7
8ನೇ ರೇಸ್: ಡಾಲಿ ಸ್ವಿರ್ಲ್ 1, ಲಾರ್ಡ್ ಅಂಡ್ ಮಾಸ್ಟರ್ 5, ಬ್ರೇವ್ ಬ್ಯೂಟಿ 12

ಉತ್ತಮ ಬೆಟ್: ಸೋ ಸೋ ಸ್ಪೆಷಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

ಹಿತಾಸಕ್ತಿ ಸಂಘರ್ಷ: ನೀತಾ ಅಂಬಾನಿಗೆ ನೋಟಿಸ್

ನವದೆಹಲಿ(ಪಿಟಿಐ): ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಮುಂಬೈ ಇಂಡಿಯನ್ಸ್ ತಂಡದ ಸಹ ಮಾಲೀಕರಾದ ನೀತಾ ಅಂಬಾನಿ ಅವರಿಗೆ ಬಿಸಿಸಿಐ ನೀತಿ ಅಧಿಕಾರಿ ಹಾಗೂ ಒಂಬುಡ್ಸ್‌ಮನ್ ವಿನೀತ್ ಸರನ್ ನೋಟಿಸ್ ನೀಡಿದ್ದಾರೆ.

ನೀತಾ ಅಂಬಾನಿ ಅವರು ಹಿತಾಸಕ್ತಿ ಸಂಘರ್ಷ ನಿಯಮ ಉಲ್ಲಂಘನೆ ಮಾಡಿದ್ದಾರೆಂದು ಮಧ್ಯಪ್ರದೇಶ ಕ್ರಿಕೆಟ್ ಸಂಸ್ಥೆಯ ಮಾಜಿ ಸದಸ್ಯ ಸಂಜೀವ್ ಗುಪ್ತಾ ನೀಡಿರುವ ದೂರಿನ ಹಿನ್ನಲೆಯಲ್ಲಿ ಈ ನೋಟಿಸ್ ನೀಡಲಾಗಿದೆ.

'ಮುಂಬೈ ಇಂಡಿಯನ್ಸ್ ಮಾಲೀಕರಾದ ನೀತಾ ಅವರು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ನಿರ್ದೇಶಕಿಯೂ ಹೌದು. ಈ ಸಂಸ್ಥೆಯ ಭಾಗವಾಗಿರುವ ವಯಕಾಮ್ 18 ಈಚೆಗೆ ಐಪಿಎಲ್ ಡಿಜಿಟಲ್ ಮಾಧ್ಯಮ ಹಕ್ಕುಗಳನ್ನು ಖರೀದಿಸಿದೆ. ಇದು ಹಿತಾಸಕ್ತಿ ಸಂಘರ್ಷ ನಿಯಮದ ಉಲ್ಲಂಘನೆ' ಎಂದು ಗುಪ್ತಾ ಆರೋಪಿಸಿದ್ದಾರೆ.

ನೋಟಿಸ್‌ಗೆ ಸೆ 2ರೊಳಗೆ ಉತ್ತರ ನೀಡುವಂತೆ ಸರನ್ ಸೂಚಿಸಿದ್ದಾರೆ.

ಪ್ರೊ ಕಬಡ್ಡಿ: ದಾಖಲೆ ಬೆಲೆಗೆ ತಲೈವಾಸ್‌ಗೆ ಹರಾಜು

ಪವನ್ ಶೆರಾವತ್‌ಗೆ ₹ 2.26 ಕೋಟಿ

ಬೆಂಗಳೂರು: ಪವನ್ ಶೆರಾವತ್ ಅವರು ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) ಇತಿಹಾಸದಲ್ಲಿ ಅತ್ಯಂತ ಬೆಲೆಯುಳ್ಳ ಆಟಗಾರ ಎನಿಸಿಕೊಂಡರು.



ಪವನ್

ಒಂಬತ್ತನೇ ಅವೃತ್ತಿಯ ಟೂರ್ನಿಗೆ ಶುಕ್ರವಾರ ನಡೆದ ಹರಾಜಿನಲ್ಲಿ ತಮಿಳು ತಲೈವಾಸ್ ಫ್ರಾಂಚೈಸಿ, ₹ 2.26 ಕೋಟಿ ಮೊತ್ತಕ್ಕೆ ಪವನ್ ಅವರನ್ನು ತನ್ನದಾಗಿಸಿಕೊಂಡಿತು. ಪಿಕೆಎಲ್ ಹರಾಜಿನಲ್ಲಿ ಯಾವುದೇ ಆಟಗಾರ ಇದುವರೆಗೆ ಇಷ್ಟು ದೊಡ್ಡ ಮೊತ್ತ ಪಡೆದಿಲ್ಲ.

₹ 1.70 ಕೋಟಿ ಪಡೆದ ವಿಕಾಸ್ ಖಂಡೋಲ ಅವರು ಅತ್ಯಧಿಕ ಬೆಲೆಯುಳ್ಳ ಎರಡನೇ ಆಟಗಾರ ಎನಿಸಿಕೊಂಡರು. ವಿಕಾಸ್ ಅವರನ್ನು ಬೆಂಗಳೂರು ಬುಲ್ಸ್ ತನ್ನದಾಗಿಸಿಕೊಂಡಿತು.ಪವನ್ ಅವರಿಗಾಗಿ ಹರಿಯಾಣ ಸ್ಟೀಲರ್ಸ್, ಯು ಮುಂಬಾ ಮತ್ತು ತಲೈವಾಸ್ ನಡುವೆ ತುರುಸಿನ ಪೈಪೋಟಿ ಏರ್ಪಟ್ಟಿತು. ಅಂತಿಮವಾಗಿ ತಲೈವಾಸ್ ತಂಡದ ಪಾಲಾದರು.

ಇರಾನ್‌ನ ಫಜಲ್ ಅತ್ರಾಚಲಿ ಅವರು ಅಧಿಕ ಬೆಲೆ ಪಡೆದ ವಿದೇಶದ ಆಟಗಾರ ಎನಿಸಿದರು. ಪುಣೇರಿ ಪಲ್ಟನ್ ₹ 1.30 ಕೋಟಿಗೆ ಅವರನ್ನು ತಂಡಕ್ಕೆ ಸೇರಿಸಿಕೊಂಡಿತು.

ಆಟಗಾರರನ್ನು ಎ,ಬಿ,ಸಿ ಮತ್ತು ಡಿ ವಿಭಾಗಗಳಾಗಿ ವಿಂಗಡಿಸಲಾಗಿತ್ತು. 'ಎ' ವಿಭಾಗದವರಿಗೆ ಗರಿಷ್ಠ ಮೂಲ ಬೆಲೆ ₹ 30 ಲಕ್ಷ, 'ಬಿ' ವಿಭಾಗದವರಿಗೆ ₹ 20 ಲಕ್ಷ, 'ಸಿ' ವಿಭಾಗದವರಿಗೆ ₹ 10 ಲಕ್ಷ ಮತ್ತು 'ಡಿ' ವಿಭಾಗದವರಿಗೆ ₹ 6 ಲಕ್ಷ ನಿಗದಿಪಡಿಸಲಾಗಿತ್ತು.

ಅಧಿಕ ಬೆಲೆ ಪಡೆದವರು

ಆಟಗಾರ	ತಂಡ	ಬೆಲೆ (₹ಗಳಲ್ಲಿ)
ಪವನ್ ಶೆರಾವತ್	ತಮಿಳ್ ತಲೈವಾಸ್	2.26 ಕೋಟಿ
ವಿಕಾಸ್ ಖಂಡೋಲ	ಬೆಂಗಳೂರು ಬುಲ್ಸ್	1.70 ಕೋಟಿ
ಫಜಲ್ ಅತ್ರಾಚಲಿ	ಪುಣೇರಿ ಪಲ್ಟನ್	1.38 ಕೋಟಿ
ಪ್ರದೀಪ್ ನರ್ವಾಲ್	ಯು.ಪಿ.ಯೋಧಾಸ್	90 ಲಕ್ಷ
ಮೊಹಮ್ಮದ್ ಇಸ್ಮಾಯಿಲ್	ಪುಣೇರಿ ಪಲ್ಟನ್	87 ಲಕ್ಷ

ವಿಶ್ವ ಯುವ ಅಥ್ಲೆಟಿಕ್ಸ್: ಭಾರತದ ಅಥ್ಲೀಟ್‌ಗೆ 2ನೇ ಪದಕ

ರೂಪಲ್ ದಾಖಲೆಯ ರೂವಾರಿ



ರೂಪಲ್ ಚೌಧರಿ

ಕ್ಯಾಲಿ, ಕ್ಯಾಲಿಫೋರ್ನಿಯಾ (ಪಿಟಿಐ): ಭಾರತದ ರೂಪಲ್ ಚೌಧರಿ 20 ವರ್ಷದೊಳಗಿನವರ ಅಥ್ಲೆಟಿಕ್ಸ್‌ನಲ್ಲಿ ಎರಡು ಪದಕಗಳನ್ನು ಜಯಿಸುವ ಮೂಲಕ ಹೊಸ ದಾಖಲೆ ಬರೆದರು.

ಗುರುವಾರ ತಡರಾತ್ರಿ ನಡೆದ ಮಹಿಳೆಯರ 400 ಮೀಟರ್ಸ್ ಓಟದಲ್ಲಿ ಅವರು ಕಂಚಿನ ಪದಕ ಜಯಿಸಿದರು. ಮೂರು ದಿನಗಳ ಹಿಂದೆ ಅವರು ಇದ್ದ ತಂಡವು 4X400 ಮೀ ರಿಲೆಯಲ್ಲಿ ಬೆಳ್ಳಿ ಪದಕ ಜಯಿಸಿತ್ತು. ಇದರೊಂದಿಗೆ ಈ ಕೂಟದ ಇತಿಹಾಸದಲ್ಲಿ ಎರಡು ಪದಕಗಳನ್ನು ಜಯಿಸಿದ ಭಾರತದ ಮೊದಲ ಅಥ್ಲೀಟ್ ಎಂಬ ಶ್ರೇಯಕ್ಕೆ ಪಾತ್ರರಾದರು.

ಉತ್ತರಪ್ರದೇಶದ ಮೀರಟ್ ಜಿಲ್ಲೆಯ ಶಾಹಪುರ್ ಜೈನಪುರ್ ಗ್ರಾಮದ ರೂಪಲ್ ಅವರದ್ದು ರೈತಾಪಿ ಕುಟುಂಬ. ಅವರ ತಂದೆ ಚಿಕ್ಕ ಪ್ರಮಾಣದ ಜಮೀನು ಹೊಂದಿರುವ ಕೃಷಿಕ. 17 ವರ್ಷದ ರೂಪಲ್ ಸಾಧನೆಯಿಂದಾಗಿ ಇಡೀ ಗ್ರಾಮದಲ್ಲಿಯೇ ಸಂಭ್ರಮ ಮುಗಿಲುಮುಟ್ಟಿದೆ.

400 ಮೀ ಓಟದಲ್ಲಿ ರೂಪಲ್ 51.85 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಗ್ರೇಟ್ ಬ್ರಿಟನ್‌ನ ಯಮಿ ಮೇರಿ ಜಾನ್ (51.50ಸೆ) ಹಾಗೂ ಕೆನ್ಯಾದ ಡ್ಯಾಮ್ರಿಸ್ ಮುತುಂಗಾ (51.71ಸೆ) ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಪದಕ ಜಯಿಸಿದರು.

ಸೆಮಿಫೈನಲ್‌ನಲ್ಲಿ ಅವರು 52.27 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದರು. ಇದು ಅವರ ವೈಯಕ್ತಿಕ ಶ್ರೇಷ್ಠ ಸಮಯವೂ ಹೌದು. ಈ ಕೂಟದ ಇತಿಹಾಸದಲ್ಲಿ ಮಹಿಳೆಯರ 400 ಮೀ ಓಟದಲ್ಲಿ ಪದಕ ಜಯಿಸಿದ ಭಾರತದ ಎರಡನೇ ಅಥ್ಲೀಟ್ ಆಗಿದ್ದಾರೆ. 2018ರಲ್ಲಿ ಹಿಮಾ ದಾಸ್ ಚಿನ್ನದ ಪದಕ ಜಯಿಸಿದ್ದರು.

2016ರಲ್ಲಿ ಜಾವೆಲಿನ್ ಥ್ರೋನಲ್ಲಿ ನೀರಜ್ ಚೋಪ್ರಾ ಕೂಡ ಚಿನ್ನದ ಸಾಧನೆ ಮಾಡಿದ್ದರು. ವಿಶ್ವ ಜೂನಿಯರ್ ಅಥ್ಲೆಟಿಕ್ಸ್ ಎಂದೇ ಕರೆಯಲಾಗುವ ಈ ಕೂಟದಲ್ಲಿ ಇದುವರೆಗೆ ಭಾರತದ ಅಥ್ಲೀಟ್‌ಗಳು ಒಟ್ಟು ಒಂಬತ್ತು ಪದಕ ಗೆದ್ದಿದ್ದಾರೆ. ಹೋದ ವರ್ಷ ನೈರೋಬಿಯಲ್ಲಿ ನಡೆದಿದ್ದ ಕೂಟದಲ್ಲಿ ಭಾರತವು ಎರಡು ಬೆಳ್ಳಿ ಹಾಗೂ ಒಂದು ಕಂಚು ಗೆದ್ದಿತ್ತು.

ಫುಟ್‌ಬಾಲ್ 10ರಿಂದ

ಬೆಂಗಳೂರು: ಸಿ.ಪುಟ್ಟಯ್ಯ ಸ್ಮಾರಕ ಟ್ರೋಫಿಗಾಗಿ ಬಿಡಿಎಫ್‌ಎ ಸೂಪರ್ ಡಿವಿಷನ್ ತಂಡಗಳ ಫುಟ್‌ಬಾಲ್ ಟೂರ್ನಿಯು ಇದೇ 10ರಿಂದ ನಡೆಯಲಿದೆ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುವ ಟೂರ್ನಿಯಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ, ಬೆಂಗಳೂರು ಈಗಲ್ಸ್ ಎಫ್‌ಸಿ, ಬಿಎಫ್‌ಸಿ, ಎಂಇಜಿ ಸೆಂಟರ್, ಎಎಸ್‌ಸಿ ಸೆಂಟರ್, ಬೆಂಗಳೂರು ಡ್ರೀಮ್ ಯುನೈಟೆಡ್, ಕೊಡಗು ಎಫ್‌ಸಿ, ರೂಟ್ಸ್ ಎಫ್‌ಸಿ ಪಾಲ್ಗೊಳ್ಳಲಿವೆ.

ವಿಂಡೀಸ್ ಎದುರು ನಾಲ್ಕನೇ ಟಿ20 ಪಂದ್ಯ ಇಂದು

ಸರಣಿ ಜಯದ ಮೇಲೆ ಭಾರತ ಕಣ್ಣು



ರೋಹಿತ್ ಶರ್ಮಾ

ಫೋರ್ಟ್ ಲಾಡೆರ್‌ಹಿಲ್, ಫ್ಲಾರಿಡಾ (ಪಿಟಿಐ): ಇದೇ ತಿಂಗಳಾಂತ್ಯದಲ್ಲಿ ಆರಂಭವಾಗಲಿರುವ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಪಡೆಯಲು ಆಟಗಾರರಿಗೆ, ವೆಸ್ಟ್ ಇಂಡೀಸ್ ಎದುರಿನ ಎರಡು ಪಂದ್ಯಗಳು ಪರೀಕ್ಷಾಕಣಗಳಾಗಿವೆ.

ಯುವ ಆಟಗಾರ ದೀಪಕ್ ಹೂಡಾ ಮತ್ತು ಶ್ರೇಯಸ್ ಅಯ್ಯರ್ ಅವರು ಮಧ್ಯಮ ಕ್ರಮಾಂಕದಲ್ಲಿ ಸ್ಥಾನ ಗಿಟ್ಟಿಸಲು ಈ ಎರಡೂ ಪಂದ್ಯಗಳಲ್ಲಿ ಒಂದಿಷ್ಟು ರನ್‌ಗಳನ್ನು ಹರಿಸುವ ಸವಾಲು ಎದುರಿಸುತ್ತಿದ್ದಾರೆ. ಶನಿವಾರ ಮತ್ತು ಭಾನುವಾರ ಈ ಎರಡೂ ಪಂದ್ಯಗಳು ಫ್ಲಾರಿಡಾದಲ್ಲಿ ನಡೆಯಲಿವೆ.

ಐದು ಪಂದ್ಯಗಳ ಸರಣಿಯಲ್ಲಿ ಭಾರತವು 2–1ರಿಂದ ಮುಂದಿದೆ. ಇನ್ನೊಂದು ಪಂದ್ಯ ಗೆದ್ದರೆ ಸರಣಿ ಕೈವಶವಾಗುವುದು ಖಚಿತ. ಆದರೆ ಆತಿಥೇಯ ತಂಡವು ತನ್ನ ಸರಣಿ ಜಯದ ಕನಸು ಜೀವಂತವಾಗುಳಿಸಿಕೊಳ್ಳಲು ಶನಿವಾರದ ಪಂದ್ಯ ಜಯಿಸಲೇಬೇಕಿದೆ. ಇದರಿಂದಾಗಿ ಎರಡೂ ತಂಡಗಳು ತುರುಸಿನ ಹಣಾಹಣಿ ನಡೆಸುವ ನಿರೀಕ್ಷೆ ಇದೆ. ವಾರಾಂತ್ಯದಲ್ಲಿ ಅಮೆರಿಕದ ಕ್ರಿಕೆಟ್ ಅಭಿಮಾನಿಗಳಿಗೆ ಒಳ್ಳೆಯ ಮನರಂಜನೆ ಸಿಗುವ ಸಾಧ್ಯತೆ ಇದೆ.

ಏಷ್ಯಾ ಕಪ್ ಟೂರ್ನಿಯಲ್ಲಿ ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್ ಅವರು ತಂಡಕ್ಕೆ ಮರಳುವುದು ಖಚಿತವಾಗಿದೆ. ಆದ್ದರಿಂದ ಯುವ ಆಟಗಾರರಿಗೆ ಆಯ್ಕೆದಾರರ ಗಮನ ಸೆಳೆಯಲು ಈ ಎರಡೂ ಪಂದ್ಯಗಳು ಮುಖ್ಯವಾಗಿವೆ.


ಶ್ರೇಯಸ್ ಕಳೆದ ಮೂರು ಪಂದ್ಯಗಳಲ್ಲಿ (0, 10 ಹಾಗೂ 24) ವೈಫಲ್ಯ ಅನುಭವಿಸಿದ್ದಾರೆ. ವೇಗದ ಮತ್ತು ಪುಟಿದು ಬರುವ ಎಸೆತಗಳನ್ನು ಆಡುವಲ್ಲಿ ಎಡವಿದ್ದಾರೆ. ಕಳೆದ ಎರಡೂವರೆ ತಿಂಗಳುಗಳಲ್ಲಿ ಅವರಿಗೆ ಒಂಬತ್ತು ಟಿ20 ಪಂದ್ಯಗಳಲ್ಲಿ ಆಡಲು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವಕಾಶ ಕೊಟ್ಟಿದ್ದಾರೆ. ಅದರಲ್ಲಿ ಒಂದು ಬೆಂಗಳೂರಿನಲ್ಲಿ ಮಳೆಗೆ ಆಹುತಿಯಾಗಿತ್ತು. ಆದರೆ ಉಳಿದ ಪಂದ್ಯಗಳ ಪೈಕಿ ಒಂದು ಅರ್ಧಶತಕ ಮಾತ್ರ ಗಳಿಸಿದ್ದಾರೆ.ಈ ನಡುವೆ ಮಿಂಚಿರುವ ಸೂರ್ಯಕುಮಾರ್ ಯಾದವ್ ತಮ್ಮ ಸ್ಥಾನವನ್ನು ಬಹುತೇಕ ಭದ್ರಗೊಳಿಸಿಕೊಂಡಿದ್ದಾರೆ. ದೀಪಕ್ ಹೂಡಾ ಅವರನ್ನು ಪ್ರಯೋಗಕ್ಕೆ ಒಡ್ಡುವತ್ತ ತಂಡದ ಮ್ಯಾನೇಜ್‌ಮೆಂಟ್ ಚಿತ್ತ ಹರಿಸಬಹುದು. ಉಳಿದಂತೆ ಕಳೆದ ಪಂದ್ಯದಲ್ಲಿ ಆಡಿದವರಲ್ಲಿ ಬಹುತೇಕರು ಸ್ಥಾನ ಪಡೆಯಬಹುದು.

ಪಂದ್ಯ ಆರಂಭ: ರಾತ್ರಿ 8

ನೇರಪ್ರಸಾರ: ಡಿಡಿ ಸ್ಪೋರ್ಟ್ಸ್

ಶನಿವಾರ, 6 ಆಗಸ್ಟ್ 2022
ಪ್ರಜಾವಾಣಿ
ಪ್ರಜಾ ಪ್ಲಸ್
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಸಂಚಾರಿ ವಿಜಯ್ ನೆನಪಿನ ನಾಟಕೋತ್ಸವ 2





ಕೈಗೆ ಕಟ್ಟುವ ದಾರ 'ಬಂಧ'ವನ್ನೂ ಕಟ್ಟಲಿ..

ಸುರಕ್ಷತಾ ಭಾವವಿಲ್ಲದೆ ಬದುಕು ಸುಂದರವಾಗಿರದು. ಅದು ಅಭದ್ರತೆಯಲ್ಲಿ ನಲುಗುತ್ತದೆ. ಕುಟುಂಬ, ಸಮುದಾಯ ಮತ್ತು ಸಮಾಜಗಳು ತಮ್ಮಲ್ಲೇ ಪರಸ್ಪರ ಈ ಸುರಕ್ಷತಾ ಭಾವವನ್ನು ಹುಟ್ಟಿಸಿಕೊಳ್ಳುವ ಹಬ್ಬ ರಕ್ಷಾಬಂಧನವೆಂದರೆ, ಸಹೋದರಿ ಸಹೋದರನಿಗೆ ಕಟ್ಟುವ ರಕ್ಷೆಯಾದರೂ ಇದೇ ಅರ್ಥದ್ದು.

ಲಹರಿ



ಸದಾಶಿವ್ ಸೊರಟೂರು

ಬಂಧಗಳು ಫ್ರೆಂಡ್, ಅನ್ ಫ್ರೆಂಡ್ ಎಂಬ ಒತ್ತುಗುಂಡಿಯೊಳಗೆ ಅವಿತುಕೊಂಡಿರುವಾಗ, ಯಾರು ಯಾರನ್ನೂ ನಂಬದೆ ಕಣ್ಣೊಳಗೆ ಗುಮಾನಿಯಿಟ್ಟುಕೊಂಡು ಬದುಕುತ್ತಿರುವಾಗ, ಯಾವುದೇ ಸಂಬಂಧಗಳು ದೀರ್ಘಕಾಲ ಉಳಿಯದೆ ತುಂಡಾಗುತ್ತಿರುವ ಈ ಹೊತ್ತಿನಲ್ಲಿ ನಾವು ನಮ್ಮ 'ಬಂಧ'ಗಳನ್ನು ರಕ್ಷಿಸಿಕೊಳ್ಳಬೇಕಾದ ಅನಿವಾರ್ಯತೆಯಲ್ಲಿದ್ದೇವೆ. ಒಂದಾದರೂ ಪ್ರಾಮಾಣಿಕ 'ಬಂಧ' ವಿಲ್ಲದ ಮನುಷ್ಯ ನಿಜಕ್ಕೂ ಒಂದರ್ಥದಲ್ಲಿ ಅನಾಥನೇ ಸೈ..

ಅವಳು ನಮ್ಮ ಶಾಲೆಯಲ್ಲಿ ಏಳನೇ ತರಗತಿ ವಿದ್ಯಾರ್ಥಿನಿ. ಅವರದೇ ಬೀದಿಯಿಂದ ಬರುವ ಎಂಟನೇ ತರಗತಿ ಹುಡುಗನೂ ನಮ್ಮ ಶಾಲೆಯಲ್ಲಿದ್ದಾನೆ. ಒಮ್ಮೆ ಏನಾಯ್ತೊ ಆ ಹುಡುಗಿ ಪ್ರಜ್ಞೆ ತಪ್ಪಿ ಬಿದ್ದಿದಾಳೆ. ಇಡೀ ಶಾಲೆಯಲ್ಲಿ ಎಲ್ಲರಿಗಿಂತ ಆ ಹುಡುಗ ಹೆಚ್ಚು ಕಾಳಜಿಗಿಳಿದ. ನೀರು ಹಿಡಿದು ಓಡಿ ಬಂದ, ಗಾಳಿ ಬೀಸಿದ, ಓಡಿ ಹೋಗಿ ಮನೆಯವರನ್ನು ಕರೆ ತಂದ. ಇವಳು ನಮ್ಮವಳು, ನಮ್ಮ ಬೀದಿಯವಳು ಎಂಬ ಭಾವ ಇತ್ತಲ್ಲ ಅದೇ ಅವನನ್ನು ಹಾಗೆ ಮಾಡಿಸಿದೆ. ಅದೊಂದು ಗೊತ್ತಿಲ್ಲದೆ ಬೆಸೆದ ಬಂಧ; ಅವಳು ಅವನ ಕೈಗೆ ಕಟ್ಟದೆಯೂ ಕಟ್ಟಿರುವ ಒಂದು ಚೆಂದದ ದಾರ. ಇಡೀ ಜಗತ್ತು ಇಂತಹ ಬಂಧದಲ್ಲಿ ಬಂಧಿಸಿಕೊಂಡರೆ ಎಷ್ಟೊಂದು ಚೆಂದ ಅನಿಸಿತು ಅವತ್ತು. ಮುಂದಿನ ವಾರ ರಕ್ಷಾಬಂಧನ ಹಬ್ಬ. ಈ ಕಾರಣಕ್ಕೆ ಇದೆಲ್ಲವೂ ನೆನಪಾಯ್ತು.

ಸಂಬಂಧಗಳು ಕೈಗೆ ಕಟ್ಟಿದ ದಾರ ಮೇಲೆ ನಡೆಯುವುದಿಲ್ಲ, ಕೊಡುವ ಉಡುಗೊರೆಗಳ ಮೇಲೆ ನಡೆಯುವುದಿಲ್ಲ, ಗೆಳೆತನದ ಹೆಸರಲ್ಲಿ ಕಟ್ಟುವ ಬ್ಯಾಂಡು ಯಾವ ಮೋಡಿ ಮಾಡೀತು ? ಎನ್ನುವ ಮಾತುಗಳನ್ನು ನಾನು ಕೇಳಿಸಿಕೊಳ್ಳುವುದಿಲ್ಲ. ಡಾಕ್ಟರ್ ಮೂರು ಮಾತ್ರೆ ಕೊಟ್ಟು 'ಡೋಂಟ್ ವರಿ ಇದನ್ನ ತೆಗೊಳಿ ಸರಿ ಹೋಗುತ್ತೆ' ಅಂದಾಗ ನಾವು ಆ ಮಾತು ಕೇಳಿಸಿಕೊಂಡು ಅರ್ಧ ಹುಷಾರಾಗುತ್ತೇವೆ. ಆ ಮಾತ್ರ ವರ್ಕ್ ಆಗುತ್ತೆ ಅಂತ ನಂಬಿ ನುಂಗುತ್ತೇವೆ. ಆ ನಂಬಿಕೆಯಲ್ಲೇ ನಾವು ಇನ್ನರ್ಧ ಹುಷಾರಾಗುತ್ತೇವೆ. ಕೈಗೊಂದು ದಾರಿ ಕಟ್ಟಿ ನೀನು ನನ್ನ ಸಹೋದರ ಕಣೋ ಅನ್ನುವ ಹೇಳಿಯೂ ಹೇಳದ ಮಾತಿದೆಯಲ್ಲ ಅದು ಬಂಧವನ್ನು ರಕ್ಷಿಸುತ್ತದೆ. ಒಂದು ಹಬ್ಬದ ನೆಪದಲ್ಲಿ ಕೈಗೆ ಕಟ್ಟುವ ತುಂಡು ದಾರ ಯಾವ ಮ್ಯಾಜಿಕ್ ಮಾಡಲು ಸಾಧ್ಯ? ಅನ್ನುವ ಪ್ರಶ್ನೆ ಇದ್ದದ್ದೆ. ಆದರೆ ಅದೇ ಕಟ್ಟುವ ದಾರ ನಿಜಕ್ಕೂ ಒಂದು ಮ್ಯಾಜಿಕ್ ಮಾಡುತ್ತೆ ಅನ್ನುವ ನಂಬಿಕೆ ಇದೆಯಲ್ಲ ಅದು ಎಲ್ಲದಕ್ಕೂ ಸಜ್ಜುಗೊಳಿಸುತ್ತದೆ. 'ಪ್ರಪಂಚದಲ್ಲಿ ನಾವು ನಂಬಿರುವ ದೇವರುಗಳು ಕಲ್ಲಾಗಿರಬಹುದು. ಆದರೆ ಅವುಗಳನ್ನು ಪೂಜಿಸುವ ನಮ್ಮ ಮನಸುಗಳು ಕಲ್ಲಲ್ಲ ಬದುಕು ನಂಬಿಕೆಯ ಕೈ ಗನ್ನಡಿ'

ಮನೆಯಿಂದ ಹೊರಡಲು ಅಂಜುವ ಹೆಣ್ಣು, ಕೆಲಸ ಮಾಡುವ ಜಾಗದಲ್ಲಿ ಕಾಡುವ ಅಭದ್ರತೆ, ತಾನು ಇಲ್ಲಿ ಸುರಕ್ಷಣಳಲ್ಲ ಎನ್ನಿಸುವ ಅವಳ ಆತಂಕ, ಹೆಣ್ಣನ್ನು ಸದಾ ಹಸಿದ ಕಣ್ಣಲ್ಲಿ ನೋಡುವ ಜನರ ವಕ್ರ ಮನಸು ಇವುಗಳ ಮಧ್ಯೆ ನಾನು ನಡೆಯುವಾಗ ಮಹಾಭಾರತ ಆ ಒಂದು ತುಂಡು ಕಥೆ ನೆನಪಾಗುತ್ತದೆ. ಶಿಶುಪಾಲನನ್ನು ಕೊಲ್ಲುವುದಕ್ಕೆ ಸುದರ್ಶನ ಚಕ್ರ ಎತ್ತಿದ ಕೃಷ್ಣನ ಬೆರಳ ರಕ್ತ ಕಂಡು ದ್ರೌಪದಿ ಕಟ್ಟಿದ ತನ್ನ ಸೀರೆಯ ತುಣುಕು ದ್ರೌಪದಿ ವಸ್ತ್ರಾಪಹರಣದ ಸಂದರ್ಭದಲ್ಲಿ ರಕ್ಷಿಸಲ್ಪಟ್ಟ ಕಥೆಗೆ ಶ್ರೀಕೃಷ್ಣ ಮತ್ತು ದ್ರೌಪದಿ ಸಹೋದರ-ಸಹೋದರಿ. ಸದ್ಯದ ಜಗತ್ತಿಗೆ ತುರ್ತಾಗಿ ಬೇಕಾದ ಬಂಧ ಇದು. ಭ್ರಾತೃತ್ವದ ವಿಟಮಿನ್ ಕೊರತೆಯಿಂದ ಜಗತ್ತು ಎಷ್ಟೊಂದು ಬಡವಾಗಿ ಹೋಗಿದೆ.

ಸುರಕ್ಷತೆಯ ಭಾವ ಅನ್ನುವುದಿದೆಯಲ್ಲ ಅದು ಆಹಾರ ನಿದ್ರೆ ಮೈಥುನದ ಅಗತ್ಯಗಳಂತೆಯೇ ಮಾನವ ಮನಸ್ಸಿಗೆ ಅತ್ಯವಶ್ಯಕವಾದ ಸಂಗತಿ. ಸುರಕ್ಷತಾ ಭಾವವಿಲ್ಲದೆ ಬದುಕು ಸುಂದರವಾಗಿರದು. ಅದು ಅಭದ್ರತೆಯಲ್ಲಿ ನಲುಗುತ್ತದೆ. ಕುಟುಂಬ, ಸಮುದಾಯ ಮತ್ತು ಸಮಾಜಗಳು ತಮ್ಮಲ್ಲೇ ಪರಸ್ಪರ ಈ ಸುರಕ್ಷತಾ ಭಾವವನ್ನು ಹುಟ್ಟಿಸಿಕೊಳ್ಳುವ ಹಬ್ಬ ರಕ್ಷಾಬಂಧನವೆಂದರೆ, ಸಹೋದರಿ ಸಹೋದರನಿಗೆ ಕಟ್ಟುವ ರಕ್ಷೆಯಾದರೂ ಇದೇ ಅರ್ಥದ್ದು. ಭ್ರಾತೃಭಾವದ ಜಾಗರಣಕ್ಕಾಗಿ ಈ ಹಬ್ಬವನ್ನೇ ವಿಸ್ತಾರಗೊಳಿಸಿ ಸಹೋದರರೂ ಪರಸ್ಪರ ರಕ್ಷಾವಿನಿಮಯ ಮಾಡಿಕೊಳ್ಳಬೇಕಾದದ್ದು ಈಗಿನ ತುರ್ತು. ಭಯ ಹುಟ್ಟಿಸಲೆಂದೇ ಹೊರಟ ದುಷ್ಟಚಿಂತನೆಗಳ ವಿರುದ್ಧ ರಕ್ಷಾಬಂಧನ ಅನ್ನುವುದೊಂದು ಸಾತ್ವಿಕ ಯುದ್ಧ ಇರುಳ ವಿರುದ್ಧದ ಬೆಳಕಿನ ಯುದ್ಧದಂತೆ.

ಬಂಧಗಳನ್ನು ಒಪ್ಪಂದ ಮಾಡಿ ಭದ್ರವಾಗಿರಿಸುವ ಸಾಂಕೇತಿಕ ಹಬ್ಬ ರಕ್ಷಾ ಬಂಧನ. ಇದು ಅಣ್ಣ-ತಂಗಿಯರ ಎಲ್ಲೊ ಹುಟ್ಟಿದ ಭ್ರಾತೃತ್ವವನ್ನು ಪ್ರತ್ಯಕ್ಷೀಕರಿಸಿ ತೋರಿಸಿಕೊಡುವ ಅತ್ಯಂತ ಮೌಲ್ಯಭರಿತ ಹಬ್ಬವೇ ಸರಿ. ಕಟ್ಟುವ ಒಂದು ತುಣುಕು ದಾರದ ನೆಪದಲ್ಲಾದರೂ ನಮ್ಮ ಸಹೋದರತ್ವದ ಬಂಧಗಳು ಬದುಕಲಿ, ಚೆಂದವಾಗಲಿ ಮತ್ತು ನಮ್ಮನ್ನು ಪೊರೆಯಲಿ. ರಕ್ಷಾಬಂಧನ ನಮ್ಮೆಲ್ಲರ 'ಬಂಧ'ಗಳನು ರಕ್ಷಿಸುವಂತಾಗಲಿ. ❖

ಖಿಚಡಿಯ ವೃತ್ತಾಂತ

ಅತಿ ಸುಲಭದಲ್ಲಿ, ಬಹುಬೇಗ ತಯಾರಿಸಬಹುದಾದ, ದೇಹಕ್ಕೆ ಅಗತ್ಯವಿರುವಷ್ಟು ಪ್ರೊಟೀನ್‌ಗಳನ್ನು ಪೂರೈಸುವ ಖಾದ್ಯ ಖಿಚಡಿ. ಬೆಳಗಿನ ತಿಂಡಿಗೆ, ಮಧ್ಯಾಹ್ನದ ಊಟಕ್ಕೆ, ರಾತ್ರಿಯ ಊಟಕ್ಕೆ ಹೀಗೆ ಮೂರೂ ಹೊತ್ತಿಗೂ ಹೊಂದಿಕೆಯಾಗುವ ಖಿಚಡಿ ಬಗ್ಗೆ ಒಂದಷ್ಟು....



ಸುಮಾ ಬಿ.

ಆಹಾರ

2017ರ ನವೆಂಬರ್‌ನಲ್ಲಿ 'ವಿಶ್ವ ಆಹಾರ ಭಾರತ' ಕಾರ್ಯಕ್ರಮದ ಅಂಗವಾಗಿ ದೆಹಲಿಯಲ್ಲಿ 918 ಕೆ.ಜಿ.ಯ ಖಿಚಡಿ ತಯಾರಿಸಿ ವಿಶ್ವ ದಾಖಲೆ ಬರೆಯಲಾಯಿತು. ಖ್ಯಾತ ಬಾಣಸಿಗ ಸಂಜೀವ್ ಕಪೂರ್ ನೇತೃತ್ವದಲ್ಲಿ 50 ಬಾಣಸಿಗರು ಖಿಚಡಿ ಸಿದ್ಧಪಡಿಸಿದ್ದರು. ಇವರಲ್ಲದೆ ಯೋಗಗುರು ಬಾಬಾ ರಾಮ್‌ದೇವ್, ಆಗಿನ ಕೇಂದ್ರ ಸಚಿವೆಯಾಗಿದ್ದ ಹರ್‌ಸಿಮ್ರನ್ ಕೌರ್ ಬಾದಲ್ ಮೊದಲಾದವರೂ ಖಿಚಡಿ ತಯಾರಿಯಲ್ಲಿ ಭಾಗಿಯಾಗಿದ್ದರು. ಖಿಚಡಿಯನ್ನು ಭಾರತದ ಬ್ರ್ಯಾಂಡ್ ಆಹಾರವಾಗಿ ವಿಶ್ವಕ್ಕೆ ಪರಿಚಯಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಈ ಸಮಯದಲ್ಲೇ ಖಿಚಡಿಯನ್ನು 'ರಾಷ್ಟ್ರೀಯ ಆಹಾರ' ಎಂದು ಘೋಷಿಸುವ ಧ್ವನಿಯೂ ಮುನ್ನೆಲೆಗೆ ಬಂದಿತ್ತು.

ಖಿಚಡಿ ಅತಿ ಸುಲಭದಲ್ಲಿ, ಬಹುಬೇಗ ತಯಾರಿಬಹುದಾದ, ದೇಹಕ್ಕೆ ಅಗತ್ಯದಷ್ಟು ಪ್ರೊಟೀನ್‌ಗಳನ್ನು ಪೂರೈಸುವ ಖಾದ್ಯ. ಬೆಳಗಿನ ತಿಂಡಿಗೆ, ಮಧ್ಯಾಹ್ನದ ಊಟಕ್ಕೆ, ರಾತ್ರಿಯ ಊಟಕ್ಕೆ ಹೀಗೆ ಮೂರೂ ಹೊತ್ತಿಗೂ ಹೊಂದಿಕೆಯಾಗುವ ತಿನಿಸು. ಸಾಂಬಾರು ಖಾಲಿಯಾದರೆ, ದಿಢೀರನೆ ನೆಂಟರು ಮನೆಗೆ ಬಂದರೆ, ಅನ್ನ- ಸಾರು ತಿಂದು ಬೇಸರವಾಗಿದ್ದರೆ ಆಪದ್ಬಾಂಧವನಂತೆ ಖಿಚಡಿ ಒದಗಿ ಬರುತ್ತದೆ. ಮಕ್ಕಳಿಗೆ, ಪಥ್ಯ ಮಾಡುವವರಿಗೆ, ದೇಹ ಕರಗಿಸುವ ಉಮೇದು ಇರುವವರಿಗೆ, ಮಧುಮೇಹಿಗಳಿಗೆ ಹೀಗೆ ಎಲ್ಲ ವಯೋಮಾನದವರಿಗೂ, ಅನಾರೋಗ್ಯ ಉಳ್ಳವರಿಗೂ ಖಿಚಡಿ ಅಗತ್ಯ ಪ್ರೊಟೀನ್‌ಗಳನ್ನು ಒದಗಿಸುತ್ತದೆ.

ಅಕ್ಕಿ, ಬೇಳೆ, ತರಕಾರಿ, ಸ್ವಲ್ಪವೇ ಮಸಾಲೆ ಬಳಸಿ ತಯಾರಾಗುವ ಖಿಚಡಿ ಪ್ರೊಟೀನ್‌ಗಳ ಆಗರ. ಅವಿವಾಹಿತರೂ ಸುಲಭದಲ್ಲಿ ತಯಾರಿಸಿಕೊಳ್ಳುವ ತಿಂಡಿಗಳ ಪಟ್ಟಿಯಲ್ಲಿ ಖಿಚಡಿಗೆ ಅಗ್ರ ಪಟ್ಟ. ಉತ್ತರ ಭಾರತದ ಸಾಂಪ್ರದಾಯಿಕ ಹಾಗೂ ಸಿಗ್ನೇಚರ್ ತಿನಿಸಾಗಿಯೂ ಇದು ಗುರುತಿಸಿಕೊಂಡಿದೆ.

ಖಿಚಡಿಯನ್ನು ಒಂದೊಂದು ಭಾಗದಲ್ಲಿ ಒಂದೊಂದು ರೀತಿ ಸಿದ್ಧಪಡಿಸುತ್ತಾರೆ. ಪ್ರಾದೇಶಿಕವಾಗಿ ಲಭ್ಯವಿರುವ ನೈಸರ್ಗಿಕ ಪದಾರ್ಥಗಳಿಗೆ ಅನುಗುಣವಾಗಿ ಇದರ ತಯಾರಿಗೆ ಬಳಸುವ ಪದಾರ್ಥಗಳು ಭಿನ್ನವಾಗಿವೆ. ಕೆಲವೆಡೆ ಅಕ್ಕಿ, ಸಜ್ಜೆ, ಬೇಳೆಯಿಂದ ಖಿಚಡಿ ತಯಾರಿಸಲಾಗುತ್ತದೆ. ಇನ್ನು ಕೆಲವೆಡೆ ಸಾಬುದಾನದಿಂದ ಖಿಚಡಿ ರೂಪು ತಳೆಯುತ್ತದೆ. ಎಲ್ಲ ಖಿಚಡಿಗೂ ಬೇಳೆ ಮಾತ್ರ ಕಡ್ಡಾಯ.

ಬೇಳೆಗಳ ಬಳಕೆಯೂ ಪ್ರದೇಶವಾರು ಲಭ್ಯತೆಯನ್ನು ಅವಲಂಬಿಸಿರುತ್ತದೆ. ತೊಗರಿ ಬೇಳೆ, ಹೆಸರು ಬೇಳೆ, ಕಡ್ಲೆ ಬೇಳೆ ಹೀಗೆ ಒಂದೊಂದು ಭಾಗದಲ್ಲಿ ಒಂದೊಂದು ಬೇಳೆ ಖಿಚಡಿಗೆ ಬಳಕೆಯಾಗುತ್ತದೆ.

'ಖಿಚ' (khicca) ಎನ್ನುವ ಸಂಸ್ಕೃತ ಪದದಿಂದ ಖಿಚಡಿ ಪದ ಹುಟ್ಟಿಕೊಂಡಿದೆ. ಖಿಚಡಿಗೂ ಮುನ್ನ 'ಕ್ರುಸರನ್ನ' ಜನಪ್ರಿಯತೆ ಪಡೆದಿತ್ತು. ಇದನ್ನು ಎಳ್ಳು ಹಾಗೂ ಮೊಸರಿನಿಂದ ತಯಾರಿಸಲಾಗುತ್ತಿತ್ತು. ಸಾಮಾನ್ಯವಾಗಿ ಖಿಚಡಿಯನ್ನು ಹೆಸರು ಬೇಳೆ, ಅಕ್ಕಿ, ತುಪ್ಪ, ಜೀರಿಗೆ, ಶುಂಠಿ, ಹುಣಸೆ ಹಣ್ಣು ಉಪ್ಪು ಬಳಸಿ ತಯಾರಿಸ ಲಾಗುತ್ತದೆ. ಇನ್ನು ಕೆಲವರು ಮಾಂಸದ ತುಣುಕುಗಳನ್ನೂ ಬಳಸಿ ಖಿಚಡಿ ತಯಾರಿಸುತ್ತಾರೆ. ಇದು ಬಿರಿಯಾನಿಯ ಸ್ವಾದ ನೀಡುತ್ತದೆ. ಗುಜರಾತ್‌ನಲ್ಲಿ ತರಕಾರಿ ಖಿಚಡಿ ತಯಾರಿಸಲಾಗುತ್ತದೆ. ಅದಕ್ಕೆ ತೊಗರಿ ಬೇಳೆ, ಶೇಂಗಾ, ಟೊಮೆಟೊ, ಹಸಿ ಮೆಣಸು, ಶುಂಠಿ- ಬೆಳ್ಳುಳ್ಳಿ ಪೇಸ್ಟ್ ಹಾಗೂ ಮಸಾಲೆ ಪದಾರ್ಥಗಳನ್ನು ಬಳಸಿ ತಯಾರಿಸಲಾಗುತ್ತದೆ.

ದಕ್ಷಿಣ ಭಾರತದಲ್ಲಿ ಖಿಚಡಿ ಪೊಂಗಲ್, ಬಿಸಿಬೇಳೆ ಬಾತ್ ಆಗಿ ರೂಪಾಂತರ ಹೊಂದಿದೆ. ತರಕಾರಿ, ತೊಗರಿಬೇಳೆ, ಈರುಳ್ಳಿ ಬಳಸಿ ಕರ್ನಾಟಕದಲ್ಲಿ ತಯಾರಾಗುವ ಬಿಸಿಬೇಳೆ ಬಾತ್‌ಗೆ ಖಿಚಡಿಯ ಸಾಮ್ಯತೆ ಇದೆ. ಬಾತ್ ಪುಡಿ ಬಳಸುವುದರಿಂದ ಅದಕ್ಕೆ ಬೇರೆಯದೇ ಪರಿಮಳ, ಸ್ವಾದ ಪ್ರಾಪ್ತಿಯಾಗಿದೆ. ದಕ್ಷಿಣ ಭಾರತದ ಕೆಲ ಮನೆಗಳಲ್ಲೂ ಖಿಚಡಿ ತಯಾರಾಗುತ್ತದೆ. ಕರ್ನಾಟಕದ ಮಲೆನಾಡಿನ ಭಾಗದಲ್ಲಿ ಬೇಳೆ, ಅಕ್ಕಿಯಿಂದ ತಯಾರಿಸಿದ ಖಿಚಡಿಗೆ ಬಾಳೆಹಣ್ಣು, ಬೆಲ್ಲ, ಹಾಲು ಸೇರಿಸಿ ಸವಿಯುತ್ತಾರೆ. ಖಾರದ ಜತೆಗೆ ಸಿಹಿಯ ಅನುಭವವನ್ನೂ ಇದು ನೀಡುತ್ತದೆ. ❖



ಸಿರಿಧಾನ್ಯದಿಂದ ತಯಾರಿಸಿದ ಖಿಚಡಿ

ಅಕ್ಕಿ–ಬೇಳೆ ಕಿಚಡಿ

ಒಂದೊಂದು ರಾಜ್ಯದಲ್ಲೂ ಒಂದೊಂದು ಬಗೆಯಲ್ಲಿ ಖಿಚಡಿ ತಯಾರಿಸಲಾಗುತ್ತದೆ. ದೇಹದ ಉಷ್ಣತೆ ಕಾಪಾಡಲು ನೆರವಾಗುವ ಖಿಚಡಿ ಮಕ್ಕಳಿಗಂತೂ ಹೇಳಿ ಮಾಡಿಸಿದ ತಿಂಡಿ. ಮಕ್ಕಳಿಗಾಗಿ ಖಿಚಡಿ ಹೀಗೆ ಮಾಡಿ...

ಬೇಕಾದ ಸಾಮಗ್ರಿಗಳು :

ಅಕ್ಕಿ– 2 ಕಪ್, ತೊಗರಿ ಬೇಳೆ ಅಥವಾ ಹೆಸರು ಬೇಳೆ: 1 ಕಪ್, ಅರಿಶಿನ ಪುಡಿ: ಕಾಲು ಚಮಚ
ಎಣ್ಣೆ (ಬೇಕಿದ್ದರೆ ಮಾತ್ರ): 1 ಚಮಚ
ತುಪ್ಪ– 2 ಚಮಚ, ಉಪ್ಪು ರುಚಿಗೆ ತಕ್ಕಷ್ಟು

ತಯಾರಿಸುವ ವಿಧಾನ

ಅಕ್ಕಿ ಹಾಗೂ ಬೇಳೆಯನ್ನು ಎರಡು ಬಾರಿ ಚೆನ್ನಾಗಿ ತೊಳೆದು ಕುಕ್ಕರ್‌ಗೆ ಹಾಕಿ. ಅದಕ್ಕೆ ಅರಿಶಿನ ಪುಡಿ, ಎಣ್ಣೆ, ಉಪ್ಪು, ಅಗತ್ಯದಷ್ಟು ನೀರು ಹಾಕಿ ಚೆನ್ನಾಗಿ ಬೆರೆಸಬೇಕು. ಬಳಿಕ ರುಚಿ ನೋಡಿ ಅಗತ್ಯವಿದ್ದರೆ ಇನ್ನಷ್ಟು ಉಪ್ಪು ಹಾಕಿ ಕುಕ್ಕರ್ ಮುಚ್ಚಿ ಕೂಗಿಸಬೇಕು.

ಮೃದುವಾದ ಖಿಚಡಿ ಬೇಕೆಂದರೆ ನೀರನ್ನು ಸ್ವಲ್ಪ ಹೆಚ್ಚಿಗೆ ಬಳಸಬಹುದು. 3-4 ವಿಶಲ್ ಆದ ಬಳಿಕ 15 ನಿಮಿಷ ಕುಕ್ಕರ್ ತಣಿಯಲು ಬಿಟ್ಟು ಬಳಿಕ ತೆರೆಯಬೇಕು. ಬಳಿಕ 2 ಚಮಚ ತುಪ್ಪ ಹಾಕಿ ಚೆನ್ನಾಗಿ ಕದಡಬೇಕು. ಬಿಸಿ ಇದ್ದಾಗಲೇ ಮಕ್ಕಳಿಗೆ ಸವಿಯಲು ಕೊಡಿ.

ಐಕ್ಯೂ ಹೊಸ ಸ್ಮಾರ್ಟ್‌ಫೋನ್

ತಂತ್ರಜ್ಞಾನ



ಗ್ಯಾಜೆಟ್ ಮಾರುಕಟ್ಟೆಗೆ ಐಕ್ಯೂ ನೂತನ ಪ್ರೀಮಿಯಂ ಸ್ಮಾರ್ಟ್‌ಫೋನ್ ಬಿಡುಗಡೆ ಮಾಡಿದೆ. ಐಕ್ಯೂ 9T (iQOO 9T) ಆಲ್ಫಾ ಬ್ಲ್ಯಾಕ್ ಮತ್ತು ವೈಟ್ ಲೆಜೆಂಡ್ ಎಂಬ ಎರಡು ಬಣ್ಣಗಳಲ್ಲಿ ಲಭ್ಯವಿದೆ ಎಂದು ಕಂಪನಿ ಹೇಳಿದೆ.

6.78 ಇಂಚಿನ ಫುಲ್‌ಎಚ್‌ಡಿ ಅಮೊಲೆಡ್ ಡಿಸ್‌ಪ್ಲೇ, ಇನ್ ಡಿಸ್‌ಪ್ಲೇ ಫಿಂಗರ್‌ಪ್ರಿಂಟ್ ಸೆನ್ಸರ್ ಹೊಸ iQOO 9T ಸ್ಮಾರ್ಟ್‌ಫೋನ್‌ನ ವಿಶೇಷತೆಯಾಗಿದೆ.

3.2Ghz ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 8 + ಜೆನ್. 1 ಒಕ್ಟಾ-ಕೋರ್ ಪ್ರೊಸೆಸರ್ ಇದ್ದು, ಅಡ್ರೆನೊ 730 ಗ್ರಾಫಿಕ್ಸ್ ಬೆಂಬಲವಿದೆ.

ಆ್ಯಂಡ್ರಾಯ್ಡ್ 12 ಆಧಾರಿತ ಫನ್‌ಟಚ್ ಓಎಸ್ 23 ನೂತನ iQOO 9T ಸ್ಮಾರ್ಟ್‌ಫೋನ್‌ನಲ್ಲಿದ್ದು, 8 GB ಮತ್ತು 12GB LPDDR5 6400Mbps RAM ಹಾಗೂ 128 GB ಹಾಗೂ 256 GB ಮೆಮೊರಿ ಆಯ್ಕೆಯ ಜತೆಗೆ, 4,700mAh ಬ್ಯಾಟರಿ ಮತ್ತು 120W ಫಾಸ್ಟ್ ಚಾರ್ಜಿಂಗ್ ಬೆಂಬಲ ಹೊಂದಿದೆ.

ಹಿಂಭಾಗದಲ್ಲಿ 50 ಮೆಗಾಪಿಕ್ಸೆಲ್ ಮುಖ್ಯ ಕ್ಯಾಮೆರಾ ಜತೆಗೆ 13 + 12 ಮೆಗಾಪಿಕ್ಸೆಲ್ ಕ್ಯಾಮೆರಾ ಹಾಗೂ 16 ಮೆಗಾಪಿಕ್ಸೆಲ್ ಸೆಲ್ಫಿ ಕ್ಯಾಮೆರಾ ಹೊಂದಿದೆ.

Nokia 5710 XpressAudio: ವೈರ್‌ಲೆಸ್ ಇಯರ್‌ಬಡ್ಸ್ ಸಹಿತ ಬರಲಿದೆ ಐಕಾನಿಕ್ ನೋಕಿಯ

ಬೆಲೆ ವಿವರ: 8GB RAM + 128GB ಮಾದರಿಗೆ ₹49,999 ಹಾಗೂ 12GB RAM + 256GB ಆವೃತ್ತಿಗೆ ₹54,999 ದರ ಹೊಂದಿದೆ. ❖

ಸೌಂಡ್ ಬಾರ್



ಭಾರತದ ಪ್ರಮುಖ ಸ್ವದೇಶಿ ಎಲೆಕ್ಟ್ರಾನಿಕ್ಸ್ ಉಪಕರಣಗಳ ಕಂಪನಿ ಮಿವಿ ಎರಡು ನೂತನ ಸೌಂಡ್ ಬಾರ್‌ಗಳನ್ನು ಬಿಡುಗಡೆ ಮಾಡಿದೆ. ಮೇಡ್ ಇನ್ ಇಂಡಿಯಾ ಶ್ರೇಣಿಯಲ್ಲಿ 'ಎಸ್ 16' ಮತ್ತು 'ಎಸ್ 24' ಎಂಬ 2 ಸೌಂಡ್ ಬಾರ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ವಿಭಿನ್ನ ಶೈಲಿ ಮತ್ತು ಪರಿಪೂರ್ಣ ಧ್ವನಿಯನ್ನು ಹೊಂದಿರುವ ಈ ಸೌಂಡ್ ಬಾರ್‌ಗಳನ್ನು ಆಕರ್ಷಕವಾಗಿ ವಿನ್ಯಾಸಗೊಳಿಸಲಾಗಿದೆ.

'ಎಸ್ 16' ಸರಣಿಯ ಸೌಂಡ್‌ಬಾರ್ ₹1499 ಮತ್ತು 'ಎಸ್ 24' ಸರಣಿಯ ಸೌಂಡ್‌ಬಾರ್ ₹1999ಕ್ಕೆ ದೊರೆಯಲಿವೆ.

ಮುಂದಿನ ಪೀಳಿಗೆಯ ಈ ಸೌಂಡ್ ಬಾರ್‌ಗಳನ್ನು ವಿಶೇಷ ಶೈಲಿಯಲ್ಲಿ ವಿನ್ಯಾಸ ಮಾಡಲಾಗಿದೆ. ಆಡಿಯೊ ಕ್ಷೇತ್ರದಲ್ಲಿ ನಮ್ಮ ಸೌಂಡ್ ಬಾರ್‌ಗಳು ಹೊಸ ಸೇರ್ಪಡೆಯಾಗಿವೆ. ಸಂಗೀತಪ್ರಿಯರಿಗೆ ಕಡಿಮೆ ಬೆಲೆಯಲ್ಲಿ ಇವುಗಳನ್ನು ನೀಡಲಾಗುತ್ತಿದೆ. ಈ ಸೌಂಡ್ ಬಾರ್‌ಗಳಲ್ಲಿ 6 ಗಂಟೆಗಳ ಕಾಲ ಬ್ಯಾಟರಿ ಬರಲಿದೆ. ಇವುಗಳು ಹೆಚ್ಚಿನ ಕಾರ್ಯಕ್ಷಮತೆ, ದೀರ್ಘ ಬಾಳಿಕೆ ಮತ್ತು ಗುಣಮಟ್ಟದಿಂದ ಕೂಡಿವೆ ಎಂದು ಕಂಪನಿಯ ಸಹ ಸಂಸ್ಥಾಪಕ ಮಿದುಲಾ ದೇವಭಕ್ತುನಿ ಹೇಳಿದ್ದಾರೆ.

ಈ ಸೌಂಡ್‌ಬಾರ್‌ಗಳು ಎಯುಎಕ್ಸ್, ಬ್ಲೂಟೂಥ್, 5.1, ಟಿಎಫ್/ ಯುಎಸ್‌ಬಿ ಮತ್ತು ಮೈಕ್ರೊ ಎಸ್‌ಡಿ ಕಾರ್ಡ್‌ಗಳ ಬೆಂಬಲದೊಂದಿಗೂ ಕೆಲಸ ಮಾಡಲಿವೆ. ದೀರ್ಘ ಕಾಲದಲ್ಲಿ ಹಾಡುಗಳನ್ನು ಕೇಳಬಹುದು ಹಾಗೇ ಗ್ರಾಹಕರಿಗಾಗಿ ಗೂಗಲ್ ಅಸಿಸ್ಟೆಂಟ್ ಸಂಯೋಜನೆ ಮಾಡಲಾಗಿದೆ.

2015ರಲ್ಲಿ ಮಿವಿ ಕಂಪನಿಯನ್ನು ವಿಶ್ವನಾಥ ಕಂದುಲಾ ಮತ್ತು ಮಿಧುಲಾ ದೇವಭಕ್ತುನಿ ಪ್ರಾರಂಭ ಮಾಡಿದರು. ಭಾರತೀಯ ಮಾರುಕಟ್ಟೆಯಲ್ಲಿ ಕೈಗೆಟುಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳು, ಇಯರ್ ಫೋನ್‌ಗಳು ಸೇರಿದಂತೆ ಆಡಿಯೊ ವಿಭಾಗದಲ್ಲಿನ ಹಲವಾರು ಸಾಧನಗಳನ್ನು ಈ ಕಂಪನಿ ಉತ್ಪಾದನೆ ಮಾಡುತ್ತಿದೆ. ❖

ಶ್ರದ್ಧಾ, ತನುಶ್ರೀ ಭರತನಾಟ್ಯ ರಂಗಪ್ರವೇಶ

ಸ್ಫುರಣ ನೃತ್ಯಕಲಾ ಕೇಂದ್ರದ ಕಲಾತ್ಮಕ ನಿರ್ದೇಶಕ ವಿನ್ಸೆಂಟ್ ಪಾಲ್ ಅವರ ವಿದ್ಯಾರ್ಥಿಗಳಾದ ಶ್ರದ್ಧಾ ಮತ್ತು ತನುಶ್ರೀ ಅವರ ಭರತನಾಟ್ಯ 'ರಂಗಪ್ರವೇಶ' ಕಾರ್ಯಕ್ರಮ ಇಂದು(ಶನಿವಾರ) ಸಂಜೆ 4ಗಂಟೆಗೆ ಸಂಜಯ ನಗರದ ರಮಣ ಮಹರ್ಷಿ ಆಡಿಟೋರಿಯಂನಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ ದಾಸ ವರೇಣ್ಯರಾದ ಪುರಂದರದಾಸರು, ಕನಕದಾಸರು, ರಮಣ ಮಹರ್ಷಿಗಳ ರಚನೆಗಳು ಹಾಗೂ ವಿನ್ಸೆಂಟ್ ಅವರು ರಚಿಸಿರುವ ಪುಷ್ಪಾಂಜಲಿ, ಜತಿಸ್ವರಂ, ತಿಲ್ಲಾನ ಮತ್ತು ಮಂಗಳಂ ರಚನೆಗಳಿಗೆ ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ಮಾಡಲಿದ್ದಾರೆ.

ಶ್ರೀ ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್ ಸಂಸ್ಥೆಯ ಅಧ್ಯಕ್ಷ ಡಾ. ಶಾರದಾ ನಟರಾಜನ್, ವಿದುಷಿ ರೂಪಾ ಹೇಮಂತ್ ಅವರ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದೆ.

ಅತಿಥಿಗಳಾಗಿ ಆತ್ಮಾಲಯ ಆರ್ಟ್ ಅಂಡ್ ಕಲ್ಚರ್ ಅಕಾಡೆಮಿಯ ನಿರ್ದೇಶಕಿ ಪದ್ಮಜಾ ಸುರೇಶ್ ಹಾಗೂ ವಿಶೇಷ ಅತಿಥಿಯಾಗಿ ಸಂಗೀತ ನಿರ್ದೇಶಕ ಮತ್ತು ಗಾಯಕ ಪ್ರಸನ್ನಕುಮಾರ್ ಎಂ.ಎಸ್ ಅವರು ಪಾಲ್ಗೊಳ್ಳಲಿದ್ದಾರೆ. ❖



ಶ್ರದ್ಧಾ, ತನುಶ್ರೀ

ನೃತ್ಯ ವೈಭವ



ನಾಳೆಯಿಂದ 37ನೇ ಕಿಂಕಿಣಿ ನೃತ್ಯೋತ್ಸವ

ರಾಷ್ಟ್ರೀಮಟ್ಟದ ಶಾಸ್ತ್ರೀಯ ನೃತ್ಯಗಳ ವಾರ್ಷಿಕೋತ್ಸವ ಕಿಂಕಿಣಿ ನೃತ್ಯೋತ್ಸವ ಆಗಸ್ಟ್ 7 ರಿಂದ ಆಗಸ್ಟ್ 11ರವರೆಗೆ ಜಯ ನಗರದಲ್ಲಿರುವ ಜೆಎಸ್‌ಎಸ್ ಸಭಾಂಗಣದಲ್ಲಿ ನಡೆಯಲಿದೆ. ಭಾನುವಾರ ಸಂಜೆ 6ಕ್ಕೆ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಗುರು ರಾಧಾ ಶ್ರೀಧರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮ ಎರಡು ವಿಭಾಗಗಳಲ್ಲಿ ನಡೆಯುತ್ತಿದ್ದು, ಪ್ರತಿದಿನ ಸಂಜೆ 6ಕ್ಕೆ ಪ್ರಾರಂಭವಾಗಲಿದೆ. ಮೊದಲ ಭಾಗದಲ್ಲಿ ಹೆಸರಾಂತ ಕಲಾವಿದರು ಭರತನಾಟ್ಯ, ಒಡಿಸ್ಸಿ, ಮೋಹಿನಿಯಾಟ್ಟಂ, ಕುಚಿಪುಡಿ ಮತ್ತು ಕಥಕ್‌ನಂತಹ ಶಾಸ್ತ್ರೀಯ ನೃತ್ಯ ಪ್ರಕಾರಗಳಲ್ಲಿ ಏಕವ್ಯಕ್ತಿ, ಅಥವಾ ಯುಗಳ ನೃತ್ಯವನ್ನು ಪ್ರದರ್ಶಿಸುತ್ತಾರೆ.

ಎರಡನೇ ಭಾಗದಲ್ಲಿ ಬೆಂಗಳೂರಿನ ಪ್ರತಿಷ್ಠಿತ ಶಾಲೆಗಳಿಂದ ಮಾರ್ಗಮ್ ಸ್ವರೂಪದಲ್ಲಿ ಸಮೂಹ ಭರತನಾಟ್ಯ ಪ್ರದರ್ಶನವಿರುತ್ತದೆ. ಎಲ್ಲಾ ನೃತ್ಯಗಳು ಸಕ್ರಿಯ ವಾದ್ಯಗೋಷ್ಠಿ ಇರಲಿದೆ. ಉತ್ಸವವು ಎಲ್ಲಾ ಕಲಾಪ್ರೇಮಿಗಳಿಗೆ ಮುಕ್ತವಾಗಿದ್ದು, ಪ್ರವೇಶ ಉಚಿತವಾಗಿದೆ. ❖

ಇಂದು ನೃತ್ಯ ರಂಜನಿ

ಈಶ್ವರಾಂಭ ನೃತ್ಯಶಾಲೆಯ ವತಿಯಿಂದ ಇಂದು (ಶನಿವಾರ) ಸಂಜೆ 6ಗಂಟೆಗೆ ವಸಂತನಗರದಲ್ಲಿರುವ 'ಅಲಯನ್ಸ್ ಫ್ರಾನ್ಸೆ ದಿ ಬೆಂಗಳೂರು' ಇಲ್ಲಿ ನೃತ್ಯ ರಂಜನಿ– ಕುಚಿಪುಡಿ ನೃತ್ಯ ಪ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗಿದೆ.

ನಾಟ್ಯಗುರು ಪ್ರೀತಿ ಮೆನನ್ ಅವರ ವಿದ್ಯಾರ್ಥಿಗಳು ನೃತ್ಯವನ್ನು ಪ್ರಸ್ತುತ ಪಡಿಸಲಿದ್ದಾರೆ. ಅತಿಥಿಗಳಾಗಿ ವಸಂತ ಕಿರಣ್, ಮಾನಸಿ ರಘುನಂದನ್, ವೈ.ಕೆ. ಸಂಧ್ಯಾ ಶರ್ಮಾ ಭಾಗವಹಿಸಲಿದ್ದಾರೆ. ❖



ಸಂಚಾರಿ ವಿಜಯ್ ನೆನಪಿನ ನಾಟಕೋತ್ಸವ

ರಂಗಭೂಮಿ

ಮಂಜುಶ್ರೀ ಎಂ. ಕಡಕೋಳ

ಸಂಚಾರಿ ಥಿಯೇಟರ್ ತಂಡವು ಕಲಾಗ್ರಾಮದಲ್ಲಿ ಆಯೋಜಿಸಿರುವ ರಾಷ್ಟ್ರಪಶಸ್ತಿ ಪುರಸ್ಕೃತ ನಟ ಸಂಚಾರಿ ವಿಜಯ್ ನೆನಪಿನ ನಾಟಕೋತ್ಸವವು ಆಗಸ್ಟ್ 5ರಿಂದ ಆರಂಭವಾಗಿದ್ದು 7ರವರೆಗೆ ನಡೆಯಲಿದೆ.

'2009ರಲ್ಲಿ ಸಂಚಾರಿ ಥಿಯೇಟರ್‌ಗೆ ಪದಾರ್ಪಣೆ ಮಾಡಿದ ವಿಜಯ್ ತಂಡದ ಎಲ್ಲ ನಾಟಕಗಳ ಭಾಗವಾಗಿದ್ದರು. ರಂಗಭೂಮಿಯ ಕೆಲಸಗಳ ಬಗೆಗಿನ ತಮ್ಮ ಆಸಕ್ತಿ, ನಿಷ್ಠೆ ಮತ್ತು ಪ್ರತಿಭೆಯ ಮೂಲಕ ಎಲ್ಲ ನಾಟಕಗಳಲ್ಲೂ ತಮ್ಮ ಪಾತ್ರವನ್ನು ಕಾಯ್ದಿರಿಸಿಕೊಂಡರು. ತಂಡದ ಅಭಿನಯ ಪ್ರಶಿಕ್ಷಕರಾಗಿದ್ದ ವಿಜಯ್ ನಾಟಕಗಳ ನಟನೆ, ನಿರ್ದೇಶನಗಳ ಜತೆಗೆ ಸಂಘಟನೆಯ ಕೆಲಸಗಳಲ್ಲೂ ತೊಡಗಿಕೊಂಡಿದ್ದರು. ಜೊತೆಗೆ ಬೇರೆ ತಂಡಗಳ ಜೊತೆಯಲ್ಲಿಯೂ ಕೆಲಸ ಮಾಡಿದರು. ಅನೇಕ ಸಿನಿಮಾಗಳಲ್ಲಿ ನಟಿಸಿದ್ದ ಅವರು 27 ವರ್ಷಗಳ ಬಳಿಕ ಕರ್ನಾಟಕಕ್ಕೆ ಅತ್ಯುತ್ತಮ ನಟ ಪ್ರಶಸ್ತಿ ತಂದುಕೊಟ್ಟರು. ಚಿಕ್ಕ ವಯಸ್ಸಿನಲ್ಲೇ ಅತ್ಯುನ್ನತ ಕೆಲಸಗಳನ್ನು ಮಾಡಿದ್ದ ವಿಜಯ್ ಸಾವಿನಲ್ಲೂ ಶ್ರೇಷ್ಠತೆಯನ್ನು ಮೆರೆದವರು. ಅವರ ನೆನಪಿಗಾಗಿ ನಾಟಕೋತ್ಸವ ಹಮ್ಮಿಕೊಳ್ಳಲಾಗಿದೆ' ಎನ್ನುತ್ತಾರೆ ಸಂಚಾರಿ ಥಿಯೇಟರ್‌ನ ಕ್ರಿಯೇಟೀವ್ ಡೈರೆಕ್ಟರ್ ಎನ್. ಮಂಗಳಾ

'ವಿಜಯ್ ನೆನಪಿನಲ್ಲಿ ಆತ ಅಭಿನಯಿಸುತ್ತಿದ್ದ ಕೆಲವು ನಾಟಕಗಳನ್ನು ಮತ್ತೆ ಹೊಸ ಹುಡುಗರೊಂದಿಗೆ, ಹಿಂದಿನ ಕಲಾವಿದರ ಸಹಕಾರದೊಂದಿಗೆ ಮತ್ತೆ ನಾಟಕ ಕಟ್ಟುತ್ತಾ ಅದರ ಪ್ರದರ್ಶನಗಳನ್ನು ವಿಜಯ್‌ಗೆ ನಾಟಕೋತ್ಸವದ ಮೂಲಕ ಅರ್ಪಿಸಲಿದ್ದೇವೆ' ಎಂದು ಮಾಹಿತಿ ನೀಡಿದರು.

ಸಂಚಾರಿ ತಂಡ ಕುರಿತು: ರಂಗಭೂಮಿಯಲ್ಲಿ ಈಗಾಗಲೇ ಸಾಧಿಸಿರುವುದನ್ನು ಮೆಲುಕು ಹಾಕುತ್ತಾ ಇನ್ನೂ ಸಾಧಿಸಬಹುದಾದ್ದನ್ನು ಕನಸು ಕಟ್ಟುವ, ಹೊಸ ಹೊಸ ಅನುಭವಗಳಿಗೆ ತೆರೆದುಕೊಳ್ಳಬೇಕೆನ್ನುವ ಉತ್ಸಾಹದ ಮನಸ್ಸುಗಳಿಗೆ ಕೆಲಸ ಮಾಡಲು ಒಂದು ಖಾಲಿ ರಂಗಸ್ಥಳವೇ ಸಂಚಾರಿ ಥಿಯೇಟರ್ ತಂಡ. 2004ರಲ್ಲಿ ಅಸ್ತಿತ್ವಕ್ಕೆ ಬಂದ ಸಂಚಾರಿ ಥಿಯೇಟರ್, ಇದುವರೆಗೂ ನಿರಂತರವಾಗಿ ರಂಗಭೂಮಿಯಲ್ಲಿ ತನ್ನ ದಿಟ್ಟ ಹೆಜ್ಜೆಗಳನ್ನು ಇಡುತ್ತಲೇ ಬಂದಿದೆ. ಹೊಸಬರ ಬರುವಿಕೆಗಾಗಿ ಪೂರ್ವರಂಗ, ಆದಿರಂಗ ಅಭಿನಯ ಕಾರ್ಯಾಗಾರಗಳನ್ನೂ ಮತ್ತು ಮಕ್ಕಳಿಗಾಗಿ ನಿರಂತರವಾಗಿ ಪ್ರೇಮಾ ಕಾರಂತ ಮತ್ತು ಬಿ.ವಿ. ಕಾರಂತರ ಹೆಸರಿನಲ್ಲಿ ಪ್ರತಿ ವರ್ಷ ವಾರಾಂತ್ಯ ರಂಗ ಶಿಬಿರಗಳನ್ನೂ, ಬೇಸಿಗೆಯಲ್ಲಿ ವಸತಿಸಹಿತ ಮಕ್ಕಳ ರಂಗ ಶಿಬಿರವನ್ನೂ ಯೋಜಿಸುತ್ತದೆ.

ಸಂಚಾರಿ ಥಿಯೇಟರ್ ತಂಡವು ಇಲ್ಲಿಯವರೆಗೆ ಸುಮಾರು 28 ನಾಟಕಗಳನ್ನು ನಿರ್ಮಿಸಿದೆ. ಅವುಗಳಲ್ಲಿ ಮುಖ್ಯವಾದವು ಊರ್ಮಿಳಾ, ಧರೆಯೊಳಗಿನ ರಾಜಕಾರಣ, ಅರಹಂತ, ಕಮಲಮಣಿ ಕಾಮಿಡಿ ಕಲ್ಯಾಣ, ನರಿಗಳಿಗೇಕೆ ಕೋಡಿಲ್ಲ? ಹೀಗೆರಡು ಕತೆಗಳು, ವೈದೇಹಿಯವರ ಕವನಗಳ ವ್ಯಾನಿಟಿ ಬ್ಯಾಗ್, ಪಿನೋಕಿಯೋ, ಮಿಸ್ ಅಂಡರ್ ಸ್ಟಾಂಡಿಂಗ್, ವೆನಿಸ್ಸಿನ ವ್ಯಾಪಾರ, ರಂಗಜಂಗಮ, ಕೈಲಾಸಂ ಕೀಚಕ, ರೋರಿಕ್ ದೇವಿಕಾ, ಬಣ್ಣ ಮೆಚ್ಚಿದವರು ಮುಂತಾದವು.


ಸಂಚಾರಿ ವಿಜಯ್


'ಕಮಲಮಣಿ ಕಲ್ಯಾಣ' ನಾಟಕದ ದೃಶ್ಯ

ನರಿಗಳಿಗೇಕೆ ಕೋಡಿಲ್ಲ? ಮಕ್ಕಳ ನಾಟಕ ಪ್ರದರ್ಶನ

ಸಂಚಾರಿ ವಿಜಯ್ ನೆನಪಿನ ನಾಟಕೋತ್ಸವ: ಶನಿವಾರ: ನರಿಗಳಿಗೇಕೆ ಕೋಡಿಲ್ಲ? ಮಕ್ಕಳ ನಾಟಕ ಪ್ರದರ್ಶನ.
ಬೆಳಕು: ಅರವಿಂದ್ ಕುಪ್ಲೀಕರ್ **ರಂಗಸಜ್ಜಿಕೆ:** ಶಶಿಧರ ಅಡಪ **ಸಂಗೀತ:** ಗಜಾನನ ಟಿ.ನಾಯ್ಕ **ಕಥೆ:** ಕೆ.ವಿ. ಪುಟ್ಟಪ್ಪ (ಕುವೆಂಪು) **ರಂಗರೂಪ:** ಮಂಗಳಾ.ಎನ್ ಮತ್ತು ಶಾಂತಾ ನಾಗರಾಜ್
ನಿರ್ದೇಶನ: ಮಂಗಳಾ.ಎನ್
ಭಾನುವಾರ: ನಾಟಕ: ಕಮಲಮಣಿ ಕಾಮಿಡಿ ಕಲ್ಯಾಣ
ಬೆಳಕು: ಅರುಣ್.ಡಿ.ಟಿ **ರಂಗಸಜ್ಜಿಕೆ:** ಅರವಿಂದ್ ಕುಪ್ಲೀಕರ್
ಸಂಗೀತ: ಗಜಾನನ.ಟಿ.ನಾಯ್ಕ **ರಚನೆ:** ಎಸ್.ರಾಮನಾಥ
ನಿರ್ದೇಶನ: ಮಂಗಳಾ.ಎನ್


'ನರಿಗಳಿಗೇಕೆ ಕೋಡಿಲ್ಲ' ನಾಟಕದ ದೃಶ್ಯ

ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು. **ಸಮಯ:** ಸಂಜೆ 7ಕ್ಕೆ. **ಪ್ರವೇಶದ ದರ** ₹ 100. **ಸಂಪರ್ಕಕ್ಕೆ:** 88843 45569.


ಮಾದೇವ
ಸೋನಲ್ ಮೊಂತೆರೋ

'ಮಾದೇವ'ದಲ್ಲಿ 'ರಾಬರ್ಟ್' ಜೋಡಿ

ಕಳೆದ ವರ್ಷ ತೆರೆಕಂಡಿದ್ದ 'ರಾಬರ್ಟ್' ಸಿನಿಮಾದಲ್ಲಿ ಮೋಡಿ ಮಾಡಿದ್ದ ರಾಘವ–ನರ್ಸಮ್ಮನ ಜೋಡಿ ಮತ್ತೆ ತೆರೆ ಮೇಲೆ ಮೋಡಿ ಮಾಡಲು ಸಜ್ಜಾಗಿದೆ. ಇತ್ತೀಚೆಗಷ್ಟೇ ಸೆಟ್ಟೇರಿದ್ದ ನಟ ವಿನೋದ್ ಪ್ರಭಾಕರ್ ಅವರ ಹೊಸ ಸಿನಿಮಾ 'ಮಾದೇವ'ಕ್ಕೆ ನಾಯಕಿಯಾಗಿ ಸೋನಲ್ ಮೊಂತೆರೋ ಆಯ್ಕೆಯಾಗಿದ್ದಾರೆ.

'ಪಂಚತಂತ್ರ' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟಿದ್ದ ಕರಾವಳಿಯ ಬೆಡಗಿ ಸದ್ಯ ಸ್ಯಾಂಡಲ್‌ವುಡ್‌ನಲ್ಲಿ ಸಾಲು ಸಾಲು ಸಿನಿಮಾಗಳಿಗೆ ಕಾಲ್‌ಶೀಟ್ ನೀಡುತ್ತಿದ್ದಾರೆ. ವಿನೋದ್ ಹಾಗೂ ಸೋನಲ್ ರಾಬರ್ಟ್ ಸಿನಿಮಾದಲ್ಲಿ ತನು-ರಾಘವ ಎಂಬ ಪಾತ್ರದ ಮೂಲಕ ಪ್ರೇಕ್ಷಕರ ಮನೆ ಗೆದ್ದಿದ್ದರು. 'ಖಾಕಿ' ಸಿನಿಮಾ ಸಾರಥಿ ನವೀನ್ ಬಿ. ರೆಡ್ಡಿ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ 'ಮಾದೇವ' ಚಿತ್ರದಲ್ಲಿ ಸೋನಲ್ 80ರ ದಶಕದ ಮಧ್ಯಮವರ್ಗದ ಹುಡುಗಿಯಾಗಿ ಬಣ್ಣ ಹಚ್ಚಿದ್ದಾರೆ.

ಭಾವನಾತ್ಮಕ ಮತ್ತು ಮಾಸ್ ಎಲಿಮೆಂಟ್ ಕಥಾಹಂದರದ ಈ ಸಿನಿಮಾ ಜೈಲಿನ ಬ್ಯಾಕ್‌ಡ್ರಾಪ್‌ನಲ್ಲಿ ನಡೆಯಲಿದೆ. ವಿನೋದ್ ಪ್ರಭಾಕರ್ ಈ ಹಿಂದೆ ನಿರ್ವಹಿಸಿದ್ದ ಪಾತ್ರಗಳಿಗಿಂತ ಭಿನ್ನವಾಗಿ ಕಾಣುತ್ತಾರೆ ಎಂದಿದೆ ಚಿತ್ರತಂಡ. ಶಿವಮೊಗ್ಗ, ಧಾರವಾಡ ಮತ್ತು ಹೈದರಾಬಾದ್‌ನಲ್ಲಿ ಸಿನಿಮಾದ ಚಿತ್ರೀಕರಣ ನಡೆಯಲಿದೆ. ಶ್ರುತಿ, ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಬಾಲಕೃಷ್ಣ ತೋಟ ಛಾಯಾಗ್ರಹಣ, ಪ್ರದ್ಯೋಥನ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಬಿಗ್‌ಬಾಸ್: ಸೆಲಿಬ್ರಿಟಿ ಒಟಿಟಿ ಆವೃತ್ತಿ

ಬಿಗ್‌ಬಾಸ್ ಇತಿಹಾಸದಲ್ಲೇ ಮೊದಲ 'ಬಿಗ್‌ಬಾಸ್ ಒಟಿಟಿ ಆವೃತ್ತಿ'ಯನ್ನು ಕಲರ್ಸ್ ಕನ್ನಡ ಆರಂಭಿಸಲು ಸಜ್ಜಾಗಿದ್ದು, ಆ.6ರಿಂದ ಆರು ವಾರಗಳ ಕಾಲ ವೂಟ್‌ನಲ್ಲಿ ಇದರ ಲೈವ್ ಆರಂಭವಾಗಲಿದೆ. 'ಮೊದಲ ಒಟಿಟಿ ಆವೃತ್ತಿಯಲ್ಲಿ ಕೇವಲ ಸೆಲಿಬ್ರಿಟಿಗಳು ಇರಲಿದ್ದಾರೆ' ಎಂದು ಕಲರ್ಸ್ ಕನ್ನಡ ಕ್ಲಸ್ಟರ್ ಹೆಡ್ ಹಾಗೂ ಬಿಗ್ ಬಾಸ್ ಶೋನ ನಿರ್ದೇಶಕ ಪರಮೇಶ್ವರ ಗುಂಡ್ಕಲ್ ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗುಂಡ್ಕಲ್, 'ಇಲ್ಲಿಯವರೆಗೆ ವೂಟ್‌ನಲ್ಲಿ ಬಿಗ್‌ಬಾಸ್ ಕಂತುಗಳನ್ನು ನೋಡಲು ಅವಕಾಶವಿತ್ತು. ಆ.6ರಿಂದ ವಿಶೇಷ ಒಟಿಟಿ ಆವೃತ್ತಿ ಆರಂಭವಾಗಲಿದೆ. ಇಲ್ಲಿ 16 ಸ್ಪರ್ಧಿಗಳಿರಲಿದ್ದು, ಆರು ವಾರ ಎಂದರೆ 42 ದಿನ ದಿನದ 24 ಗಂಟೆಯೂ ಬಿಗ್‌ಬಾಸ್ ಮನೆಯಿಂದ ವೂಟ್ ಆ್ಯಪ್ ಮೂಲಕ ಮೂಲಕ ಲೈವ್ ನೋಡಬಹುದಾಗಿದೆ. ಸುಮಾರು ಸಾವಿರಕ್ಕೂ ಅಧಿಕ ಗಂಟೆ ಲೈವ್ ಇರಲಿದ್ದು, ಇದು ಬಿಗ್‌ಬಾಸ್ ಮಾದರಿಯಲ್ಲೇ ಇತಿಹಾಸ. ಲೈವ್‌ನಲ್ಲಿ ಬಂದ ವಿಡಿಯೊದ ಪ್ರಮುಖ ತುಣುಕುಗಳನ್ನು ಪ್ರತಿದಿನ ರಾತ್ರಿ ಒಂದೂವರೆ ಗಂಟೆಗಳ ಕಾಲ ಕಲರ್ಸ್ ಕನ್ನಡ ಚಾನೆಲ್‌ನಲ್ಲೂ ಪ್ರಸಾರ ಮಾಡಲಾಗುವುದು' ಎಂದರು.

ಒಟಿಟಿ ಆವೃತ್ತಿಯಲ್ಲಿ ಬಹುತೇಕ ಸಾಮಾಜಿಕ ಜಾಲತಾಣ, ಡಿಜಿಟಲ್ ಕ್ಷೇತ್ರದಲ್ಲಿ ಹೆಸರು ಮಾಡಿರುವ 15 ರಿಂದ 40 ವರ್ಷದ ಒಳಗಿನ ಸ್ಪರ್ಧಿಗಳೇ ಇರಲಿದ್ದಾರೆ ಎನ್ನುವ ಸಣ್ಣ ಸುಳಿವೊಂದನ್ನು ಗುಂಡ್ಕಲ್ ನೀಡಿದ್ದಾರೆ. ಕಲರ್ಸ್ ಕನ್ನಡದಲ್ಲಿ ಬಿಗ್‌ಬಾಸ್ 9ನೇ ಆವೃತ್ತಿ ಯಾವಾಗಿನಿಂದ ಆರಂಭವಾಗಲಿದೆ ಎನ್ನುವುದನ್ನು ಆ.6ರಂದು ಘೋಷಿಸಲಿದ್ದೇವೆ ಎಂದು ತಿಳಿಸಿದ್ದಾರೆ.

ಇಲ್ಲಿಂದಲೇ 9ನೇ ಆವೃತ್ತಿಗೆ ಆಯ್ಕೆ

'ಬಿಗ್‌ಬಾಸ್ ಒಟಿಟಿ ಆವೃತ್ತಿ ಪೂರ್ಣಗೊಂಡ ಕೂಡಲೇ ಟಿ.ವಿಯಲ್ಲಿ ಬಿಗ್‌ಬಾಸ್ 9ನೇ ಆವೃತ್ತಿ ಆರಂಭವಾಗಲಿದೆ. ಇದಕ್ಕೆ ಪ್ರತ್ಯೇಕ ಸ್ಪರ್ಧಿಗಳಿರಲಿದ್ದು, ಜೊತೆಗೆ ಒಟಿಟಿ ಆವೃತ್ತಿಯಲ್ಲಿ ಉತ್ತಮವಾಗಿ ಆಟವಾಡಿದ ಆಯ್ದ ಸ್ಪರ್ಧಿಗಳೂ ಸೇರಿಕೊಳ್ಳಲಿದ್ದಾರೆ. ಹೀಗಾಗಿ ಒಟಿಟಿ ಆವೃತ್ತಿಯಲ್ಲಿ ಕೇವಲ ಒಬ್ಬ ವಿಜೇತ ಎಂದಿಲ್ಲ. ಕೊನೆಯ ಸುತ್ತಿಗೆ ಬಂದ ಎಲ್ಲರೂ ವಿಜೇತರೇ. ಟಿ.ವಿ ಆವೃತ್ತಿಯಂತೆ ಒಟಿಟಿ ಆವೃತ್ತಿಯಲ್ಲೂ ಜನರಿಗೆ ಮತ ಹಾಕುವ ಅವಕಾಶವಿದೆ. ಒಟಿಟಿ ಆವೃತ್ತಿಯಲ್ಲೂ ಪ್ರತಿ ಶನಿವಾರ ಸುದೀಪ್ ಅವರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ' ಎಂದು ಗುಂಡ್ಕಲ್ ಹೇಳಿದರು.


ಸುದೀಪ್

ಅಭಿನಯ ಅಪ್ಸರೆ 'ಮಿಸ್ ನಂದಿನಿ'

ಸರ್ಕಾರಿ ಶಾಲೆ ಉಳಿಸುವ ಕಥಾ ಹಂದರ ಹೊಂದಿರುವ 'ಮಿಸ್ ನಂದಿನಿ' ಚಿತ್ರದಲ್ಲಿ ಶಿಕ್ಷಕಿಯಾಗಿ ನಟಿ ಪ್ರಿಯಾಂಕಾ ಉಪೇಂದ್ರ ಬಣ್ಣಹಚ್ಚಿದ್ದಾರೆ. ವಿಶೇಷ ಅದಲ್ಲ, ಈ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಪ್ರಿಯಾಂಕಾ ಅವರಿಗೆ ಅಭಿಮಾನಿಗಳು 'ಅಭಿನಯ ಅಪ್ಸರೆ' ಎಂಬ ಬಿರುದು ಕೊಟ್ಟಿದ್ದಾರೆ.

'ಮಕ್ಕಳ ಜತೆ ನಟಿಸುವುದೇ ಒಂದು ರೀತಿಯ ಖುಷಿ ಸಿಗುತ್ತದೆ. ಅವರ ಕಾಮಿಡಿ ಟ್ರ್ಯಾಕ್ ಚೆನ್ನಾಗಿ ಮೂಡಿಬಂದಿದೆ. ತುಂಬಾ ಸಿನಿಮಾಗಳಲ್ಲಿ ನಟಿಸಿದ್ದರೂ ಇಂತಹ ಚಿತ್ರದಲ್ಲಿ ಅಭಿನಯಿಸಿರುವುದು ಸಂತಸ ತಂದಿದೆ. ಸರ್ಕಾರಿ ಶಾಲೆಯಲ್ಲೇ ಚಿತ್ರೀಕರಣ ಮಾಡಲಾಗಿದೆ. ಇಂತಹ ಚಿತ್ರಕ್ಕೆ ನಾವೆಲ್ಲರೂ ಪ್ರೋತ್ಸಾಹ ಕೊಡಬೇಕು. ಅಭಿಮಾನಿಗಳು ಪ್ರೀತಿಯಿಂದ ಬಿರುದನ್ನು ನೀಡಿದ್ದಾರೆ. ಅವರಿಂದಲೇ ಚಿತ್ರರಂಗದಲ್ಲಿ 25 ವರ್ಷ ಸೇವೆ ಸಲ್ಲಿಸಿ ಇಲ್ಲಿಯ ತನಕ ಬಂದಿದ್ದೇನೆ' ಎಂದರು ಪ್ರಿಯಾಂಕಾ.

ಶ್ರೀವಿಜಯ್ ಫಿಲಂಸ್ ಮೂಲಕ ನೀಲಕಂಠಸ್ವಾಮಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಆಶಾ ಸಹ ನಿರ್ಮಾಪಕರು.

'ಕಾರವಾರ, ಬಾಗಲಕೋಟೆ, ಬೆಂಗಳೂರು ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ' ಎಂದರು ನಿರ್ದೇಶಕ ಗುರುದತ್ ಎಸ್.ಆರ್.

ಮುಖ್ಯಮಂತ್ರಿಯಾಗಿ ಸಿದ್ಲಿಂಗು ಶ್ರೀಧರ್, ಶಿಕ್ಷಕರಾಗಿ ಅಪ್ಪಣ್ಣ, ರಘುಪಾಂಡೇಶ್ವರ್, ಅಧಿಕಾರಿಯಾಗಿ ಯತಿರಾಜ್, ಶಾಸಕನಾಗಿ ಡ್ಯಾನಿಕುಟ್ಟಪ್ಪ, ವಕೀಲೆಯಾಗಿ ಲಕ್ಷೀಸಿದ್ದಯ್ಯ ಅಭಿನಯಿಸಿದ್ದಾರೆ. ಸಾಹಿತ್ಯ ಮತ್ತು ಸಂಗೀತ ಸಾಯಿಸರ್ವೇಶ್ ಅವರದ್ದು. 'ಕನ್ನಡ ಬೆಳಸೋರ್ ಬೇಡ ಬಳಸೋರ್ ಬೇಕು' ಎಂಬ ಅಡಿಬರಹದ ಈ ಚಿತ್ರವು ಸೆಪ್ಟಂಬರ್‌ನಲ್ಲಿ ತೆರೆಕಾಣಲಿದೆ.


ಮಿಸ್ ನಂದಿನಿ
ಪ್ರಿಯಾಂಕಾ ಉಪೇಂದ್ರ

ಹುಬ್ಬಳ್ಳಿಯಿಂದ ಬೆಳ್ಳಿತೆರೆವರೆಗೆ...

ವಿಆರ್‌ಎಲ್ ಸಂಸ್ಥೆಯ ವಿಆರ್‌ಎಲ್ ಫಿಲ್ಮ್ ಪ್ರೊಡಕ್ಷನ್ಸ್ ಲಾಂಛನದ ಅಡಿಯಲ್ಲಿ ಉದ್ಯಮಿ ವಿಜಯ ಸಂಕೇಶ್ವರ ಅವರ ಜೀವನಗಾಥೆ ಆಧರಿತ ಚಿತ್ರ 'ವಿಜಯಾನಂದ'ದ ಟೀಸರ್ ಬಿಡುಗಡೆಯಾಗಿದೆ.

ಟೀಸರ್ ನಲ್ಲಿ ವಿಜಯ ಸಂಕೇಶ್ವರ ಅವರ ತಾರುಣ್ಯದ ದಿನಗಳು, ಉದ್ಯಮ ಆರಂಭಿಸಿದ ಸಂದರ್ಭಗಳನ್ನು ಸಂಕ್ಷಿಪ್ತವಾಗಿ ತೋರಿಸಲಾಗಿದೆ. ನಿಹಾಲ್ ಈ ಚಿತ್ರದ ನಾಯಕ. ಮಂಡಿಯೊಂದರ ಸಾಹುಕಾರನಾಗಿ ರವಿಚಂದ್ರನ್, ವಿಜಯ ಸಂಕೇಶ್ವರರ ತಂದೆಯ ಪಾತ್ರದಲ್ಲಿ ಅನಂತನಾಗ್ ಕಾಣಿಸಿಕೊಂಡಿದ್ದಾರೆ. ಟೀಸರೇ ಒಂದು ಹೊಸ ಕಥೆಯನ್ನು ಹೇಳುವಂತೆ ಮೂಡಿಬಂದಿದೆ. ರಿಷಿಕಾ ಶರ್ಮಾ ಈ ಚಿತ್ರದ ನಿರ್ದೇಶಕಿ.

ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲೂ ಈ ಚಿತ್ರ ಡಬ್ ಆಗಲಿದೆ. ವಿನಯಾ ಪ್ರಸಾದ್, ಪ್ರಕಾಶ್ ಬೆಳವಾಡಿ, ಅನೀಶ್ ಕುರುವಿಲ್ಲಾ, ಸಿರಿ ಪ್ರಹ್ಲಾದ್ ಮತ್ತು ಭರತ್ ಬೋಪಣ್ಣ ತಾರಾಗಣದಲ್ಲಿದ್ದಾರೆ. ಗೋಪಿ ಸುಂದರ್ ಅವರ ಸಂಗೀತವಿದೆ. ಈ ಚಿತ್ರಕ್ಕೆ ರಘು ನಿಡುವಳ್ಳಿ ಸಂಭಾಷಣೆ ಬರೆದಿದ್ದಾರೆ. ರವಿವರ್ಮಾ ಅವರ ಸಾಹಸ ನಿರ್ದೇಶನವಿದೆ.


ವಿಜಯಾನಂದ
ನಿಹಾಲ್

ಬಗೆ ಬಗೆ ಕೈತೋಟ


ಖುತ ರಾಘವಿ

ಕಡಿಮೆ ಜಾಗದಲ್ಲಿ ಒಂದು ಸುಂದರವಾದ ತೋಟವಿದ್ದರೆ ಯಾರಿಗೆ ತಾನೇ ಇಷ್ಟ ಆಗೋಲ್ಲ. ಗಾರ್ಡನಿಂಗ್ ಅನ್ನೋದು ಬಹುತೇಕರ ಸುಪ್ತ ಮನಸ್ಸಿನ ಆಸೆಯೂ ಆಗಿರುತ್ತೆ. ಗಿಡಗಳೊಟ್ಟಿಗೆ ಬೆರೆತಷ್ಟು ಮನಸ್ಸು ಹಗುರಾಗುತ್ತೆ. ಹಸಿರು ನೋಡಿದಷ್ಟು ಜೀವನೋತ್ಸಾಹ ಹೆಚ್ಚುತ್ತದೆ. ಹಾಗಾಗಿ ಗಾರ್ಡನಿಂಗ್ ಎನ್ನೋದು ಹವ್ಯಾಸ ಅಷ್ಟೇ ಅಲ್ಲ. ಆನಂದದ ಮೊತ್ತವೂ ಹೌದು.

ಸುರಿಯುತ್ತಿರುವ ಮಳೆ ನಡುವೆ ಮನೆ ಸುತ್ತ ಹಸಿರಾಗಿದ್ದರೆ ಅದರ ಕಳೆನೇ ಬೇರೆ. ಕೈತೋಟದಲ್ಲೂ ಹಲವು ಬಗೆಗಳಿವೆ.

ಬಟರ್‌ಫ್ಲೈ ಗಾರ್ಡನಿಂಗ್: ಬಣ್ಣ ಬಣ್ಣದ ಹಲ ಬಗೆಯ ಹೂವುಗಳಿದ್ದಾಗ ದುಂಬಿ ಆವರಿಸಿ ಕೊಳ್ಳುತ್ತದೆ. ಇದೇ ದುಂಬಿ ಆಕರ್ಷಿಸುವ ಕೈತೋಟ. ಹೆಚ್ಚು ಹೂವಿನ ಗಿಡಗಳಿದ್ದ ಕೈತೋಟದಲ್ಲಿ ಚಿಟ್ಟೆಗಳ ಮೇಳವೂ ನಡೆಯುತ್ತದೆ. ಅದಕ್ಕೇ ಇದನ್ನು ಬಟರ್‌ಫ್ಲೈ ಗಾರ್ಡನ್ ಎನ್ನುತ್ತಾರೆ.





ಇಂಥ ಕೈತೋಟದಲ್ಲಿ ಸಾಮಾನ್ಯವಾಗಿ ಅಗತ್ಯವಿದ್ದಷ್ಟು ಹೂವನ್ನು ಮಾತ್ರ ಬಿಡಿಸಿ ಕೊಳ್ಳುತ್ತಾರೆ. ಗಿಡದಲ್ಲೇ ಹೆಚ್ಚು ಹೂವುಗಳನ್ನು ಉಳಿಸಿದರೆ, ಮನೆಯ ಅಂದವೂ ಹೆಚ್ಚುತ್ತದೆ. ಚಿಟ್ಟೆಗಳ ಮೇಳವನ್ನೂ ನೋಡಬಹುದು.

ಕಂಟೇನರ್ ಗಾರ್ಡನಿಂಗ್: ಕಾಂಕ್ರೀಟ್ ಕಾಡಿನಲ್ಲಿ ಗಿಡ ಎಲ್ಲಿ? ಅನ್ನೋ ವ್ಯಥೆ ಬಹುತೇಕ ಎಲ್ಲರದ್ದು. ಇಂಥವರು ಗಾರ್ಡನಿಂಗ್‌ನತ್ತ ಮುಖ ಮಾಡೋದಿಕ್ಕೆ ಈ ಕಂಟೇನರ್ ಗಾರ್ಡನಿಂಗ್ ಉತ್ತಮ ಆಯ್ಕೆ. ಒಂದು ಕಾಲದಲ್ಲಿ ಕುಂಡ ಕೃಷಿಯೇ ಜನಪ್ರಿಯವಾಗಿತ್ತು. ಈಗ ದೊಡ್ಡ ದೊಡ್ಡ ಪ್ಲಾಸ್ಟಿಕ್ ಕಂಟೇನರ್‌ಗಳನ್ನು ಬಳಸಿ, ತಾರಸಿ, ಮನೆಯ ಅಂಗಳದಲ್ಲಿ ದೊಡ್ಡ ದೊಡ್ಡ ಹಣ್ಣು, ಹೂವಿನ ಗಿಡಗಳನ್ನು ಬೆಳೆಸುವುದು ಇತ್ತೀಚೆಗಿನ ಟ್ರೆಂಡ್. ಈ ಕಂಟೇನರ್‌ನಲ್ಲಿ ಹಣ್ಣಿನ ಗಿಡಗಳಷ್ಟೇ ಅಲ್ಲ, ಮನೆಗೆ ಅಗತ್ಯವಾದ ಸೊಪ್ಪು, ತರಕಾರಿ, ಹೂವಿನ ಗಿಡ ಎಲ್ಲವನ್ನು ಬೆಳೆಸಬಹುದು. 500 ಲೀಟರ್‌ನ ದೊಡ್ಡ ಡ್ರಮ್ ಉದ್ದವಾಗಿ ಅರ್ಧಕ್ಕೆ ಸೀಳಿದರೆ, ಎರಡು ಭಾಗವಾಗುತ್ತದೆ. ಅದರಲ್ಲಿ ಸೊಪ್ಪಿನ ಮಡಿ ಮಾಡಬಹುದು. ಈಗಂತೂ ನಿಮಗೆ ಬೇಕಾದ ಅಳತೆಯಲ್ಲಿ ಕಂಟೇನರ್‌ಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ.

ಆ್ಯಕ್ವಾಗಾರ್ಡನಿಂಗ್: ನೀರಿನ ತೋಟಕ್ಕೆ ವಿಶಾಲವಾದ ಜಾಗ ಇರಬೇಕು. ಆಗ, ಕೃತಕವಾದ ಕೊಳ ನಿರ್ಮಿಸಿ, ಅದರೊಳಗೆ, ಒಂದು ಅಡಿಯಷ್ಟು ಮಣ್ಣು ಹಾಕಿ, ಬೇರು ಸಮೇತ ಗಿಡಗಳನ್ನು ನೆಡಬೇಕು.

ವಾಟರ್ ಲಿಲ್ಲಿಯಂತಹ ಹಲವು ಬಗೆಯ ನೀರಿನಲ್ಲಿ ಬೆಳೆಯುವ ಹೂವಿನ ಗಿಡಗಳನ್ನು ಹೀಗೆ ಕೊಳದಲ್ಲಿ ಬೆಳೆಸಬಹುದು. ತಾವರೆ ಅರಳವುದು ಇಂಥ ಕೊಳದಲ್ಲೇ ಅಲ್ಲವೇ. ಲಿಲ್ಲಿ, ತಾವರೆ ಜೊತೆಗೆ, ಹೈಡ್ರಿಲ್ ಗಿಡಗಳನ್ನು ಬೆಳೆಸಬಹುದು. ಗಿಡ ಬೆಳೆದ ಹಾಗೇ ನೀರಿನ ಮಟ್ಟವನ್ನು ಹೆಚ್ಚಿಸುತ್ತ ಹೋದರೆ ಆಯ್ತು. ಈ ಬಗೆಯ ತೋಟದಲ್ಲಿ ಒಂದು ಕಡೆ ಹಸಿರು ಮತ್ತೊಂದು ಕಡೆ ನೀರು. ನೋಡುಗರಿಗೆ ಪ್ರಶಾಂತ ಭಾವವನ್ನು ಮೂಡಿಸುತ್ತದೆ.

